• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಸಾತ್ವಿಕಾ' ಆದ ನಟ 'ಶ್ರಾವ್ಯಾ ರಾವ್' ಸಿನಿಪಯಣದ ಮೆಲುಕು



ಆಳ-ಅಗಲ
ಯುಎಪಿಎ ಪ್ರಕರಣ ಆಮೆ ನಡಿಗೆಯ ವಿಚಾರಣೆ

'ಕೇಂದ್ರದಿಂದ ₹40 ಸಾವಿರ ಕೋಟಿ ಖೋತಾ' 6

ಹರ್ಷೋದ್ಗಾರದ ನಡುವೆ ರೇವಂತ್ ರೆಡ್ಡಿ ಪ್ರಮಾಣ 10

ಸೆನ್ಸೆಕ್ಸ್	ನಿಫ್ಟಿ	₹/$
69,521	20,901	83.36

'ಬಜೆಟ್‌ನಲ್ಲಿ ಈ ಸಲ ಆಕರ್ಷಕ ಘೋಷಣೆ ಇಲ್ಲ'

ನವದೆಹಲಿ (ಪಿಟಿಐ): 2024ರ ಫೆಬ್ರುವರಿ 1ರಂದು ಮಂಡಿಸಲಿರುವ ಬಜೆಟ್‌ನಲ್ಲಿ ಯಾವುದೇ ಅತ್ಯಾಕರ್ಷಕ ಘೋಷಣೆಗಳು ಇರುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಹೇಳಿದ್ದಾರೆ.

'ಸಾರ್ವತ್ರಿಕ ಚುನಾವಣೆ ಇರುವುದರಿಂದ ಹೊಸ ಸರ್ಕಾರ ಅಧಿಕಾರಕ್ಕೆ ಬರುವವರೆಗೆ ಹಾಲಿ ಸರ್ಕಾರದ ವೆಚ್ಚಗಳಿಗೆ ಅನುಮೋದನೆ ಪಡೆಯಲು ಮಾತ್ರವೇ ಬಜೆಟ್ ಪ್ರಕ್ರಿಯೆ ಸೀಮಿತ-ವಾಗಿರಲಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ' ಎಂದು ತಿಳಿಸಿದ್ದಾರೆ.

ಸಿಐಐ ಜಾಗತಿಕ ಆರ್ಥಿಕ ನೀತಿ ವೇದಿಕೆಯಲ್ಲಿ ಅವರು ಮಾತನಾಡಿದರು. ನಿರ್ಮಲಾ ಅವರು 2024–25ನೇ ಹಣಕಾಸು ವರ್ಷಕ್ಕೆ ಬಜೆಟ್ ಅನ್ನು ಫೆಬ್ರುವರಿ 1ರಂದು ಮಂಡಿಸಲಿದ್ದಾರೆ. ಇದೊಂದು ಲೇಖಾನುದಾನ ಪಡೆಯಲು ಸೀಮಿತವಾದ ಬಜೆಟ್ ಎನ್ನುವುದು ನಿಜವಾದರೂ ಚುನಾವಣೆ ಹೊಸ್ತಿಲಲ್ಲಿರುವಾಗ ಸರ್ಕಾರಗಳು ಇಂತಹ ಅವಕಾಶವನ್ನು ಜನಪ್ರಿಯ ಘೋಷಣೆಗಳನ್ನು ಮಾಡಲು ಬಳಸಿಕೊಳ್ಳುವುದು ರೂಢಿಯಾಗಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಶೋಕ ಗಮನಕ್ಕೆ ಬಾರದೇ ಮೂರು ಬಾರಿ ಧರಣಿ • ನಾಯಕನಿಗೆ ಇಲ್ಲ ಶಾಸಕರ ಸಹಮತ

ಬಿಜೆಪಿ ನಾಯಕರ ತಿಕ್ಕಾಟ ಸ್ಫೋಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಾಯಕತ್ವ ಹಾಗೂ ಪ್ರತಿಷ್ಠೆಗಾಗಿ ಬಿಜೆಪಿ ನಾಯಕರ ಮಧ್ಯೆ ನಡೆಯುತ್ತಿರುವ ಆಂತರಿಕ ತಿಕ್ಕಾಟ, ಗುರುವಾರದ ವಿಧಾನಸಭೆ ಕಲಾಪದ ವೇಳೆ ಬಟಾಬಯಲಾಯಿತು.

ಅಧಿವೇಶನ ನಡೆಯಲು ಕೆಲವೇ ದಿನಗಳ ಮೊದಲು ಬಿಜೆಪಿ ಅಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಅವರ ನೇಮಕವಾಗಿತ್ತು ಮತ್ತು ವಿರೋಧ ಪಕ್ಷದ ನಾಯಕರಾಗಿ ಆರ್. ಅಶೋಕ ಅವರ ಆಯ್ಕೆ ನಡೆದಿತ್ತು. ಇಬ್ಬರೂ ಒಗ್ಗೂಡಿ ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಹೋರಾಟ ಕಟ್ಟಿ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವುದಾಗಿ ಹೇಳಿದ್ದರು.

ಸೋಮವಾರ (ಡಿ.4) ಕಲಾಪ ಶುರುವಾದ ದಿನವೇ ನಾಯಕರ ಮಧ್ಯೆ ನಡೆಯುತ್ತಿರುವ ಕಿತ್ತಾಟ, ತಮ್ಮ 'ಸಾಮರ್ಥ್ಯ'ವನ್ನು ಬಿಂಬಿಸಿಕೊಳ್ಳುವ ತವಕದ ಪ್ರದರ್ಶನ ಎದ್ದು ಕಾಣಲಾರಂಭಿಸಿತು. ಗುರುವಾರ 'ಶೂನ್ಯವೇಳೆ'ಯಲ್ಲಿ ಕೇಳಲಾದ ಎರಡು ಪ್ರಶ್ನೆಗಳಿಗೆ ಗೃಹ ಸಚಿವ ಜಿ. ಪರಮೇಶ್ವರ ಉತ್ತರ ನೀಡಿದ ಬಳಿಕ, ಸದನದೊಳಗೆ ಬಿಜೆಪಿ ಸದಸ್ಯರು ವರ್ತಿಸಿದ ರೀತಿ, ವಿರೋಧ ಪಕ್ಷದ ಮೊಗಸಾಲೆಯಲ್ಲಿ ಪ್ರಯೋಗಿಸಿದ ಬೈಗುಳ, ದಿಕ್ಕು ತೋಚದಂತೆ ನಿಂತ ಹಿರಿ–ಕಿರಿಯ ಶಾಸಕರ ನಡೆ, ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ತೋರಿಸಿತು.

ಬಿಜೆಪಿಯ ಎಸ್.ಆರ್. ವಿಶ್ವನಾಥ್ ಅವರು ತಮ್ಮ ನಾಯಕ ಅಶೋಕ ಅವರ ವಿರುದ್ಧ ಅವಾಚ್ಯ ಶಬ್ದ ಬಳಸಿ ಕೂಗಾಡಿದರು. ಅಶೋಕ ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಂಡರೂ, ಮುಖ ಕಳಾಹೀನವಾಗಿತ್ತು.

ಬಿಜೆಪಿ ಮುಖಂಡ ಹಾಗೂ ರಮೇಶ ಜಾರಕಿಹೊಳಿ ಆಪ್ತ ಪೃಥ್ವಿಸಿಂಗ್ ಮೇಲೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಮ್ಮ, ವಿಧಾನ ಪರಿಷತ್ತಿನ ಸದಸ್ಯ ಚನ್ನರಾಜ ಹಟ್ಟಿಹೊಳಿ ಮತ್ತಿತರರು ಆಯುಧಗಳಿಂದ ಹಲ್ಲೆ ನಡೆಸಿದ್ದಾರೆ ಎಂದು ಬುಧವಾರ ಶೂನ್ಯ ವೇಳೆಯಲ್ಲಿ ಆರೋಪಿಸಿದ್ದ ಬಿ.ವೈ. ವಿಜಯೇಂದ್ರ, ಯಾರನ್ನೂ ಬಂಧಿಸದಿರುವುದನ್ನು ಪ್ರಶ್ನಿಸಿದ್ದರು.

6ನೇ ಪುಟ ನೋಡಿ

ಬಕೆಟ್ ರಾಜಕೀಯ: ವಿಶ್ವನಾಥ್

ಸಭಾತ್ಯಾಗ ಮಾಡಿ ಅಶೋಕ ಹೊರಬರುತ್ತಿದ್ದಂತೆ ವಿಜಯೇಂದ್ರ ಜತೆ ಧುಮುಗುಡುತ್ತಲೇ ಹೊರಬಂದ ಯಲಹಂಕ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್, 'ಬಕೆಟ್, ಬಕೆಟ್' ಎಂದು ಹೇಳುತ್ತಲೇ ಇದ್ದರು.



ಮೊದಲೇ ಹೊರಬಂದಿದ್ದ ಅಶೋಕ, ಸಿ.ಸಿ. ಪಾಟೀಲ, ಆರಗ ಜ್ಞಾನೇಂದ್ರ ಮತ್ತಿತರರು ವಿರೋಧ ಪಕ್ಷದ ಮೊಗಸಾಲೆಯ ಕೊಠಡಿಯಲ್ಲಿ ಇದ್ದರು.

ಬಾಗಿಲಿನಲ್ಲಿ ನಿಂತ ವಿಶ್ವನಾಥ್, 'ಇಂತಹ . . . . ಮಕ್ಕಳನ್ನು ನಾಯಕರಾಗಿ ಮಾಡಿದರೆ ಪಕ್ಷ ಮುಳುಗಿ ಹೋಗದೇ ಇನ್ನೇನಾಗುತ್ತದೆ?. ಬಕೆಟ್ ಹಿಡಿದುಕೊಂಡೇ ರಾಜಕಾರಣ ಮಾಡುವವರು ಇನ್ನೇನು ಮಾಡುತ್ತಾರೆ' ಎಂದು ಏರಿದ ಧ್ವನಿಯಲ್ಲಿ ಕೂಗಿದರು.

'ಹೊಂದಾಣಿಕೆ ರಾಜಕಾರಣ (ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್) ಮಾಡಿಕೊಂಡೇ ಬಂದು ಅಧಿಕಾರ ಹಿಡಿದರು. ಇದಲ್ಲದೇ ಇನ್ನೇನು ಮಾಡಲು ಸಾಧ್ಯ' ಎಂದು ಎಗರಾಡಿದರು. ಕೆಲವು ಶಾಸಕರು ಅವರನ್ನು ಅಲ್ಲಿಂದ ಕರೆದೊಯ್ದರು. ಕೆಲವು ಶಾಸಕರು ತಮ್ಮ ಪಾಡಿಗೆ ಮೊಗಸಾಲೆಯಲ್ಲಿ ಕುಳಿತರೆ, ಮತ್ತಷ್ಟು ಮಂದಿ ವಿಜಯೇಂದ್ರ ಸುತ್ತ ಕುಳಿತಿದ್ದರು.

'ವಿಜಯೇಂದ್ರ ಅವರಿಗೆ ಹೋರಾಟವನ್ನು ಸಭಾತ್ಯಾಗಕ್ಕೆ ಸೀಮಿತಗೊಳಿಸುವುದು ಇಷ್ಟವಿರಲಿಲ್ಲ. ಇನ್ನೊಂದು ಹಂತಕ್ಕೆ ಹೋರಾಟ ತೆಗೆದುಕೊಂಡು ಹೋಗಬೇಕು ಎಂಬುದಿತ್ತು' ಎಂದು ಶಾಸಕರೊಬ್ಬರು ಹೇಳಿದರು.

'ಸರ್ವಾನುಮತದ ತೀರ್ಮಾನ'

'ನಿನ್ನೆಯೂ ಇದೇ ವಿಷಯಕ್ಕೆ ಧರಣಿ ಮಾಡಿದ್ದೆವು. ಇವತ್ತು ಮತ್ತೆ ಧರಣಿ ನಡೆಸಿದರೆ ಉತ್ತರ ಕರ್ನಾಟಕದ ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂಬ ವಿಷಯ ಮುಂದಿಟ್ಟು ನಮ್ಮ ಮೇಲೆ ದಾಳಿ ನಡೆಸಲು ಕಾಂಗ್ರೆಸ್‌ಗೆ ಅವಕಾಶ ಕೊಟ್ಟಂತಾಗುತ್ತದೆ ಎಂಬ ಕಾರಣಕ್ಕೆ ಸಭಾತ್ಯಾಗ ಮಾಡಲು ಸರ್ವಾನುಮತದ ತೀರ್ಮಾನ ಮಾಡಿದ್ದೆವು' ಎಂದು ಅಶೋಕ ಹೇಳಿದರು.

'ತಮ್ಮ ಪಕ್ಷದ ಪಾಲಿಕೆ ಸದಸ್ಯರಿಗೆ ಅನ್ಯಾಯವಾಗಿದೆ ಎಂಬ ಕಾರಣಕ್ಕೆ ಅಭಯ ಪಾಟೀಲರಿಗೆ ನೋವಾಗಿದೆ. ದಿನವೂ ಧರಣಿ ನಡೆಸುವುದು ಸರಿಯಲ್ಲ ಎಂದು ಎಲ್ಲರೂ ಚರ್ಚಿಸಿಯೇ ನಿರ್ಧಾರ ಕೈಗೊಂಡಿದ್ದೇವೆ. ಇದರಲ್ಲಿ ಭಿನ್ನತೆ ಏನಿಲ್ಲ' ಎಂದೂ ಹೇಳಿದರು. ಇದಕ್ಕೆ ಧ್ವನಿಗೂಡಿಸಿದ ಆರಗ ಜ್ಞಾನೇಂದ್ರ, ಸಿ.ಸಿ. ಪಾಟೀಲ ಅವರು, 'ಕಾಂಗ್ರೆಸ್‌ನವರಿಗೆ ಅಧಿಕಾರ ಬಲ ಇದೆ ಎಂಬ ಕಾರಣಕ್ಕೆ ಏನು ಬೇಕಾದರೂ ಮಾಡುತ್ತಾರೆ. ಇದರಾಚೆಗೆ ಏನೂ ಆಗುತ್ತಿರಲಿಲ್ಲ. ಹೀಗಾಗಿ, ಒಮ್ಮತದಿಂದ ಸಭಾತ್ಯಾಗದ ತೀರ್ಮಾನ ಮಾಡಿದ್ದೆವು' ಎಂದರು.

ಯತ್ನಾಳ, ಮೌಲ್ವಿ ಕುಟುಂಬ ಉದ್ಯಮದ ಪಾಲುದಾರರು

ಪ್ರಜಾವಾಣಿ ವಾರ್ತೆ

ಯತ್ನಾಳ

ತನ್ವೀರ್ ಹಾಶ್ಮಿ

ವಿಜಯಪುರ: 'ಜಮಾತ್ ಎ ಅಹಲೆ ಸುನ್ನತ್ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಮೌಲ್ವಿ ತನ್ವೀರ್ ಹಾಶ್ಮಿ ಅವರಿಗೆ ಐಎಸ್ ಭಯೋತ್ಪಾದಕರ ನಂಟಿದೆ' ಎಂದು ಆರೋಪಿಸಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಆ ಆರೋಪಕ್ಕೆ ಒಳಗಾಗಿರುವ ಹಾಶ್ಮಿ ಅವರ ದೊಡ್ಡಪ್ಪನ ಮಕ್ಕಳು ಇಲ್ಲಿನ ಗಾಂಧಿಚೌಕದ ಬಳಿಯಿರುವ 'ಟೂರಿಸ್ಟ್ ಹೋಟೆಲ್'ನ ಪಾಲುದಾರರು.

ಅಷ್ಟೇ ಅಲ್ಲ, ನಗರದ ಹೊರವಲಯದ ಮಹಲ್ ಐನಾಪುರ ಗ್ರಾಮದಲ್ಲಿ ಹಾದು ಹೋಗಿರುವ ವಿಜಯಪುರ–ಕಲಬುರಗಿ ರಾಷ್ಟ್ರೀಯ ಹೆದ್ದಾರಿ ಬಳಿ ಅವರಿಬ್ಬರ ಮನೆಗಳು, ವಾಣಿಜ್ಯ ಮಳಿಗೆಗಳು ಅಕ್ಕಪಕ್ಕದಲ್ಲಿವೆ. ಆದರೆ, ಈಗ ಒಮ್ಮೆಲೇ ಯಾಕೆ ಇಬ್ಬರಲ್ಲಿ ವೈಮನಸ್ಸು ಮೂಡಿದೆ ಎಂಬುದರ ಬಗ್ಗೆ ರಾಜಕೀಯ ವಲಯದಲ್ಲಿ ವ್ಯಾಪಕವಾಗಿ ಚರ್ಚೆ ನಡೆದಿದೆ.

'ಹಲವು ವರ್ಷಗಳ ಹಿಂದೆಯೇ ಯತ್ನಾಳ ಮತ್ತು ಹಾಶ್ಮಿ ಕುಟುಂಬದವರು ಜೊತೆಗೂಡಿ ಟೂರಿಸ್ಟ್ ಹೋಟೆಲ್ ಸ್ಥಾಪಿಸಿದರು. ನಂತರದ ವರ್ಷಗಳಲ್ಲಿ ಈ ಎರಡೂ ಕುಟುಂಬದವರ ಪಾಲುದಾರಿಕೆ ಗಟ್ಟಿಯಾಯಿತು. ಆದರೆ, ಈಗ ಸಂಬಂಧ ಹೊಸ ತಿರುವು ಪಡೆಯುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಮೌಲ್ವಿ ವಿರುದ್ಧ ಯತ್ನಾಳ ಅವರು ಮಾಡಿರುವ ಆರೋಪ ಸಾಬೀತು ಪಡಿಸಬೇಕು, ಇಲ್ಲವೇ ರಾಜ್ಯ ಸರ್ಕಾರವು ಅವರ ವಿರುದ್ಧ ಕ್ರಮ ಜರುಗಿಸಿ, ಗಡಿಪಾರು ಮಾಡಬೇಕು
ಎಸ್.ಎಂ.ಪಾಟೀಲ ಗಣಿಹಾರ
ಕೆಪಿಸಿಸಿ ವಕ್ತಾರ

'ಹೋಟೆಲ್‌ನಲ್ಲಿ ಪಾಲುದಾರರು ಮತ್ತು ಮನೆಗಳು ಅಕ್ಕಪಕ್ಕದಲ್ಲಿ ಇದ್ದರೂ ಯತ್ನಾಳ ಅವರಿಗೆ ಈಗ ಮೌಲ್ವಿ ಅವರ ಮೇಲೆ ಯಾಕೆ ಸಿಟ್ಟು ಎಂಬುದೇ ಗೊತ್ತಾಗುತ್ತಿ-ಲ್ಲ. ಮೌಲ್ವಿಯವರಿಗೆ ಐಎಸ್ ನಂಟು ಇರುವುದು ತಿಳಿದಿದ್ದರೆ, ಇಷ್ಟು ದಿನ ಏಕೆ ಸುಮ್ಮನಿದ್ದರು' ಎಂದು ಕೆಪಿಸಿಸಿ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಪ್ರಶ್ನಿಸಿದ್ದಾರೆ.

7ನೇ ಪುಟ ನೋಡಿ

ಮುದ್ರಾಂಕ ಶುಲ್ಕ ಹೆಚ್ಚಳಕ್ಕೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ದತ್ತು, ಅಡಮಾನ, ಹಸ್ತಾಂತರ ಪ್ರಮಾಣಪತ್ರ, ಒಪ್ಪಂದ ಪತ್ರ, ಸಾಲದ ಕರಾರು ಸೇರಿದಂತೆ 54 ನೋಂದಣಿಯೇತರ ದಾಖಲೆಗಳ ಮೇಲಿನ ಮುದ್ರಾಂಕ ಶುಲ್ಕವನ್ನು ಹಲವು ಪಟ್ಟುಗಳವರೆಗೆ ಹೆಚ್ಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ಮಸೂದೆ–2023' ಅನ್ನು ಗುರುವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.

6ನೇ ಪುಟ ನೋಡಿ

ಯಾವುದು ಎಷ್ಟು ಹೆಚ್ಚಳ

- ದತ್ತು ಪ್ರಮಾಣಪತ್ರದ ಮುದ್ರಾಂಕ ಶುಲ್ಕವನ್ನು ₹ 500ರಿಂದ ₹ 1,000ಕ್ಕೆ, ಅಫಿದಾವಿತ್ ಶುಲ್ಕವನ್ನು ₹20ರಿಂದ ₹100ಕ್ಕೆ ಏರಿಸಲು ಉದ್ದೇಶಿಸಲಾಗಿದೆ
- ₹ 1 ಲಕ್ಷದವರೆಗಿನ ಚಿಟ್‌ಫಂಡ್ ಒಪ್ಪಂದದ ಮುದ್ರಾಂಕ ಶುಲ್ಕ ₹ 100ರಿಂದ ₹ 500ಕ್ಕೆ ಹೆಚ್ಚಿಸುವ ಪ್ರಸ್ತಾವವಿದೆ
- ₹ 1 ಲಕ್ಷದವರೆಗಿನ ಸಾಲದ ಒಪ್ಪಂದದ ಮೇಲಿನ ಮುದ್ರಾಂಕ ಶುಲ್ಕವನ್ನು ಶೇ 0.1ರಿಂದ ಶೇ 0.5ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ
- ಕಂಪನಿ ಆರಂಭಕ್ಕೆ ಸಂಬಂಧಿಸಿದ ಪ್ರಮಾಣಪತ್ರಗಳಲ್ಲಿ ₹ 10 ಲಕ್ಷದಿಂದ ₹50 ಲಕ್ಷದವರೆಗಿನ ಮೌಲ್ಯದ ಕಂಪನಿಗಳಿಗೆ ಪ್ರತಿ ಹತ್ತು ಲಕ್ಷಕ್ಕೆ ₹ 1,000 ಶುಲ್ಕವಿತ್ತು. ಅದನ್ನು ಪ್ರತಿ ಹತ್ತು ಲಕ್ಷದಿಂದ ₹ 1 ಕೋಟಿಯವರೆಗಿನ ಮೌಲ್ಯದ ಕಂಪನಿಗಳಿಗೆ ಪ್ರತಿ ಹತ್ತು ಲಕ್ಷಕ್ಕೆ ₹ 5,000 ಶುಲ್ಕ ವಿಧಿಸುವ ಪ್ರಸ್ತಾವ ಮಾಡಲಾಗಿದೆ

ಬಿಡಿಎ ಜಾಗ ಖಾಸಗಿಯವರಿಗೆ ಮಾರಾಟ!

ಬಿಡಿಎ ಇಇಯಿಂದ ಭೂಸ್ವಾಧೀನ ಕೈಬಿಟ್ಟ ವರದಿ; ಬಿಬಿಎಂಪಿಯಿಂದ ಖಾತೆ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡ ಕೋಟ್ಯಂತರ ಮೌಲ್ಯದ ಭೂಮಿಗೆ ಬಿಡಿಎ, ಬಿಬಿಎಂಪಿ, ಕಂದಾಯ ಇಲಾಖೆ ಅಧಿಕಾರಿಗಳು 'ನಕಲಿ ದಾಖಲೆ'ಗಳನ್ನು ಸೃಷ್ಟಿಸಿಕೊಟ್ಟು, ಖಾಸಗಿಯವರಿಗೆ ಮಾರಾಟ ಮಾಡಲು ನೆರವಾಗಿದ್ದಾರೆ.

ಬಿಡಿಎ ಭೂಸ್ವಾಧೀನಾಧಿಕಾರಿ, 'ಸ್ವಾಧೀನ ಪ್ರಕ್ರಿಯೆಯಿಂದ ಭೂಮಿಯನ್ನು ಕೈಬಿಟ್ಟಿಲ್ಲ' ಎಂಬ ಸ್ಪಷ್ಟ ಮಾಹಿತಿ ನೀಡಿದ್ದರೂ, ಇಂದಿಗೂ ಬಿಡಿಎ ಜಮೀನನ್ನು ತನ್ನ ವಶಕ್ಕೆ ತೆಗೆದುಕೊಂಡಿಲ್ಲ. ಅಲ್ಲಿ ಕೆಲವು ತಿಂಗಳ ಹಿಂದಿನಿಂದ ವಾಣಿಜ್ಯ ಕಟ್ಟಡ ನಿರ್ಮಾಣ-ವಾಗುತ್ತಿದ್ದರೂ 'ನಿವೃತ್ತ ಐಎಎಸ್ ಅಧಿಕಾರಿ'ಯ ಭಯದಿಂದ ಕ್ರಮ ಕೈಗೊಳ್ಳದೆ ಅಧಿಕಾರಿಗಳು ಸುಮ್ಮನಿದ್ದಾರೆ. 1980ರಲ್ಲಿ ಎಚ್‌ಆರ್‌ಬಿಆರ್ ಬಡಾವಣೆ ನಿರ್ಮಾಣಕ್ಕಾಗಿ ಬಾಣಸವಾಡಿ ಗ್ರಾಮದ ಸರ್ವೆ ನಂ. 260 ಮತ್ತು 261ರ ಪೂರ್ಣ ಜಮೀನನ್ನು ಬಿಡಿಎ ಸ್ವಾಧೀನಪಡಿಸಿಕೊಂಡಿದೆ. 1984ರಲ್ಲಿ ಭೂ ಮಾಲೀಕರಿಗೆ ಪರಿಹಾರ ನೀಡಿದೆ. 1986ರಲ್ಲಿ ನ್ಯಾಯಾ-ಲಯದಲ್ಲಿ ಮೊಕದ್ದಮೆ ದಾಖಲಿಸಿ ಹೆಚ್ಚುವರಿ ಪರಿಹಾರವನ್ನೂ ಭೂ ಮಾಲೀಕರಾದ ಬಿ.ಸಿ. ರಾಜುರತ್ನಮ್ಮ ಪಡೆದುಕೊಂಡಿದ್ದಾರೆ. ಇಷ್ಟಾದ ಮೇಲೂ 7,000 ಚದರ ಅಡಿ ವಿಸ್ತೀ-ರ್ಣದಲ್ಲಿ ಶೀಟ್ ಮನೆಯನ್ನು ನಿರ್ಮಿಸಿ, ಮನೆಗಳನ್ನು ಸಕ್ರಮ ಮಾಡಿಕೊಡುವಂತೆ ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದರು.

ಎರಡು ಬಾರಿ ಪರಿಹಾರವನ್ನು ಪಡೆ-ದುಕೊಂಡಿರುವುದರಿಂದ ಮನೆಯನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ 1995ರಲ್ಲಿ ಮನವಿಯನ್ನು ತಿರಸ್ಕರಿಸಿದೆ.

3ನೇ ಪುಟ ನೋಡಿ



ವಿಶೇಷ ಸ್ಥಾನಮಾನ ರದ್ದು: 'ಸುಪ್ರೀಂ' ತೀರ್ಪು 11ರಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ, ಕಾಯ್ದಿರಿಸಿರುವ ತೀರ್ಪನ್ನು ಸುಪ್ರೀಂ ಕೋರ್ಟ್ ಡಿ.11ರಂದು ಪ್ರಕಟಿಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ, ಐವರು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್. ಗವಾಯಿ ಮತ್ತು ಸೂರ್ಯ ಕಾಂತ್ ಅವರನ್ನೊಳಗೊಂಡ ಸಂವಿಧಾನ ಪೀಠವು 2023ರ ಸೆ. 5ರಂದು ತೀರ್ಪು ಕಾಯ್ದಿರಿಸಿತ್ತು. ಪೀಠವು 16 ದಿನ ವಾದ ಆಲಿಸಿತ್ತು. ಹಿರಿಯ ವಕೀಲರಾದ ಕಪಿಲ್ ಸಿಬಲ್, ರಾಜೀವ್ ಧವನ್, ಗೋಪಾಲ್ ಸುಬ್ರಮಣಿಯಂ, ದುಷ್ಯಂತ್ ದವೆ, ಜಾಫರ್ ಷಾ, ಗೋಪಾಲ್ ಶಂಕರನಾರಾಯಣನ್ ಅರ್ಜಿದಾರರನ್ನು ಪ್ರತಿನಿಧಿಸಿದ್ದಾರೆ.

ವಿದ್ಯುತ್: ಇನ್ನೂ ಇವೆ ಅಪಾಯಕಾರಿ ಸ್ಥಳಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿಯಲ್ಲಿ ವಿದ್ಯುತ್ ತಂತಿ ತುಳಿದು ತಾಯಿ–ಮಗು ಮೃತಪಟ್ಟ ಘಟನೆಯ ನಂತರ ಎಚ್ಚೆತ್ತುಕೊಂಡಿರುವ ಬೆಸ್ಕಾಂ, ನಗರದಲ್ಲಿ ವಿದ್ಯುತ್ ಅವಘಡಗಳಿಗೆ ಕಾರಣವಾಗುವ 'ಅಪಾಯಕಾರಿ' ಸ್ಥಳಗಳನ್ನು ಗುರುತಿಸಿ ದುರಸ್ತಿ ಕಾರ್ಯ ಕೈಗೊಳ್ಳುತ್ತಿದೆ.

ನ. 21 ರಿಂದ 31ರವರೆಗೆ ನಗರದ ನಾಲ್ಕು ಭಾಗಗಳಲ್ಲೂ ಸಮೀಕ್ಷೆ ನಡೆಸಿರುವ ಬೆಸ್ಕಾಂ, 23,187 ಅಪಾಯಕಾರಿ ಸ್ಥಳಗಳನ್ನು ಪತ್ತೆ ಮಾಡಿದೆ. ಅದರಲ್ಲಿ 6,396 ಸ್ಥಳಗಳಲ್ಲಿದ್ದ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿದೆ. ಇನ್ನೂ 16,791 ಸ್ಥಳಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳುವುದು ಬಾಕಿ ಇದೆ. ಸಮೀಕ್ಷೆಯಲ್ಲಿ ನಗರದ ಪಶ್ಚಿಮ ಭಾಗದ ಪ್ರದೇಶದ 11,989 ಕಡೆಗಳಲ್ಲಿ ಹೆಚ್ಚು ಅಪಾಯದ ಸ್ಥಳಗಳು ಪತ್ತೆಯಾಗಿವೆ.

ನವೆಂಬರ್ 19ರಂದು ಹೋಪ್ ಫಾರ್ಮ್ ಬಳಿ ನಡೆದ ತಾಯಿ–ಮಗುವಿನ ಸಾವಿನ ಪ್ರಕರಣದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ನಂತರ, ಬೆಸ್ಕಾಂ ನಗರದಾದ್ಯಂತ ಅಪಾಯ ತಂದೊಡ್ಡುವಂತಹ ಟ್ರಾನ್ಸ್‌ಫಾರ್ಮರ್, ಹೈಟೆನ್ಷನ್ ತಂತಿಗಳು, ಶಿಥಿಲಗೊಂಡ ವಿದ್ಯುತ್ ಕಂಬಗಳ ಕುರಿತು ಸಮೀಕ್ಷೆ ನಡೆಸಿದೆ.

ಸಮೀಕ್ಷೆಯಲ್ಲಿ ಅಪಾಯಕಾರಿ ವಿದ್ಯುತ್ ಕಂಬಗಳು, ಜೋತುಬಿದ್ದ ತಂತಿಗಳು, ತೆರೆದಿರುವ ಜಂಕ್ಷನ್ ಬಾಕ್ಸ್‌ಗಳು, ಬಾಗಿರುವ ವಿದ್ಯುತ್ ಕಂಬಗಳು ಸೇರಿದಂತೆ ಅಪಾಯ ತಂದೊಡ್ಡುವಂತಹ ಸ್ಥಳಗಳು ಪತ್ತೆಯಾಗಿವೆ.

ನಾಗರಿಕರು ತಮ್ಮ ವ್ಯಾಪ್ತಿಯಲ್ಲಿ ಕಂಡು ಬರುವ ಅಪಾಯಕಾರಿ ವಿದ್ಯುತ್ ಕಂಬಗಳ ಕುರಿತು ವಿವಿಧ ಮಾಧ್ಯಮಗಳ ಮೂಲಕ ಮಾಹಿತಿ ನೀಡುತ್ತಿದ್ದು, ಬೆಸ್ಕಾಂ ಸಿಬ್ಬಂದಿ ಅವುಗಳತ್ತಲೂ ಗಮನಹರಿಸುತ್ತಿದ್ದಾರೆ.

ವಲಯವಾರು ಸಂಖ್ಯೆ

ಉತ್ತರ	ಪೂರ್ವ	ಪಶ್ಚಿಮ	ದಕ್ಷಿಣ
452	1490	4572	10277

ಸುದ್ದಿ 2 ನಿಮಿಷ

ಎಥೆನಾಲ್: ಕಬ್ಬಿನ ಹಾಲು ನಿಷೇಧ

ನವದೆಹಲಿ (ಪಿಟಿಐ): ಎಥೆನಾಲ್ ಉತ್ಪಾದನೆಗೆ ಕಬ್ಬಿನ ಹಾಲು ಮತ್ತು ಸಕ್ಕರೆ ಪಾಕ ಬಳಸುವುದನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. 2023–24ನೇ ಪೂರೈಕೆ ವರ್ಷಕ್ಕೆ (ಡಿಸೆಂಬರ್–ನವೆಂಬರ್) ಇದು ಅನ್ವಯಿಸಲಿದೆ ಎಂದು ಹೇಳಿದೆ.

2023–24ನೇ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ಸಕ್ಕರೆ ಉತ್ಪಾದನೆಯು ಶೇ 9ರಷ್ಟು ಕಡಿಮೆ ಆಗಲಿದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಘ(ಐಎಸ್‌ಎಂಎ) ಅಂದಾಜು ಮಾಡಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಈ ಕ್ರಮ ಕೈಗೊಂಡಿದೆ.

ದೇಶಿ ಬಳಕೆಗೆ ಸಕ್ಕರೆಯ ಲಭ್ಯತೆ ಸಾಕಷ್ಟು ಇರುವಂತೆ ಮಾಡುವುದು ಮತ್ತು ಬೆಲೆಯನ್ನು ನಿಯಂತ್ರಿಸುವುದು ಈ ನಿರ್ಧಾರದ ಹಿಂದಿನ ಪ್ರಮುಖ ಉದ್ದೇಶವಾಗಿದೆ. ಆಹಾರ ಸಚಿವಾಲಯವು ಸಕ್ಕರೆ ಕಾರ್ಖಾನೆಗಳು ಮತ್ತು ಡಿಸ್ಟಿಲರಿಗಳಿಗೆ ಈ ಸೂಚನೆಯನ್ನು ನೀಡಿದೆ.

ಎಥೆನಾಲ್ ತಯಾರಿಕೆಗೆ ಮೊಲಾಸಿಸ್–ಬಿ (ಕಾಕಂಬಿ) ಬಳಕೆ ಮಾಡಲು ಸರ್ಕಾರ ಅನುಮತಿ ನೀಡಿದೆ. ಈ ನಿರ್ಧಾರವನ್ನು ಒಕ್ಕೂಟವು ಸ್ವಾಗತಿಸಿದೆ.

2023–24ನೇ ಮಾರುಕಟ್ಟೆ ವರ್ಷದಲ್ಲಿ 337 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗುವ ಅಂದಾಜು ಮಾಡಲಾಗಿದೆ. 2022-23ನೇ ಮಾರುಕಟ್ಟೆ ವರ್ಷದಲ್ಲಿ ಆಗಿದ್ದ ಉತ್ಪಾದನೆಗೆ ಹೋಲಿಸಿದರೆ ಶೇ 9ರಷ್ಟು ಇಳಿಕೆ ಕಾಣಲಿದೆ ಎಂದು ಒಕ್ಕೂಟ ಹೇಳಿದೆ.

ಬಿ.ಇಡಿಗೆ ಅರ್ಜಿ: ಡಿ.11ರವರೆಗೆ ವಿಸ್ತರಣೆ

ಬೆಂಗಳೂರು: 2023–24ನೇ ಸಾಲಿನ ಬಿ.ಇಡಿ ಪದವಿಯ ಪ್ರವೇಶಕ್ಕೆ ಸರ್ಕಾರಿ ಸೀಟುಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಡಿ.11ರವರೆಗೆ ವಿಸ್ತರಿಸಲಾಗಿದೆ.

ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳಿಗೆ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವೀಧರರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಕೇಂದ್ರೀಕೃತ ದಾಖಲಾತಿ ಘಟಕದ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ | DH DECCAN HERALD

Freedom Healthy Cooking Oils presents ಭೂಮಿಕಾ ಕ್ಲಬ್ powered by manipalhospitals LIFE'S ON

ಭುಮಿಕಾ ಕ್ಲಬ್ ಈಗ ವಿಜಯನಗರದಲ್ಲಿ!

ಭೂಮಿಕಾ ಕ್ಲಬ್ ಚಳಿಗಾಲದ ಆವೃತ್ತಿಯು ರೋಮಾಂಚಕಾರಿ ಚಟುವಟಿಕೆಗಳ ಒಂದು ಶ್ರೇಣಿಯನ್ನೇ ನಿಮಗೆ ತರುತ್ತಿದೆ. ಉಚಿತ ಪ್ರವೇಶವನ್ನು ಪಡೆಯಲು ಈಗಲೇ ನೋಂದಾಯಿಸಿ!

ಉದ್ಘಾಟನೆ: ಗಾನವಿ ಲಕ್ಷ್ಮಣ್

ಶನಿವಾರ, ಡಿಸೆಂಬರ್ 9, 2023 ಮಧ್ಯಾಹ್ನ 1:30 ರಿಂದ

ವೈಟ್ ಪೆಟಲ್ಸ್, 25, 22ನೇ ಮುಖ್ಯ ರಸ್ತೆ, ಗೋವಿಂದರಾಜ ನಗರ ವಾರ್ಡ್, ಬಸವೇಶ್ವರ ಎಚ್‌ಬಿಸಿಎಸ್ ಲೇಔಟ್, ವಿಜಯನಗರ, ಬೆಂಗಳೂರು 40

ಕಾರ್ಯಕ್ರಮದ ಮುಖ್ಯಾಂಶಗಳು

ವಿಂಟರ್ ಸ್ಕಿನ್ ಮತ್ತು ಹೇರ್ ಕೇರ್ – ಡಾ॥ ರಿತಿಕಾ ಷಣ್ಮುಗಂ, ಕನ್ಸಲ್ಟೆಂಟ್ – ಚರ್ಮರೋಗ & ಕಾಸ್ಮೆಟಾಲಜಿ, ಮಣಿಪಾಲ್ ಆಸ್ಪತ್ರೆ, ಮಲ್ಲೇಶ್ವರಂ.

ಚಳಿಗಾಲದ ಅಲರ್ಜಿಗಳು – ಡಾ॥ ವಸುನೇತ್ರ ಕಾಸರಗೋಡು, ಕನ್ಸಲ್ಟೆಂಟ್ – ಶ್ವಾಸಕೋಶ ವಿಜ್ಞಾನ, ಮಣಿಪಾಲ್ ಆಸ್ಪತ್ರೆ, ಮಿಲ್ಲರ್ಸ್ ರಸ್ತೆ.

ಅಡುಗೆ ಕಾರ್ಯಕ್ರಮ – ಪೂಜಾ ಪಾಟೀಲ್

ಸಂಗೀತ ಪ್ರದರ್ಶನ – ದಿವ್ಯಾ ರಾಮಚಂದ್ರ

ಗೇಮ್ಸ್ । ಹೈ–ಟೀ । ನೆಟ್‌ವರ್ಕಿಂಗ್

* ಷರತ್ತುಗಳು ಅನ್ವಯ

ನೋಂದಾಯಿತರಿಗೆ ಮಾತ್ರ ಪ್ರವೇಶ

in association with A TATA and TESCO Enterprise star

ನೋಂದಾಯಿಸಲು ಇಲ್ಲಿ ಸ್ಕ್ಯಾನ್ ಮಾಡಿ

ಭಾರತ ಸರ್ಕಾರ
ಸಂವಹನಗಳ ಸಚಿವಾಲಯ
ದೂರಸಂಚಾರ ಇಲಾಖೆ

ಭಾರತೀಯ ದೂರಸಂಚಾರ ನಿಯಂತ್ರಣ ಪ್ರಾಧಿಕಾರ, ನವದೆಹಲಿ ಇಲ್ಲಿನ ಅಧ್ಯಕ್ಷ ಹುದ್ದೆಗಾಗಿ ಅರ್ಜಿ ಆಹ್ವಾನ

ಭಾರತ ಸರ್ಕಾರದ ಸಂವಹನಗಳ ಸಚಿವಾಲಯ, ದೂರಸಂಚಾರ ಇಲಾಖೆ ಇವರು, ಭಾರತೀಯ ದೂರಸಂಚಾರ ನಿಯಂತ್ರಣ ಪ್ರಾಧಿಕಾರದಲ್ಲಿನ (ಟ್ರಾಯ್) ಅಧ್ಯಕ್ಷ ಹುದ್ದೆಯ ಭರ್ತಿಗಾಗಿ, ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಟ್ರಾಯ್ ಎಂಬುದೊಂದು ಶಾಸನಬದ್ಧ ಸ್ವಾಯುತ್ತ ಅಂಗವಾಗಿದ್ದು, ಭಾರತೀಯ ದೂರಸಂಚಾರ ನಿಯಂತ್ರಣ ಪ್ರಾಧಿಕಾರ ಕಾಯ್ದೆ, 1997ರ ಅಡಿಯಲ್ಲಿ ಸ್ಥಾಪನೆಗೊಂಡಿದೆ. ಇದು ದೂರಸಂಚಾರ ಸೇವೆಗಳನ್ನು ನಿಯಂತ್ರಿಸುವ, ವಿವಾದಗಳನ್ನು ಬಗೆಹರಿಸುವ, ಮನವಿಗಳನ್ನು ಇತ್ಯರ್ಥಪಡಿಸುವ, ದೂರಸಂಚಾರ ಕ್ಷೇತ್ರದಲ್ಲಿನ ಸೇವಾ ಪೂರೈಕೆದಾರರ ಹಾಗೂ ಗ್ರಾಹಕರ ಹಿತರಕ್ಷಿಸುವ ಮತ್ತು ದೂರಸಂಚಾರ ಕ್ಷೇತ್ರವನ್ನು ಉತ್ತೇಜಿಸುವ ಹಾಗೂ ಅದರ ವ್ಯವಸ್ಥಿತ ಬೆಳವಣಿಗೆಯನ್ನು ಖಚಿಪಡಿಸುವ ಜವಾಬ್ದಾರಿ ಹೊಂದಿರುತ್ತದೆ.

ನೇಮಕಾತಿಗೆ ಸಂಬಂಧಿತ ವಿವರವಾದ ಅರ್ಹತಾ ಷರತ್ತುಗಳನ್ನು ಹಾಗೂ ಇನ್ನಿತರ ಷರತ್ತು ಮತ್ತು ನಿಬಂಧನೆಗಳನ್ನು www.dot.gov.in ಅಥವಾ http://www.trai.gov.in ಅಥವಾ http://www.dopt.gov.in ವೆಬ್‌ಸೈಟ್‌ಗಳಲ್ಲಿ ಪರಿಶೀಲಿಸಬಹುದು. **ಈ ಹಿಂದೆ 22.06.2023 ರಂದು ಪ್ರಕಟಿತ ಜಾಹೀರಾತಿಗೆ ಸ್ಪಂದಿಸಿ ಅರ್ಜಿ ಸಲ್ಲಿಸಿದ್ದವರು, ಪುನಃ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 22.12.2023 ರಂದು ಸಂಜೆ 5.30 ಗಂಟೆಯೊಳಗೆ.**

cbc06201/11/0011/2324

ಟೀಂಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395
315 ವರ್ಕ್ ಅವೆನ್ಯೂ, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ. ದೂರವಾಣಿ: +91 80 6824 3333
ಫ್ಯಾಕ್ಸ್: +91 80 6824 3001
corporateaffairs@teamlease.com | https://group.teamlease.com/

ಅಂಚೆ ಮತದಾನ ಸೂಚನೆ, ರಿಮೋಟ್ ಇ–ವೋಟಿಂಗ್ ಮತ್ತು ಅಂತಿಮ ದಿನಾಂಕ

1) ಈ ಮೂಲಕ ನೋಟೀಸನ್ನು ನೀಡಲಾಗುತ್ತಿದೆ, ಏನೆಂದರೆ: ಕಂಪನಿಗಳ ಅಧಿನಿಯಮ, 2013ರ (**'ಅಧಿನಿಯಮ'**) 108 ಮತ್ತು 110 ಕಲಮುಗಳ ನಿಬಂಧನೆಗಳನ್ನು ಮತ್ತು ಇತರ ಅನ್ವಯವಾಗುವ ನಿಬಂಧನೆಗಳೇನಾದರೂ ಇದ್ದರೆ ಅವುಗಳನ್ನು ತಿದ್ದಿದ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014ರ [ಸದ್ಯದಲ್ಲಿ ಜಾರಿಯಲ್ಲಿರುವ ಅದರ ಯಾವುದೇ ಶಾಸನಬದ್ಧ ತಿದ್ದುಪಡಿ(ಗಳು) ಮತ್ತು ಪುನಃ–ಅಧಿನಿಯಮಿತಿ(ಗಳು) ಸೇರಿದಂತೆ] ನಿಯಮಗಳು 20 ಮತ್ತು 22ರ (**'ನಿಯಮಗಳು'**) ಜೊತೆ ಓದಿಕೊಂಡಂತೆ, ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಅಂಚೆ ಮತದಾನದ ಮೂಲಕ ಇ–ವೋಟಿಂಗ್ ನಡೆಸುವ ವಿಷಯವಾಗಿ ಹೊರಡಿಸಿರುವ ಸಂ.14/2020 ದಿನಾಂಕ ಏಪ್ರಿಲ್ 08, 2020; ಸಂ.17/2020 ದಿನಾಂಕ ಏಪ್ರಿಲ್ 13, 2020; ಸಂ.22/2020 ದಿನಾಂಕ ಮೇ 5, 2020, 22/2020; ದಿನಾಂಕ ಜೂನ್ 15, 2020; ಸಂ.33/2020 ದಿನಾಂಕ ಸೆಪ್ಟೆಂಬರ್ 28, 2020; ಸಂ. 39/2020 ದಿನಾಂಕ ಡಿಸೆಂಬರ್ 31, 2020; ಸಂ. 10/2021 ದಿನಾಂಕ ಜೂನ್ 23, 2021; ಸಂ.20/2021 ದಿನಾಂಕ ಡಿಸೆಂಬರ್ 8, 2021; ಸಂ.03/2022 ದಿನಾಂಕ ಮೇ 05, 2022 ಮತ್ತು ಸಂ. 11/2022 ದಿನಾಂಕ ಡಿಸೆಂಬರ್ 28, 2022 ಈ ಸಾಮಾನ್ಯ ಸುತ್ತೋಲೆಗಳ, ಮತ್ತು ಇರಬಹುದಾದ ಯಾವುದೇ ಇತರೆ ಸುತ್ತೋಲೆಗಳ (**'ಎಂಸಿಎ ಸುತ್ತೋಲೆಗಳು'**) ಪ್ರಕಾರ, ಸೆಕ್ಯೂರಿಟೀಸ್ ಎಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳ) ನಿಬಂಧನೆಗಳು, 2015 (**'ಸೆಬಿ ಲಿಸ್ಟಿಂಗ್ ನಿಬಂಧನೆಗಳು'**) ನಿಬಂಧನೆ 44ರ ಪ್ರಕಾರ, ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆ ನೀಡಿರುವ ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೆಟೇರಿಯಲ್ ಸ್ಟಾಂಡರ್ಡ್ (**ಎಸ್‌ಎಸ್–2**) ಪ್ರಕಾರ ಮತ್ತು ಅನ್ವಯವಾಗುವ ಇತರೆ ಕಾನೂನುಗಳು ಮತ್ತು ನಿಬಂಧನೆಗಳ ಪ್ರಕಾರ ಇಲ್ಲಿ ಕೆಳಗೆ ನೀಡಿರುವ ವಿಶೇಷ ನಿರ್ಣಯದ ಬಗ್ಗೆ ಟೀಂ ಲೀಸ್ ಸರ್ವೀಸಸ್ ಲಿಮಿಟೆಡ್ (**ಕಂಪನಿ**) ಷೇರುದಾರರು ಅಥವಾ ಸದಸ್ಯರ (**'ಸದಸ್ಯರು'**) ಅನುಮೋದನೆಯನ್ನು ವಿದ್ಯುನ್ಮಾನ ಪ್ರಕ್ರಿಯೆಯ (**'ರಿಮೋಟ್ ಇ–ವೋಟಿಂಗ್'**) ಮೂಲಕ ಮಾತ್ರವೇ ಕೋರುವ ಸಲುವಾಗಿ ಈ ಸೂಚನೆಯನ್ನು ನೀಡಲಾಗಿದೆ ಮತ್ತು ಈ ವಿಶೇಷ ನಿರ್ಣಯವನ್ನು ನವಂಬರ್ 08, 2023 ದಿನಾಂಕದ ಅಂಚೆ ಮತದಾನ ಸೂಚನೆಯಲ್ಲಿ (**'ಸೂಚನೆ'**) ವಿವರವಾಗಿ ನೀಡಲಾಗಿದೆ.

ಕ್ರ. ಸಂ.	ನಿರ್ಣಯದ ವಿವರ–ವಿಶೇಷ ನಿರ್ಣಯ
1.	ಶ್ರೀ ರಾಜ್‌ನಾರಾಯಣ ರಾಮಕೃಷ್ಣನ್ (ಡಿಐಎನ್: 02545177) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ ಸತತ 5 ವರ್ಷದ ಅವಧಿಗೆ ಅಂದರೆ ನವೆಂಬರ್ 08, 2023ಕ್ಕೆ ಜಾರಿ ಆಗುವಂತೆ ನವೆಂಬರ್ 07, 2028ರ ವರೆಗೆ ನೇಮಕ ಮಾಡಲಾಗಿದೆ.

2. ಮೇಲೆ ಹೇಳಿರುವಂತಹ ಎಂಸಿಎ ಮತ್ತು ಸೆಬಿ ಸುತ್ತೋಲೆಗಳ ಪ್ರಕಾರ ಯಾರೆಲ್ಲ ಷೇರುದಾರರು ತಮ್ಮ ಇಮೇಲ್ ಐಡಿ ಗಳನ್ನು ರಿಜಿಸ್ಟ್ರಾರ್ ಮತ್ತು ಶೇರು ವರ್ಗಾವಣೆ ಮಧ್ಯವರ್ತಿಗಳ/ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರ ಜೊತೆ ನೋಂದಾಯಿಸಿಕೊಂಡಿರುವರೋ ಮತ್ತು ಯಾರೆಲ್ಲರ ಹೆಸರುಗಳು ಡಿಸೆಂಬರ್ 01, 2023ರಂದು (**'ಅಂತಿಮ ದಿನಾಂಕ'**) ಸದಸ್ಯರ ರಿಜಿಸ್ಟರಿನಲ್ಲಿ/ಫಲಾನುಭವಿ ಮಾಲಿಕರ ಪಟ್ಟಿಯಲ್ಲಿ ಕಂಡುಬರುತ್ತವೆಯೋ ಅಂತಹ ಷೇರುದಾರರಿಗೆಲ್ಲ ಅಂಚೆ ಮತದಾನ ಸೂಚನೆಯ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಕಂಪನಿಯು ಸದರಿ ಅಂಚೆ ಮತದಾನ ಸೂಚನೆಯ ವಿದ್ಯುನ್ಮಾನ ಪ್ರತಿಗಳನ್ನು ರವಾನಿಸುವ ಕೆಲಸವನ್ನು ಡಿಸೆಂಬರ್ 07, 2023ರಂದು ಪೂರ್ಣಗೊಳಿಸಿದೆ.

3. ಸೆಬಿ ಲಿಸ್ಟಿಂಗ್ ನಿಬಂಧನೆಗಳ ನಿಬಂಧನೆ 44, ಎಂಸಿಎ ಸುತ್ತೋಲೆಗಳು ಮತ್ತು ಅಧಿನಿಯಮಯ ನಿಬಂಧನೆಗಳ ಮತ್ತು ಅದರ ಅಡಿಯಲ್ಲಿ ರಚಿಸಿರುವ ಸಂಬಂಧಪಟ್ಟ ನಿಯಮಗಳ ಅನ್ವಯ ಅಂತಿಮ ದಿನಾಂಕವಾದ ಶುಕ್ರವಾರ, ಡಿಸೆಂಬರ್ 01, 2023ರಂದು ಭೌತಿಕ ಅಥವಾ ಡೀಮ್ಯಾಟ್ ಸ್ವರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ, ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರದ ಬಗ್ಗೆ ತಮ್ಮ ಮತಗಳನ್ನು ಚಲಾಯಿಸಲು, ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (**'ಕೆಫಿನ್‌ಟೆಕ್'**) ಸೇವೆಗಳನ್ನು ನಿಯೋಜಿಸಿಕೊಂಡಿದೆ..

i) ಅಂತಿಮ ದಿನಾಂಕವಾದ ಶುಕ್ರವಾರ, ಡಿಸೆಂಬರ್ 01, 2023ರಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿರುವ ಅವರ ಇಕ್ವಿಟಿ ಷೇರಿನ ಅನುಪಾತದಲ್ಲಿ ಸದಸ್ಯ / ಫಲಾನುಭವಿ ಮಾಲೀಕರ ಮತದಾನದ ಹಕ್ಕುಗಳು ಇರುತ್ತವೆ. ಅಂತಿಮ ದಿನಾಂಕದಂದು ಸದಸ್ಯರ ನೋಂದಣಿ/ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರುಗಳು ದಾಖಲಾಗಿರುವ ಸದಸ್ಯರು ಮಾತ್ರವೇ ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಅಂತಿಮ ದಿನಾಂಕದಂದು ಸದಸ್ಯರಲ್ಲದ ಯಾವುದೇ ವ್ಯಕ್ತಿ ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರವೇ ಎಂದು ತಿಳಿಯಬೇಕು.

ii) ಈ ಕೆಳಗಿನ ವೋಟಿಂಗ್ ಅವಧಿಯಲ್ಲಿ ಇ–ವೋಟಿಂಗ್ ಸೌಲಭ್ಯ ಇರುತ್ತದೆ:

ಇ–ವೋಟಿಂಗ್ ಪ್ರಾರಂಭ	ಇ–ವೋಟಿಂಗ್ ಮುಕ್ತಾಯ
ಡಿಸೆಂಬರ್ 08, 2023 ಭಾ.ಕಾ. ಬೆಳಗ್ಗೆ 09.00	**ಜನವರಿ 06, 2024 ಭಾ.ಕಾ. ಸಂಜೆ 05.00**

iii) ರಿಮೋಟ್ ಇ–ವೋಟಿಂಗ್ ಮಾಡ್ಯೂಲನ್ನು **ಜನವರಿ 06, 2024 ಭಾ.ಕಾ. ಸಂಜೆ 05:00**ರ ನಂತರ ನಿಷ್ಕ್ರಿಯಗೊಳಿಸಲಾಗುತ್ತದೆ/ನಿರ್ಬಂಧಿಸಲಾಗುತ್ತದೆ. ಒಮ್ಮೆ ನಿರ್ಣಯದ ಮೇಲೆ ಮತವನ್ನು ಚಲಾಯಿಸಿದ ನಂತರ ಅದನ್ನು ಬದಲಾಯಿಸಲು ಷೇರುದಾರರಿಗೆ ಅವಕಾಶವಿರುವುದಿಲ್ಲ.

iv) ಸದಸ್ಯರ ಇಮೇಲ್ ಐಡಿಗಳಲ್ಲಿ ಬದಲಾವಣೆ ಇದ್ದರೆ: (ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳಿದ್ದಲ್ಲಿ) ಅದನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರಿಗೆ ಅಥವಾ (ಭೌತಿಕ ರೂಪದಲ್ಲಿ ಷೇರುಗಳಿದ್ದಲ್ಲಿ) ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರಾದ ಕೆಫಿನ್‌ಟೆಕ್‌ಗೆ ತಿಳಿಸಬೇಕೆಂದು ಸದಸ್ಯರಲ್ಲಿ ವಿನಂತಿ.

4. ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ನಡೆಯುವ ಅಂಚೆ ಮತದಾನವು ನ್ಯಾಯೋಚಿತ ಮತ್ತು ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು ಕಂಪನಿಯು ಶ್ರೀ ಮುಖೇಶ್ ಸಿರೋಯಾ, ಎಂ ಸಿರೋಯಾ ಮತ್ತು ಕಂಪನಿ, ವೃತ್ತಿಪರ ಕಂಪನಿ ಕಾರ್ಯದರ್ಶಿಗಳು (ಎಫ್‌ಸಿಎಸ್: 5682, ಸಿಒಪಿ: 4157), ಮುಂಬೈ ಅವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿದೆ. ಶ್ರೀಮತಿ ಭವ್ಯತಾ ಆಚಾರ್ಯ (ಸಿ.ಪಿ. ನಂ.: 21758; ಎಮ್. ನಂ. ಎ25734). ವೃತ್ತಿಪರ ಕಂಪನಿ ಕಾರ್ಯದರ್ಶಿ ಇವರು ಪರ್ಯಾಯ ಸೂಕ್ಷ್ಮ ಪರಿಶೀಲಕರಾಗಿರುತ್ತಾರೆ. ಅಂಚೆ ಮತದಾನದ ಫಲಿತಾಂಶಗಳನ್ನು, ಮಂಗಳವಾರ, ಜನವರಿ 09, 2024ರಂದು ಅಥವಾ ಅದಕ್ಕೆ ಮೊದಲು ಘೋಷಿಸಲಾಗುತ್ತದೆ. ಅಂಚೆ ಮತದಾನದ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ https://group.teamlease.com, ಮತ್ತು KFintech ನ ವೆಬ್‌ಸೈಟ್ https://evoting.kfintech.com ನಲ್ಲಿ ಸಹ ಪ್ರದರ್ಶಿಸಲಾಗುತ್ತದೆ: ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜುಗಳಿಗೂ ತಿಳಿಸಲಾಗುವುದು.

5. ಇ–ವೋಟಿಂಗ್‌ಗೆ ಸಂಬಂಧಿಸಿದ ಸೂಚನೆಗಳ ಸಹಿತವಾದ ಅಂಚೆ ಮತದಾನದ ಸೂಚನೆಯು ಕಂಪನಿಯ ವೆಬ್‌ಸೈಟ್ https://group.teamlease.com/ ಮತ್ತು ಕೆಫಿನ್‌ಟೆಕ್ ನ https://evoting.kfintech.com ವೆಬ್‌ಸೈಟ್‌ನಲ್ಲಿ ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್ ಗಳಾದ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಬಿಎಸ್‌ಇ ಲಿಮಿಟೆಡ್ ನ ವೆಬ್‌ಸೈಟುಗಳಲ್ಲಿಯೂ ಸಂಬಂಧಿತ ವಿಭಾಗಗಳಲ್ಲಿ ಲಭ್ಯವಿರುತ್ತದೆ.

6. ಇ–ವೋಟಿಂಗ್ ಮೂಲಕ ನಡೆಯುವ ಅಂಚೆ ಮತದಾನಕ್ಕೆ ಸಂಬಂಧಿಸಿದಂತಹ ಯಾವುದೇ ಕುಂದುಕೊರತೆಗಳನ್ನು ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿಗೆ ತಿಳಿಸಬಹುದು: ವಿಳಾಸ 315 ವರ್ಕ್ ಅವೆನ್ಯೂ, ಅಸೆಂಟ್ ಬಿಲ್ಡಿಂಗ್, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು–560095, ದೂರವಾಣಿ: 91 80 6824 3333 ಅಥವಾ ಇ–ಮೇಲ್ corporateaffairs@teamlease.com.

7. ಇಲೆಕ್ಟ್ರಾನಿಕ್ ವೋಟಿಂಗ್ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಮತ್ತು/ಯಾ ದೂರುದುಮ್ಮಾನಗಳಿದ್ದರೆ ಶೇರುದಾರರು ಕಾರ್ವಿ ವೆಬ್‌ಸೈಟ್ https://evoting.kfintech.com (KFintech Website) ನಲ್ಲಿರುವ 'ಸಹಾಯ ಮತ್ತು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು' (FAQs) ವಿಭಾಗವನ್ನು ಮತ್ತು ಅಲ್ಲೇ ಡೌನ್‌ಲೋಡ್ ವಿಭಾಗದಲ್ಲಿರುವ ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಪರಾಮರ್ಶಿಸಬಹುದು ಅಥವಾ ಕೆಫಿನ್‌ಟೆಕ್, ಕಾರ್ವಿ ಸೆಲೆನಿಯಮ್ ಟವರ್ ಬಿ, ಪ್ಲಾಟ್ 31–32, ಗಚ್ಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಾಕ್ರಮಗುಡ, ಹೈದರಾಬಾದ್–500032 ಕಂಪನಿಯ ರಜಿತಾ ಚೊಲ್ಲೇಟಿ/ ಪ್ರೇಮಕುಮಾರ್ ನಾಯರ್ (ಯೂನಿಟ್: ಟೀಂಲೀಸ್ ಸರ್ವೀಸಸ್ ಲಿಮಿಟೆಡ್) ಇವರನ್ನು ಅಥವಾ einward.ris@kfintech.com ವೆಬ್‌ಸೈಟ್ ಮೂಲಕ ಅಥವಾ ಕೆಫಿನ್‌ಟೆಕ್‌ನ ಶುಲ್ಕರಹಿತ ಸಂಖ್ಯೆ 1–800–309–4001 ಮೂಲಕ ಸಂಪರ್ಕಿಸಿ ಸ್ಪಷ್ಟೀಕರಣಗಳನ್ನು ಪಡೆದುಕೊಳ್ಳಬಹುದು.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
ಅಲಕಾ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫಿಸರ್
(M. No. F10911)

ದಿನಾಂಕ: **ಡಿಸೆಂಬರ್ 07, 2023**
ಸ್ಥಳ: **ಬೆಂಗಳೂರು**

ಬೆಂಗಳೂರು ವಿಶ್ವವಿದ್ಯಾಲಯ

ಕುಲಸಚಿವರ ಕಛೇರಿ, ಜ್ಞಾನಭಾರತಿ, ಬೆಂಗಳೂರು – 560056

ಸಂಖ್ಯೆ: ಬಿಯು/ಇ–ಆಡಳಿತ/ಟೆಂಡರ್–ಜಾಹಿರಾತು–08/2023–24 ದಿನಾಂಕ: 05.12.2023

ಇ–ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಕಂಡ ಟೆಂಡರ್‌ಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳು **www.kppp.karnataka.gov.in** ನಲ್ಲಿ ದೊರಕುತ್ತವೆ. ಬಿಡ್‌ಗಳನ್ನು **www.kppp.karnataka.gov.in** ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕು ಟೆಂಡರ್‌ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧರಾಗಿರಲು ಬಿಡ್‌ದಾರರಲ್ಲಿ ವಿನಂತಿಸಲಾಗಿದೆ.

ಕ್ರ. ಸಂ.	ಟೆಂಡರ್‌ಗಳ ವಿವರ
1	ಬೆಂಗಳೂರು ವಿಶ್ವವಿದ್ಯಾಲಯದ ಪಿಜಿ ಸೆಂಟರ್ ರಾಮನಗರದ ಮಹಿಳಾ ವಿದ್ಯಾರ್ಥಿ ನಿಲಯದ ಶೌಚಾಲಯ ಮತ್ತು ಸ್ನಾನಗೃಹಗಳ ದುರಸ್ತಿ ಕಾರ್ಯಗಳು.
2	ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬೀದಿ ದೀಪಗಳ ವಾರ್ಷಿಕ ನಿರ್ವಹಣೆಯನ್ನು ಒದಗಿಸುವುದು (2023–24).
3	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗಕ್ಕೆ ಕಾರ್ಬನ್ ಡೈಆಕ್ಸೈಡ್ ಇನ್‌ಕ್ಯುಬೇಟರ್ ಉಪಕರಣ ಪೂರೈಕೆ ಮತ್ತು ಅಳವಡಿಕೆ.
4	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗಕ್ಕೆ HPLC ಉಪಕರಣ ಪೂರೈಕೆ ಮತ್ತು ಅಳವಡಿಕೆ.
5	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗಕ್ಕೆ 80 ಡೀಪ್ ಫ್ರೀಜರ್ ಉಪಕರಣ ಪೂರೈಕೆ ಮತ್ತು ಅಳವಡಿಕೆ.
6	ರಸಾಯನಶಾಸ್ತ್ರ ವಿಭಾಗಕ್ಕೆ ಫ್ಲ್ಯಾಶ್ ಕ್ರೋಮ್ಯಾಟೋಗ್ರಫಿ ಉಪಕರಣ ಪೂರೈಕೆ ಮತ್ತು ಅಳವಡಿಕೆ.
7	ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಪೀಠೋಪಕರಣಗಳ ಪೂರೈಕೆ (ಪೂರ್ವ ಬಿಡ್ ಸಭೆಯನ್ನು ದಿನಾಂಕ: **11.12.2023ರ ಬೆಳಿಗ್ಗೆ 11.30 ಗಂಟೆಗೆ** ಬೋರ್ಡ್ ರೂಂ, ಕುಲಸಚಿವರ ಕಛೇರಿ, ನ್ಯೂ ಗೆಸ್ಟ್‌ಹೌಸ್, ಜ್ಞಾನಭಾರತಿ ಆವರಣ ಇಲ್ಲಿ ನಡೆಸಲಾಗುವುದು).

DIPR/CP/BCPL/2457/2023-24 — ಸಹಿ/– ಕುಲಸಚಿವರು

ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: 73/1, ಗಾಂಧಿ ಬಜಾರ್ ಮುಖ್ಯರಸ್ತೆ, ಬೆಂಗಳೂರು–560004
ದೂರವಾಣಿ: 080–22421998, 26618093, ಇ–ಮೇಲ್: admin.ao@ncbl.org.in

ಪತ್ರಿಕಾ ಪ್ರಕಟಣೆ

ವಿಶೇಷ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,

29ನೇ ಡಿಸೆಂಬರ್ 2023, ಶುಕ್ರವಾರ ಬೆಳಿಗ್ಗೆ 10.00 ಘಂಟೆಯಿಂದ 2.00 ಘಂಟೆವರೆಗೆ ಬ್ಯಾಂಕಿನ ವಿಶೇಷ ಸಾಮಾನ್ಯ ಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಹೆಚ್.ಸಿ. ಕೃಷ್ಣರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿಷಯವನ್ನು ಚರ್ಚಿಸಿ ತೀರ್ಮಾನಿಸಲು ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ.

ಸ್ಥಳ: ಪೂರ್ಣಿಮ ಕನ್ವೆನ್ಷನ್ ಸೆಂಟರ್
#27/1, 31ನೇ ಅಡ್ಡರಸ್ತೆ, 16ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011

ವಿಷಯ: ಬ್ಯಾಂಕಿನ ವಿಲೀನೀಕರಣದ ಬಗ್ಗೆ

ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ನೊಂದಾಯಿತವಾಗಿರುವ ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಅನ್ನು ಮಹಾರಾಷ್ಟ್ರ ರಾಜ್ಯದ ಪುಣೆಯಲ್ಲಿ ನೊಂದಾಯಿತವಾಗಿರುವ ದಿ ಕಾಸ್ಮೊಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. (ಮಲ್ಟಿ ಸ್ಟೇಟ್ ಕೋ–ಆಪರೇಟಿವ್ ಬ್ಯಾಂಕ್) ನೊಂದಿಗೆ ವಿಲೀನಗೊಳಿಸುವ ಯೋಜನೆಯನ್ನು ಸಹಮತ ಸೂಚಿಸಿ ಅನುಮೋದಿಸುವುದು. ಈ ಯೋಜನೆಯ ಅನುಮೋದನೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸುವುದು.

ದಿನಾಂಕ: 07.12.2023
ಸ್ಥಳ : ಬೆಂಗಳೂರು

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/–
(ಸುಮಾ.ಪಿ.ವಿ)
ಪ್ರ. ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸೂಚನೆ

1. ಸಭೆಗೆ ಹಾಜರಾಗಲು ನಿಯತ ಸದಸ್ಯರಿಗೆ ಮಾತ್ರ ಪ್ರವೇಶ ಅವಕಾಶವಿರುವುದು, ಸಭೆಗೆ ಭಾವಚಿತ್ರವಿರುವ ಬ್ಯಾಂಕಿನ ಸದಸ್ಯತ್ವದ ಗುರುತಿನ ಚೀಟಿಯನ್ನು ಹಾಜರಿ ಪಡಿಸುವುದು ಕಡ್ಡಾಯುವಾಗಿರುತ್ತದೆ. (ಸದಸ್ಯರಲ್ಲದವರಿಗೆ/ಸಹ ಸದಸ್ಯರಿಗೆ ಸಭೆಗೆ ಪ್ರವೇಶವಿರುವುದಿಲ್ಲ.)
2. ನಿಯತ ಸದಸ್ಯರು ಬ್ಯಾಂಕಿನ ಸದಸ್ಯತ್ವದ ಗುರುತಿನ ಚೀಟಿ ಪಡೆಯದಿದ್ದಲ್ಲಿ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ಆಡಳಿತ ಕಛೇರಿಯನ್ನು **ದಿನಾಂಕ: 27.12.2023ರ** ಒಳಗೆ ಸಂಪರ್ಕಿಸಿ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಗುರುತಿನ ಚೀಟಿ ಪಡೆಯಬಹುದು.

ಸಂಕ್ಷಿಪ್ತ ಸುದ್ದಿ

'ಕಾಂತರಾಜ ವರದಿ ಎಲ್ಲ ಪಕ್ಷಗಳು ಬೆಂಬಲಿಸಲಿ'

ಬೆಂಗಳೂರು: ಜಾತಿಗಣತಿಗೆ ಸಂಬಂಧಿಸಿದ ಕಾಂತರಾಜ ವರದಿಗೆ ಎಲ್ಲ ಪಕ್ಷಗಳು ಬೆಂಬಲಿಸಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮತ್ತು ದಲಿತ ಅಲ್ಪಸಂಖ್ಯಾತರ ಸಂಘ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಉದಯಶಂಕರ್, 'ರಾಜ್ಯದಲ್ಲಿರುವ ಎಲ್ಲ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರ ಸೌಲಭ್ಯಗಳನ್ನು ಹಂಚಿಕೆ ಮಾಡಬೇಕು. ಅಂದಾಗ ಮಾತ್ರ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯಕ್ಕೆ ಒಂದು ಅರ್ಥ ಬರುತ್ತದೆ. ಆದರೆ, ಇದಕ್ಕೆ ಕೆಲ ಸಮುದಾಯಗಳು ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ' ಎಂದು ಹೇಳಿದರು.

'ಕಾಂತರಾಜ ಅವರ ನೇತೃತ್ವದಲ್ಲಿ ನಡೆದ ಜಾತಿ ಗಣತಿ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಸ್ವೀಕರಿಸಿ ಅದನ್ನು ಬಹಿರಂಗಗೊಳಿಸಬೇಕು. ಇದರಿಂದ, ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಸ್ಥಿತಿಯ ವಾಸ್ತವ ಅರಿಯಲು ವರದಿ ಸಹಾಯಕವಾಗಲಿದೆ. ನಂತರ ಅದನ್ನು ಸಾರ್ವಜನಿಕರ ಚರ್ಚೆಗೊಳಪಡಿಸಿ, ಅದರ ಸಾದಕ–ಬಾಧಕಗಳನ್ನು ಪರಾಮರ್ಶಿಸಿ ನಂತರ ಅದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಸಂಚಾಲಕ ಸಿ.ಕೆ. ರವಿಚಂದ್ರ ಪಾಲ್ಗೊಂಡಿದ್ದರು.

ಆಕ್ಷೇಪಾರ್ಹ ಹೇಳಿಕೆ ಬಿಧೂಡಿ ವಿಷಾದ

ನವದೆಹಲಿ (ಪಿಟಿಐ): ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದ ರಮೇಶ್ ಬಿಧೂಡಿ ಅವರು ಗುರುವಾರ ಲೋಕಸಭೆಯ ಹಕ್ಕುಬಾಧ್ಯತಾ ಸಮಿತಿ ಮುಂದೆ ವಿಷಾದ ವ್ಯಕ್ತಪಡಿಸಿದ್ದಾರೆ.

ಹಕ್ಕುಬಾಧ್ಯತಾ ಸಮಿತಿಯು ಗುರುವಾರ ಬಿಧೂಡಿ ಮತ್ತು ಅಲಿ ಅವರ ವಾದವನ್ನು ಪ್ರತ್ಯೇಕವಾಗಿ ಆಲಿಸಿತು ಎಂದು ಮೂಲಗಳು ಹೇಳಿವೆ.

ಬಿಧೂಡಿ ವಿಷಾದ ವ್ಯಕ್ತಪಡಿಸಿರುವ ಕಾರಣ ಸಮಿತಿಯು ಈ ವಿವಾದಕ್ಕೆ ತೆರೆಎಳೆದು, ಸ್ಪೀಕರ್‌ಗೆ ವರದಿ ಒಪ್ಪಿಸುವ ಸಾಧ್ಯತೆಯಿದೆ ಎಂದು ತಿಳಿಸಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-427/2022–23/1904/2023–24 ದಿನಾಂಕ: 07.12.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Sri Sai Nandana Builders ರವರ ಪರವಾಗಿ ಶ್ರೀ ಎಂ.ಎನ್. ಬಾಬು, ಶ್ರೀ ಎಂ. ಸುಧಾಕರ್, ಶ್ರೀ ಎಂ. ಪ್ರಕಾಶ್, ಶ್ರೀ ಕೆ.ವಿ. ಹರಿಬಾಬು, ಶ್ರೀ ಡಿ. ಪ್ರಭಾಕರ್ ನಾಯ್ಡು ಮತ್ತು ಶ್ರೀ ಬಿ. ಲಕ್ಷ್ಮಯ್ಯ	ಆನೇಕಲ್	ಸರ್ಜಾಪುರ	ಕೊಮ್ಮಸಂದ್ರ	116/1	0–11	ವ್ಯವಸಾಯ ವಲಯ	ವಸತಿ
					116/2	0–27		
					116/3	0–16		
					ಒಟ್ಟು	01–14		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕಾಗಿ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಕೋರಿರುತ್ತಾರೆ.

BDA/PRO/CLU-70/2023-24 — ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052. ದೂರವಾಣಿ: 080–22263479

ಸಂಖ್ಯೆ: STRRPA/TP/CLU/175/2022-23 ದಿನಾಂಕ: 05–12–2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವಸತಿ'** ವಲಯದಿಂದ **'ಕೈಗಾರಿಕೆ'** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಅಬ್ದುಲ್ ವಹಾಬ್ ಬಿನ್ ಎಚ್. ಅಬ್ದುಲ್ ರಷೀದ್ ಮತ್ತು ಶ್ರೀಮತಿ. ತನ್ನೀಮ್ ಇಸ್ಮೈಲ್ ನಗ್ರಿ ನಂ.38/39, ಎಸ್.ಹೆಚ್. ಬಿ.ಸಿ.ಎಸ್ ಲೇಔಟ್, ಎಸ್.ಟಿ ಬೆಡ್, ಕೋರಮಂಗಲ, 4ನೇ ಬ್ಲಾಕ್, ಅಗರ, ಬೆಂಗಳೂರು – 560034.	ಆನೇಕಲ್	ಕಸಬಾ	ತಿಮ್ಮಸಂದ್ರ	46	5–00	**ವಸತಿ**	**ಕೈಗಾರಿಕೆ**

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ಕೈಗಾರಿಕೆ ಬೆಳವಣಿಗೆಗಳು ಬರುತ್ತಿದ್ದು, ಹಾಗೂ ಸಾರ್ವಜನಿಕ ಉದ್ಯೋಗವಕಾಶ ಸೃಷ್ಟಿಯಾಗುತ್ತಿರುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವಸತಿ ವಲಯ'** ದಿಂದ **'ಕೈಗಾರಿಕೆ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾ.ಪ್ರ/2451/ಅಡ್ವರ್ಟೋರ್/2023–24

Ministry of Micro, Small & Medium Enterprises
IDEMI ISO 9001:2015 AS 9100:2016
Organised by IDEMI Mumbai Ministry of MSME Govt. of India
Government Certificate course on
CYBER SECURITY & ETHICAL HACKING
Course duration : 2 days
Time -10AM to 5PM
Date -16,17 Dec.2023
venue -IDEMI EXTENSION CENTRE Bangaluru
c/o MSME DEVELOPMENT INSTITUTE ,WEST OF CHORD RD, INDUSTRIAL ESTATE, RAJAJINAGAR, BENGALURU, KARNATAKA - 560010
After successful completion, certificate will be issued
Email id:training@idemi.org http://.idemi.org Ph. (022) 2405 0301/2/3/4
Contents : Cyber crime & terrorism, Type of attacks, Goal of Security & computer Forensic, Social Media, Mobile Hacking, Cyber Hacking, Digital Forensic, Data Recovery.
Fees -5000+18% GST in the name of IDEMI
(includes breakfast ,lunch & tea)
For Registration Scan QR Code
Contact-9886123011,9403566219,7588036918,9951980554
Documents required : 2 passport photos, Adhar card xerox, Education proof xerox

SSR2024
27 ಅಕ್ಟೋಬರ್ 2023 ರಿಂದ 9 ಡಿಸೆಂಬರ್ 2023
ಭಾರತೀಯ ಚುನಾವಣಾ ಆಯೋಗ

'ದೇಶದ ಫಾರಂ' ಭರ್ತಿ ಮಾಡಿದ್ದೀರಾ?

ಮತದಾರರಾಗಿ ಅಥವಾ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಿ

ಹೆಚ್ಚಿನ ಮಾಹಿತಿಗಾಗಿ 8929441950 ಗೆ ಮಿಸ್ಡ್ ಕಾಲ್ ಕೊಡಿ

ನಮ್ಮನ್ನು ಅನುಸರಿಸಿ
/ecisveep /eci
/ECIVoterEducation
/Election Commission of India

ಲಾಗಾನ್ ಮಾಡಿ voters.eci.gov.in

ವೋಟರ್ ಹೆಲ್ಪ್‌ಲೈನ್ ಆ್ಯಪ್

ಶ್ರೀ. ರಾಜ್‌ಕುಮಾರ್ ರಾವ್
ರಾಷ್ಟ್ರೀಯ ಇಸಿಐ ರಾಯಭಾರಿ

cbc52101/13/0014/2324

ಪ್ರತಿ ಕಾಲೇಜಿಗೆ ₹83.30 ಲಕ್ಷ • ಕರಾವಳಿ ಜಲಮೂಲ ಮಾಲಿನ್ಯ ತಡೆಗೆ ಕೆ–ಶೋರ್ ಯೋಜನೆ

60 ಆದರ್ಶ ಪಿಯು ಕಾಲೇಜಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯದ ಆಯ್ದ 60 ತಾಲ್ಲೂಕುಗಳಲ್ಲಿನ ವಿಜ್ಞಾನ ಸಂಯೋಜನೆ ಹೊಂದಿರುವ 60 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು 'ಆದರ್ಶ ಪದವಿ ಪೂರ್ವ ಕಾಲೇಜು'ಗಳನ್ನಾಗಿ ಪರಿವರ್ತಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಲಾಗಿದೆ.

ಇದರಡಿ ಪ್ರತಿ ಕಾಲೇಜಿಗೆ ತಲಾ ₹83.30 ಲಕ್ಷ ನೀಡಲಾಗುವುದು. ಒಟ್ಟು ₹50 ಕೋಟಿಯನ್ನು ನೀಡಲು ತೀರ್ಮಾನಿಸಲಾಗಿದೆ. ಈ ಕಾಲೇಜುಗಳಲ್ಲಿ ಅತ್ಯಾಧುನಿಕ ಪ್ರಯೋಗಾಲಯ, ಆಧುನಿಕ ತಂತ್ರಜ್ಞಾನ ಆಧಾರಿತ ಬೋಧನಾ ಪರಿಕರಗಳನ್ನು ಒದಗಿಸಿ, ವಿದ್ಯಾರ್ಥಿಗಳನ್ನು ಐಐಟಿ, ಐಐಎಸ್‌ಸಿ, ವೈದ್ಯಕೀಯ ಸಂಸ್ಥೆಗಳಿಗೆ ಪ್ರವೇಶ ಪಡೆಯುವಂತೆ ತರಬೇತುಗೊಳಿಸಲು ಈ ಕಾಲೇಜುಗಳನ್ನು ಅಣಿ ಮಾಡಲಾಗುತ್ತದೆ.

ಕಲಬುರಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ 'ಪಿಎಂ ಮಿತ್ರ ಪಾರ್ಕ್' ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪನೆಗೆ ಜಂಟಿ ಒಪ್ಪಂದ ಮತ್ತು ನಿರ್ವಹಣೆಗಾಗಿ ವಿಶೇಷ ಯೋಜನೆಗೆ ರೂಪಿಸಲು ಅನುಮೋದನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕರಾವಳಿ ಭಾಗದ ಜಲಮೂಲಗಳ ಮಾಲಿನ್ಯವನ್ನು ತಡೆಗಟ್ಟಲು ಕೆ–ಶೋರ್ ಯೋಜನೆಯನ್ನು ₹840 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಲಾಗಿದೆ.

ಅಕ್ರಮ ಪಂಪ್‌ಸೆಟ್‌ಗಳ ಸಕ್ರಮಕ್ಕಾಗಿ ನೋಂದಣಿ ಮಾಡಿಸಿಕೊಂಡ ಮತ್ತು ಮುಂದೆ ನೋಂದಣಿ ಮಾಡಿಸಿಕೊಳ್ಳಲಿರುವ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕಕ್ಕೆ ರೈತರೇ ಸ್ವಂತ ಖರ್ಚಿನಲ್ಲಿ ಮೂಲಸೌಕರ್ಯ ಒದಗಿಸಿಕೊಳ್ಳಬೇಕು ಎಂದು ಇಂಧನ ಇಲಾಖೆ ಹೊರಡಿಸಿದ್ದ ಆದೇಶವನ್ನು ಹಿಂದಕ್ಕೆ ಪಡೆಯುವ ವಿಷಯವನ್ನು ಮುಂದೂಡಲಾಗಿದೆ.

ಪ್ರಮುಖ ತೀರ್ಮಾನಗಳು:

- ಬೆಂಗಳೂರಿನ ಸರ್ಕಾರಿ ಯುನಾನಿ ಮತ್ತು ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯದ ಮಹಿಳಾ ವಿದ್ಯಾರ್ಥಿ ನಿಲಯ ಕಟ್ಟಡ ಕಾಮಗಾರಿಗಳ ₹12.13 ಕೋಟಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ಕಾನೂನು (ತಿದ್ದುಪಡಿ) ಮಸೂದೆ 2023ಕ್ಕೆ ಅನುಮೋದನೆ
- ಹವಾಮಾನ ಬದಲಾವಣೆ, ವಿಪತ್ತು ಪರಿಹಾರ ನಿರ್ವಹಣೆಗೆ ಸಾಮರ್ಥ್ಯ ವೃದ್ಧಿಸಿಕೊಳ್ಳಲು ವಿಶ್ವ ಬ್ಯಾಂಕ್ ನೆರವಿನ ₹5 ಸಾವಿರ ಕೋಟಿಯ ಯೋಜನೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಏಳು ವರ್ಷದ ಯೋಜನೆ ಇದಾಗಿದ್ದು, ರಾಜಕಾಲುವೆಗಳ ಮರು ಅಭಿವೃದ್ಧಿ, ಕೆರೆಗಳ ಪುನರುಜ್ಜೀವನ, ಅಂತರ್ಜಲ ವೃದ್ಧಿಯಂತಹ ಮೂಲಸೌಕರ್ಯ ಅಭಿವೃದ್ಧಿ ಆಗಲಿವೆ. ವಿಶ್ವಸಂಸ್ಥೆ ₹3,500 ಕೋಟಿ ನೆರವು ನೀಡಲಿದ್ದು, ರಾಜ್ಯ ಸರ್ಕಾರ ₹1,500 ಕೋಟಿಯನ್ನು ಭರಿಸಲಿದೆ. ರಾಜ್ಯ ಬಜೆಟ್‌ನಲ್ಲಿ ಈ ಯೋಜನೆಯನ್ನು ಪ್ರಕಟಿಸಲಾಗಿತ್ತು.

ಲೋಕಸಭೆ ಚುನಾವಣೆ ಕುರಿತು ಚರ್ಚೆ

ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ತೆಲಂಗಾಣದಲ್ಲಿ ಮಾತ್ರ ಗೆದ್ದು, ಉಳಿದ ಕಡೆ ಸೋತಿರುವುದರಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಹೆಚ್ಚು ಸಂಸದರನ್ನು ಗೆಲ್ಲಿಸಿ ಕಳುಹಿಸುವ ವಿಚಾರದ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಿತು. ಸಚಿವ ಸಂಪುಟ ಸಭೆ ಬಳಿಕ ಅಧಿಕಾರಿಗಳನ್ನು ಹೊರಗೆ ಕಳುಹಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಸಮಯ ಸಚಿವರೊಂದಿಗೆ ಖಾಸಗಿಯಾಗಿ ಸಮಾಲೋಚಿಸಿದರು. ಯಾರೊಬ್ಬರೂ ಮೈ ಮರೆಯಬಾರದು. ಎಲ್ಲ ಸಚಿವರು ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಲು ಈಗಿನಿಂದಲೇ ಶ್ರಮ ಹಾಕಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಎಸ್ಸಿಎಸ್ಟಿ ನಿಧಿ ಅನ್ಯಬಳಕೆಗೆ ನಿರ್ಬಂಧ: ಮಸೂದೆಗೆ ಸಂಪುಟ ಸಭೆ ಅಸ್ತು

ಎಸ್‌ಸಿ ಎಸ್‌ಪಿ ಟಿಎಸ್‌ಪಿ ಯೋಜನೆಯಡಿ ಮೀಸಲಾದ ಹಣವನ್ನು ಇತರ ಉದ್ದೇಶಕ್ಕೆ ಬಳಸುವುದನ್ನು ತಡೆಯುವ ಉದ್ದೇಶಕ್ಕಾಗಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ (ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಸೆಕ್ಷನ್ 7 ಡಿ ರದ್ದು ಮಾಡಲು ತರಲಾಗುತ್ತಿರುವ ತಿದ್ದುಪಡಿ ಮಸೂದೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಪರಿಶಿಷ್ಟ ಸಮುದಾಯಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಮೀಸಲಿಡುವ ಅನುದಾನವನ್ನು ಕಾಯ್ದೆಯ ಸೆಕ್ಷನ್ 7 ಡಿ ಅಡಿ ಇರುವ ಅವಕಾಶ ಬಳಸಿಕೊಂಡು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿತ್ತು. ಅದಕ್ಕೆ ತಡೆ ಹಾಕಲು ತಿದ್ದುಪಡಿ ಅನುವು ಮಾಡಿಕೊಡಲಿದೆ.
ಕಂದಾಯ ಇಲಾಖೆಯಲ್ಲಿನ ಗ್ರಾಮ ಆಡಳಿತಾಧಿಕಾರಿಗಳ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮಾಡುವ ಮಸೂದೆಗೆ ಒಪ್ಪಿಗೆ ನೀಡಿದ್ದು, ಅಧಿವೇಶನದಲ್ಲಿ ಮಂಡಿಸಲಾಗುವುದು.

ಕಡಲೆಕಾಯಿ ಪರಿಷೆ: ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಕಡಲೆಕಾಯಿ ಪರಿಷೆ ಅಂಗವಾಗಿ ಡಿ. 9ರಿಂದ 13ರವರೆಗೆ ವಾಹನಗಳ ದಟ್ಟಣೆ ನಿಯಂತ್ರಿಸಲು ಸಂಚಾರದಲ್ಲಿ ಮಾರ್ಗ ಬದಲಾವಣೆ ಮಾಡಲಾಗಿದೆ.

'ದೊಡ್ಡ ಬಸವಣ್ಣ ಹಾಗೂ ದೊಡ್ಡ ಗಣಪತಿ ದೇವಸ್ಥಾನ ರಸ್ತೆಯಲ್ಲಿ ಪರಿಷೆ ಜರುಗಲಿದೆ. ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

'ಎನ್.ಆರ್. ಕಾಲೊನಿಯ ಎಪಿಎಸ್ ಕಾಲೇಜು ಆಟದ ಮೈದಾನ, ರಾಮಕೃಷ್ಣ ಆಶ್ರಮ ಜಂಕ್ಷನ್ ಬಳಿಯ ಕೊಹಿನೂರು ಆಟದ ಮೈದಾನ ಹಾಗೂ ಉದಯಭಾನು ಆಟದ ಮೈದಾನದಲ್ಲಿ ವಾಹನಗಳನ್ನು ನಿಲ್ಲಿಸಲು ವ್ಯವಸ್ಥೆ ಮಾಡಲಾಗಿದೆ' ಎಂದಿದ್ದಾರೆ.

ಎಲ್ಲೆಲ್ಲಿ ಮಾರ್ಗ ಬದಲಾವಣೆ?

- ಚಾಮರಾಜಪೇಟೆ, ಗಾಂಧಿ ಬಜಾರ್ ಮುಖ್ಯರಸ್ತೆಯಿಂದ ಹನುಮಂತನಗರ ಕಡೆ ಹೋಗುವ ವಾಹನಗಳು, ರಾಮಕೃಷ್ಣ ಆಶ್ರಮದ ಬಲ ತಿರುವಿನಲ್ಲಿ ಸಾಗಿ ಹಯವದನ ರಾವ್ ರಸ್ತೆ, ಗವಿಪುರ ರಸ್ತೆ ಹಾಗೂ ಮೌಂಟ್ ಜಾಯ್ ರಸ್ತೆ ಮೂಲಕ ಸಾಗಬಹುದು
- ಆರ್.ವಿ. ಅಧ್ಯಾಪಕರ ಕಾಲೇಜು ಜಂಕ್ಷನ್ ಕಡೆಯಿಂದ ಬರುವ ವಾಹನಗಳು ಠ್ಯಾಗೋರ್ ವೃತ್ತದ ಬಲ ತಿರುವಿನಲ್ಲಿ ಸಾಗಿ, ಗಾಂಧಿ ಬಜಾರ್ ಮುಖ್ಯರಸ್ತೆ, ರಾಮಕೃಷ್ಣ ಆಶ್ರಮ ಜಂಕ್ಷನ್, ಹಯವದನ ರಾವ್ ರಸ್ತೆ, ಗವಿಪುರ ರಸ್ತೆ ಹಾಗೂ ಮೌಂಟ್ ಜಾಯ್ ರಸ್ತೆ ಮೂಲಕ ಹನುಮಂತನಗರಕ್ಕೆ ಹೋಗಬಹುದು
- ತ್ಯಾಗರಾಜನಗರ, ಬನಶಂಕರಿ ಕಡೆಯಿಂದ ಎನ್.ಆರ್. ಕಾಲೊನಿ ಮೂಲಕ ಚಾಮರಾಜಪೇಟೆಗೆ ಹೋಗುವ ವಾಹನಗಳು, ಕಾಮತ್ ಯಾತ್ರಿ ನಿವಾಸ ರಸ್ತೆಯಲ್ಲಿ ಎಡ ತಿರುವು ಪಡೆದು, ಬಿಎಂಎಸ್ ಕಾಲೇಜು ವಸತಿನಿಲಯ ರಸ್ತೆ, ಕತ್ರಿಗುಪ್ಪೆ ರಸ್ತೆ ಜಂಕ್ಷನ್, ನಾರಾಯಣಸ್ವಾಮಿ ವೃತ್ತ, ಕೆ.ಜಿ.ನಗರ ಮುಖ್ಯರಸ್ತೆ ಮೂಲಕ ಸಂಚರಿಸಬಹುದು

ನಗರದಲ್ಲಿ ಇಂದು

ವಾರ್ಷಿಕ ಅಥ್ಲೆಟಿಕ್ ಕೂಟ-2023: ಅತಿಥಿಗಳು: ಡಿ. ಹನುಮಂತಯ್ಯ, ಬಿ. ಕೆಂಚಪ್ಪಗೌಡ, ಎಲ್. ಶ್ರೀನಿವಾಸ್, ಸಿ. ದೇವರಾಜು, ಎಚ್.ಸಿ. ಜಯಮುತ್ತು, ವೆಂಕಟರಾಮೇಗೌಡ, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳ: ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣ, ಜಯನಗರ, ಬೆಳಿಗ್ಗೆ 8

'ಎನ್‌ಇಎಸ್ ಸೂಪರ್‌ನೋವಾ ಆ್ಯನ್ ಎಜುಫೆಸ್ಟ್': ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಅತಿಥಿಗಳು: ಕೆ. ರಾಮಕೃಷ್ಣ ರೆಡ್ಡಿ, ವೈ.ಜಿ. ಮಧುಸೂದನ್, ವಿ. ವೆಂಕಟಶಿವಾ ರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ತಲ್ಲಂ ಆರ್. ದ್ವಾರಕಾನಾಥ್, ವಿ. ಮಂಜುನಾಥ್, ಸುಧಾಕರ್ ಈಸ್ತುರಿ, ರಾಮಮೋಹನ್ ಕೆ.ಎನ್., ಪವನಾ, ರಾಜ್‌ಕುಮಾರ್, ಪಿ.ಎಲ್. ವೆಂಕಟರಾಮ ರೆಡ್ಡಿ, ಜಿ.ಎಂ. ರವೀಂದ್ರ, ಆಯೋಜನೆ: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ನ್ಯಾಷನಲ್ ಕಾಲೇಜಿನ ಆವರಣ, ಬಸವನಗುಡಿ, ಬೆಳಿಗ್ಗೆ 9.30ರಿಂದ

ಕನ್ನಡ ಗಣಕ ಉಚಿತ ತರಬೇತಿ ಕೇಂದ್ರದ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಜೆ. ಹುಚ್ಚಪ್ಪ, ಅಧ್ಯಕ್ಷತೆ: ಎಸ್.ಎಲ್. ಗಂಗಾಧರಪ್ಪ, ಅತಿಥಿಗಳು: ಸೂರ್ಯಪ್ರಕಾಶ್, ಬಿ.ಆರ್. ಜಗದೀಶ್, ಮೈಸೂರು ರಮಾನಂದ, ಆರ್.ಎ. ಪ್ರಸಾದ್, ಸ್ಥಳ: ಡಾ. ರಾಜ್‌ಕುಮಾರ್ ತಾಂತ್ರಿಕ ಕುಟೀರ, ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ಮಲ್ಲೇಶ್ವರ, ಬೆಳಿಗ್ಗೆ 11.30

'ಸಿದ್ಧಲಿಂಗಯ್ಯ' ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ: ಮೂಡ್ನಾಕೂಡು ಚಿನ್ನಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಕೋಟಿಗಾನ ಹಳ್ಳಿ ರಾಮಯ್ಯ, ಎಚ್.ಟಿ. ಪೋತೆ, ಇಂದುಮತಿ ಲಮಾಣಿ, ಕಾ.ವೆಂ. ಶ್ರೀನಿವಾಸ ಮೂರ್ತಿ, ಅರ್ಜುನ ಗೊಳಸಂಗಿ, ನಾಗರಾಜ್ ಹೆತ್ತೂರು, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ರಮಾಕುಮಾರಿ ಸಿದ್ಧಲಿಂಗಯ್ಯ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5

ಮೂಡ್ನಾಕೂಡು ಚಿನ್ನಸ್ವಾಮಿ

'ಸಮಕಾಲೀನ ಭಾರತದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತು ಸಂವಾದ: ಆಕಾರ್ ಪಟೇಲ್, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಆಯೋಜನೆ: ರಾಜ್ಯಶಾಸ್ತ್ರ ವಿಭಾಗ, ಇತಿಹಾಸ ವಿಭಾಗ ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಮಧ್ಯಾಹ್ನ 2.30

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್‌ನ 20ನೇ ಘಟಿಕೋತ್ಸವ: ಅತಿಥಿ: ಮನೀಶ್ ಶಾ, ಅಧ್ಯಕ್ಷತೆ: ಎಲ್. ಸತ್ಯ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್, ಜ್ಞಾನಭಾರತಿ ಆವರಣ, ಮಧ್ಯಾಹ್ನ 3

'ಪಿ.ಜಿ.ಸಿ. ಚೆಂಗಪ್ಪ' ಸ್ಮಾರಕ 'ಎಲ್‌ಜಿಬಿಟಿಕ್ಯೂಐಎ + ಹಕ್ಕುಗಳ ವಿಕಾಸ' ಕುರಿತು ದತ್ತಿ ಉಪನ್ಯಾಸ: ಅತಿಥಿಗಳು: ಎಸ್.ಆರ್. ಕೃಷ್ಣಕುಮಾರ್, ಪಿ.ಎಸ್. ದಿನೇಶ್ ಕುಮಾರ್, ಆಯೋಜನೆ: ಲಹರಿ ವಕೀಲರ ವೇದಿಕೆ, ಸ್ಥಳ: ಹೈಕೋರ್ಟ್‌ನ ಮುಖ್ಯ ಸಭಾಂಗಣ, 2ನೇ ಮಹಡಿ, ಸಂಜೆ 5

'ಸುಂದರಿ' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಮಂತ ಸುರೇಶ, 'ಕೃಷ್ಣೇಗೌಡರ ಆನೆ' ನಾಟಕ ಪ್ರದರ್ಶನ: ಕಥೆ: ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಎಂ.ಎನ್. ಸುರೇಶ್, ಆಯೋಜನೆ: ಉತ್ಸಾಹಿ ವೇದಿಕೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6ರಿಂದ

ಬಿಡಿಎ ಸ್ವಾಧೀನದ ಜಾಗ ಖಾಸಗಿಗೆ ಮಾರಾಟ!

ಕೂಡಲೇ ವಶಕ್ಕೆ: ಆಯುಕ್ತ ಜಯರಾಮ್

'ಬಾಣಸವಾಡಿ ಸರ್ವೆ ನಂ. 261ರಲ್ಲಿ ಬಿಡಿಎ ಸ್ವಾಧೀನ ಪಡಿಸಿಕೊಂಡಿರುವ ಜಾಗದಲ್ಲಿ ಖಾಸಗಿ ಒತ್ತುವರಿಯನ್ನು ಪರಿಶೀಲಿಸಿ ಕೂಡಲೇ ವಶಕ್ಕೆ ಪಡೆಯಲಾಗುವುದು. ಭೂಸ್ವಾಧೀನವಾಗಿಲ್ಲ ಎಂದು ಅಕ್ರಮವಾಗಿ ಪತ್ರ ನೀಡಿರುವ ಕಾರ್ಯಪಾಲಕ ಎಂಜಿನಿಯರ್ ಹಾಗೂ ಇದಕ್ಕೆ ಕಾರಣರಾದ ಎಲ್ಲರ ಮೇಲೂ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಡಿಎ ಆಯುಕ್ತ ಎನ್. ಜಯರಾಮ್ ತಿಳಿಸಿದರು.

ಒಂದನೇ ಪುಟದಿಂದ...

ಈ ಮಧ್ಯೆ 1992ರಲ್ಲಿ ಸರ್ವೆ ನಂಬರ್ ದಾಖಲಿಸದೆ 6.5 ಗುಂಟೆ ಜಮೀನನ್ನು ವೆಂಕಟಮ್ಮ ಅವರಿಗೆ ಮಾರಾಟ ಮಾಡಲಾಗಿದೆ. ಕೆ.ಆರ್. ಪುರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ (6319–93–94) ಕ್ರಯಪತ್ರವಾಗಿದೆ.

2014ರಲ್ಲಿ ಬಿಡಿಎ ಉತ್ತರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ಬಾಣಸವಾಡಿ ಗ್ರಾಮದ ಸರ್ವೆ ನಂ. 261ರಲ್ಲಿ 6.5 ಗುಂಟೆ ವಿಸ್ತೀರ್ಣದ ನಿವೇಶನವನ್ನು ಬಿಡಿಎ ವಶಪಡಿಸಿಕೊಂಡಿಲ್ಲ ಎಂಬ ಪತ್ರವನ್ನು ಬಿಬಿಎಂಪಿ ಪೂರ್ವ ವಲಯದ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಅವರಿಗೆ ನೀಡುತ್ತಾರೆ. ಇದನ್ನು ನಮೂದಿಸಿ, ಬಾಣಸವಾಡಿ 88ನೇ ವಾರ್ಡ್‌ನಲ್ಲಿ 1085/2 ಸಂಖ್ಯೆಗೆ ಎಆರ್‌ಒ ಖಾತಾ ದೃಢೀಕರಣ ಪತ್ರ ನೀಡಿದ್ದಾರೆ. ಇದರ ಆಧಾರದ ಮೇಲೆ, ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ 'ಕಂದಾಯ ಅಧಿಕಾರಿ, ಸರ್ವಜ್ಞ ನಗರದವರು ನಂಬರ್ ಇಲ್ಲದ ಹಿಂಬರಹ ನೀಡಿದ್ದು, ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು' ಸೂಚಿಸಿದ್ದಾರೆ. ಇಂತಹ ಸೂಚನೆ ಇದ್ದರೂ, ಕಂದಾಯ ಅಧಿಕಾರಿಗಳು ಪಹಣಿಯಲ್ಲಿ 6.5 ಗುಂಟೆ ಜಮೀನು ವೆಂಕಟಮ್ಮ ಅವರದ್ದೆಂದು ನಮೂದಿಸಿದ್ದಾರೆ.

'ಕಂದಾಯ ಅಧಿಕಾರಿಗಳು ಬಿಬಿಎಂಪಿ ಎಆರ್‌ಒ ನೀಡಿದ ಖಾತಾ ಪರಿಗಣಿಸಿ ಪಹಣಿ ಬದಲಾಯಿಸಿದ್ದಾರೆ. ಬಿಡಿಎ ಇಇ ನೀಡಿದ ಪತ್ರದ ಮೇಲೆ ಬಿಬಿಎಂಪಿ ಎಆರ್‌ಒ ಖಾತಾ ನೀಡಿದ್ದಾರೆ. ಆದರೆ, ತಮ್ಮ ವ್ಯಾಪ್ತಿಯಲ್ಲಿಲ್ಲದ ಪತ್ರ, ಹಿಂಬರಹಗಳನ್ನು ಈ ಅಧಿಕಾರಿಗಳು ಅಕ್ರಮವಾಗಿ ನೀಡಿದ್ದಾರೆ' ಎಂದು ಸಾಮಾಜಿಕ ಕಾರ್ಯಕರ್ತ ಎಂ. ಮುನಿರಾಜು ದೂರಿದರು.

ಬಾಣಸವಾಡಿ ಸರ್ವೆ ನಂ. 261ರಲ್ಲಿ ಬಿಡಿಎ ಭೂಸ್ವಾಧೀನದ ಅಂತಿಮ ಅಧಿಸೂಚನೆಯಲ್ಲಿರುವ ಭೂಮಿಯಲ್ಲಿ ಆರಂಭವಾಗಿರುವ ಕಟ್ಟಡ ನಿರ್ಮಾಣ ಕಾಮಗಾರಿ

ನಿವೃತ್ತ ಐಎಎಸ್ ಅಧಿಕಾರಿ ಕೈವಾಡ

'ಬಿಬಿಎಂಪಿ ಆಯುಕ್ತರಾಗಿದ್ದ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೂ ಆಗಿದ್ದ ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ಬಿಡಿಎ, ಬಿಬಿಎಂಪಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಮೇಲೆ ಒತ್ತಡ ಹಾಕಿ, ಬೆದರಿಕೆವೊಡ್ಡಿ ಜಮೀನನ್ನು ಬೇನಾಮಿ ಹೆಸರಿನಲ್ಲಿ ಕಬಳಿಸಿದ್ದಾರೆ. ವಾಣಿಜ್ಯ ಕಟ್ಟಡ ಕಾಮಗಾರಿ ಆರಂಭಿಸಿದ್ದು, ಆ ಅಧಿಕಾರಿಯ ಬೆದರಿಕೆಯಿಂದ ಬಿಡಿಎ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ' ಎಂದು ಮುನಿರಾಜು ದೂರಿದರು.

'ಕ್ರಯಪತ್ರ, ಪಹಣಿ, ಖಾತಾಗಳು ಅಕ್ರಮವಾಗಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಇದೀಗ ನಾಲ್ಕಾರು ತಿಂಗಳಿಂದ ಅಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗುತ್ತಿದೆ. ಈ ಬಗ್ಗೆ ಆಯುಕ್ತರು, ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಗಿದೆ. ಭೂಮಿಯನ್ನು ಬಿಡಿಎ ವಶಕ್ಕೆ ತೆಗೆದುಕೊಳ್ಳಬೇಕು. ಅಕ್ರಮವೆಸಗಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲೂ ಆಗ್ರಹಿಸಲಾಗಿದೆ' ಎಂದು ತಿಳಿಸಿದರು.

ಉಪ ಕಾರ್ಯದರ್ಶಿಯಿಂದ ಕ್ರಮವಾಗಿಲ್ಲ

'ಬಾಣಸವಾಡಿ ಗ್ರಾಮ ಸರ್ವೆ ನಂ. 261ರಲ್ಲಿ 1 ಎಕರೆ 32 ಗುಂಟೆ ಜಮೀನಿದ್ದು, ಎಚ್‌ಆರ್‌ಬಿಆರ್ ಬಡಾವಣೆ ನಿರ್ಮಾಣಕ್ಕೆ ಪ್ರಾರಂಭಿಕ ಹಾಗೂ ಅಂತಿಮ ಅಧಿಸೂಚನೆಯಾಗಿದೆ. (ಎಚ್‌ಯುಡಿ/49/ಎಂಎನ್‌ಜೆ/78– ದಿನಾಂಕ 14.05.1980). ಬಿ.ಸಿ. ರಾಜುರತ್ನಮ್ಮ ಅವರು ಅಧಿಸೂಚಿತ ಖಾತೆದಾರರಾಗಿರುತ್ತಾರೆ. ಈ ಜಮೀನಿನ ಸ್ವಾಧೀನ 1984ರ ಮೇ 24ರಂದು ಪ್ರಾಧಿಕಾರದ ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಜಮೀನು ಪ್ರಾಧಿಕಾರದ ಸ್ವತ್ತಾಗಿರುತ್ತದೆ. ಎಲ್.ಎ.ಸಿ ಕಡತದಲ್ಲಿರುವ ದಾಖಲೆಗಳಂತೆ ಈ ಸರ್ವೆ ನಂಬರಿನಲ್ಲಿ ಯಾವುದೇ ವಿಸ್ತೀರ್ಣವನ್ನು ಯಾರಿಗೂ ಬಿಟ್ಟಿರುವುದಿಲ್ಲ. ಹೆಚ್ಚುವರಿ ಭೂಸ್ವಾಧೀನಾಧಿಕಾರಿಗಳ ವಿಭಾಗದಿಂದ ಯಾವುದೇ ಹಿಂಬರಹ ನೀಡಿರುವುದಿಲ್ಲ' ಎಂದು ಬಿಡಿಎ ಹೆಚ್ಚುವರಿ ಭೂಸ್ವಾಧೀನಾಧಿಕಾರಿ 2023ರ ಜುಲೈ 18ರಂದು ಟಿಪ್ಪಣಿ ಬರೆದಿದ್ದಾರೆ. ನಂತರ ಉಪ ಕಾರ್ಯದರ್ಶಿ–4 ಅವರು ಸ್ವಾಧೀನಕ್ಕೆ ಕ್ರಮ ಕೈಗೊಳ್ಳಬೇಕಿತ್ತು. ನಾಲ್ಕು ತಿಂಗಳಾದರೂ ಯಾವುದೇ ಪ್ರಕ್ರಿಯೆ ನಡೆದಿಲ್ಲ.

ಇಪಿಎಸ್ ನಿವೃತ್ತ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಪಿಎಸ್ ನಿವೃತ್ತ ನೌಕರರ ಪ್ರತಿಭಟನಾ ಸಮಾವೇಶವು ಎನ್‌ಎಸಿ ರಾಷ್ಟ್ರೀಯ ಸಂಘರ್ಷ ಸಮಿತಿಯ ಅಧ್ಯಕ್ಷ ಕಮಾಂಡರ್ ಅಶೋಕ್ ರಾವತ್ ನೇತೃತ್ವದಲ್ಲಿ ಇಲ್ಲಿನ ರಾಮಲೀಲಾ ಮೈದಾನದಲ್ಲಿ ಗುರುವಾರ ನಡೆಯಿತು.

ಕರ್ನಾಟಕದಿಂದ 360 ನಿವೃತ್ತ ನೌಕರರು ಭಾಗವಹಿಸಿದ್ದರು. ಪ್ರತಿಭಟನಕಾರರು ಮಾತನಾಡಿ, 'ಕನಿಷ್ಠ ಪಿಂಚಣಿ ಬೇಡಿಕೆ ₹7,500 ಭತ್ಯೆ ಹಾಗೂ ವೈದ್ಯಕೀಯ ಸೌಲಭ್ಯ ವಿಸ್ತರಿಸಬೇಕು' ಎಂದು ಆಗ್ರಹಿಸಿದರು.

'ಶುಕ್ರವಾರದಿಂದ ಜಂತರ್ ಮಂತರ್‌ನಲ್ಲಿ ನಿರಂತರ ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ನಂತರ ದಿನಗಳಲ್ಲಿ ರಾಷ್ಟ್ರೀಯ ನಾಯಕರು ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ' ಎಂದು ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರವರ ಕಛೇರಿ,
ಎನ್.ಆರ್. ಚೌಕ, ಬೆಂಗಳೂರು–560002

ದಿನಾಂಕ: 04.12.2023

ಸಾರ್ವಜನಿಕ ಪ್ರಕಟಣೆ

ಇಂಟರ್ನೆಟ್, ಟೆಲಿಕಾಂ ಟಿವಿ ಕೇಬಲ್ ಆಪರೇಟರ್‌ಗಳಿಗೆ ಅನಧಿಕೃತ ಅಂಡರ್ ಗ್ರೌಂಡ್ (UG) ಮತ್ತು ಓವರ್ ಹೆಡ್ (OH) ಕೇಬಲ್ ನೆಟ್‌ವರ್ಕ್‌ನ ಸ್ವಯಂ ಘೋಷಣೆಗೆ ಕೊನೆಯ ಅವಕಾಶ

ಎಲ್ಲಾ ಇಂಟರ್ನೆಟ್ ಸೇವಾ ಪೂರೈಕೆದಾರರು (ISP)/ ಟೆಲಿಕಾಂ ಸೇವಾ ಪೂರೈಕೆದಾರರು (TSP)/TV ಕೇಬಲ್ ಆಪರೇಟರ್‌ಗಳಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಅಂಡರ್ ಗ್ರೌಂಡ್ ಮತ್ತು ಓವರ್ ಹೆಡ್ (ಬಿಬಿಎಂಪಿಯ ಪೂರ್ವಾನುಮತಿ ಇಲ್ಲದೆ) ಹಾಕಲಾದ ಅನಧಿಕೃತ ಅಳತೆಯ ಓಎಫ್‌ಸಿ ಕೇಬಲ್‌ಗಳು ಸೇರಿದಂತೆ ಅಧಿಕೃತ ಹಾಗೆಯೇ ಅನಧಿಕೃತ ಕೇಬಲ್ ನೆಟ್‌ವರ್ಕ್ ರಸ್ತೆಯ ಮೇಲಿನ ಜೋಡಣೆಯ ಘೋಷಣೆಯನ್ನು **ದಿನಾಂಕ: 20–12–2023**ರೊಳಗೆ ನೀಡಲು ಬಿಬಿಎಂಪಿಯಿಂದ **ಕೊನೆಯ ಅವಕಾಶ**ವನ್ನು ನೀಡಲಾಗಿದೆ. ಈ ಸೌಲಭ್ಯವನ್ನು ಕೊನೆಯ ಬಾರಿಗೆ ವಿಸ್ತರಿಸಲಾಗಿದೆ. ರಸ್ತೆಗಳಲ್ಲಿ ಅಧಿಕೃತ ಹಾಗೆಯೇ ಅನಧಿಕೃತ ಕೇಬಲ್ ಜಾಲದ ಕುರಿತ ವಿವರಗಳನ್ನು ಅವರು ಮುಖ್ಯ ಅಭಿಯಂತರರ (OFC CELL) ಕಛೇರಿಗೆ ಟ್ಯಾಬುಲಾರ್ ಕಾಲಂ ನಮೂನೆಯಲ್ಲಿ ನೀಡಬೇಕು. ಘೋಷಣೆಯನ್ನು ಹಾರ್ಡ್ ಮತ್ತು ಸಾಫ್ಟ್ ಪ್ರತಿಯಲ್ಲಿ ಹಾಗೂ **bbmpceofc@gmail.com**ಗೆ ಇ–ಮೇಲ್ ಮೂಲಕ ನೀಡಬಹುದು. ಮುಂದುವರೆದು, ಕೇಬಲ್‌ಗಳಿಗೆ ಮಾಲೀಕತ್ವದ ಘೋಷಣೆ ಇಲ್ಲದಿದ್ದಲ್ಲಿ ಅಂತಹ ಕೇಬಲ್‌ಗಳ ಜೋಡಣೆಯನ್ನು **ದಿನಾಂಕ: 21–12–2023**ರ ನಂತರ ಬಿಬಿಎಂಪಿಯು ಮುಂದಿನ ಸೂಚನೆ ಇಲ್ಲದೆ ತೆಗೆದುಹಾಕುತ್ತದೆ ಎಂದು ತಿಳಿಸಲಾಗಿದೆ. ಅವಧಿಯ ನಂತರ ಯಾವುದೇ ಕಂಪನಿಗಳಿಂದ ಯಾವುದೇ ವಿವರಣೆಯನ್ನು ಪರಿಗಣಿಸಲಾಗುವುದಿಲ್ಲ. ಇದು ದಿನಾಂಕ: 01–12–2023ರಂದು ಕರ್ನಾಟಕ ಸರ್ಕಾರದ ಗೌರವಾನ್ವಿತ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಅನುಸಾರವಾಗಿದೆ.

ಘೋಷಣೆಗಳನ್ನು ಸ್ವೀಕರಿಸಿದ ನಂತರ, ಕಂಪನಿಗಳು ಘೋಷಿಸಿದ ಅನಧಿಕೃತ ಕೇಬಲ್ ನೆಟ್‌ವರ್ಕ್‌ಗಳನ್ನು ಕ್ರಮಬದ್ಧಗೊಳಿಸಲು ಬಿಬಿಎಂಪಿಯು ಮೊದಲು ಪ್ರಯತ್ನವನ್ನು ಮಾಡುತ್ತದೆ ಮತ್ತು ಓವರ್‌ಹೆಡ್ ಕೇಬಲ್‌ಗಳನ್ನು ಅಂಡರ್ ಗ್ರೌಂಡ್ ಕೇಬಲ್ ನೆಟ್‌ವರ್ಕ್‌ಗೆ ಪರಿವರ್ತಿಸಲು ಅಗತ್ಯವಾದ ಮಧ್ಯಸ್ಥಿಕೆಗಳನ್ನು ಕಂಡುಹಿಡಿಯಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ಸಹಿ/–
ಮುಖ್ಯ ಆಯುಕ್ತರು, ಬಿಬಿಎಂಪಿ



For students from Grade 5 onwards
Orchids The International School, Haralur — Dec 9 | 3-5 PM — 8778215904
Orchids The International School, Horamavu — Dec 10 | 3-5 PM — 9535806446
Scan the QR code to register
ORCHIDS The International School
No child left behind
• 90+ Schools • 3 Boarding Schools • 75K+ Students • 7K+ Teachers
www.orchids.edu.in

ಜಿಲ್ಲಾಧಿಕಾರಿ ಹೆಸರಿನಲ್ಲಿ ಹಣಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಹೆಸರಿನಲ್ಲಿ ಸಂದೇಶಗಳನ್ನು ಕಳುಹಿಸಿ ಹಣಕ್ಕೆ ಬೇಡಿಕೆ ಇರಿಸಲಾಗಿದ್ದು, ಈ ಸಂಬಂಧ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದಯಾನಂದ್

'ಜಿಲ್ಲಾಧಿಕಾರಿ ದಯಾನಂದ್ ಅವರು ವಂಚನೆಗೆ ಸಂಬಂಧಪಟ್ಟಂತೆ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಯಾನಂದ್ ಅವರ ಫೋಟೊ ದುರ್ಬಳಕೆ ಮಾಡಿಕೊಂಡಿರುವ ಆರೋಪಿಗಳು, ಅವರ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಸಂಖ್ಯೆಯೊಂದನ್ನು (9874****48) ಸೃಷ್ಟಿಸಿದ್ದಾರೆ. ಅದೇ ಸಂಖ್ಯೆಯಿಂದ ಜಿಲ್ಲಾಡಳಿತದ ಹಲವು ಇಲಾಖೆಗಳ ಅಧಿಕಾರಿಗಳು ಹಾಗೂ ಇತರರಿಗೆ ಸಂದೇಶ ಕಳುಹಿಸಿದ್ದಾರೆ.'

'ತುರ್ತು ಅಗತ್ಯಕ್ಕೆ ಹಣ ಬೇಕಿದೆ. ಈ ಕೂಡಲೇ ಕಳುಹಿಸಿ' ಎಂದು ಆರೋಪಿಗಳು ಸಂದೇಶದಲ್ಲಿ ಬರೆದಿದ್ದರು. ಅನುಮಾನಗೊಂಡ ಕೆಲ ಅಧಿಕಾರಿಗಳು, ಜಿಲ್ಲಾಧಿಕಾರಿ ಅವರಿಗೆ ವಿಷಯ ತಿಳಿಸಿದ್ದರು. ಬಳಿಕವೇ ಅವರು ದೂರು ನೀಡಿದ್ದಾರೆ' ಎಂದು ತಿಳಿಸಿವೆ.

'ಸಾಮಾಜಿಕ ಮಾಧ್ಯಮಗಳಲ್ಲಿರುವ ಜಿಲ್ಲಾಧಿಕಾರಿಯ ಫೋಟೊ ಡೌನ್‌ಲೋಡ್ ಮಾಡಿಕೊಂಡು ಆರೋಪಿಗಳು ನಕಲಿ ಖಾತೆ ಸೃಷ್ಟಿಸಿರುವ ಮಾಹಿತಿ ಇದೆ. ಹೊರರಾಜ್ಯದಲ್ಲಿರುವ ವ್ಯಕ್ತಿಗಳು ಕೃತ್ಯ ಎಸಗಿರುವ ಅನುಮಾನವಿದೆ' ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

My clients are negotiating to purchase, properties mentioned in the schedule hereunder from **Sri. J.P. MOHAN,** represented by his registered General Power Attorney holder and Joint Developer/s **M/s. SRI SAI VENTURES a partnership firm.** If any individual/s or financial institution/s having any claims, title or interest or subsisting charges over the same, it shall be lodged within 7 (Seven) days from the date of this notice with documentary evidence with the undersigned.

SCHEDULE PROPERTIES

(1) Site No. 30, measuring-East to West: 50 Feet, and North to South: 30 Feet, bounded on East by-9mts. Wide Road, West by-Site No. 42, North by-Site No. 31 and South by-Site No. 29, **(2) Site No. 31,** measuring-East to West: 50 Feet, and North to South: 30 Feet, bounded on East by-9mts. Wide Road, West by-Site No. 41, North by-Site No. 32 and South by-Site No. 30, **(3) Site No. 32,** measuring-East to West: 50 Feet, and North to South: 30 Feet, bounded on East by-9mts. Wide Road, West by-Site No. 40, North by-Site No. 33 and South by-Site No. 31, **(4) Site No. 40,** measuring-East to West: 50 Feet, and North to South: 30 Feet, bounded on East by-Site No. 32, West by-9m Wide Road, North by-Site No. 39 and South by-Site No. 41, **(5) Site No. 41,** measuring-East to West: 50 Feet, and North to South: 30 Feet, bounded on East by-Site No. 31, West by-9mts. Wide Road, North by-Site No. 40 and South by-Site No. 42, **(6) Site No. 42,** measuring-East to West: 50 Feet, and North to South: 30 Feet, bounded on East by-Site No. 30, West by-9mts. Wide Road, North by Site No. 41 and South by Site No. 43, **(7) ODD Site No. 29,** totally measuring-1,607 Square Feet, bounded on East by-9mts. Wide Road, West by-Site No. 43, North by-Site No. 30 and South by-24m existing KHB Road and **(8) ODD Site No. 43,** totally measuring-1,827 Square Feet, bounded on East by-Site No. 29, West by-9mts. Wide Road, North by-Site No. 42 and South by-24m existing KHB Road, all the above said properties are situated in layout formed out residentially converted survey numbers 183 and 184 of Jigala Village, Bidaraguppe Grama Panchayath, Attibele Hobli, Anekal Taluk, Bangalore District, converted vide Official Memorandum bearing No. ALN(A)(K & A) S.R 177 /2005-06, dated: 30-10-2007 and as per layout approved Plan LAO 162/2007-08, dated: 8-7-2022, by the Anekal Planning Authority, and named as **SAI KRUPA** Layout.

S. ANANTHA RAMA REDDY,
Advocate & Consultant,
No. 12, 3rd Floor, 10th Cross, (Opp. St. Martha's Hospital),Cubbonpet,
Bangalore-560 002.
ananthareddy2006@ hotmail.com.
Mobile-9845049944

PSYCHROMETIC PUBLIC NOTICE

This notice is issued against our Client Mr. Suresh, Director of M/s Psychometric Solutions & Systems Pvt Ltd. Having its office at #720-A, /6, 9th A Cross, 11th Main, HAL 2nd Stage, Indiranagar ,Bengaluru 560038 for not having paid us a principal amount of Rs. 6,87,180/- since the year 2021. A case has been filed under MSME and the Case no is MSEFC/BNG /Air action /66/2023-24 dated 16.11 .2023.The respondent has not appeared for the hearing on 29.11.2023 and the next hearing has been called on 04.11.2023.

Kindly contact below for any information:
AIR ACTION EQUIPMENTS
accounts@airaction.co.in
88844 77412

BUSINESS

Business to Business

Services

PLASTIC JERRY CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 23.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037887

Business

ANY WORK in Central/ New Delhi done, with High Level Contacts. Vamshadhara Project Services- 9342247637

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PUBLIC NOTICE

The General public are hereby notified that my client is proposing to develop and sell the property described in the Schedule herein on Joint Development basis with its owner **Smt. Parveen Jassawala W/o Sri. A.J. Jassawala.**

Any person or persons objecting for the proposed development and sale or ascertaining any right, title, Interest or claim /charge/lien over the Schedule Property or any part thereof, and in any manner whatsoever against the Schedule Property based on the documents pertaining to the Schedule Property or otherwise has any lawful objection for the development of the Schedule Property, should write to the undersigned within **SevenDays** from the date of issuance of this notice with all documentary proof on which they are basing and ascertaining their rights with regard to the Schedule Property or any part thereof and objections and/or claims received thereafter will not be binding on my client and my client will proceed to develop and sell the below mentioned property by entering into Joint Development Agreement with the owners as if there are no claimants/objections with regard to the Schedule Property.

SCHEDULE PROPERTY

ALL THAT PIECE AND PARCEL OF THE Land bearing Sy.No.23/9 (Old Sy.No.23/5) measuring 0.16 Guntas and 0.1 Guntas of Kharab land , situated at Nimbekaipura Village, Bidarahalli Hobli, Anekal Taluk, Bengaluru East Taluk, Bengaluru Urban District and bounded on the; East by : Land in Sy.No.23/7; West by : Land in Sy.No.23/4; North by: Land in Sy.No.23/6; South by: National Highway (NH48-earlier NH4)

ROOPA SHETTY,
Advocate
Lex Situs, No.810, 'BILWAPRIYA PLATINA', 2nd Floor, 27th Main Road, HSR Layout, Sector 1, Bangalore - 560102.
Phone: 080-22583563, 080-25723339, 9902026199; Email:info@lexsitus.com

JOB OPPORTUNITIES

Accounts & Finance

WANTED ACCOUNTS Assistant with Tally Knowledge B.Com Below 40 years Known Kannada, English, Hindi in and around Rajajinagar Contact: 9108458798/ 080 -23384085

Graphic Designers

WANTED GRAPHIC Designer Expireinced in Corel Draw in and around Rajajinagar Contact: 9108458798/ 080 -23384085

Part-Time Jobs

TOP MNC Com. Licensed By Central Govt. Retired/ VRS Persons 2nd Career Opporty Age Above 45 Years 35K To 40K: 7019215243/ 9886641282

REAL ESTATE SELLING

Agricultural Land Converted

Electronic City

ACRE 2.15_GUNTA, Agriculture Land for sale in Avalahalli_Village, 10mins from Sarjapur_Road, close to Huskur Fruit Market & Railway Station, Per Acre 5.5Cr & 52,000sqft Residential Converted Land in Chikkanagamangla Village near Biocon Foundation, Adjacent Huskur Lake View Property Rs.1500/sqft. VernaDevelopers.com, MG Road, 9353128035/ 9916310226

Sites

Nelamangala

SITES: SALE Nelamangala Snehamayee Housing Society Panchayat Converted Sites 1000, 1200, 1500 SQFT Brokers Excuse: 9886006491

Vishweshwariah Layout

DIRECT OWNER 40x60 East Facing BDA #2194 Site Sale VISHVESWARAIAH LAYOUT 1st Block, 60ft-Road. 9886634578

Chikkaballapura

SITES: SALE Chikkaballapura Apranje Times Square DC Converted Good Investment / Immediate Construction 1200sq EF Broker Excuse: 9886006491

CONNECT

RENTAL PROPERTIES

Accommodation Available

Commercial

MAJESTIC SHOP for Rent. Jaymahal Property Available for Sale Contact: 9206329512

COMMERCIAL SPACE 750 sqft on Muddaiahnapalya main road, Near Green House, Srigandhadakaval Available for Rent. Contact 9448017478/ 8310590306

House

2 BEDROOM House for Rent, BSK 1st stage, Hanumanthanagar near SBM Colony. Veg Only. 9844179944.

PERSONAL

Announcements

ANNOUNCEMENT

I, **N.DREMA** DOB: 01-07-1956 M/o No. 14442707H Hav N.Surendra Kumar, #111, 2nd Cross, Riches Garden, Kalkere Main Road, Ramamurthynagar, Bengaluru-16, have changed my name & DOB to **PREMA.N** & **10-09-1959**. vide affidavit dt:06-12-2023. Henceforth I shall be called **PREMA.N** only.

Change of Name

CHANGE OF NAME

I, KUNDAVAI RAMACHANDRAN (DOB: 27.06.1966) W/o. K. Ramachandran R/a #13, 2nd Main Road, Jayamahal Extention, Banglalore-560046 have Changed My Name to KUNDAVAI A. vide affidavit dated: 07.12.2023 before Notary K.V. Bachi Reddy, Bengaluru.

CHANGE OF NAME

I, **SAJJAN RAJ**, S/o. Misrimalji Kothari, aged about 63 years, residing at #301, 35/6, Shreejee Apartments, 5th Cross, Gandhi Nagar, Bengaluru-560009, have changed my name as **SAJJAN RAJ KOTHARI** from old name **SAJJAN RAJ**, and sworn before Notary **V. Srinivasa Reddy** vide affidavit dated 5-12-2023

I, RAJEEVA GANAPATI HEGDE S/o Ganapati Hegde R/o Kanalli, Hegadekatta Post, Uttara Kannada District-581403 have changed my Name to RAJEEV GANAPATI HEGDE vide affidavit dated 6.12.2023 sworn before Notary Mamatha N.K. Bengaluru

Change of Name

I, **Sapna Shantisarup Reniwal** guardian of **Kushan Goyal,** Residing at No. C-0810, Divyasree 77 Place, Yemlur, Bangalore - 560 037, have changed the Minor name to **Kushan Sapna Reniwal** as per Affidavit No. IN-KA54308002633844V. He shall be known by this name henceforth.

Change of Name

I, **Maanya Goyal,** D/o Atul Goyal, Residing at No. C-0810, Divyasree 77 Place, Yemlur , Bangalore - 560 037, have changed my name to **Maanya Sapna Reniwal** as per Affidavit No. IN-KA54312621639843V. I shall be known by this name henceforth.

Change of Name

I, **Sapna Atul Goyal** D/o Shantisarup Ramkumar Reniwal, Residing at No. C-0810, Divyasree 77 place, Yemlur, Bangalore - 560 037, have changed my name to **Sapna Shantisarup Reniwal** as per Affidavit No. IN-KA54310619581023V. I shall be known by this name henceforth.

CHANGE OF NAME

I, **ZIAUR RAHMAN MUDDASIR** S/o. **KHALEELUR RAHMAN SHARIFF** Residing at No. 21, Ground floor, 1st Main, 3rd Cross, Bhuvaneshwari Nagar, R.T. Nagar Bengaluru-560032 have changed my name to **ZIAUR RAHMAN MUDDSIR S** vide affidavit dated 07/12/2023, before notary L. Gopalakrishna, Bangalore.

I, SHREENATH NARAYANAN S/o Narayanan Kolathingal Raman R/a #B903,Kolte Patil Raaga Apartment,Bengaluru. have Changed my from SREENATH NARAYANAN to SHREENATH NARAYANAN for all my future purpose. vide affidavit dated 06-12-2023 sworn before Notary G.R. Ravichandra Reddy,Bengaluru

CHANGE OF NAME

I, hitherto known as **MOUNICA G D,** W/o ANEESH GOVINDAN, residing at Flat No. 002, Om Sai Pearls 16th Cross, Neeladri Nagar Opp to Ferns N Petals Electronic City Phase 1, Doddathoguru,Bengaluru-560100, have changed my name and shall hereafter be known as **MOUNICA ANEESH.**

I, DENNIS NOVELLA JACQULINE, have changed my name to NOVELLA JACQULINE Vide Affidavit dated 07.12.2023 sworn before advocate and notary Ambujakshi, Bangalore

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ಕಮಿಷನರ್‌ಗೆ ಅಮೆರಿಕದಿಂದ ದೂರು ನೀಡಿದ ಎನ್‌ಆರ್‌ಐ ರಾಘವೇಂದ್ರ

ನಿವೇಶನ: ₹30 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಲ್ಲಿ ನಿವೇಶನ ಕೊಡಿಸುವುದಾಗಿ ಹೇಳಿದ್ದ ಅರವಿಂದ್ ಹಾಗೂ ಹರಿಕೃಷ್ಣ ಅವರು ₹ 30 ಲಕ್ಷ ಪಡೆದು ವಂಚಿಸಿದ್ದಾರೆ' ಎಂದು ಆರೋಪಿಸಿ ಅಮೆರಿಕದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯ (ಎನ್‌ಆರ್‌ಐ) ರಾಘವೇಂದ್ರ ಅವರು ಕಮಿಷನರ್ ಅವರಿಗೆ ಸಾಮಾಜಿಕ ಮಾಧ್ಯಮ 'ಎಕ್ಸ್' ಮೂಲಕ ದೂರು ನೀಡಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಪ್ರಕಟಿಸಿ ಕಮಿಷನರ್ ಅವರ ಖಾತೆಗೆ ಟ್ಯಾಗ್ ಮಾಡಿರುವ ರಾಘವೇಂದ್ರ, 'ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಆಗ್ರಹಿಸಿದ್ದಾರೆ.

'ಅಮೆರಿಕದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಬೆಂಗಳೂರಿನಲ್ಲಿ ನಿವೇಶನ ಖರೀದಿಸಲು ಯೋಚಿಸಿದ್ದೆ. ಕೆಂಗೇರಿ ಬಳಿ ನಿವೇಶನ ಮಾರಾಟಕ್ಕಿರುವ ಬಗ್ಗೆ ಜಾಹೀರಾತು ನೋಡಿದ್ದೆ. ಅದಲ್ಲಿರುವ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದೆ. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಜೆ.ಪಿ. ನಗರದ ಅರವಿಂದ್ ಹಾಗೂ ಹರಿಕೃಷ್ಣ ಪರಿಚಯವಾಗಿದ್ದರು' ಎಂದು ರಾಘವೇಂದ್ರ ತಿಳಿಸಿದ್ದಾರೆ.

'ನಿವೇಶನ ಖರೀದಿ ಬಗ್ಗೆ ಪರಸ್ಪರ ಮಾತುಕತೆ ಆಗಿತ್ತು. 2022ರ ಡಿಸೆಂಬರ್‌ನಲ್ಲಿ ₹ 30 ಲಕ್ಷ ನೀಡಿ ನಿವೇಶನ ಖರೀದಿ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದೆ. ಆರೋಪಿಗಳು ಇದುವರೆಗೂ ನಿವೇಶನ ನೀಡಿಲ್ಲ. ಈ ಬಗ್ಗೆ ಜೆ.ಪಿ.ನಗರ ಠಾಣೆಗೆ ದೂರು ನೀಡಿದರೂ ಪೊಲೀಸರು ಸ್ಪಂದಿಸುತ್ತಿಲ್ಲ. ವಂಚನೆ ಮಾಡಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಂಡು, ನನ್ನ ಹಣ ವಾಪಸು ಕೊಡಿಸಿ' ಎಂದು ಅವರು ಕೋರಿದ್ದಾರೆ.

₹ 80 ಸಾವಿರ ಪಡೆದು 'ಆನ್‌ಲೈನ್ ಪೂಜಾರಿ' ಪರಾರಿ

ಬೆಂಗಳೂರು: ಪೂಜಾರಿ ಹೆಸರಿನಲ್ಲಿ ಆನ್‌ಲೈನ್ ಮೂಲಕ ₹ 80 ಸಾವಿರ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬನ್ನೇರುಘಟ್ಟ ರಸ್ತೆಯ ನಿವಾಸಿಯಾಗಿರುವ 36 ವರ್ಷದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಮಹಿಳೆ ತಮ್ಮ ಮನೆಯಲ್ಲಿ ಪೂಜೆ ಮಾಡಿಸಲು ತೀರ್ಮಾನಿಸಿದ್ದರು. ಇದಕ್ಕಾಗಿ ಪೂಜಾರಿ ಅವರನ್ನು ಹುಡುಕುತ್ತಿದ್ದರು. ಸ್ನೇಹಿತರೊಬ್ಬರು ಪೂಜಾರಿ ಶರಣ್ ಭಟ್ ಎಂಬುವರ ಮೊಬೈಲ್ ನಂಬರ್ ನೀಡಿದ್ದರು. ಅದಕ್ಕೆ ಕರೆ ಮಾಡಿದ್ದ ಮಹಿಳೆ, ಪೂಜೆ ಮಾಡಿಕೊಡುವಂತೆ ವಿನಂತಿಸಿದ್ದರು.' 'ಪೂಜೆ ಮಾಡಲು ಒಪ್ಪಿದ್ದ ಪೂಜಾರಿ, 'ನನ್ನ ಖಾತೆಗೆ ₹ 50,000 ಕಳುಹಿಸಿ. ಅದನ್ನು ದೇವರ ಮುಂದೆ ಇರಿಸಿ ಕೆಲದಿನ ಪೂಜೆ ಮಾಡುತ್ತೇನೆ. ನಂತರ, ನಿಮ್ಮ ಮನೆಗೂ ಅದೇ ಹಣವನ್ನು ತಂದಿಟ್ಟು ಪುನಃ ಪೂಜೆ ಮಾಡುತ್ತೇನೆ' ಎಂದಿದ್ದ. ಅದನ್ನು ನಂಬಿದ್ದ ಮಹಿಳೆ, ಹಣ ಕಳುಹಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಪೂಜೆ ಸಾಮಗ್ರಿಗಳನ್ನು ಖರೀದಿಸಬೇಕೆಂದು ಹೇಳಿದ್ದ ಆರೋಪಿ, ಪುನಃ ₹ 30 ಸಾವಿರ ಪಡೆದಿದ್ದ. ಇದಾದ ನಂತರ ಆರೋಪಿ, ಪೂಜೆ ಮಾಡಲು ಬಂದಿದ್ದ. ಹಣವನ್ನೂ ವಾಪಸು ಕೊಡದೇ ಪರಾರಿಯಾಗಿದ್ದಾನೆ' ಎಂದು ಹೇಳಿದರು.

ಸಾರಿಗೆ ನಿಗಮ ಚಾಲಕರ ನಿರ್ಲಕ್ಷ್ಯ 11 ತಿಂಗಳಿನಲ್ಲಿ 44 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಚಾಲಕರ ನಿರ್ಲಕ್ಷ್ಯದಿಂದ ನಗರದಲ್ಲಿ ಪ್ರಸಕ್ತ ವರ್ಷ ಜನವರಿಯಿಂದ ಡಿಸೆಂಬರ್‌ವರೆಗೆ ಸಂಭವಿಸಿದ ಅಪಘಾತದಲ್ಲಿ 44 ಮಂದಿ ಸತ್ತಿದ್ದಾರೆ.

ಅಪಘಾತದ ಅಂಕಿ–ಅಂಶ ಬಿಡುಗಡೆ ಮಾಡಿರುವ ಸಂಚಾರ ಪೊಲೀಸರು, 'ಸಾರಿಗೆ ನಿಗಮಗಳ ಚಾಲಕರ ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆಯಿಂದ ಅಪಘಾತಗಳು ಸಂಭವಿಸುತ್ತಿವೆ. ಜೊತೆಗೆ, ಸಂಚಾರ ನಿಯಮ ಉಲ್ಲಂಘನೆಯೂ ಅಪಘಾತಕ್ಕೆ ಕಾರಣವಾಗುತ್ತಿವೆ' ಎಂದಿದ್ದಾರೆ.

'ಬಿಎಂಟಿಸಿ ಬಸ್ ಚಾಲಕರ ನಿರ್ಲಕ್ಷ್ಯದಿಂದ ಸಂಭವಿಸಿದ್ದ ಅಪಘಾತದಲ್ಲಿ 34 ಮಂದಿ ಮೃತಪಟ್ಟಿದ್ದು, 97 ಮಂದಿ ಗಾಯಗೊಂಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ ಚಾಲಕರ ನಿರ್ಲಕ್ಷ್ಯದಿಂದ 10 ಮಂದಿ ಮೃತಪಟ್ಟಿದ್ದು, 28 ಮಂದಿ ಗಾಯಗೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

'ಬೆಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಚಾಲಕರು 17,264 ಬಾರಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಪುರಾವೆಗಳ ಸಮೇತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾಲ ಕಾಲಕ್ಕೆ ದಂಡದ ರಶೀದಿಗಳನ್ನು ನಿಗಮಗಳಿಗೆ ಕಳುಹಿಸಲಾಗಿದೆ' ಎಂದಿದ್ದಾರೆ.

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯ ಸಮಾರಂಭದಲ್ಲಿ ರಾಜ್ಯದ ಸರ್ಕಾರಿ ಸಂಸ್ಥೆಗಳ ಪೈಕಿ ಅತೀ ಹೆಚ್ಚು ಸಶಸ್ತ್ರ ಪಡೆಗಳ ಧ್ವಜ ನಿಧಿ ಸಂಗ್ರಹಣೆ ಮಾಡಿರುವ ಸಂಸ್ಥೆಯ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಸತತ 9ನೇ ಬಾರಿಗೆ ಪಾತ್ರವಾಗಿದೆ. ರಾಜಭವನದಲ್ಲಿ ಲೆಫ್ಟಿನೆಂಟ್ ಜನರಲ್ ಬಿ.ಕೆ. ರಪ್ಸವಾಲ್ ಅವರು ಕೆಎಸ್‌ಆರ್‌ಟಿಸಿ ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿ ದೇವಿ ಅವರಿಗೆ ಪ್ರಶಸ್ತಿ ಫಲಕ ನೀಡಿ ಗೌರವಿಸಿದರು

ನಗರದ ಮಹಿಳೆಗೆ ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡಿ ವಂಚನೆ

ಡ್ರಗ್ಸ್ ಸಾಗಣೆ ಬೆದರಿಕೆ: ₹32.04 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈನಿಂದ ತೈವಾನ್ ದೇಶಕ್ಕೆ ಡ್ರಗ್ಸ್ ಸಾಗಣೆ ಮಾಡುತ್ತಿರುವುದಾಗಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಬೆದರಿಸಿ ನಗರದ ನಿವಾಸಿಯೊಬ್ಬರಿಂದ ₹ 32.04 ಲಕ್ಷ ಪಡೆದು ವಂಚಿಸಲಾಗಿದೆ.

ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡಿ ವಂಚಿಸಿರುವ ಅಪರಿಚಿತರ ವಿರುದ್ಧ ನಗರದ ಹೊಸಪಾಳ್ಯದ ಮಹಿಳೆಯೊಬ್ಬರು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿ, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

'ದೂರುದಾರ ಮಹಿಳೆಗೆ ನ. 29ರಂದು ಕರೆ ಮಾಡಿದ್ದ ಆರೋಪಿ, 'ನಿಮ್ಮ ಹೆಸರಿನಲ್ಲಿ ಮುಂಬೈನಿಂದ ತೈವಾನ್ ದೇಶಕ್ಕೆ ಪಾರ್ಸೆಲ್ ಕಳುಹಿಸಲಾಗಿದೆ. ಇದರಲ್ಲಿ ಮಾದಕ ವಸ್ತುಗಳಿವೆ (ಡ್ರಗ್ಸ್). ಇದರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ನಿಮ್ಮನ್ನು ಬಂಧಿಸಲಾಗುವುದು' ಎಂದಿದ್ದರು. ಹೆದರಿದ್ದ ಮಹಿಳೆ, ಪಾರ್ಸೆಲ್ ತಮ್ಮದಲ್ಲವೆಂದು ತಿಳಿಸಿದ್ದರು' ಎಂದು ಪೊಲೀಸರು ಹೇಳಿದರು.

'ಪಾರ್ಸೆಲ್ ತಮ್ಮದಲ್ಲವೆಂದರೆ ವೈಯಕ್ತಿಕ ದಾಖಲೆಗಳನ್ನು ಕಳುಹಿಸುವಂತೆ ಆರೋಪಿಗಳು ಹೇಳಿದ್ದರು. ದೂರುದಾರ ಮಹಿಳೆ, ಆಧಾರ್ ಹಾಗೂ ಇತರೆ ದಾಖಲೆ ಕಳುಹಿಸಿದ್ದರು. ಇದಾದ ನಂತರ, ಪರಿಶೀಲನೆ ಹಾಗೂ ಇತರೆ ಕೆಲಸಗಳ ಹೆಸರಿನಲ್ಲಿ ಶುಲ್ಕ ಪಡೆದಿದ್ದರು. ಜೊತೆಗೆ, ಪ್ರಕರಣ ದಾಖಲಿಸಬಾರದೆಂದರೆ ಹಣ ನೀಡುವಂತೆ ಬೇಡಿಕೆ ಇರಿಸಿದ್ದರು. ಆರೋಪಿಗಳ ಮಾತು ನಂಬಿದ್ದ ಮಹಿಳೆ, ಹಂತ ಹಂತವಾಗಿ ₹ 32.04 ಲಕ್ಷ ನೀಡಿದ್ದರು. ಇದಾದ ನಂತರ, ಆರೋಪಿಗಳು ಪುನಃ ಹಣ ಕೇಳಿದ್ದರು. ಬೇಸತ್ತ ಮಹಿಳೆ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಡ್ರಗ್ಸ್ ಸಂಗ್ರಹ: ಪೊಲೀಸ್ ದಾಳಿ

ಬೆಂಗಳೂರು: ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯ ವಡೇರಹಳ್ಳಿಯಲ್ಲಿರುವ ಮನೆಯೊಂದರ ಮೇಲೆ ಪೊಲೀಸರು ದಾಳಿ ಮಾಡಿದ್ದು, ₹ 5 ಲಕ್ಷ ಮೌಲ್ಯದ ಡ್ರಗ್ಸ್ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

'ನೈಜೀರಿಯಾ ಪ್ರಜೆ ಇಮಾನ್ಯೂಲ್ ಲೊಟೊಚುಕ್ವೊ ಅಲಿಯಾಸ್ ಜಾನ್ (27) ತಮ್ಮ ಬಾಡಿಗೆ ಮನೆಯಲ್ಲಿ ಡ್ರಗ್ಸ್ ಇಟ್ಟುಕೊಂಡಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಬಾಡಿಗೆ ಮನೆಯಲ್ಲಿ ನೆಲೆಸಿದ್ದ. ಪರಿಚಯಸ್ಥರಿಂದ ಡ್ರಗ್ಸ್ ಖರೀದಿಸಿ ತಂದು ಮನೆಯಲ್ಲಿ ಇಟ್ಟುಕೊಂಡಿದ್ದ. ಚಿಕ್ಕ ಪೊಟ್ಟಣಗಳಲ್ಲಿ ಡ್ರಗ್ಸ್ ತುಂಬಿ ಗ್ರಾಹಕರಿಗೆ ಮಾರುತ್ತಿದ್ದ' ಎಂದು ತಿಳಿಸಿದರು.

'ಆರೋಪಿಯಿಂದ 261 ಗ್ರಾಂ ಕೊಕೇನ್, ₹ 57 ಸಾವಿರ ನಗದು, 2 ಮೊಬೈಲ್, ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

ಪೊಲೀಸರ ಹೆಸರಿನಲ್ಲಿ ವಂಚನೆ: 'ಸಿಬಿಐ ಅಧಿಕಾರಿಗಳು ಹಾಗೂ ಪೊಲೀಸರ ಹೆಸರಿನಲ್ಲಿ ಕರೆ ಮಾಡುವ ವಂಚಕರು, ಬೆದರಿಕೆ ಹಾಕುತ್ತಿದ್ದಾರೆ. ಇಂಥ ಕರೆಗಳ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು. ಯಾರಾದರೂ ಹಣ ಕೇಳಿದರೆ, ಸಮೀಪದ ಠಾಣೆಗೆ ದೂರು ನೀಡಬೇಕು' ಎಂದು ಹೇಳಿದರು.

ಚಿನ್ನದ ಸರ ಕಿತ್ತು ಪರಾರಿ

ತಿಪಟೂರಿನಿಂದ ಬಂದು ಕಳ್ಳತನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ರಸ್ತೆಗಳಲ್ಲಿ ನಡೆದುಕೊಂಡು ಹೋಗುವ ಮಹಿಳೆಯರನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ಯುತ್ತಿದ್ದ ಮೂವರು ಆರೋಪಿಗಳನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಜಿಲ್ಲೆ ತಿಪಟೂರಿನ ಅಭಿಜಿತ್ ಅಲಿಯಾಸ್ ಜೀತು (32), ರಾಕೇಶ್ ಅಲಿಯಾಸ್ ರವಿ (24) ಹಾಗೂ ಸಲ್ಮಾನ್ ಅಲಿಯಾಸ್ ಹೆಬ್ಬೆಟ್ಟು (21) ಬಂಧಿತರು. ಮೂವರು ಆಗಾಗ ನಗರಕ್ಕೆ ಬಂದು ಕೃತ್ಯ ಎಸಗುತ್ತಿದ್ದರು. ಇತ್ತೀಚೆಗೆ ದಾಖಲಾಗಿದ್ದ ಪ್ರಕರಣದ ತನಿಖೆ ವೇಳೆ ಮೂವರು ಸಿಕ್ಕಿಬಿದ್ದರು' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳಿಂದ ₹3.70 ಲಕ್ಷ ಮೌಲ್ಯದ 68 ಗ್ರಾಂ ತೂಕದ ಚಿನ್ನದ ಸರಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಸಂಬಂಧಿಕರ ಮನೆಯಲ್ಲಿ ವಾಸ: 'ಬಂಧಿತ ಅಭಿಜಿತ್, ಮಾಜಿ ಶಾಸಕರೊಬ್ಬರ ಮೊಮ್ಮಗನೆಂದು ಹೇಳಲಾಗುತ್ತಿದೆ. ಅಪರಾಧ ಹಿನ್ನೆಲೆಯುಳ್ಳ ಈತನ ಹೆಸರು ರೌಡಿಪಟ್ಟಿಯಲ್ಲಿದೆ. ಸಲ್ಮಾನ್ ಮೇಲೂ ವಾಹನ ಕಳ್ಳತನ ಪ್ರಕರಣಗಳು ದಾಖಲಾಗಿದ್ದವು. ಮೂವರು ಸೇರಿಕೊಂಡು ಬೆಂಗಳೂರಿನಲ್ಲಿ ಮಹಿಳೆಯರ ಚಿನ್ನದ ಸರ ಕದಿಯಲು ಸಂಚು ರೂಪಿಸಿದ್ದರು' ಎಂದು ಪೊಲೀಸರು ಹೇಳಿದರು.

'ತಿಪಟೂರಿನಿಂದ ಬಸ್‌ನಲ್ಲಿ ನಗರಕ್ಕೆ ಬರುತ್ತಿದ್ದ ಮೂವರು, ಸಂಬಂಧಿಕರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ನಗರದಲ್ಲಿ ಕೆಲಸ ಮಾಡುತ್ತಿರುವ ಸ್ನೇಹಿತನಿಗೆ ಬಾಡಿಗೆ ಮನೆ ಹುಡುಕಬೇಕೆಂದು ಹೇಳಿ ಸಂಬಂಧಿಕರ ದ್ವಿಚಕ್ರ ವಾಹನ ಪಡೆದುಕೊಳ್ಳುತ್ತಿದ್ದರು. ಅದೇ ವಾಹನದಲ್ಲಿ ನಗರದ ಹಲವೆಡೆ ಸುತ್ತಾಡುತ್ತಿದ್ದರು.'

'ಮಹಿಳೆಯರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ವಿಳಾಸ ಕೇಳುವ ನೆಪದಲ್ಲಿ ಚಿನ್ನ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು. ತಮ್ಮೂರಿನಲ್ಲಿ ಚಿನ್ನದ ಸರಗಳನ್ನು ಮಾರಿ, ಹಣ ಹಂಚಿಕೊಳ್ಳುತ್ತಿದ್ದರು. ಹಣ ಖರ್ಚಾದ ನಂತರ ಪುನಃ ಬೆಂಗಳೂರಿಗೆ ಬಂದು ಕೃತ್ಯ ಎಸಗುತ್ತಿದ್ದರು. ಆರೋಪಿಗಳ ಬಂಧನದಿಂದ ನಗರದಲ್ಲಿ ನಡೆದಿದ್ದ ನಾಲ್ಕು ಪ್ರಕರಣಗಳು ಪತ್ತೆಯಾಗಿವೆ' ಎಂದು ತಿಳಿಸಿದರು.

ಕೆರೆಯಲ್ಲಿ ಶವ ಕೊಲೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿರುವ ಕೆರೆಯಲ್ಲಿ ಶರತ್ (30) ಅವರ ಮೃತದೇಹ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

'ಕಂಪನಿಯೊಂದರ ಉದ್ಯೋಗಿ ಶರತ್ ಅವರನ್ನು ಕೊಲೆ ಮಾಡಿ ಕೆರೆಗೆ ಎಸೆದಿರುವ ಅನುಮಾನವಿದೆ. ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾರ್‌ವೊಂದರಲ್ಲಿ ಮಂಗಳವಾರ ರಾತ್ರಿ ಗಲಾಟೆ ನಡೆದಿರುವ ಮಾಹಿತಿ ಇದೆ. ದುಷ್ಕರ್ಮಿಗಳು, ಶರತ್ ಅವರನ್ನು ಕೊಲೆ ಮಾಡಿ ಮೃತದೇಹವನ್ನು ಕೆರೆಗೆ ಎಸೆದು ಪರಾರಿಯಾಗಿದ್ದಾರೆ' ಎಂದು ತಿಳಿಸಿವೆ.

ಪ್ರೀತಿ ನಿರಾಕರಿಸಿದ ಯುವತಿ; ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲು

ಬೆಂಕಿ ಹಚ್ಚಿಕೊಂಡು ಪ್ರೇಮಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನನ್ನು ಪ್ರೀತಿಸಲು ಯುವತಿ ನಿರಾಕರಿಸಿದರೆಂಬ ಕಾರಣಕ್ಕೆ ರಾಕೇಶ್ (26) ಅವರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಕೆಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ತೀವ್ರ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಗುರುವಾರ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆನೇಕಲ್ ತಾಲ್ಲೂಕಿನ ಜಿಗಣಿ ಕಲ್ಲುಬಾಲು ಗ್ರಾಮದ ರಾಕೇಶ್, ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದರು. ಹೆಮ್ಮಿಗೆಪುರದಲ್ಲಿ ರಾಕೇಶ್ ವಾಸವಿದ್ದರು. ಯುವತಿಯೊಬ್ಬರು ಪೋಷಕರ ಜೊತೆ ಕೋಡಿಪಾಳ್ಯದ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಹೆಮ್ಮಿಗೆಪುರದಲ್ಲಿರುವ ಸಂಬಂಧಿಕರ ಮನೆಗೆ ಯುವತಿ ಆಗಾಗ ಬಂದು ಹೋಗುತ್ತಿದ್ದರು. ಇದೇ ಸಂದರ್ಭದಲ್ಲಿ ರಾಕೇಶ್ ಹಾಗೂ ಯುವತಿ ನಡುವೆ ಸ್ನೇಹ ಬೆಳೆದಿತ್ತು. ನಂತರ, ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಯುವತಿ ಮನೆ ಎದುರೇ ಪೆಟ್ರೋಲ್ ಸುರಿದುಕೊಂಡ ಯುವಕ

'ಪೋಷಕರು ಯುವತಿಗೆ ಬೇರೊಬ್ಬ ಯುವಕನ ಜೊತೆ ನಿಶ್ಚಿತಾರ್ಥ ಮಾಡಿಸಿದ್ದರು. ಈ ಸಂಗತಿ ತಿಳಿಯುತ್ತಿದ್ದಂತೆ ರಾಕೇಶ್, ಯುವತಿಯನ್ನು ಸಂಪರ್ಕಿಸಿದ್ದ. ಆದರೆ, ಯುವತಿ ಹೆಚ್ಚು ಮಾತನಾಡಿರಲಿಲ್ಲ. ತನ್ನನ್ನು ಮಾತನಾಡಿಸದಂತೆ ತಾಕೀತು ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಪೆಟ್ರೋಲ್ ಬಾಟಲಿ ಸಮೇತ ಬುಧವಾರ ಮಧ್ಯಾಹ್ನ ಯುವತಿ ಮನೆ ಬಳಿ ಹೋಗಿದ್ದ ರಾಕೇಶ್, ತನ್ನನ್ನು ಪ್ರೀತಿಸುವಂತೆ ಯುವತಿಗೆ ಹೇಳಿದ್ದ. ಆದರೆ, ಯುವತಿ ಆತನ ಕೋರಿಕೆಯನ್ನು ನಿರಾಕರಿಸಿದ್ದರು. ಇದೇ ವಿಚಾರವಾಗಿ ಪರಸ್ಪರ ಮಾತಿನ ಚಕಮಕಿ ನಡೆದಿತ್ತು. ಪೋಷಕರು ಸಮಾಧಾನಪಡಿಸಿದರೂ ಪರಿಸ್ಥಿತಿ ತಿಳಿಗೊಂಡಿರಲಿಲ್ಲ.'

'ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಕೂಗಾಡಿದ್ದ ರಾಕೇಶ್, ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದ. ಕೆಲ ಕ್ಷಣಗಳಲ್ಲಿ ಇಡೀ ದೇಹಕ್ಕೆ ಬೆಂಕಿ ಆವರಿಸಿತ್ತು. ಸ್ಥಳೀಯರು ಬೆಂಕಿ ಆರಿಸಿ ರಾಕೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ದೇಹದ ಮೇಲೆ ಶೇ 60 ರಷ್ಟು ಸುಟ್ಟ ಗಾಯಗಳಾಗಿದ್ದವು' ಎಂದು ತಿಳಿಸಿದರು.

'ರಾಕೇಶ್ ಸಾವಿನ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪೋಷಕರು, ಸಂಬಂಧಿಕರು ಹಾಗೂ ಯುವತಿ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ದಾನಿಗಳು ಯಂತ್ರ ನೀಡಿದರೆ ತಂತ್ರಜ್ಞರ ಸೌಲಭ್ಯ ಕಲ್ಪಿಸಲು ಬದ್ಧ: ದಿನೇಶ್ ಗುಂಡೂರಾವ್

ಡಯಾಲಿಸಿಸ್ ನಿರ್ವಹಣೆಗೆ ಹೊಸ ಏಜೆನ್ಸಿ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ರಾಜ್ಯದಾದ್ಯಂತ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆಗೆ ಹೊಸ ಏಜೆನ್ಸಿಯನ್ನು ನೇಮಿಸಲಾಗುತ್ತಿದೆ. ಮೂರು ಕಂದಾಯ ವಿಭಾಗಗಳ ಟೆಂಡರ್ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬಿಜೆಪಿಯ ಯಶ್‌ಪಾಲ್ ಎ. ಸುವರ್ಣ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆಗೆ ಈ ಹಿಂದೆ ನೇಮಿಸಿದ್ದ ಸಂಸ್ಥೆಯಿಂದ ಸಮಸ್ಯೆ ಉಂಟಾಗಿತ್ತು. ಈ ಕಾರಣದಿಂದ ಹಳೆಯ ಗುತ್ತಿಗೆಯನ್ನು ರದ್ದುಡಿಸಿ, ಹೊಸ ಏಜೆನ್ಸಿ ನೇಮಿಸಲಾಗುತ್ತಿದೆ. ಮುಂದಿನ ತಿಂಗಳಿನಿಂದಲೇ ಹೊಸ ಏಜೆನ್ಸಿಯು ಸೇವೆ ಒದಗಿಸಲಿದೆ' ಎಂದರು.

ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ಕಂದಾಯ ವಿಭಾಗಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಕಲಬುರಗಿ ವಿಭಾಗದಲ್ಲಿ ಮೊದಲ ಬಾರಿ ಟೆಂಡರ್ ಆಹ್ವಾನಿಸಿದಾಗ ಅರ್ಹ ಸಂಸ್ಥೆಗಳು ಬಿಡ್ ಸಲ್ಲಿಸಿಲ್ಲ. ಎರಡನೇ ಬಾರಿ ಬಿಡ್ ಆಹ್ವಾನಿಸಲಾಗುವುದು. ಶೀಘ್ರದಲ್ಲಿ ಈ ವಿಭಾಗಕ್ಕೂ ಏಜೆನ್ಸಿ ನೇಮಕ ಮಾಡಲಾಗುವುದು ಎಂದರು.

ಈ ಹಿಂದೆ 168 ಡಯಾಲಿಸಿಸ್ ಕೇಂದ್ರಗಳಲ್ಲಿ 649 ಯಂತ್ರಗಳಿದ್ದವು. ಈಗ ಒಟ್ಟು 219 ಕೇಂದ್ರಗಳಲ್ಲಿ 800 ಯಂತ್ರಗಳನ್ನು ಒದಗಿಸಲಾಗಿದೆ. ಇದರಿಂದಾಗಿ ಹೆಚ್ಚು ಜನರಿಗೆ ಡಯಾಲಿಸಿಸ್ ಸೇವೆ ಒದಗಿಸಲು ಸಾಧ್ಯವಾಗಿದೆ ಎಂದರು.

ಹೊಸ ಏಜೆನ್ಸಿಯು ತಾನೇ ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಿ, ನಿರ್ವಹಣೆಯನ್ನೂ ಮಾಡಲಿದೆ. ಆರೋಗ್ಯ ಇಲಾಖೆಯು ನಿರ್ವಹಣಾ ವೆಚ್ಚ ಭರಿಸಲಿದೆ. ಏಕ ಬಳಕೆಯ ಡಯಲೈಸರ್‌ಗಳನ್ನು ಮಾತ್ರ ಬಳಸಲಾಗುತ್ತದೆ. ಇದರಿಂದ ಡಯಾಲಿಸಿಸ್ ಹಂತದಲ್ಲಿ ಸೋಂಕು ಹರಡುವುದನ್ನು ತಪ್ಪಿಸಲು ಸಾಧ್ಯವಾಗಿದೆ ಎಂದು ವಿವರಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಡಯಾಲಿಸಿಸ್ ಕೇಂದ್ರದ ಸಿಬ್ಬಂದಿಯ ಮುಷ್ಕರದಿಂದ ಸೈಯದ್ ಮಣ್ಣಾನವರ ಎಂಬವರು ಸಕಾಲಕ್ಕೆ ಚಿಕಿತ್ಸೆ ದೊರಕದೇ ಮೃತಪಟ್ಟ ಪ್ರಕರಣವನ್ನು ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಈ ರೀತಿಯ ಸಾವಿಗೆ ಕಾರಣರಾದವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು.

ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಸೇರಿದಂತೆ ದಾನಿಗಳು ಡಯಾಲಿಸಿಸ್ ಯಂತ್ರ ಪೂರೈಸಿದರೆ, ಅವುಗಳಿಗೆ ಆರೋಗ್ಯ ಇಲಾಖೆಯಿಂದ ತಂತ್ರಜ್ಞರನ್ನು ನೇಮಿಸಬೇಕು ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಒತ್ತಾಯಿಸಿದರು.

'ದಾನಿಗಳು ಕೊಡುಗೆಯಾಗಿ ನೀಡುವ ಡಯಾಲಿಸಿಸ್ ಯಂತ್ರಗಳ ನಿರ್ವಹಣೆಗೆ ತಂತ್ರಜ್ಞ ಸಿಬ್ಬಂದಿ ಮತ್ತು ನಿರ್ವಹಣಾ ವೆಚ್ಚವನ್ನು ಆರೋಗ್ಯ ಇಲಾಖೆಯಿಂದಲೇ ಭರಿಸಲಾಗುವುದು' ಎಂದು ಸಚಿವರು ಭರವಸೆ ನೀಡಿದರು.

ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆ ಪಡೆಯಲು ಅವಕಾಶ ನೀಡಬೇಕೆಂಬ ಬೇಡಿಕೆ ಕುರಿತು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

ಬಿಜೆಪಿಯ ಶೈಲೇಂದ್ರ ಬೆಲ್ದಾಳೆ, ಡಿ. ವೇದವ್ಯಾಸ ಕಾಮತ್, ಆರಗ ಜ್ಞಾನೇಂದ್ರ, ಕಾಂಗ್ರೆಸ್‌ನ ಎನ್.ಟಿ. ಶ್ರೀನಿವಾಸಯ್ಯ ಸೇರಿದಂತೆ ಹಲವರು ಡಯಾಲಿಸಿಸ್ ಕೇಂದ್ರಗಳ ಸಮಸ್ಯೆ ಪರಿಹರಿಸುವಂತೆ ಆಗ್ರಹಿಸಿದರು.

ದಂಡದ ಜತೆಗೆ ಕಪ್ಪುಪಟ್ಟಿಗೆ

ದಿನೇಶ್ ಗುಂಡೂರಾವ್

'ಹಿಂದೆ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆ ಗುತ್ತಿಗೆ ಪಡೆದಿದ್ದ ಸಂಸ್ಥೆಯು ಷರತ್ತುಗಳನ್ನು ಪಾಲಿಸಿಲ್ಲ. ಸದ್ಯ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಭವಿಷ್ಯನಿಧಿ, ಕಾರ್ಮಿಕ ರಾಜ್ಯ ವಿಮಾ ನಿಗಮದ ವಂತಿಗೆಯನ್ನು ಈಗ ಸರ್ಕಾರವೇ ಭರಿಸಿದೆ. ಆದ್ದರಿಂದ ಸಿಬ್ಬಂದಿ ಮುಷ್ಕರ ಕೈಬಿಟ್ಟಿದ್ದಾರೆ. ಆ ಸಂಸ್ಥೆಗೆ ದಂಡ ವಿಧಿಸುವ ಜತೆಯಲ್ಲಿ ಕಪ್ಪು ಪಟ್ಟಿಗೆ ಸೇರಿಸಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವರ್ಷದೊಳಗೆ 461 ವೈದ್ಯರ ನೇಮಕ

'ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ 461 ವೈದ್ಯರ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಅನುಮತಿ ಪಡೆದು ವರ್ಷದೊಳಗೆ ಭರ್ತಿ ಮಾಡಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಕಾಂಗ್ರೆಸ್‌ನ ಬೇಳೂರು ಗೋಪಾಲಕೃಷ್ಣ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಸಾಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ತುಮರಿ, ಬ್ಯಾಕೋಡು ಮತ್ತು ಕಾರ್ಗಲ್ ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ' ಎಂದರು.

'ಕಲಾಪ ಬಹಿಷ್ಕಾರ ಪರಿಹಾರವಲ್ಲ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸರ್ಕಾರದ ಗಮನ ಸೆಳೆಯಲು ಹಲವಾರು ಮಾರ್ಗಗಳಿವೆ. ಕಲಾಪ ಬಹಿಷ್ಕಾರದಿಂದ ಯಾವುದೇ ಪರಿಹಾರ ದೊರಕುವುದಿಲ್ಲ ಎಂದು ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು

ಯಶವಂತಪುರ ಕ್ಷೇತ್ರದ ಉಲ್ಲಾಳು ಕೆರೆ ಅಭಿವೃದ್ಧಿ ಕಾಮಗಾರಿಯ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

'ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕಲಾಪ ನಡೆಸಲಾಗುತ್ತದೆ. ಅಲ್ಲಿ ಸಮಸ್ಯೆಗಳ ಬಗ್ಗೆ ಗಹನ ಚರ್ಚೆ ನಡೆಯಬೇಕಾಗಿದೆ. ಸರ್ಕಾರ ಹಾಗೂ ವಿರೋಧ ಪಕ್ಷಗಳು ತಮ್ಮ ನೀತಿ ನಿಲುವುಗಳನ್ನು ಪ್ರತಿಪಾದಿಸಬೇಕಾಗುತ್ತದೆ. ಇದನ್ನು ಮರೆತು ಬಹಿಷ್ಕಾರ ಮಾಡಲು ಮುಂದಾದರೆ ನನ್ನ ಸಹಮತ ಎಂದಿಗೂ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಮುಖ್ಯಮಂತ್ರಿ ಅವರಿಂದ ₹10 ಸಾವಿರ ಕೋಟಿ ಅನುದಾನ ಘೋಷಣೆಯಾಗಿದೆ. ರೈತರ ಅಭ್ಯುದಯಕ್ಕೂ ಅನುದಾನ ಘೋಷಣೆ ಮಾಡುವಂತೆ ವಿರೋಧ ಪಕ್ಷಗಳು ಬೇಡಿಕೆ ಸಲ್ಲಿಸಬೇಕಾಗಿತ್ತು. ಮುಖ್ಯಮಂತ್ರಿಯವರಿಂದ ಸೂಕ್ತ ಸ್ಪಂದನೆ ದೊರಕದೇ ಇದ್ದಲ್ಲಿ ಪ್ರತಿಭಟನೆಯ ಹಾದಿ ಹಿಡಿಯಬೇಕು. ಎಲ್ಲ ವಿಷಯಕ್ಕೂ ಕಲಾಪ ಬಹಿಷ್ಕರಿಸಿ ಹೊರ ನಡೆಯುವುದು ಅಸಮಂಜಸ ಎಂದರು.



ಉಪನ್ಯಾಸಕ ಹುದ್ದೆ: ಬಡ್ತಿ ಪರೀಕ್ಷೆ ರದ್ದತಿಗೆ ಚರ್ಚೆ– ಮಧು ಬಂಗಾರಪ್ಪ

ವಿಧಾನ ಪರಿಷತ್: 'ಪ್ರೌಢಶಾಲಾ ಶಿಕ್ಷಕರು ಪದವಿಪೂರ್ವ ಕಾಲೇಜು ಉಪನ್ಯಾಸಕರಾಗಿ ಬಡ್ತಿ ಪಡೆಯಲು ಅರ್ಹತಾ ಪರೀಕ್ಷೆ ಬರೆಯಬೇಕೆಂಬ ನಿಯಮವನ್ನು ರದ್ದು ಮಾಡುವ ಸಂಬಂಧ ಅಧಿವೇಶನ ಮುಗಿಯುವುದರ ಒಳಗೆ ಸಭೆ ನಡೆಸಿ ನಿರ್ಧಾರ ಪ್ರಕಟಿಸಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ಶಿಕ್ಷಕರ ಬಡ್ತಿ ನಿಯಮದಲ್ಲಿರುವ ಲೋಪಗಳ ಕುರಿತಂತೆ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, 'ಪಿಯು ಕಾಲೇಜು ಉಪನ್ಯಾಸಕರ ನೇಮಕಾತಿ ವೇಳೆ ಶೇ 75ರಷ್ಟು ನೇರ ನೇಮಕಾತಿ ಹಾಗೂ ಶೇ 25ರಷ್ಟು ಹುದ್ದೆಗಳನ್ನು ಪ್ರೌಢಶಾಲೆ ಶಿಕ್ಷಕರಿಗೆ ಬಡ್ತಿ ನೀಡಿ ಭರ್ತಿ ಮಾಡಲಾಗುತ್ತಿದೆ. ಉಪನ್ಯಾಸಕರಾಗಿ ಬಡ್ತಿ ಪಡೆಯಲು ಇಚ್ಛಿಸುವ ಶಿಕ್ಷಕರು ಅರ್ಹತಾ ಪರೀಕ್ಷೆ ಬರೆಯಬೇಕಿದ್ದು, ಪರೀಕ್ಷೆಯಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದವರು ಶೇ 55 ಹಾಗೂ ಪರಿಶಿಷ್ಟ ಜಾತಿ, ಪಂಗಡದವರು ಶೇ 50ರಷ್ಟು ಅಂಕ ಪಡೆಯಬೇಕಿದೆ' ಎಂದು ಹೇಳಿದರು.

ವಿರೋಧ ವ್ಯಕ್ತಪಡಿಸಿದ ಮರಿತಿಬ್ಬೇಗೌಡ ಸೇರಿದಂತೆ ವಿರೋಧ ಪಕ್ಷದ ಸದಸ್ಯರು, 'ಬಡ್ತಿಗಾಗಿ ಪ್ರೌಢಶಾಲಾ ಶಿಕ್ಷಕರು ಪರೀಕ್ಷೆ ಬರೆಯುವ ನಿಯಮದಿಂದಾಗಿ ಮಾನಸಿಕ ಹಿಂಸೆಯಾಗುತ್ತಿದೆ. ಒಂದೇ ಇಲಾಖೆ ಅಡಿಯಲ್ಲಿ ಬಡ್ತಿ ನೀಡುವ ಅನುಪಾತದಲ್ಲಿ ಎರಡು ನಿಯಮವಿರುವುದು ಸರಿಯಲ್ಲ. ಪ್ರೌಢಶಾಲೆಗೆ ಬಡ್ತಿ ಪಡೆಯುವ ಶಿಕ್ಷಕರ ಪ್ರಮಾಣದಂತೆಯೇ ಪಿಯು ಉಪನ್ಯಾಸಕರ ಹುದ್ದೆಗೆ ಬಡ್ತಿ ಪಡೆಯುವ ಪ್ರೌಢಶಾಲಾ ಶಿಕ್ಷಕರ ಪ್ರಮಾಣ ನಿಗದಿ ಮಾಡಬೇಕು' ಎಂದು ಆಗ್ರಹಿಸಿದರು.

'ಏಳು ವಿವಿ: ಚರ್ಚಿಸಿ ತೀರ್ಮಾನ'

ವಿಧಾನ ಪರಿಷತ್: 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಅವೈಜ್ಞಾನಿಕವಾಗಿ ಏಳು ವಿಶ್ವವಿದ್ಯಾಯಗಳ ಸ್ಥಾಪಿಸಿದ್ದು, ಅವುಗಳನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ನಿರ್ಧರಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

2022ರಲ್ಲಿ ಸ್ಥಾಪಿಸಲಾದ ಏಳು ವಿಶ್ವವಿದ್ಯಾಲಯಗಳಲ್ಲಿ ಮೂಲಸೌಕರ್ಯ ಹಾಗೂ ಸಿಬ್ಬಂದಿ ಕೊರತೆ ಕುರಿತಂತೆ ಜೆಡಿಎಸ್‌ನ ಗೋವಿಂದರಾಜು, ಕೆ.ಎ. ತಿಪ್ಪೇಸ್ವಾಮಿ ಮತ್ತು ಸೂರಜ್ ರೇವಣ್ಣ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, 'ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2022ರ ಅಡಿಯಲ್ಲಿ ಚಾಮರಾಜನಗರ, ಹಾಸನ, ಬೀದರ್, ಕೊಪ್ಪಳ, ಹಾವೇರಿ, ಕೊಡಗು ಮತ್ತು ಬಾಗಲಕೋಟೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ' ಎಂದರು.

'ನಮ್ಮ ಸರ್ಕಾರ ನೇಮಿಸಿದ್ದ ಸಮಿತಿಯು ಸಲ್ಲಿಸಿರುವ ವರದಿಯಂತೆ ಒಂದು ವಿಶ್ವವಿದ್ಯಾಲಯ ಸ್ಥಾಪಿಸಿ, ಮೂಲಸೌಕರ್ಯ ಕಲ್ಪಿಸಲು ಮತ್ತು ಐದು ವರ್ಷ ನಿರ್ವಹಿಸಲು ₹342 ಕೋಟಿ ಅವಶ್ಯಕತೆಯಿದೆ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದರು.

'2,500 ಎಕರೆ ಅರಣ್ಯ ಜಮೀನು ಒತ್ತುವರಿ'

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ವಿಧಾನಸಭೆ: 'ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 2,500 ಎಕರೆ ಅರಣ್ಯ ಜಮೀನು ಒತ್ತುವರಿಯಾಗಿದ್ದು, ಈವರೆಗೆ 400 ಎಕರೆ ಜಮೀನಿನ ಒತ್ತುವರಿ ತೆರವುಗೊಳಿಸಲಾಗಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಬಿಜೆಪಿಯ ಎಂ. ಸತೀಶ್ ರೆಡ್ಡಿ ಅವರ ಪ್ರಶ್ನೆಗೆ ಗುರುವಾರ ಉತ್ತರಿಸಿದ ಸಚಿವರು, 'ಬೆಂಗಳೂರಿನಲ್ಲಿ ಕೆಲವೇ ವರ್ಷಗಳಿಂದ ಈಚೆಗೆ 500 ಹೆಕ್ಟೇರ್ ಅರಣ್ಯ ಪ್ರದೇಶ ಕಡಿಮೆಯಾಗಿದೆ. ಇದು ಕೂಡ ನಗರದಲ್ಲಿ ಮಾನವ–ವನ್ಯಜೀವಿ ಸಂಘರ್ಷ ಉಂಟಾಗಲು ಕಾರಣ' ಎಂದರು.

ನಗರದಲ್ಲಿ ಕಾಡಾನೆಗಳು ಜನವಸತಿ ಪ್ರದೇಶಕ್ಕೆ ಪ್ರವೇಶಿಸುವುದನ್ನು ತಪ್ಪಿಸಲು ಆನೆ ಕಾರ್ಯಪಡೆ ರಚಿಸಲಾಗಿದೆ. ಕಗ್ಗಲೀಪುರ, ಆನೇಕಲ್, ಯಲಹಂಕ, ಹೊಸಕೋಟೆ, ಕೆ.ಆರ್. ಪುರ ಮತ್ತಿತರ ಪ್ರದೇಶಗಳಲ್ಲಿ ಚಿರತೆಗಳು ಜನವಸತಿ ಪ್ರದೇಶಕ್ಕೆ ಪ್ರವೇಶಿಸಿ, ಸಮಸ್ಯೆ ಉಂಟಾಗುವುದನ್ನು ತಪ್ಪಿಸಲು ಚಿರತೆ ಕಾರ್ಯಪಡೆಯನ್ನೂ ರಚಿಸಲಾಗಿದೆ. ಈ ಕಾರ್ಯಪಡೆಗೆ 59 ಸಿಬ್ಬಂದಿ ಒದಗಿಸಲಾಗಿದೆ ಎಂದು ತಿಳಿಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೂಡ್ಲುವಿನಲ್ಲಿ ಇತ್ತೀಚೆಗೆ ಚಿರತೆಯೊಂದು ಜನವಸತಿ ಪ್ರದೇಶಕ್ಕೆ ಬಂದಿತ್ತು. ಅದನ್ನು ಸೆರೆ ಹಿಡಿಯಲು ಪ್ರಯತ್ನಿಸಲಾಗಿತ್ತು. ಕಾರ್ಯಾಚರಣೆ ವೇಳೆ ನಾಲ್ವರಿಗೆ ಗಾಯಗೊಳಿಸಿತ್ತು. ಅನಿವಾರ್ಯವಾಗಿ ಗುಂಡಿಕ್ಕಲಾಯಿತು. ಚಿಕಿತ್ಸೆಗೆ ಕೊಂಡೊಯ್ಯುವಾಗ ಅದು ಮೃತಪಟ್ಟಿತ್ತು ಎಂದರು.

ಬಿಜೆಪಿಯ ಎಂ. ಕೃಷ್ಣಪ್ಪ, ಎಸ್. ಆರ್. ವಿಶ್ವನಾಥ್, ಬಿ. ಸುರೇಶ್ ಗೌಡ ಸೇರಿದಂತೆ ಹಲವರು, ವನ್ಯಜೀವಿಗಳು ಜನವಸತಿ ಪ್ರದೇಶ ಪ್ರವೇಶಿಸದಂತೆ ತಡೆಯಲು ಆಗ್ರಹಿಸಿದರು.

ಚಿರತೆ ಸೆರೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದವರ ಚಿಕಿತ್ಸೆ ಹಾಗೂ ಅಗತ್ಯ ಉಪಕರಣ ಖರೀದಿಗೆ ತಾವು ₹ 2 ಲಕ್ಷ ದೇಣಿಗೆ ನೀಡಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ತಿರಸ್ಕರಿಸಿದ್ದಾರೆ ಎಂದು ಸತೀಶ್ ರೆಡ್ಡಿ ತಿಳಿಸಿದರು. ದೇಣಿಗೆಯನ್ನು ಸ್ವೀಕರಿಸುವುದಾಗಿ ಖಂಡ್ರೆ ಭರವಸೆ ನೀಡಿದರು.

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018

ದೂರವಾಣಿ: 26678572 / 26600512 / 26609066. E-mail : hrd@bccbl.co.in : Web : www.bccbl.co.in

ಕರ್ನಾಟಕ ರಾಜ್ಯದ ಅತ್ಯುನ್ನತ ಪಟ್ಟಣ ಸಹಕಾರಿ ಬ್ಯಾಂಕ್, 117 ವರ್ಷಗಳಿಗೂ ಮೀರಿ ಠೇವಣಿದಾರರ ನಂಬಿಕೆ ಉಳಿಸಿಕೊಂಡಿರುವ ಬೆಂಗಳೂರು ನಗರ, ಮೈಸೂರು ಮತ್ತು ರಾಮನಗರ ಒಳಗೊಂಡಂತೆ 22 ಶಾಖೆಗಳನ್ನು ಹೊಂದಿರುವ ನಮ್ಮ ಬ್ಯಾಂಕಿನ

ಸಂಜಯನಗರ ಶಾಖೆಯ ನೂತನ ATM ಉದ್ಘಾಟನೆ

ದಿನಾಂಕ: 08-12-2023ನೇ ಶುಕ್ರವಾರ, ಬೆಳಿಗ್ಗೆ 10:00 ಗಂಟೆಗೆ

ಸ್ಥಳ:- ನಂ. 4ಎ, ಗೆದ್ದಲಹಳ್ಳಿ ಮುಖ್ಯರಸ್ತೆ, ರಾಜ್‌ಮಹಲ್ ವಿಲಾಸ್, 2ನೇ ಹಂತ, ಸಂಜಯನಗರ, ಬೆಂಗಳೂರು-560094.

ಫೋನ್: 080-23414135 / 9342781408

ಒಟ್ಟು ವ್ಯವಹಾರ ₹ 3,713 ಕೋಟಿಗಳಿಗೂ ಮೀರಿದ ಬ್ಯಾಂಕ್

ಒಟ್ಟು ಷೇರು ಬಂಡವಾಳ, ಆಪದ್ಧನ ಮತ್ತು ಇತರೆ ಸ್ವಂತ ನಿಧಿಗಳು ರೂ.540.51 ಕೋಟಿ

ಒಟ್ಟು ಠೇವಣಾತಿಗಳು ರೂ.2264.67 ಕೋಟಿಗಳು

ದುಡಿಯುವ ಬಂಡವಾಳ ರೂ.2805.18 ಕೋಟಿಗಳು

ಒಟ್ಟು ಗುಂತಾಯಗಳು ರೂ.1181.22 ಕೋಟಿಗಳು

ನಿವ್ವಳ ಲಾಭ ರೂ.28.29 ಕೋಟಿಗಳು (2022–23ನೇ ಸಾಲಿನಲ್ಲಿ)

CRAR 19.68%

ಆಡಿಟ್ ವರ್ಗೀಕರಣ "A"

ಚಿನ್ನಾಭರಣ ಸಾಲ ಬಡ್ಡಿದರ ವಾರ್ಷಿಕ ಶೇ. 8*

ಸಾಲದ ಮೇಲಿನ ಬಡ್ಡಿದರ ವಾರ್ಷಿಕ ಶೇ.9ರಿಂದ ಪ್ರಾರಂಭ

*ಷರತ್ತುಗಳು ಅನ್ವಯ

ಠೇವಣಿ ಬಡ್ಡಿ ದರಗಳು

ವಿವರಗಳು	ಠೇವಣಿದಾರರಿಗೆ	ಹಿರಿಯ ನಾಗರೀಕರಿಗೆ
07 ದಿನಗಳು ಮತ್ತು ಮೇಲ್ಪಟ್ಟು 29 ದಿನಗಳವರೆಗೆ	3.00%	3.00%
30 ದಿನಗಳು ಮತ್ತು ಮೇಲ್ಪಟ್ಟು 90 ದಿನಗಳವರೆಗೆ	4.25%	4.75%
91 ದಿನಗಳು ಮತ್ತು ಮೇಲ್ಪಟ್ಟು 180 ದಿನಗಳವರೆಗೆ	4.75%	5.25%
181 ದಿನಗಳು ಮತ್ತು ಮೇಲ್ಪಟ್ಟು 364 ದಿನಗಳವರೆಗೆ	6.25%	6.75%
365 ದಿನಗಳಿಗೆ (1 ವರ್ಷಕ್ಕೆ) ಮತ್ತು 2 ವರ್ಷಗಳವರೆಗೆ	7.50%	8.00%
2 ವರ್ಷಕ್ಕೂ ಮೇಲ್ಪಟ್ಟು 5 ವರ್ಷಗಳವರೆಗೆ	7.25%	7.75%
5 ವರ್ಷಕ್ಕೂ ಮೇಲ್ಪಟ್ಟು	6.75%	7.25%
ಸೊಸೈಟಿ ಮತ್ತು ಸಂಸ್ಥೆಯ ಠೇವಣಿಗಳಿಗೆ 365 ದಿನಗಳು	8.00%	

ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್.
ಸನ್ಮಾನ್ಯ ಅಧ್ಯಕ್ಷರು

ಡಾ|| ದೇವರಾಜ್ ಟಿ.ಎಂ.
ಮಾನ್ಯ ಉಪಾಧ್ಯಕ್ಷರು

ಬ್ಯಾಂಕಿನ ಆಡಳಿತ ಮಂಡಳಿ

ಶ್ರೀ ಆಂಜನಪ್ಪ, ನಿರ್ದೇಶಕರು
ಶ್ರೀ ಕೆ. ಕೃಷ್ಣಪ್ಪ, ನಿರ್ದೇಶಕರು
ಶ್ರೀ ಕೆ.ಸಿ. ಚಿಕ್ಕಣ್ಣಯ್ಯ, ನಿರ್ದೇಶಕರು
ಶ್ರೀ ಸಿ. ರಘುನಾಥ್, ನಿರ್ದೇಶಕರು
ಶ್ರೀ ಬಿ.ಆರ್. ನಾರಾಯಣಪ್ಪ, ನಿರ್ದೇಶಕರು
ಶ್ರೀ ಕೆ.ಪಿ. ಸುರೇಶ್, ನಿರ್ದೇಶಕರು
ಶ್ರೀ ಎನ್. ರಾಧಾಕೃಷ್ಣ, ನಿರ್ದೇಶಕರು
ಶ್ರೀಮತಿ ಎನ್. ಪಂಕಜ, ನಿರ್ದೇಶಕರು
ಶ್ರೀ ಬಸವರಾಜು, ನಿರ್ದೇಶಕರು
ಕು|| ಕೆ.ಪಿ. ಮೀನಾಕುಮಾರಿ, ನಿರ್ದೇಶಕರು
ಶ್ರೀಮತಿ ಜಿ.ಎಸ್. ವಿಜಯ, ನಿರ್ದೇಶಕರು
ಶ್ರೀ ಹನುಮದಾಸಯ್ಯ, ನಿರ್ದೇಶಕರು
ಶ್ರೀ ಟಿ.ವಿ. ಹನುಮಂತಪ್ಪ, ನಿರ್ದೇಶಕರು
ಶ್ರೀ ಕೆ. ಶಿವಣ್ಣ, ನಿರ್ದೇಶಕರು
ಶ್ರೀ ಬಿ. ಯತೀಶ್, ನಿರ್ದೇಶಕರು
ಶ್ರೀ ಪಿ. ಮಂಜುನಾಥ, ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

ಶಾಖೆಗಳು ಮತ್ತು ದೂರವಾಣಿ ಸಂಖ್ಯೆಗಳು

1	ಪ್ರಧಾನ ಕಛೇರಿ	26672751 /9342781401	12	ಆರ್.ಟಿ.ನಗರ	23650122 / 9342781412
2	ವಿಜಯನಗರ	23302005 /9342781402	13	ಜ್ಞಾನಜ್ಯೋತಿನಗರ	23240023 / 9342781413
3	ಜಯನಗರ 9ನೇ ಬ್ಲಾಕ್	22442389 / 9342781403	14	ಹೆಚ್.ಆರ್.ಬಿ.ಆರ್.ಲೇಔಟ್	25450087 / 9342781414
4	ಇಂದಿರಾನಗರ	25250194 / 9342781404	15	ಕೃಷ್ಣರಾಜಪುರಂ	25610409 / 9342781415
5	ಚಾಮರಾಜಪೇಟೆ ಪಶ್ಚಿಮ	26707349 / 9342781405	16	ರಾಮನಗರ ಟೌನ್	27271173 / 9342781416
6	ಶಾಂತಿನಗರ	22219211 / 9342781406	17	ಟಿ. ದಾಸರಹಳ್ಳಿ	28390222 / 9342781417
7	ಮಹಾಲಕ್ಷ್ಮೀಪುರ	23491120 / 9342781407	18	ಕುವೆಂಪುನಗರ (ಮೈಸೂರು)	0821-2490163 / 9342781418
8	ಸಂಜಯನಗರ	23414135 / 9342781408	19	ಹೊಸೂರು ರಸ್ತೆ ಎಲೆಕ್ಟ್ರಾನಿಕ್ ಸಿಟಿ	25744442 /9342781419
9	ಪದ್ಮನಾಭನಗರ	26890199 / 9342781409	20	ಯಲಹಂಕ	28561898/9342781420
10	ಕೋರಮಂಗಲ	25522721 / 9342781410	21	ಅಂಜನಾನಗರ	23288889/9342781421
11	ಆವಲಹಳ್ಳಿ	26420357 / 9342781411	22	ಕೋಣನಕುಂಟೆ	26321022/9342781422

ಸರ್ವರಿಗೂ ಆದರದ ಸ್ವಾಗತ

ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಆರೋಪ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಬಲಪ್ರಯೋಗ ಮಾಡಿರಬೇಕು ಅಥವಾ ಹಲ್ಲೆ ನಡೆಸಿರಬೇಕು. ಹಾಗಿದ್ದಾಗ ಮಾತ್ರ ಅದು ಅಪರಾಧ ಎನಿಸಿಕೊಳ್ಳುತ್ತದೆ' ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, ಪೊಲೀಸ್ ಅಧಿಕಾರಿಗಳ ವಿರುದ್ಧ ಅಸಂಸದೀಯ ಪದಗಳನ್ನು ಬಳಸಿದ ಮತ್ತು ಸರ್ಕಾರಿ ನೌಕರರ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪದಡಿ ಇಬ್ಬರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಿದೆ.

'ನಮ್ಮ ವಿರುದ್ಧ ಚನ್ನಪಟ್ಟಣ ಪೂರ್ವ ಠಾಣಾ ಪೊಲೀಸರು ದಾಖಲಿಸಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿ ಚನ್ನಪಟ್ಟಣದ ಸೈಯದ್ ಇಸಾ ಇಬ್ರಾಹಿಂ (69) ಮತ್ತು ಸೈಯದ್ ಮುಜಾಹಿದ್ ಮೆಹ್ದಿ (33) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸರ್ಕಾರಿ ನೌಕರರನ್ನು ಹಲ್ಲೆ ಅಥವಾ ಬಲ ಪ್ರಯೋಗದ ಮೂಲಕ ಅವರ ಕರ್ತವ್ಯ ನಿರ್ವಹಣೆಗೆ ತಡೆ ಒಡ್ಡಲಾಗಿದೆ ಎಂಬ ಆರೋಪವನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ಸಾಕ್ಷ್ಯಾಧಾರಗಳಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಅರ್ಜಿದಾರರ ಪರ ವಕೀಲ ಮೊಹಮದ್ ತಾಹಿರ್ ವಾದ ಮಂಡಿಸಿದರು.

ಪ್ರಕರಣವೇನು?: 'ರಾತ್ರಿ 11.30ರ ನಂತರವೂ ಹೋಟೆಲ್ ತೆರೆದಿದೆ' ಎಂಬ ಹಿನ್ನೆಲೆಯಲ್ಲಿ ಹೋಟೆಲ್ ನಡೆಸುತ್ತಿದ್ದ ಅರ್ಜಿದಾರರನ್ನು ಪೊಲೀಸರು ಪ್ರಶ್ನೆ ಮಾಡಿದ್ದರು. ಆಗ 'ಅರ್ಜಿದಾರರು ಪೊಲೀಸರನ್ನು ಅಸಂಸದೀಯ ಪದಗಳಿಂದ ನಿಂದಿಸಿದ್ದಾರೆ ಮತ್ತು ಪರಿಣಾಮ ಎದುರಿಸಬೇಕಾಗುತ್ತದೆ ಎಂಬುದಾಗಿ ಬೆದರಿಕೆ ಹಾಕಿದ್ದರು' ಎಂದು ಅವರ ವಿರುದ್ಧ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿತ್ತು. ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳಡಿ ಸಂಯಮ ಮೀರಿದ, ಅಪರಾಧಿಕ ಬಲ ಬಳಸಿದ, ಸರ್ಕಾರಿ ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯಲ್ಲಿ 2020ರಲ್ಲಿ ಎಫ್ಐಆರ್ ದಾಖಲಿಸಲಾಗಿತ್ತು. 2021ರ ಜನವರಿ 12ರಂದು ಚನ್ನಪಟ್ಟಣದ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಬೆಂಗಳೂರು ರೇಸ್

ನ್ಯೂಮಾ ಗೆಲ್ಲುವ ನಿರೀಕ್ಷೆ

ಧರ್ಮಪ್ರಕಾಶ ಎಲ್.ಎಸ್.ವೆಂಕಾಜಿ ರಾವ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನ್ಯೂಮಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಗ್ಲೋ ಇನ್ ದಿ ಡಾರ್ಕ್ 6, ಇಂಡಿಯನ್ ಬ್ಲೂಸ್ 4, ಟ್ವಿಂಕಲ್ ಫೀಟ್ 1
2ನೇ ರೇಸ್: ಇಸಾಬೆಲ್ 3, ಬೋಲ್ಡ್ ಆಕ್ಟ್ 1, ಚಿಲಿಲೇಡಿ 7
3ನೇ ರೇಸ್: ಓನ್ ಲೆಗಸಿ 7, ಏರ್‌ಕ್ರಾಫ್ಟ್ 3, ಟರ್ಕೋಮ್ಯಾನ್ 6
4ನೇ ರೇಸ್: ರೂಲಿಂಗ್ ಡೈನಾಸ್ಟಿ 2, ಶುಭಾಂಕರ್ 1
5ನೇ ರೇಸ್: ನ್ಯೂಮಾ 9, ಲೆದರ್ ಬ್ಯಾಕ್ 3, ದಿ ಗ್ರೇ ಗೆರಾನಿಯಮ್ 10
6ನೇ ರೇಸ್: ಎಕ್ಸಲೆಂಟ್ ರೇ 5, ಮೆರೂನ್ 1, ಪೆಲೂಷೆ 2
7ನೇ ರೇಸ್: ಮೆಗಾ ಸಕ್ಸಸ್ 3, ಸದರ್ನ್‌ಅರಿಸ್ಟೊಕ್ರಾಟ್ 4, ಸ್ಟಾರ್ ಸಿಟಿಜನ್ 7

ಉತ್ತಮ ಬೆಟ್: ಇಸಾಬೆಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಹವಾಮಾನ ಬದಲಾವಣೆ: ಹೆಚ್ಚುತ್ತಿರುವ ಪ್ರಕರಣಗಳು

ಡೆಂಗಿ: 15 ಸಾವಿರದ ಗಡಿಯತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲು–ಮಳೆ ಹಾಗೂ ಹವಾಮಾನ ಬದಲಾವಣೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಏರುತ್ತಲೇ ಇದ್ದು, ಒಟ್ಟು ಪ್ರಕರಣಗಳ ಸಂಖ್ಯೆ 15 ಸಾವಿರದ (14,955) ಗಡಿ ಸಮೀಪಿಸಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಒಂದು ತಿಂಗಳ ಅವಧಿಯಲ್ಲಿ 1,829 ಪ್ರಕರಣಗಳು ದೃಢಪಟ್ಟಿವೆ. ಈವರೆಗೆ ರಾಜ್ಯದ 31 ಜಿಲ್ಲೆಗಳಿಂದ 7,282 ಪ್ರಕರಣಗಳು ದೃಢಪಟ್ಟರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ 7,673 ಪ್ರಕರಣಗಳು ಖಚಿತಪಟ್ಟಿವೆ.

ರಾಜ್ಯದಲ್ಲಿ ಈಗಾಗಲೇ ಎರಡು ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ ಒಂದು ಲಕ್ಷಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣ ವರದಿಯಾಗಿವೆ. ಕಳೆದ ವರ್ಷ ರಾಜ್ಯದಲ್ಲಿ 9,620 ಮಂದಿ ಡೆಂಗಿ ಜ್ವರದಿಂದ ಬಳಲಿದ್ದರು. ಅವರಲ್ಲಿ ಒಂಬತ್ತು ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿರುವುದು ದೃಢಪಟ್ಟಿತ್ತು. ಈ ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಲ್ಕು ಸೇರಿ ಒಟ್ಟು ಒಂಬತ್ತು ಮಂದಿ ಮೃತಪಟ್ಟಿರುವುದು ಖಚಿತಪಟ್ಟಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 52,721 ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 33,326 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ಕಳೆದ ಒಂದು ತಿಂಗಳಲ್ಲಿ 839 ಮಂದಿಯಲ್ಲಿ ಡೆಂಗಿ ದೃಢಪಟ್ಟಿದೆ.

ಕಲಬುರಗಿಯಲ್ಲಿ 662, ಮೈಸೂರಿನಲ್ಲಿ 646, ಉಡುಪಿಯಲ್ಲಿ 635, ದಕ್ಷಿಣ ಕನ್ನಡದಲ್ಲಿ 492, ಶಿವಮೊಗ್ಗದಲ್ಲಿ 404, ತುಮಕೂರಿನಲ್ಲಿ 315 ಹಾಗೂ ಚಿತ್ರದುರ್ಗದಲ್ಲಿ 300 ಪ್ರಕರಣಗಳು ಖಚಿತಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 300ಕ್ಕಿಂತ ಕಡಿಮೆಯಿದೆ.

28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 60 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 31 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 1,481 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ಮೈಸೂರು (196), ವಿಜಯಪುರ (163), ಕಲಬುರಗಿ (132) ಹಾಗೂ ಶಿವಮೊಗ್ಗದಲ್ಲಿ (125) ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆಯಿದೆ.

ಪುಷ್ಪ ನಮನ

ಭಾರತೀಯ ಧಮ್ಮ ಫೌಂಡೇಷನ್ ಸದಾಶಿವನಗರದಲ್ಲಿರುವ ನಾಗಸೇನಾ ಬುದ್ಧವಿಹಾರದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ 'ಧಮ್ಮ ಚರ್ಚೆ' ಕಾರ್ಯಕ್ರಮಕ್ಕೆ (ಎಡದಿಂದ) ನಾಗಸೇನ ಬುದ್ಧವಿಹಾರ ಬಿಕ್ಕುಣಿ ಬುದ್ಧಮ್ಮ, ಥಾಯ್ಲೆಂಡ್ ಧಮ್ಮ ಅಧ್ಯಯನ ಮತ್ತು ಪ್ರತಿಷ್ಠಾನದ ಅಜಾನ್ ಸುಜಿನ್ ಬೋರಿಹನ್ವಾನಾಕೆಟ್, ಫೌಂಡೇಷನ್ ಅಧ್ಯಕ್ಷೆ ಆಶಾ, ಕಾರ್ಯಕ್ರಮದ ಆಯೋಜಕ ನಾಗರಾಜ್ ಮೌರ್ಯ ಅವರು ಗೌತಮ ಬುದ್ಧನ ಮೂರ್ತಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಗುರುವಾರ ಚಾಲನೆ ನೀಡಿದರು

ಸುದ್ದಿ 2 ನಿಮಿಷ

ಸಂಚಾರ ದಟ್ಟಣೆಯಲ್ಲಿ ಗಲಾಟೆ ಕಾರಿನ ಗಾಜು ಒಡೆದ ಸವಾರ

ಬೆಂಗಳೂರು: ಹೊರಮಾವು ಮೇಲ್ಸೇತುವೆ ಬಳಿ ವಾಹನಗಳ ದಟ್ಟಣೆ ನಡುವೆ ಗಲಾಟೆ ನಡೆದಿದ್ದು, ಬೈಕ್ ಸವಾರನೊಬ್ಬ ಕಾರಿನ ಗಾಜು ಒಡೆದು ಚಾಲಕನಿಗೆ ಜೀವ ಬೆದರಿಕೆಯೊಡ್ಡಿದ್ದಾನೆ.

ನ. 22ರಂದು ನಡೆದಿರುವ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸಿದ್ದ ಬಾಣಸವಾಡಿ ಠಾಣೆ ಪೊಲೀಸರು, ಕಾರು ಚಾಲಕ ಬರ್ನಾಡ್ ಅವರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಹೆಣ್ಣೂರು ನಿವಾಸಿ ಬರ್ನಾಡ್, ರಾತ್ರಿ 8.30 ಗಂಟೆ ಸುಮಾರಿಗೆ ತಮ್ಮ ಕಾರಿನಲ್ಲಿ ಹೊರಟಿದ್ದರು. ಹೊರಮಾವು ಮೇಲ್ಸೇತುವೆ ಬಳಿ ದಟ್ಟಣೆ ಇದ್ದಿದ್ದರಿಂದ ಕಾರು ನಿಲ್ಲಿಸಿದ್ದರು. ಕಾರಿನ ಎದುರು ದ್ವಿಚಕ್ರ ವಾಹನದಲ್ಲಿದ್ದ ಆರೋಪಿ, ದಟ್ಟಣೆಯಲ್ಲಿ ನುಸುಳಿಕೊಂಡು ಮುಂದಕ್ಕೆ ಹೋಗಲು ಪ್ರಯತ್ನಿಸಿದ್ದ. ಕಾರು ಇದ್ದಿದ್ದರಿಂದ ಅದು ಸಾಧ್ಯವಾಗಿರಲಿಲ್ಲ. ಇದರಿಂದಾಗಿ ಚಾಲಕನ ಮೇಲೆ ಆರೋಪಿ ಕೋಪಗೊಂಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದ್ವಿಚಕ್ರ ವಾಹನದಿಂದ ಇಳಿದುಬಂದಿದ್ದ ಆರೋಪಿ, ದೂರುದಾರ ಬರ್ನಾಡ್ ಮೇಲೆ ಹರಿಹಾಯ್ದಿದ್ದರು. ಕಾರಿನ ಮುಂಭಾಗದ ಗಾಜು ಪಡೆದು ಜೀವ ಬೆದರಿಕೆಯೊಡ್ಡಿ ಸ್ಥಳದಿಂದ ಪರಾರಿಯಾಗಿದ್ದಾರೆ. ವಿಡಿಯೊ ಆಧರಿಸಿ ಆರೋಪಿಯನ್ನು ಪತ್ತೆ ಮಾಡಲಾಗುತ್ತಿದೆ' ಎಂದು ತಿಳಿಸಿವೆ.

ಗ್ರಾಮಸಭೆಗೆ ಅಧಿಕಾರಿಗಳ ಗೈರು

ದಾಬಸ್ ಪೇಟೆ: ಸೋಂಪುರ ಹೋಬಳಿಯ ಹೊನ್ನೇನಹಳ್ಳಿ ಗ್ರಾಮ ಪಂಚಾಯಿತಿಯ 2023-24ನೇ ಸಾಲಿನ ಗ್ರಾಮಸಭೆ ಹಾಗೂ ಮಕ್ಕಳ ಗ್ರಾಮಸಭೆಗೆ ಬಹುತೇಕ ಅಧಿಕಾರಿಗಳು ಗೈರಾಗಿದ್ದರು.

29 ಇಲಾಖೆಗಳ ಪೈಕಿ ಕೇವಲ 6 ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು. ಸಾರ್ವಜನಿಕರ ಸಂಖ್ಯೆಯೂ ಕಡಿಮೆ ಇತ್ತು. ವೀರಸಾಗರ, ಹೊನ್ನೇನಹಳ್ಳಿಯ ಹಾಗೂ ಗೊಲ್ಲರಹಟ್ಟಿ ಶಾಲೆಯ ಮಕ್ಕಳು, ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

'ಗ್ರಾಮಸಭೆ ಹಾಗೂ ಮಕ್ಕಳ ಗ್ರಾಮಸಭೆಗೆ ಸಾವಿರಾರು ರೂಪಾಯಿ ಹಣ ಖರ್ಚಾಗುತ್ತದೆ. ಅದು ಸದ್ಬಳಕೆಯಾಗುತ್ತಿಲ್ಲ. ಗ್ರಾಮಸಭೆಯ ಬಗ್ಗೆ ಸರಿಯಾದ ಪ್ರಚಾರ ನಡೆಸಬೇಕು, ಅಧಿಕಾರಿಗಳನ್ನು ಕರೆಸಬೇಕು. ಆಗ ಜನರು ಸೇರುತ್ತಾರೆ. ಇಲ್ಲವಾದರೆ ಗ್ರಾಮಸಭೆ ಮಾಡಿ ಏನು ಪ್ರಯೋಜನ' ಎಂದು ವೀರಸಾಗರ ಗ್ರಾಮಸ್ಥ ನರಸಿಂಹಯ್ಯ ಪ್ರಶ್ನಿಸಿದರು.

ಪಂಚಾಯಿತಿ ಆಡಳಿತ ವರ್ಷಕ್ಕೆ ಎರಡು ಬಾರಿ ಗ್ರಾಮಸಭೆ ಮಾಡಬೇಕು. ರೈತರು ಹೊಲದ ಕೆಲಸ ಕಾರ್ಯಗಳಲ್ಲಿ ನಿರತರಾಗಿರುವ ಸಮಯದಲ್ಲಿ ಗ್ರಾಮಸಭೆ ಮಾಡಿದರೆ ಯಾರೂ ಬರುವುದಿಲ್ಲ ಎಂದು ಭಾನುಪ್ರಕಾಶ್ ತಿಳಿಸಿದರು.

ಸಿರಿಧಾನ್ಯ ಮೇಳ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಇದೇ 9ರಿಂದ 11ರವರೆಗೆ ಮೂರು ದಿನಗಳ 'ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ' ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, 'ಶ್ರೀಶ್ರೀ ರವಿಶಂಕರ್ ಗುರೂಜಿ ಅವರ ಸಾನ್ನಿಧ್ಯದಲ್ಲಿ ಸಿರಿಧಾನ್ಯಗಳ ಕುರಿತು ನಡೆಯುವ ಚಿಂತನ–ಮಂಥನ ಗೋಷ್ಠಿ ನಡೆಯಲಿದೆ. ಗೋಷ್ಠಿಯಲ್ಲಿ ದೇಶ–ವಿದೇಶಗಳ ಗಣ್ಯರು ಭಾಗಿಯಾಗಲಿದ್ದಾರೆ' ಎಂದು ತಿಳಿಸಿದರು.

'ಸಂಸ್ಕರಿತ ಸಿರಿಧಾನ್ಯಗಳ ಪ್ರದರ್ಶನ ಮತ್ತು ಮಾರಾಟ ಸೇರಿದಂತೆ, ಮೇಳದಲ್ಲಿ 180ಕ್ಕೂ ಹೆಚ್ಚು ಮಳಿಗೆಗಳು ತೆರೆಯಲಾಗುವುದು. ಜೊತೆಗೆ ಕೃಷಿ ವಿಜ್ಞಾನಿಗಳು ಮತ್ತು ರೈತರ ನಡುವೆ ಸಂವಾದವೂ ನಡೆಯಲಿದೆ. ಸಿರಿಧಾನ್ಯಗಳನ್ನು ಸಂಸ್ಕರಿಸುವ ಆಧುನಿಕ ಯಂತ್ರೋಪಕರಣ ಪ್ರದರ್ಶನವೂ ಮೇಳದಲ್ಲಿರಲಿದೆ' ಎಂದರು.

ವಿಶ್ವ ಸಿರಿಧಾನ್ಯಗಳ ಮೇಳದ ಅಂಗವಾಗಿ ನಗರದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿವಿಧ ತಳಿಯ ಸಿರಿಧಾನ್ಯಗಳನ್ನು ಪ್ರದರ್ಶಿಸಲಾಯಿತು. (ಎಡದಿಂದ) ಬಿ.ಬೋರಯ್ಯ, ಎಸ್‌ವಿ. ಸುರೇಶ್, ರಂಗನಾಥ್ ಪ್ರಸಾದ್ ಮತ್ತು ಉದಯ ಕುಮಾರ ಕೊಳ್ಳಿಮಠ, ನಾಗರಾಜ ಟಿ. ಈ. ಪಾಲ್ಗೊಂಡಿದ್ದರು

ಇದೇ 9ರಂದು ಕೃಷಿ ಸಚಿವ ಚಲುವರಾಯಸ್ವಾಮಿ ಮೇಳವನ್ನು ಉದ್ಘಾಟಿಸಲಿದ್ದಾರೆ. ಡಿ. 10ರಂದು ನಡೆಯುವ 'ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ'ಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಮಟ್ಟದ ವಿಚಾರಸಂಕಿರಣವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಲಿದ್ದಾರೆ. ಮೇಳಕ್ಕೆ ಉಚಿತ ಪ್ರವೇಶವಿದ್ದು, ರೈತರು ಸೇರಿದಂತೆ ಎಲ್ಲರೂ ಭಾಗವಹಿಸಬಹುದು' ಎಂದು ತಿಳಿಸಿದರು.

ಜಿಕೆವಿಕೆಯ ಸಾವಯವ ಕೃಷಿ ಸಂಶೋಧನಾ ವಿಭಾಗದ ಮುಖ್ಯಸ್ಥ ಬಿ. ಬೋರಯ್ಯ, ಅಖಿಲ ಭಾರತೀಯ ಸುಸಂಘಟಿತ ಸಂಶೋಧನಾ ಪ್ರಾಯೋಜನದ ಮುಖ್ಯಸ್ಥ ನಾಗರಾಜ ಟಿ. ಈ., ಶ್ರೀ ಶ್ರೀ ನೈಸರ್ಗಿಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಂಗನಾಥ್ ಪ್ರಸಾದ್ ಮತ್ತು ಉದಯ ಕುಮಾರ ಕೊಳ್ಳಿಮಠ ಇದ್ದರು.

ಪಿಎಸ್ಐ ಹಗರಣ ತಡೆಯಾಜ್ಞೆ ತೆರವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದ್ದ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ವಿರುದ್ಧ ತನಿಖೆಗೆ ನೀಡಿದ್ದ ತಡೆಯಾಜ್ಞೆಯನ್ನು ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠವು ಗುರುವಾರ ತೆರವುಗೊಳಿಸಿದೆ.

ರಾಜ್ಯದ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ತನ್ನ ವಿರುದ್ಧ ದಾಖಲಾದ ಪ್ರಕರಣಗಳನ್ನು ವಿಲೀನಗೊಳಿಸಿ ಒಂದೇ ಕಡೆ ವಿಚಾರಣೆ ನಡೆಸಬೇಕು. ಅಲ್ಲಿಯವರೆಗೆ ತನ್ನ ವಿರುದ್ಧದ ವಿಚಾರಣೆಗೆ ತಡೆ ನೀಡಬೇಕು ಎಂದು ಆರ್.ಡಿ. ಪಾಟೀಲ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದ್ದ ನ್ಯಾಯಪೀಠವು, ಕಳೆದ ಏಪ್ರಿಲ್ 17ರಂದು ತಡೆಯಾಜ್ಞೆ ನೀಡಿ ವಿಚಾರಣೆಯನ್ನು ಮುಂದೂಡಿತ್ತು.

ಗುರುವಾರ ವಿಚಾರಣೆಯನ್ನು ಕೈಗೆತ್ತಿಕೊಂಡ ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ನ್ಯಾಯಪೀಠವು, ಆರ್.ಡಿ. ಪಾಟೀಲ ವಿರುದ್ಧದ ವಿಚಾರಣೆಗೆ ವಿಧಿಸಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿತು. ಎಲ್ಲ ಎಫ್‌ಐಆರ್‌ಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಒಂದೇ ಕಡೆ ವಿಚಾರಣೆ ನಡೆಸುವುದು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠವು, ಆಯಾ ಜಿಲ್ಲೆಗಳಲ್ಲಿ ದಾಖಲಾದ ಎಲ್ಲ ಎಫ್‌ಐಆರ್‌ಗಳ ತನಿಖೆಯನ್ನು ಒಂದೇ ನ್ಯಾಯಾಲಯದಲ್ಲಿ ನಡೆಸುವಂತೆ ಸೂಚಿಸಿತು.

ಬಿಜೆಪಿ ಸಂಸದೀಯ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ

'ಆಡಳಿತಕ್ಕೆ ಜನರ ಪ್ರಾಶಸ್ತ್ಯದ ಆಯ್ಕೆ ಬಿಜೆಪಿ'

ನವದೆಹಲಿ (ಪಿಟಿಐ): 'ದೇಶದಲ್ಲಿ ಆಡಳಿತ ನಡೆಸಲು ಸೂಕ್ತ ಎಂದು ಜನರು ಭಾವಿಸುವ ಪಕ್ಷ ಬಿಜೆಪಿ. ಅಧಿಕಾರವನ್ನು ಉಳಿಸಿಕೊಳ್ಳುವ ಪಕ್ಷದ ದಾಖಲೆಯು ಕಾಂಗ್ರೆಸ್ ಮತ್ತು ಇತರೆ ಪಕ್ಷಗಳಿಗಿಂತಲೂ ಉತ್ತಮವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಗುರುವಾರ ಈ ಮಾತು ಹೇಳಿರುವ ಪ್ರಧಾನಿ ಮೋದಿ, ತಮ್ಮ ಮಾತಿಗೆ ಸಮರ್ಥನೆಯಾಗಿ ಕಳೆದ ಒಂದು ದಶಕದ ಅವಧಿಯ ಚುನಾವಣಾ ಫಲಿತಾಂಶ ಅಂಕಿ–ಅಂಶಗಳನ್ನು ಉಲ್ಲೇಖಿಸಿದರು.

'ಐದು ರಾಜ್ಯಗಳಲ್ಲಿ ಈಚೆಗೆ ನಡೆದ ಚುನಾವಣೆಯ ಪಕ್ಷದ ಸಾಧನೆಯ ಹಿರಿಮೆ ಒಬ್ಬ ನಾಯಕನಿಗೆ ಅಲ್ಲ, ಒಂದು ತಂಡವಾಗಿ ಪಕ್ಷಕ್ಕೇ ಸಲ್ಲಬೇಕು. ಮೂರು ರಾಜ್ಯಗಳಲ್ಲಿ ಗೆಲುವಿನ ಜೊತೆಗೆ ಎರಡು ರಾಜ್ಯಗಳಲ್ಲಿ ಪಕ್ಷ ಅಸ್ತಿತ್ವವನ್ನು ಬಲಪಡಿಸಿಕೊಂಡಿದೆ ಎಂದರು' ಎಂದು ಮೂಲಗಳು ತಿಳಿಸಿವೆ.

'ಜನಸಮೂಹದ ಜೊತೆಗೆ ಮಾತನಾಡುವಾಗ ಅವರು ಬಯಸುವ, ಅವರಿಗೆ ಇಷ್ಟವಾಗುವ ಭಾಷೆಯಲ್ಲೇ ಮಾತನಾಡಿ ಎಂದು ಮುಖಂಡರಿಗೆ ಮೋದಿ ಸಲಹೆ ಮಾಡಿದರು. ಉದಾಹರಣೆಯಾಗಿ 'ಮೋದಿ ಜೀ ಕಿ ಗ್ಯಾರಂಟಿ' ಬದಲಿಗೆ 'ಮೋದಿ ಕೀ ಗ್ಯಾರಂಟಿ' ಎಂದೇ ಬಳಸಿ ಎಂದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಸಚಿವ ಪ್ರಲ್ಹಾದ ಜೋಶಿ, ಪ್ರಧಾನಿಯವರ ಮಾತು ಉಲ್ಲೇಖಿಸಿ 'ಅಧಿಕಾರದಲ್ಲಿ ಇರುವಂತೆಯೇ ರಾಜ್ಯ ವಿಧಾನಸಭೆಗಳ ಚುನಾವಣೆಯನ್ನು ಕಾಂಗ್ರೆಸ್ 40 ಬಾರಿ ಎದುರಿಸಿದೆ. 7 ಬಾರಿಯಷ್ಟೆ ಗೆದ್ದಿದೆ. ಸಾಧನೆ ಪ್ರಮಾಣ ಶೇ 18ರಷ್ಟು. ಆದರೆ, ಬಿಜೆಪಿಯು ಒಟ್ಟು 39 ಬಾರಿ ಚುನಾವಣೆ ಎದುರಿಸಿದೆ. 22 ಬಾರಿ ಅಧಿಕಾರವನ್ನು ಉಳಿಸಿಕೊಂಡಿದೆ. ಪಕ್ಷದ ಗೆಲುವಿನ ಸಾಧನೆ ಶೇ 56ರಷ್ಟು. ಕಾಂಗ್ರೆಸ್ ಪಕ್ಷಕ್ಕಿಂತ ಪ್ರಾದೇಶಿಕ ಪಕ್ಷಗಳ ಸಾಧನೆಯೇ ಉತ್ತಮವಾಗಿದೆ' ಎಂದು ಮೋದಿ ಹೇಳಿದರು' ಎಂದು ಜೋಶಿ ವಿವರಿಸಿದರು.

'ಸತತ ಎರಡು ಅವಧಿಗೆ ಅಧಿಕಾರ ನಡೆಸಿ ಚುನಾವಣೆ ಎದುರಿಸಿದ ಸಂದರ್ಭದಲ್ಲಿ ಅಧಿಕಾರ ಉಳಿಸಿಕೊಂಡಿರುವ ಕಾಂಗ್ರೆಸ್‌ನ ಸಾಧನೆ ಶೇ 14ರಷ್ಟಿದ್ದರೆ, ಬಿಜೆಪಿ ಸಾಧನೆ ಶೇ 59ರಷ್ಟಾಗಿದೆ. ಇದರರ್ಥ ಆಡಳಿತಕ್ಕೆ ಬಿಜೆಪಿಯೇ ಸೂಕ್ತ ಎಂದು ಜನ ಭಾವಿಸಿದ್ದಾರೆ' ಎಂದು ಹೇಳಿದರು.

ನನ್ನ ಪ್ರಕಾರ, ನಾಲ್ಕು ಅತಿದೊಡ್ಡ 'ಜಾತಿ'ಗಳೆದರೆ ಬಡವರು, ರೈತರು, ಯುವಜನರು ಮತ್ತು ಮಹಿಳೆಯರು. ಪಕ್ಷದ ಮುಖಂಡರು ಈ ನಾಲ್ಕು ವರ್ಗದವರ ಏಳಿಗೆಗಾಗಿ ಕಾರ್ಯನಿರ್ವಹಿಸಬೇಕು. ಜನಕಲ್ಯಾಣ ಕಾರ್ಯಕ್ರಮಗಳನ್ನು ಅವರಿಗೆ ತಲುಪಿಸಬೇಕು ಎಂದು ಸಲಹೆ ಮಾಡಿದರು.

ಇದಕ್ಕೂ ಮೊದಲು ಬಿಜೆಪಿ ಸಂಸದೀಯ ಪಕ್ಷದ ಸಭೆಗೆ ಬಂದ ಮೋದಿಯವರಿಗೆ ಸಂಸದರು ಎದ್ದುನಿಂತು ಬರಮಾಡಿಕೊಂಡರು. ಸಂಸದರು ನಾಯಕರ ಪರವಾಗಿ ಘೋಷಣೆಗಳನ್ನು ಕೂಗಿದರು. ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪ್ರಧಾನಿಯವರನ್ನು ಸನ್ಮಾನಿಸಿದರು.

ನವದೆಹಲಿಯಲ್ಲಿ ಗುರುವಾರ ನಡೆದ ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಪ್ರಧಾನಿ ಮೋದಿ ಅವರನ್ನು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಸನ್ಮಾನಿಸಿ ನಮಸ್ಕರಿಸಿದರು. ಕೇಂದ್ರ ಸಚಿವರಾದ ಸರ್ಬಾನಂದಾ ಸೊನೊವಾಲ್, ನಿತಿನ್ ಗಡ್ಕರಿ, ಅಮಿತ್ ಶಾ ಭಾಗವಹಿಸಿದ್ದರು –ಪಿಟಿಐ ಚಿತ್ರ

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ನಾಳೆಯಿಂದ ನಮ್ಮ ಜಾತ್ರೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರದರ್ಶಕ ಹಾಗೂ ಲಲಿತಕಲೆಗಳ ಗುಂಪು ಕಾದಂಬರಿ ಜಂಟಿಯಾಗಿ ಇದೇ 9 ಮತ್ತು 10ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಮ್ಮ ಜಾತ್ರೆ ಹಮ್ಮಿಕೊಂಡಿವೆ.

'ಅನ್ ಬಾಕ್ಸಿಂಗ್ ಬಿಎಲ್‌ಆರ್ ಹಬ್ಬ'ದ ಅಡಿ ಈ ಜಾತ್ರೆ ಆಯೋಜಿಸಲಾಗುತ್ತಿದೆ. ಶನಿವಾರ ಬೆಳಿಗ್ಗೆ 10 ಗಂಟೆಗೆ ವಿಧಾನಸೌಧದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಕಲಾ ತಂಡಗಳ ಮೆರವಣಿಗೆ ನಡೆಯಲಿದೆ. ಆನೆ, ರಥ, ಹೂವಿನ ಪಲ್ಲಕ್ಕಿ ಹಾಗೂ ಎತ್ತಿನಗಾಡಿಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಎರಡು ದಿನಗಳ ಜಾತ್ರೆ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದೆ.

ಎರಡು ದಿನಗಳ ಈ ಜಾತ್ರೆಯು ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದೆ. ನೈಜ ಜಾನಪದ ಸಂಪ್ರದಾಯವನ್ನು ಈ ಜಾತ್ರೆಯಲ್ಲಿ ಅನುಭವಿಸಬಹುದಾಗಿದೆ. ಎರಡು ನೂರು ಕಲಾವಿದರಿಂದ ಜಾನದಪ ನೃತ್ಯ ಪ್ರದರ್ಶನ ನಡೆಯಲಿದೆ. ಕರಕುಶಲ ಮಳಿಗೆಗಳು ಜಾತ್ರೆಯಲ್ಲಿ ಇರಲಿದ್ದು, ತಯಾರಕರಿಂದ ನೇರವಾಗಿ ಕರಕುಶಲ ವಸ್ತುಗಳನ್ನು ಖರೀದಿಸಬಹುದು. ಉಚಿತವಾಗಿ ಎತ್ತಿನ ಗಾಡಿಯ ಸವಾರಿಯನ್ನೂ ಅನುಭವಿಸಬಹುದು.

ಸಂಜೆ 6 ಗಂಟೆಯಿಂದ ಸಂಸ ಬಯಲು ರಂಗಮಂದಿರದಲ್ಲಿ ಬೊಂಬೆಯಾಟ, ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ ಪ್ರದರ್ಶನಗಳು ನಡೆಯಲಿವೆ. ನಮ್ಮ ಹಳ್ಳಿ ಜೀವನದ ಈ ಜಾತ್ರೆಗೆ ಪ್ರವೇಶ ಉಚಿತ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತೀಯರಿಗೆ ಮರಣದಂಡನೆ: 3ನೇ ವಿಚಾರಣೆ ಶೀಘ್ರ

ನವದೆಹಲಿ: ಕತಾರ್‌ನಲ್ಲಿ ಮರಣ ದಂಡನೆ ಶಿಕ್ಷೆಗೆ ಗುರಿಯಾಗಿರುವ ಭಾರತೀಯ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳು ತೀರ್ಪು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿ ಕುರಿತು ಕತಾರ್‌ನ ನ್ಯಾಯಾಲಯವು ಮೂರನೇ ವಿಚಾರಣೆಯನ್ನು ಶೀಘ್ರದಲ್ಲೇ ನಡೆಸಲಿದೆ.

'ಮುಂದಿನ ವಿಚಾರಣೆ ಶೀಘ್ರದಲ್ಲೇ ನಡೆಯುವುದಾಗಿ ಭಾವಿಸಿದ್ದೇನೆ. ನಾವು ಈ ಪ್ರಕರಣವನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕತಾರ್‌ನಲ್ಲಿ ಸೆರೆಯಲ್ಲಿರುವ ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಅಧಿಕಾರಿಗಳಿಗೆ ಎಲ್ಲ ರೀತಿಯ ಕಾನೂನು ಮತ್ತು ರಾಜತಾಂತ್ರಿಕ ನೆರವು ಒದಗಿಸಲಾಗುವುದು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಗುರುವಾರ ನವದೆಹಲಿಯಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಕತಾರ್ ಸರ್ಕಾರವು ಅನುಮತಿ ನೀಡಿದ ನಂತರ ಭಾರತದ ರಾಯಭಾರಿ ವಿಪುಲ್ ಅವರು, ಬಂಧಿತ ಎಂಟೂ ಮಂದಿಯನ್ನು ದೋಹಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಭೇಟಿ ಮಾಡಿದ್ದರು.

ಕುಡುಪು ದೇವಸ್ಥಾನದ ಷಷ್ಠಿ ಮಹೋತ್ಸವ

ಹಿಂದೂಯೇತರರ ವ್ಯಾಪಾರಕ್ಕೆ ಅವಕಾಶ ನಿರಾಕರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಮೀಪದ ಕುಡುಪು ಶ್ರೀಅನಂತ ಪದ್ಮನಾಭ ದೇವಸ್ಥಾನದಲ್ಲಿ ಷಷ್ಠಿ ಮಹೋತ್ಸವದ ಪ್ರಯುಕ್ತ ಇದೇ 14ರಿಂದ 19ವರೆಗೆ ಜಾತ್ರೆ ನಡೆಯಲಿದ್ದು, ಇದರ ವ್ಯಾಪಾರದಲ್ಲಿ ಹಿಂದೂಯೇತರರಿಗೆ ಅವಕಾಶ ಕಲ್ಪಿಸಿಲ್ಲ ಎಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಜಾತ್ರೆ ವ್ಯಾಪಾರಿಗಳ ಸಮನ್ವಯ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

'ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಕುಡುಪು ದೇವಸ್ಥಾನದ ಷಷ್ಠಿ ಜಾತ್ರೋತ್ಸವದ ಸಂದರ್ಭದಲ್ಲಿ ದೇವಸ್ಥಾನದ ಪ್ರಾಂಗಣದ ಹೊರಗಡೆ ಸಂತೆ ವ್ಯಾಪಾರ ನಡೆಯುತ್ತದೆ. ಇಲ್ಲೂ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸುವಾಗ ಧಾರ್ಮಿಕ ತಾರತಮ್ಯ ನಡೆಸಲಾಗುತ್ತಿದೆ. ಜಾತ್ರೆಗಳನ್ನೇ ನಂಬಿ ಬದುಕುವ ಬಡ ಸಂತೆ ವ್ಯಾಪಾರಿಗಳ ಬದುಕುವ ಹಕ್ಕನ್ನು ರಕ್ಷಿಸಲು ಮತ್ತೆ ಜಿಲ್ಲಾಡಳಿತ ವಿಫಲ ಆಗಿದೆ' ಎಂದು ಸಮನ್ವಯ ಸಮಿತಿಯ ಸಂಚಾಲಕ ಬಿ.ಕೆ. ಇಮ್ತಿಯಾಜ್ ಆರೋಪಿಸಿದರು.

'ನಿರ್ದಿಷ್ಟ ವ್ಯಕ್ತಿಗಳಿಗೆ ಮಾತ್ರ ಇಲ್ಲಿ ಟೆಂಡರ್ ನೀಡಲಾಗುತ್ತಿದೆ. ಅವರು ಹಿಂದೂಯೇತರರಿಗೆ ವ್ಯಾಪಾರಿ ಮಳಿಗೆಗಳನ್ನು ಹಾಕಲು ಅವಕಾಶ ನೀಡುವುದಿಲ್ಲ' ಎಂದು ಅವರು ದೂರಿದರು. ಈ ವಿಷಯವಾಗಿ ಅವರು ಜಿಲ್ಲಾಧಿಕಾರಿಗೆ ದೂರು ನೀಡಿದ್ದಾರೆ.

'ದೇವಸ್ಥಾನದ ಷಷ್ಠಿ ಮಹೋತ್ಸವ ಸಂದರ್ಭದಲ್ಲಿ ಮಳಿಗೆಗಳನ್ನು ಹಾಕಿ ಜಾತ್ರೆ ವ್ಯಾಪಾರ ನಡೆಸುವುದಕ್ಕೆ ಪ್ರತಿ ವರ್ಷದಂತೆಯೇ ಈ ವರ್ಷವೂ ಟೆಂಡರ್ ಕರೆದೇ ಜಾಗ ಒದಗಿಸಿದ್ದೇವೆ. ಡಿ.5ರಂದು ನಡೆದ ಹರಾಜಿನಲ್ಲಿ ಐವರು ಭಾಗವಹಿಸಿದ್ದರು. ಹೆಚ್ಚು ಮೊತ್ತ ನೀಡಿದವರಿಗೆ ಮಳಿಗೆ ಹಾಕಲು ಜಾಗ ಒದಗಿಸಿದ್ದೇವೆ. ನವೀನ್ ಎಂಬುವವರು ₹ 1.15 ಲಕ್ಷ ಮೊತ್ತಕ್ಕೆ ಟೆಂಡರ್ ವಹಿಸಿಕೊಂಡಿದ್ದಾರೆ. ಹಿಂದಿನಿಂದಲೂ ಹಿಂದೂಯೇತರ ವ್ಯಾಪಾರಿಗಳಿಗೆ ಇಲ್ಲಿ ಮಳಿಗೆ ಹಾಕಲು ಅವಕಾಶ ನೀಡುತ್ತಿರಲಿಲ್ಲ. ಈ ವರ್ಷವೂ ಟೆಂಡರ್ ನೋಟಿಸ್‌ನಲ್ಲೂ ಇದನ್ನು ಸ್ಪಷ್ಟಪಡಿಸಲಾಗಿತ್ತು' ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಪ್ರವೀಣ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಇದೇ 17 ಮತ್ತು 18ರಂದು ಕುಡುಪು ಅನಂತ ಪದ್ಮನಾಭ ದೇವಸ್ಥಾನದಲ್ಲಿ ಷಷ್ಠಿ ಮಹೋತ್ಸವ ನಡೆಯುತ್ತದೆ. ಇದೇ 14ರಿಂದ 19ರವರೆಗೂ ಈ ದೇವಸ್ಥಾನಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಾರೆ.

ವಿಎಚ್‌ಪಿ: ಕುಡುಪು ದೇವಸ್ಥಾನ ಆಡಳಿತ ಮಂಡಳಿಯ ನಿರ್ಧಾರ ಸ್ವಾಗತಾರ್ಹ ಎಂದು ವಿಶ್ವ ಹಿಂದೂ ಪರಿಷತ್‌ನ ದಕ್ಷಿಣ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ತಿಳಿಸಿದ್ದಾರೆ.

ಮಂಗಳೂರಿನ ಹೊರವಲಯದಲ್ಲಿರುವ ಕುಡುಪು ಶ್ರೀಅನಂತಪದ್ಮನಾಭ ದೇವಸ್ಥಾನ

Govt. of Uttarakhand | Azadi Ka Amrit Mahotsav

Uttarakhand on the rise

A land of peace, potential and prosperity

DESTINATION UTTARAKHAND
GLOBAL INVESTORS SUMMIT 2023
Peace To Prosperity
8th - 9th December | Dehradun

UTTARAKHAND
Global Investors Summit 2023

Pushkar Singh Dhami
Chief Minister of Uttarakhand



Narendra Modi
Prime Minister

Inauguration

by

Narendra Modi
Prime Minister

in the august presence of

Pushkar Singh Dhami
Chief Minister, Uttarakhand

Date: 08 December, 2023

Time: 9 AM | Venue: FRI, Dehradun

Memorandum of Understanding (MoU) worth more than ₹3 lakh crore signed under Uttarakhand Global Investors Summit 2023.

More than 5,000 business representatives and ambassadors from different countries will participate.

Ground-Breaking Ceremony of projects worth more than ₹44,000 crore.

More than 27 investor-friendly policies implemented in all areas of the state. Promotion of state investment through competitive incentives, subsidies and favorable business environment.

To register visit URL www.destinationuttarakhand.co.in/investorsummit/visitors/visitor-register

or scan the QR code

/ukgis2023

Toll Free No. 1800-309-7225

Watch the live telecast of the program on DD News

'ಶ್ರಾವ್ಯಾ'ಗೆ ಎಲ್ಲವೂ ನವ್ಯ

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ನಟಿ ಶ್ರಾವ್ಯಾ ರಾವ್ ಅಭಿನಯದ 'ಮಾಯಾನಗರಿ' ತೆರೆಗೆ ಬರಲು ಸಿದ್ಧವಾಗಿದೆ. ಮತ್ತೊಂದು ಚಿತ್ರ 'ಅಥಿ ಐ ಲವ್ ಯು' ಇಂದು (ಡಿ.8) ತೆರೆ ಕಾಣುತ್ತಿದೆ. ತಮ್ಮ ಸಿನಿಪಯಣದ ಕುರಿತು ಶ್ರಾವ್ಯಾ ಮಾತಿಗೆ ಸಿಕ್ಕರು...

ಸಂದರ್ಶನ: ವಿನಾಯಕ ಕೆ.ಎಸ್.

- **'ಅಥಿ ಐ ಲವ್ ಯು' ಚಿತ್ರದಲ್ಲಿ ನಿಮ್ಮ ಪಾತ್ರವೇನು?**

ಇದೊಂದು ಕಲಾತ್ಮಕ ಚಿತ್ರ. ಇಡೀ ಚಿತ್ರದಲ್ಲಿ ಗಂಡ–ಹೆಂಡತಿ ಎರಡೇ ಪಾತ್ರ. ಹೊಸತಾಗಿ ಮದುವೆಯಾದ ಹುಡುಗಿಯ ಬದುಕಿನ ಕಥೆಯನ್ನು ಹೇಳುವ ಚಿತ್ರವಿದು.

- **'ಮಾಯಾನಗರಿ' ಚಿತ್ರದ ಪಾತ್ರದ ಕುರಿತು ಹೇಳಬಹುದೇ?**

ಸಿನಿಮಾದಲ್ಲಿ 'ಮಲ್ಲಿಕಾ' ಎಂಬ ಪಾತ್ರ ಮಾಡಿರುವೆ. ಹಲವು ಭಾವನೆಗಳಿರುವ ಪಾತ್ರವಿದು. ಅಭಿನಯಕ್ಕೆ ಸಾಕಷ್ಟು ಅವಕಾಶ ಇರುವ, ಸವಾಲನ್ನೂ ಒಡ್ಡುವ ಪಾತ್ರವಿದು.

- **ನಾಯಕ ಅನೀಶ್ ತೇಜೇಶ್ವರ್ ಜೊತೆಗಿನ ನಟನೆ ಅನುಭವ ಹೇಗಿತ್ತು?**

ಅನೀಶ್ ತುಂಬ ಒಳ್ಳೆಯ ನಟ. ಜೊತೆಗೆ ತುಂಬಾ ಪರಿಶ್ರಮಿ. ಹೀಗಾಗಿ ನಟನೆಯಲ್ಲಿ ನಮ್ಮಿಬ್ಬರ ನಡುವೆ ಒಂದು ಆರೋಗ್ಯಯುತ ಸ್ಪರ್ಧೆ ಇತ್ತು. ಇದೊಂದು 'ಹಾರರ್ ಡ್ರಾಮಾ' ಇರುವ ಚಿತ್ರ. 100 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಕಲಿಕೆಗೆ ಸಾಕಷ್ಟು ಅವಕಾಶವಿತ್ತು. ದಡ್ಡತನ, ಪ್ರೀತಿ, ಥ್ರಿಲ್ಲರ್ ಅಂಶಗಳಿವೆ. ಚಿಕ್ಕಮಗಳೂರಿನ ಚಳಿಯಲ್ಲಿ ಶೂಟಿಂಗ್ ಮಾಡಿದ್ದು ಒಂದು ಅನನ್ಯ ಅನುಭವ.

- **ನಿಮ್ಮ ಮುಂದಿನ ಸಿನಿಮಾಗಳ ಬಗ್ಗೆ ಮಾಹಿತಿ ನೀಡಿ.**

ಸಿಂಪಲ್ ಸುನಿ ನಿರ್ದೇಶನದ 'ಮೋಡ ಕವಿದ ವಾತಾವರಣ' ಚಿತ್ರ ಒಪ್ಪಿಕೊಂಡಿದ್ದೇನೆ. ಹೊಸ ನಾಯಕನೊಬ್ಬನನ್ನು ಈ ಚಿತ್ರದ ಮೂಲಕ ಸುನಿ ಪರಿಚಯಿಸುತ್ತಿದ್ದಾರೆ. 'ಕನಸೊಂದು ಶುರುವಾಗಿದೆ' ಚಿತ್ರ ಬಿಡುಗಡೆಗೆ ಸಿದ್ಧವಿದೆ. ಹೊಸಬರ ಇನ್ನೊಂದು ಸಿನಿಮಾ ಮಾತುಕತೆ ಹಂತದಲ್ಲಿದೆ.

- **ಇಲ್ಲಿಯತನಕ ಸಿನಿಪಯಣ ಹೇಗಿತ್ತು?**

ಬಾಲ ನಟಿಯಾಗಿ ಆಸಕ್ತಿಯಿಂದ ಚಿತ್ರರಂಗಕ್ಕೆ ಬಂದೆ. ಸಿನಿಮಾವನ್ನು ತುಂಬ ಪ್ರೀತಿಸುತ್ತೇನೆ. ಹೀಗಾಗಿ ಚಿತ್ರೀಕರಣ, ಮೇಕಪ್, ಡೈಲಾಗ್ ಕಲಿಯುವಿಕೆಯಿಂದ ಹಿಡಿದು ಪ್ರಚಾರದ ತನಕ ಸಿನಿಮಾದ ಪ್ರತಿ ಹಂತವನ್ನು ಆಸ್ವಾದಿಸುತ್ತೇನೆ. ಸಿನಿಮಾದ ಹೊರತಾಗಿ ಜಾಹೀರಾತು ಚಿತ್ರೀಕರಣ, ಮಾಡೆಲಿಂಗ್‌ನಲ್ಲಿ ತೊಡಗಿಸಿಕೊಂಡಿದ್ದೇನೆ.

- **ಹೆಸರು ಬದಲಿಸಿಕೊಂಡಿದ್ದು ಏಕೆ?**

ಸಂಖ್ಯಾಶಾಸ್ತ್ರದ ಪ್ರಕಾರ 'ಶ್ರಾವ್ಯಾ'ದಿಂದ 'ಸಾತ್ವಿಕಾ' ಎಂದು ಹೆಸರು ಬದಲಿಸಿಕೊಂಡಿರುವೆ. ನನ್ನ ಹೆಸರಿನಲ್ಲಿ 'ರಾವ್' ಇಲ್ಲ. ಆದರೂ ಎಲ್ಲರೂ 'ಶ್ರಾವ್ಯಾ ರಾವ್' ಎಂದು ಕರೆಯುವುದು ರೂಢಿಯಾಗಿದೆ.

ದೀಕ್ಷಿತ್‌ಗೆ 'ಭಾಗ್ಯಲಕ್ಷ್ಮಿ'ಯಾದ ಬೃಂದಾ ಆಚಾರ್ಯ

ವರ್ಷಗಳ ಹಿಂದೆ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಚಿತ್ರದ ಪೋಸ್ಟರ್ ಸದ್ದು ಮಾಡಿತ್ತು. ಅದಾದ ಬಳಿಕ ಯಾವ ಅಪ್‌ಡೇಟ್‌ಗಳನ್ನೂ ನೀಡದ ಚಿತ್ರತಂಡ ಸದ್ದಿಲ್ಲದೇ ಒಂದು ಭಾಗದ ಚಿತ್ರೀಕರಣ ಪೂರೈಸಿದೆ.

'ರಂಗಿತರಂಗ', 'ಅವನೇ ಶ್ರೀಮನ್ನಾರಾಯಣ' ಚಿತ್ರಗಳ ನಿರ್ಮಾಪಕ ಎಚ್.ಕೆ ಪ್ರಕಾಶ್ ನಿರ್ಮಿಸುತ್ತಿರುವ ಚಿತ್ರದಲ್ಲಿ ಅಜಯ್ ರಾವ್ ನಾಯಕ ಎಂದು ಮೊದಲು ಘೋಷಿಸಲಾಗಿತ್ತು. ಕಾರಣಾಂತರಗಳಿಂದ ಇದೀಗ ಆ ಜಾಗಕ್ಕೆ ದೀಕ್ಷಿತ್ ಶೆಟ್ಟಿ ಬಂದಿದ್ದಾರೆ. ನಟಿ ಬೃಂದಾ ಆಚಾರ್ಯ ದೀಕ್ಷಿತ್‌ಗೆ ಜೋಡಿಯಾಗಿದ್ದಾರೆ.

ನಟ ರಕ್ಷಿತ್ ಶೆಟ್ಟಿ ಸಿನಿಮಾಗಳಿಗೆ ವಿಎಫ್‌ಎಕ್ಸ್ ಮಾಡುವ, ಆ ತಂಡದ ಭಾಗವಾಗಿರುವ ಅಭಿಷೇಕ್ ಎಂ. ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರದ ಪೋಸ್ಟರ್ ನೆಟ್‌ಫ್ಲಿಕ್ಸ್‌ನ ಜನಪ್ರಿಯ 'ಮನಿಹೈಸ್ಟ್' ವೆಬ್‌ಸರಣಿ ನೆನಪಿಸಿತ್ತು. 'ಬ್ಯಾಂಕ್ ದರೋಡೆಗೆ ಸಂಬಂಧಿಸಿದ ಕಥೆ. ಇದೊಂದು ಥ್ರಿಲ್ಲರ್ ಜಾನರ್‌ನ ಸಿನಿಮಾ. ಚಿತ್ರದ ಒಂದು ಭಾಗವನ್ನು ಬೆಂಗಳೂರು ಸುತ್ತಮುತ್ತ ಚಿತ್ರೀಕರಿಸಿದ್ದೇವೆ. ಒಟ್ಟು 60 ದಿನ ಚಿತ್ರೀಕರಣ ನಡೆಸುವ ಯೋಜನೆ ಹಾಕಿಕೊಂಡಿದ್ದೇವೆ. ಶೀಘ್ರದಲ್ಲಿ ಎರಡನೇ ಹಂತದ ಚಿತ್ರೀಕರಣ ಪ್ರಾರಂಭವಾಗಲಿದೆ' ಎನ್ನುತ್ತಾರೆ ಅಭಿಷೇಕ್.

ಎಚ್. ಕೆ. ಪ್ರಕಾಶ್ ಅವರು ತಮ್ಮ ಶ್ರೀದೇವಿ ಎಂಟರ್‌ಟೈನರ್ಸ್ ಲಾಂಛನದಲ್ಲಿ ನಿರ್ಮಿಸುತ್ತಿರುವ ಐದನೇ ಚಿತ್ರವಿದು. ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಅಭಿಷೇಕ್ ಜಿ. ಕಾಸರಗೋಡು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಅಚ್ಯುತ್ ಕುಮಾರ್, ಸಾಧು ಕೋಕಿಲ, ಅಶ್ವಿನ್ ರಾವ್ ಪಲ್ಲಕ್ಕಿ ಮೊದಲಾದವರು ಚಿತ್ರದಲ್ಲಿದ್ದಾರೆ.

'ಪ್ರೇಮಂ ಪೂಜ್ಯಂ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ಬೃಂದಾ, ಸತ್ಯಪ್ರಕಾಶ್ ಅವರು ನಿರ್ದೇಶಿಸಿ, ನಟಿಸುತ್ತಿರುವ 'ಎಕ್ಸ್ ಆ್ಯಂಡ್ ವೈ' ಚಿತ್ರಕ್ಕೂ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಸಿನಿ ಸಂಕ್ಷಿಪ್ತ

'ರೋಜಿ' ಚಿತ್ರದಲ್ಲಿ ಶ್ರೀನಗರ ಕಿಟ್ಟಿ

'ಹುಡುಗರು' ಚಿತ್ರದ ನಂತರ ಮತ್ತೊಮ್ಮೆ 'ಲೂಸ್ ಮಾದ' ಯೋಗಿ ಹಾಗೂ ಶ್ರೀನಗರ ಕಿಟ್ಟಿ ತೆರೆ ಮೇಲೆ ಸದ್ದು ಮಾಡಲಿದ್ದಾರೆ. ಯೋಗಿ ಅಭಿನಯದ 50ನೇ ಚಿತ್ರ 'ರೋಜಿ'ಯಲ್ಲಿ ಶ್ರೀನಗರ ಕಿಟ್ಟಿ ನಟಿಸುತ್ತಿದ್ದಾರೆ.

'ಲಿಯೋ' ಖ್ಯಾತಿಯ ಸ್ಯಾಂಡಿ ಮಾಸ್ಟರ್ ಅವರೂ ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದು, ಇತ್ತೀಚೆಗೆ ಶ್ರೀನಗರ ಕಿಟ್ಟಿ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಬಿಡುಗಡೆ ಮಾಡಿದೆ ಚಿತ್ರತಂಡ. 'ಕ್ರಿಸ್ಟೋಫರ್' ಎಂಬ ಪಾತ್ರದಲ್ಲಿ ಕಿಟ್ಟಿ ಅಭಿನಯಿಸುತ್ತಿದ್ದಾರೆ. ಸದ್ಯ 'ಸಂಜು ವೆಡ್ಸ್ ಗೀತಾ–2' ಚಿತ್ರದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿರುವ ಕಿಟ್ಟಿ ವಿನೋದ್ ಪ್ರಭಾಕರ್ ನಟನೆಯ 'ಮಾದೇವ' ಸಿನಿಮಾದಲ್ಲೂ ನಟಿಸುತ್ತಿದ್ದಾರೆ. ಪ್ಯಾನ್ ಇಂಡಿಯಾ ಚಿತ್ರವಾದ 'ರೋಜಿ'ಯನ್ನು ಶೂನ್ಯ ನಿರ್ದೇಶಿಸುತ್ತಿದ್ದಾರೆ. ಡಿ.ವೈ ರಾಜೇಶ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ವರ್ಷಾಂತ್ಯದಲ್ಲಿ ಸಾಲು ಸಾಲು ಸಿನಿಮಾ

ಇಂದು ತೆರೆಗೆ

ಚಂದನವನದಲ್ಲಿ ವರ್ಷಾಂತ್ಯದಲ್ಲಿ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲು ಸಜ್ಜಾಗಿವೆ. ಇದಕ್ಕೆ ಈ ವಾರವೇ ಮುನ್ನುಡಿ. ಇಂದು(ಡಿ.7) ನಾಲ್ಕು ಸಿನಿಮಾಗಳು ತೆರೆಕಾಣುತ್ತಿವೆ. ಈ ಪೈಕಿ ಜಯತೀರ್ಥ ಅವರ ನಿರ್ದೇಶನದ 'ಕೈವ' ಸಿನಿಮಾ ಮೇಲೆ ಜನರ ನಿರೀಕ್ಷೆ ಹೆಚ್ಚಿದೆ.

ಸ್ಪಂದನಾ ಸೋಮಣ್ಣ

ಧನ್ವೀರ್

'ಕೈವ': 'ಬಜಾರ್' ಮತ್ತು 'ಬೈ ಟು ಲವ್' ಸಿನಿಮಾಗಳಲ್ಲಿ ಮಾಸ್ ಹಾಗೂ ಕ್ಲಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದ ನಟ ಧನ್ವೀರ್ ಇದೀಗ 'ಕೈವ' ಎಂಬ ಭಿನ್ನವಾದ ಪಾತ್ರವೊಂದರ ಮೂಲಕ ಪ್ರೇಕ್ಷಕರೆದುರಿಗೆ ಬರುತ್ತಿದ್ದಾರೆ. 'ಬೆಲ್ ಬಾಟಂ', 'ಬನಾರಸ್' ಮುಂತಾದ ಸಿನಿಮಾಗಳ ನಿರ್ದೇಶಕ ಜಯತೀರ್ಥ ಅವರು ಈ ಚಿತ್ರದ ನಿರ್ದೇಶಕ. ಧನ್ವೀರ್‌ಗೆ ಜೋಡಿಯಾಗಿ 'ಜೊತೆ ಜೊತೆಯಲಿ' ಖ್ಯಾತಿಯ ನಟಿ ಮೇಘಾ ಶೆಟ್ಟಿ ನಟಿಸಿದ್ದಾರೆ. ಇದೊಂದು ನೈಜ ಘಟನೆ ಆಧಾರಿತ ಚಿತ್ರವಾಗಿದ್ದು, 1983ರ ಕಾಲಘಟ್ಟದ ಕಥೆ ಹೊಂದಿದೆ. ರೆಟ್ರೋ ಶೈಲಿಯ ಕಥಾಹಂದರದ ಈ ಚಿತ್ರದಲ್ಲಿ ಬೆಂಗಳೂರಿನ ಗಂಗಾರಾಮ್ ಕಟ್ಟಡ ಕುಸಿತ, ಅಂಥ ದುರಂತದ ಮಧ್ಯೆಯೂ ಹುಟ್ಟಿದ ಪ್ರೇಮ, ಅಪರಾಧ, ಪತ್ತೇದಾರಿ ಅಂಶಗಳನ್ನು ಇಟ್ಟುಕೊಂಡು ಕಥೆ ಹೆಣೆಯಲಾಗಿದೆ. ಈ ಸಿನಿಮಾದ ಕಥೆ ಕರಗದಿಂದ ಆರಂಭವಾಗಿ, ಕರಗದಲ್ಲಿ ಕೊನೆಯಾಗುತ್ತದೆ. ಹೀಗಾಗಿ ಧನ್ವೀರ್ ಕೂಡ ಈ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇಡೀ ಸಿನಿಮಾದ ಕಥೆ ಬೆಂಗಳೂರಿನ ತಿಗಳರಪೇಟೆಯಲ್ಲಿ ನಡೆದಿದ್ದು, ಇದರ ಚಿತ್ರೀಕರಣ ಮೈಸೂರಿನಲ್ಲಿ ನಡೆದಿದೆ.

ವಿಜಯ ರಾಘವೇಂದ್ರ

'ಮರೀಚಿ': ವಿಜಯ ರಾಘವೇಂದ್ರ, ಸೋನು ಗೌಡ, ಸ್ಪಂದನ ಸೋಮಣ್ಣ ನಟನೆಯ ಸಿನಿಮಾ 'ಮರೀಚಿ'. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯಾಗಿ ವಿಜಯ ರಾಘವೇಂದ್ರ ನಟಿಸಿದ್ದಾರೆ. 'ಹ್ಯಾಪಿ ನ್ಯೂ ಇಯರ್' ಸಿನಿಮಾ ಬಳಿಕ ಸೋನು ಗೌಡ ಮತ್ತೊಮ್ಮೆ ವಿಜಯ ರಾಘವೇಂದ್ರ ಅವರಿಗೆ ಜೋಡಿಯಾಗಿದ್ದಾರೆ. ಸಿದ್ದ್ರುವ್(ಸಿದ್ದು) ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಸಂತೋಷ್ ಮಾಯಪ್ಪ ಅವರ ಜೊತೆಗೂಡಿ ನಿರ್ಮಾಣ ಮಾಡಿದ್ದಾರೆ. ಸಿದ್ದ್ರುವ್ ಅವರಿಗೆ ಇದು ಚೊಚ್ಚಲ ಸಿನಿಮಾ. ಅಭಿ ದಾಸ್, ಆರ್ಯನ್, ಶೃತಿ ಪಾಟೀಲ್, ಗೋಪಾಲ್ ಕೃಷ್ಣ ದೇಶಪಾಂಡೆ, ಅರುಣ ಬಾಲರಾಜ್ ಚಿತ್ರದ ತಾರಾಬಳಗದಲ್ಲಿದ್ದಾರೆ.

'ಅಥಿ ಐ ಲವ್ ಯು': ಲೋಕೇಂದ್ರ ಸೂರ್ಯ ನಿರ್ದೇಶಿಸಿ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರದಲ್ಲಿ ಶ್ರಾವ್ಯ ರಾವ್(ಸಾತ್ವಿಕ) ನಾಯಕಿಯಾಗಿ ನಟಿಸಿದ್ದಾರೆ. ಈ ಚಿತ್ರದಲ್ಲಿ 'ಅಥಿ' ಹಾಗೂ 'ವಸಂತ್' ಎಂಬ ಎರಡು ಪಾತ್ರಗಳಷ್ಟೇ ಇದ್ದು, ಇದು ಒಂದು ದಿನದಲ್ಲಿ ನಡೆಯುವ ಕಥೆ ಎಂದಿದ್ದಾರೆ ಲೋಕೇಂದ್ರ. ಚಿತ್ರದ ಉಳಿದ ಪಾತ್ರಗಳು ಧ್ವನಿಯ ಮೂಲಕ ಚಿತ್ರಕ್ಕೆ ಜೀವ ತುಂಬಿವೆ. ಚಿತ್ರದ ಕಥೆ, ಸಂಕಲನ ಹಾಗೂ ಛಾಯಾಚಿತ್ರಗ್ರಹಣದ ಜವಾಬ್ದಾರಿಯನ್ನೂ ಲೋಕೇಂದ್ರ ನಿರ್ವಹಿಸಿದ್ದಾರೆ.

'Politics ಕಲ್ಯಾಣ'

ಭಿನ್ನವಾದ ಶೀರ್ಷಿಕೆಯಿಂದಲೇ ಸದ್ದು ಮಾಡಿದ ಸಿನಿಮಾ 'Politics ಕಲ್ಯಾಣ'. ರಾಜಕೀಯ ವಿಡಂಬನೆಯ ಈ ಚಿತ್ರವನ್ನು ಕವಿ ರಾಜೇಶ್ ನಿರ್ದೇಶಿಸಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಜೆ.ಎಂ.ಪ್ರಹ್ಲಾದ್ ಅವರದ್ದು. ಚಿತ್ರದಲ್ಲಿ ಹಿರಿಯ ಹಾಗೂ ಕಿರಿಯ ಕಲಾವಿದರು ಸೇರಿದಂತೆ ಕಲಾವಿದರ ದಂಡೇ ಇದೆ. ಕೇವಲ ಐದು ದಿನಗಳಲ್ಲಿ ಒಂದೇ ಕಲ್ಯಾಣ ಮಂಟಪದಲ್ಲಿ ಈ ಚಿತ್ರದ ಚಿತ್ರೀಕರಣ ನಡೆದಿದೆ. ಪಂಕಜ್ ಎಸ್. ನಾರಾಯಣ್, ಶಂಕರ್ ಅಶ್ವಥ್, ಮಿಮಿಕ್ರಿ ಗೋಪಿ, ಗಿರಿಜಾ ಲೋಕೇಶ್, ಮೈಸೂರು ರಮಾನಂದ್, ದತ್ತಾತ್ರೇಯ ಕುರುಹಟ್ಟಿ, ಸುನೇತ್ರ ಪಂಡಿತ್, ಹನುಮಂತೇ ಗೌಡ, ಪಾಪ ಪಾಂಡು ಚಿದಾನಂದ್, ನಾಗೇಂದ್ರ ಶಾ ಮತ್ತಿತರರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಅಕ್ಕ–ತಂಗಿ ಕಥೆಯ 'ಗಂಗೆ ಗೌರಿ'

ಭಿನ್ನವಾದ ಕಥೆಯೊಂದನ್ನು ಹೊತ್ತು ಉದಯ ಟಿವಿಯಲ್ಲಿ 'ಗಂಗೆ ಗೌರಿ' ಎನ್ನುವ ಹೊಸ ಧಾರಾವಾಹಿಯೊಂದು ಡಿ.11ರಿಂದ ಆರಂಭವಾಗಲಿದೆ.

ಮಲೆನಾಡಿನ ಪುಟ್ಟ ಹಳ್ಳಿಯಲ್ಲಿ ಇರುವವರು 'ಗಂಗೆ ಗೌರಿ' ಎನ್ನುವ ಅಕ್ಕತಂಗಿ. ಯಾರಿಗೂ ಜಗ್ಗದ, ಬಗ್ಗದ, ಮಾತಿಗಿಂತ ಏಟೇ ಸರಿ ಎನ್ನುವ ಹುಡುಗಿ ತಂಗಿ, 'ಗಂಗೆ'ಯಾದರೆ, ಮೃದು ಮಾತಲ್ಲೇ ಎಲ್ಲರ ಮನ ಗೆಲ್ಲುವ ಶಾಂತ ಸ್ವಭಾವದ ಅಕ್ಕ, 'ಗೌರಿ'. ಸ್ವಭಾವ ಬೇರೆಯಾದರೂ ಒಬ್ಬರನ್ನೊಬ್ಬರು ಅಗಲಿ ಇರಲಾರದಷ್ಟು ಪ್ರೀತಿ. ಇವರ ನಡುವೆ ಹುಡುಗನೊಬ್ಬ ಬಂದರೆ ಏನಾಗಬಹುದು? ಅವರ ಜೀವನದಲ್ಲಿ ಆಗುವ ಬದಲಾವಣೆಗಳು ಏನು? ಎನ್ನುವುದೇ ಕಥಾಹಂದರ ಎಂದಿದೆ ತಂಡ. ಕಳಸದ ಹಸಿರಿನ ನಡುವೆ, ಮಲೆನಾಡ ಸುಂದರ ಹಳ್ಳಿಯಲ್ಲಿ ಇದರ ಚಿತ್ರೀಕರಣ ನಡೆದಿದೆ. ಧಾರಾವಾಹಿಯಲ್ಲಿ ಕನ್ನಡ ಭಾವಗೀತೆಗಳನ್ನು ಬಳಸಿದ್ದು, ಕನ್ನಡತನವೇ ಇದರ ವಿಶೇಷ ಎಂದಿದೆ ತಂಡ. ಸೋಮವಾರದಿಂದ ಶನಿವಾರದವರೆಗೆ ಸಂಜೆ 6.30ಕ್ಕೆ ಇದು ಪ್ರಸಾರವಾಗಲಿದೆ. ವೃದ್ಧಿ ಕ್ರಿಯೇಶನ್ ಈ ಧಾರಾವಾಹಿಯ ನಿರ್ಮಾಣ ಮಾಡುತ್ತಿದ್ದು, ವಿನೋದ್ ದೋಂಡಾಳೆ ನಿರ್ದೇಶನದಲ್ಲಿ ಇದು ಮೂಡಿಬರುತ್ತಿದೆ. ದರ್ಶ್ ಚಂದ್ರಪ್ಪ, ಶ್ರೀವಿದ್ಯಾ ಶಾಸ್ತ್ರಿ, ದರ್ಶಿನಿ ಗೌಡ ತಾರಾಬಳಗದಲ್ಲಿದ್ದಾರೆ.

ಕಿರುತೆರೆ

ಕೆ.ಜಿ.ರಸ್ತೆ-ಬೆಂಗಳೂರು
ಅನುಪಮ
ANUPAMA - DTS
(10-30, 1-30, 4-30, 7-30)
ಮಾಗಡಿ ರಸ್ತೆ
VEERESH CINEMAS

ರಾಜಾಜಿನಗರ ನವರಂಗ್, ಜೆ.ಪಿ.ನಗರ ಸಿದ್ದೇಶ್ವರ, ಅವಲಹಳ್ಳಿ ವೆಂಕಟೇಶ್ವರ, ಕೆಂಗೇರಿ ರಾಬಿನ್, ಕತ್ರಿಗುಪ್ಪೆ ಕಾಮಾಕ್ಯ, ಈಶ್ವರಿ, ಗೌಡನಪಾಳ್ಯ ಶ್ರೀನಿವಾಸ, ತಾವರೆಕೆರೆ ಬಾಲಾಜಿ, ಉತ್ತರಹಳ್ಳಿ ವೈಷ್ಣವಿ ವೈಭವಿ, ಸುಂಕದಕಟ್ಟೆ ಮೋಹನ್, ರಾಜ್‌ಗೋಪಾಲ್‌ನಗರ ಮಾರುತಿ, ಕಮಲಾನಗರ ವೀರಭದ್ರೇಶ್ವರ, ಲಗ್ಗೆರೆ ಆಕಾಶ್, ಯಲಹಂಕ, ಪೀಣ್ಯ ಭಾರತಿ, ಬೊಮ್ಮನಹಳ್ಳಿ ಕೃಷ್ಣ, ಗೊಲ್ಲರಹಟ್ಟಿ ವೆಂಕಟೇಶ್ವರ, ಚಿಕ್ಕಬಾಣವರ ಅಶೋಕ, ಸಿಂಗಾಪುರ ವೈನಿಧಿ

ಕದಿರೇನಹಳ್ಳಿ ಮಹಾದೇಶ್ವರ, ಚಿಕ್ಕಲಸಂದ್ರ ಬಾಲಾಜಿ, PVR INOX: NEXUS | ORION VAISHNAVI | REGALIA MARKETCITY | AURA VEGACITY | SPIRIT UPTOWN | BHARTIYA REX | GT | VR MALL GLOBAL | FALCONCITY SWAGATH | CENTRAL LIDO | MANTRI | RMZ GARUDA | YELAHANKA NEXUS NEIGHBOURHOOD SBR | BROOKFIELD, Cinépolis: ETA | MEENAKSHI ORION EAST | LULU SHANTINIKETAN | SJR, GOPALAN CINEMAS: ARCH | INNOVATION GRAND | SIGNATURE LEGACY, ROCKLINE cinemas JALAHALLI, MIRAJ SUNKADAKATTE, KINO CINEMAS SEEGEHALLI, CINEPHILE HSR LAYOUT, ರಾಮನಗರ ಶ್ರೀರಾಮ, ಚನ್ನಪಟ್ಟಣ ಶಿವಾನಂದ, ಕನಕಪುರ ವಾಣಿ

ಹಾರೋಹಳ್ಳಿ ವಿನಾಯಕ, ಮಾಗಡಿ ಬಾಲಾಜಿ, ಕೋಲಾರ ಭವಾನಿ, ತುಮಕೂರು ಮಾರುತಿ, PVR INOX, ತಿಪಟೂರು ಗಣೇಶ್, ಕುಣಿಗಲ್ ಪದ್ಮ, ಮೈಸೂರು ಆಡ್ಲೋ, PVR INOX NEXUS MALL GARUDA MALL MALL OF MYSORE CENTRO, DRC CINEMAS, VISION CINEMAS, ಮಂಡ್ಯ ಮಹಾವೀರ, ಹಾಸನ ಎಸ್.ಬಿ.ಜಿ, ಚಾಮರಾಜನಗರ ಸಿಂಹಪ್ಯಾರಾಡೈಸ್, ಕೊಳ್ಳೆಗಾಲ ಶಾಂತಿ, ಹೊಳೆನರಸೀಪುರ ಚೆನ್ನಾಂಬಿಕಾ, ಚೆನ್ನರಾಯಪಟ್ಟಣ ಗಾಯತ್ರಿ, ಮಳವಳ್ಳಿ ಮಹಾಲಕ್ಷ್ಮೀ, ನಂಜನಗೂಡು ಭಾರ್ಗವಿ

ಗುಂಡ್ಲುಪೇಟೆ ವೆಂಕಟೇಶ್ವರ, ಕೆ.ಆರ್.ನಗರ ವೆಂಕಟೇಶ್ವರ, ಅರಸೀಕೆರೆ ಸಾಧನ, ಮದ್ದೂರು ಸಂಜಯ್, ಕೆ.ಎಂ.ದೊಡ್ಡಿ ಮಾರುತಿ, ಪಿರಿಯಾಪಟ್ಟಣ ಮಹಾದೇಶ್ವರ, ಪಾಂಡವಪುರ ಲಾಲ್‌ಬಹದ್ದೂರ್, ನಾಗಮಂಗಲ ವೆಂಕಟೇಶ್ವರ, ಟಿ ನರಸೀಪುರ ವಿಜಯಭಗವಾನ್, ಬನ್ನೂರು ಸೋಮೇಶ್ವರ, ಕೆ.ಆರ್ ಪೇಟೆ ಬಸವೇಶ್ವರ, ಬೇಲೂರು ಲಕ್ಷ್ಮೀ, ಹುಣಸೂರು ಆಲಾ, ಬೆಳ್ಳೂರು ಕ್ರಾಸ್ ಶ್ರೀಮಾರುತಿ, ಕುಶಾಲನಗರ ಕೂರ್ಗ್‌ಸಿನಿಪ್ಲೆಕ್ಸ್, ಸುಂಟಿಕೊಪ್ಪ ಗಣೇಶ್, ಶನಿವಾರಸಂತೆ ಯಶಸ್ವಿ, ಸಿದ್ದಾಪುರ ವುಡ್‌ಲ್ಯಾಂಡ್ಸ್ ಸಿನಿಪ್ಲೆಕ್ಸ್

ದಾವಣಗೆರೆ ಅಶೋಕ, MOVIETIME, ಹರಿಹರ ಶ್ರೀಕಾಂತ್, ಚಿತ್ರದುರ್ಗ ಬಸವೇಶ್ವರ, ಹೊಸಪೇಟೆ ಲಕ್ಷ್ಮೀ, ಬಳ್ಳಾರಿ ನಟರಾಜ ಕಾಂಪ್ಲೆಕ್ಸ್, MOVIETIME, ಆರ್.ಆರ್.ಮಲ್ಟಿಪ್ಲೆಕ್ಸ್, ಹಿರಿಯೂರು ನಂಜುಂಡೇಶ್ವರ, ಹಗರಿಬೊಮ್ಮನಹಳ್ಳಿ ವಿಷ್ಣು, ಹೊಸದುರ್ಗ ಜ್ಯೋತಿ, ಜಗಳೂರು ನಟರಾಜ, ಹುಬ್ಬಳ್ಳಿ ಸುಧಾ, ಅಪ್ಸರಾ, PVR INOX, Cinépolis, ಧಾರವಾಡ ಪದ್ಮ, PVR INOX

ಬೆಳಗಾವಿ ಚಿತ್ರಾ, PVR INOX, KAPEEL, ಬಿಜಾಪುರ ಲಕ್ಷ್ಮೀ, ಗದಗ ಮಹಾಲಕ್ಷ್ಮೀ, ರಾಣಿಬೆನ್ನೂರು ಶಕ್ತಿ, ಬಾಗಲಕೋಟೆ ಶಕ್ತಿ, ಹಾವೇರಿ ಸರಸ್ವತಿ, ಗೋಕಾಕ್ ಆನಂದ್, ರಬಕವಿ ಶ್ರೀನಿವಾಸ, ಇಳಕಲ್ ಶ್ರೀನಿವಾಸ, ಸಿಂದಗಿ ವಿನಾಯಕ, ತಾಳಿಕೋಟೆ ಅಮೀರ್, ಅಥಣಿ ದುರ್ಗಾಲಕ್ಷ್ಮೀ, ಸಿರಸಿ ನಟರಾಜ, ಅಂಕೋಲ ಸಮರ್ಥ್, ಮುಧೋಳ್ ಶುಭಾಷಿನಿ, ಅಂಕಲಿ ಮಯೂರ, ಮಹಾಲಿಂಗಪುರ ಅಸ್ಟಗಿ, ಸಂಕೇಶ್ವರ ಸಾಯಿನಾಥ

ಬೈಲಹೊಂಗಲ ಸಂಗಮ, ಗಜೇಂದ್ರಗಡ ಅಲಂಕಾರ್, ರಾಯಬಾಗ ದತ್ತ, ಬಿಳಗಿ ಶ್ರೀನಿವಾಸ, ಹಾರೋಗೆರೆ ಚಂದ್ರಮ, ಲಕ್ಷ್ಮೇಶ್ವರ ಕೃಷ್ಣ, ಜಮ್ಖಂಡಿ ಸುವರ್ಣ, ರೋಣ ಮಲ್ಲಿಕಾರ್ಜುನ, ಕುಮಾರೇಶ್ವರ ಬಾದಾಮಿ, ನಿಪ್ಪಾಣಿ MAGNUM CINEMAS, ಗುಲ್ಬರ್ಗಾ ಸಂಗಮ್, PVR INOX, MIRAJ, ರಾಯಚೂರು MIRAJ, ಗಂಗಾವತಿ ಶಿವೆ, ಶಹಾಪುರ ಭವಾನಿ, ಬೀದರ್ ಸ್ವಪ್ನ, ಶಿವಮೊಗ್ಗ ಮಲ್ಲಿಕಾರ್ಜುನ, Bharath Cinemas, ಚಿಕ್ಕಮಗಳೂರು ನಾಗಲಕ್ಷ್ಮೀ, ಭದ್ರಾವತಿ ಸತ್ಯ

ಅನವೇರಿ ಶ್ರೀದೇವಿ, ನ್ಯಾಮತಿ ಶ್ರೀಶೈಲಾ, ಹೊನ್ನಾಳಿ ಶಾಂತ, ಚೆನ್ನಗಿರಿ ವೀರಭದ್ರೇಶ್ವರ, ಕೊಪ್ಪ ಜೆ.ಎಂ.ಜೆ, ಕಡೂರು ಅನ್ನಪೂರ್ಣೇಶ್ವರಿ, ಸಾಗರ ಶ್ರೀ, ತೀರ್ಥಹಳ್ಳಿ ವೆಂಕಟೇಶ್ವರ, ತರಿಕೆರೆ ವಿನಾಯಕ, ಮಂಗಳೂರು ರಮಾಕಾಂತಿ, SP, PVR INOX, Cinépolis, Bharath Cinemas, ಮಣಿಪಾಲ PVR INOX, Bharath Cinemas, ಕುಂದಾಪುರ Bharath Cinemas, ಸುರತ್ಕಲ್ Cine GALAXY, ಪಡುಬಿದ್ರೆ Bharath Cinemas, ಪುತ್ತೂರು Bharath Cinemas

ಹಾಗೂ ರಾಜ್ಯಾದ್ಯಂತ ಇತರ ಚಿತ್ರಮಂದಿರಗಳಲ್ಲಿ

ಕೊಪ್ಪಳ: ರೈಲಿಗೆ ಸಿಲುಕಿ 100ಕ್ಕೂ ಹೆಚ್ಚು ಕುರಿ ಸಾವು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಇಲ್ಲಿಗೆ ಸಮೀಪದ ಹಿಟ್ನಾಳ ಬಳಿ ಅಮರಾವತಿ ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ 100ಕ್ಕೂ ಹೆಚ್ಚು ಕುರಿಗಳು ಮೃತಪಟ್ಟಿವೆ.

ಗುರುವಾರ ಮಧ್ಯಾಹ್ನ 3.50ರ ಸುಮಾರಿಗೆ ಈ ಘಟನೆ ನಡೆದಿದೆ. ಕುರಿಗಾಹಿಗಳು ಬೆಳಗಾವಿಯವರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕುರಿಗಳು ಹಳಿ ದಾಟುವಾಗ ಹಾಗೂ ಹಳಿಯ ಪಕ್ಕದಲ್ಲಿ ಹೋಗುವಾಗ ದುರ್ಘಟನೆ ನಡೆದಿದೆ. ರೈಲಿನ ವೇಗದ ರಭಸಕ್ಕೆ ಕುರಿಗಳ ದೇಹಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಘಟನೆ ನಡೆದ ಕೆಲ ಹೊತ್ತಿನಲ್ಲಿಯೇ ಹಿಟ್ನಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಅವುಗಳನ್ನು ಎತ್ತಿಕೊಂಡು ಹೋಗುತ್ತಿದ್ದ ಚಿತ್ರಣ ಕಂಡುಬಂದಿತು.

ಚಳಿಗಾಲದ ಅಧಿವೇಶನದಲ್ಲಿ ಅನ್ನದಾತರ ಮರೆತ ರಾಜ್ಯ ಸರ್ಕಾರ: ರೈತ ಸಂಘ ಆಕ್ರೋಶ

ಸುವರ್ಣಸೌಧದವರೆಗೆ ರೈತರ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಚಳಿಗಾಲದ ಅಧಿವೇಶನದಲ್ಲಿ ರೈತರ ಸಮಸ್ಯೆಗಳು ಚರ್ಚೆಯಾಗಬೇಕು ಎಂಬುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಮುಖಂಡರು ನಗರದಿಂದ ಸುವರ್ಣ ವಿಧಾನ ಸೌಧದವರೆಗೆ 10 ಕಿ.ಮೀ ಪಾದಯಾತ್ರೆ ಮಾಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮುಖಂಡರಾದ ಚೂಣಪ್ಪ ಪೂಜೇರಿ, ಪ್ರಕಾಶ ನಾಯಕ, ಶಶಿಕಾಂತ ಪಡಸಲಗಿ ನೇತೃತ್ವದಲ್ಲಿ ಎರಡು ಸಾವಿರಕ್ಕೂ ಹೆಚ್ಚು ರೈತರು ಪಾದಯಾತ್ರೆಗೆ ಮುಂದಾದಾಗ, ಪೊಲೀಸರು ತಡೆಯೊಡ್ಡಿದರು. ರೈತ ಮುಖಂಡರು ಮತ್ತು ಪೊಲೀಸರ ಮಧ್ಯೆ ಕೆಲಹೊತ್ತು ಮಾತಿನ ಚಕಮಕಿ ನಡೆಯಿತು. ರಾಷ್ಟ್ರೀಯ ಹೆದ್ದಾರಿ ಬದಲು ಸಂಪರ್ಕ ರಸ್ತೆಯಲ್ಲಿ ಸಾಗಬೇಕೆಂದು ಪೊಲೀಸರು ತಾಕೀತು ಮಾಡಿದರು.

ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಲ್ಲಿ ಗುರುವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಮುಖಂಡರು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಚನ್ನಮ್ಮ ವೃತ್ತದಿಂದ ಹೊರಟ ರೈತರು, ರೈತ ಮಹಿಳೆಯರು ಮಾರ್ಗದುದ್ದಕ್ಕೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು. ಮಾರ್ಗಮಧ್ಯೆ ಕೆಲ ಯುವಕರು ರಾಷ್ಟ್ರೀಯ ಹೆದ್ದಾರಿಗೆ ನುಗ್ಗಲು ಯತ್ನಿಸಿದಾಗ, ಅವರನ್ನು ಪೊಲೀಸರು ಬಸ್‌ನಲ್ಲಿ ಹತ್ತಿಸಿದರು. ಕೊನೆಗೆ ಸುವರ್ಣ ವಿಧಾನಸೌಧದ ಬಳಿ ಸುವರ್ಣ ಉದ್ಯಾನದಲ್ಲಿ ಇಡೀ ದಿನ ಧರಣಿ ನಡೆಸಿದರು.

'ತಕ್ಷಣ ಬರ ಪರಿಹಾರ ನೀಡಬೇಕು. ರೈತರ ಎಲ್ಲ ರೀತಿಯ ಸಾಲಗಳನ್ನು ಮನ್ನಾ ಮಾಡಬೇಕು. ಹಿಂದಿನ ಸರ್ಕಾರ ಜಾರಿಗೊಳಿಸಿದ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು. ಕಬ್ಬು ತೂಕದಲ್ಲಿ ಮೋಸ ಮಾಡುವ ಕಾರ್ಖಾನೆಗಳ ಮೇಲೆ ಕ್ರಮ ಕೈಗೊಳ್ಳಬೇಕು, ಕಬ್ಬಿಗೆ ಸೂಕ್ತ ದರ ನಿಗದಿ ಮಾಡಬೇಕು' ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ, ಸಕ್ಕರೆ ಸಚಿವ ಶಿವಾನಂದ ಪಾಟೀಲ ಧರಣಿ ಸ್ಥಳಕ್ಕೆ ಬಂದು ಮನವಿ ಪಡೆದರು.

> ಕಬ್ಬು ತೂಕದಲ್ಲಿ ಮೋಸ ಮಾಡುವ ಕಾರ್ಖಾನೆಗಳ ಮೇಲೆ ಕ್ರಮ ವಹಿಸಲಾಗುವುದು. ಎಥೆನಾಲ್‌ನ ಲಾಭಾಂಶವನ್ನು ರೈತರಿಗೂ ಕೊಡಿಸಲು ಯತ್ನಿಸಲಾಗುವುದು
> **ಶಿವಾನಂದ ಪಾಟೀಲ,** ಸಕ್ಕರೆ ಸಚಿವ

> ಬರ ಪರಿಹಾರದ ಮೊದಲ ಕಂತಾಗಿ ₹2,000 ನೀಡಲಾಗುತ್ತಿದೆ. ಕೇಂದ್ರದಿಂದ ಹಣ ಬಂದ ಮೇಲೆ ನಂತರದ ಕಂತು ನೀಡಲಾಗುವುದು. ಡಿ.11ರಂದು ಸದನದಲ್ಲಿ ಚರ್ಚಿಸಲಾಗುವುದು
> **ಎನ್.ಚಲುವರಾಯಸ್ವಾಮಿ,** ಕೃಷಿ ಸಚಿವ

ರಸ್ತೆ ಅಪಘಾತ: ನಾಲ್ವರ ಸಾವು

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಪಗಡದಿನ್ನಿ ಕ್ಯಾಂಪ್ ಸಮೀಪ ಲಾರಿ ಹಾಗೂ ಸರಕು ಸಾಗಣೆ ವಾಹನದ ಮಧ್ಯೆ ಗುರುವಾರ ನಡೆದ ರಸ್ತೆ ಅಪಘಾತದಲ್ಲಿ ನಾಲ್ವರು ಯುವಕರು ಮೃತಪಟ್ಟಿದ್ದಾರೆ.

ಮೃತರನ್ನು ಸಿಂಧನೂರಿನ ಇಸ್ಮಾಯಿಲ್ ಮೆಹಬೂಬ್ (25), ರವಿ ಬೊಕ್ಕನಟ್ಟಿ (21), ಲಿಂಗಸೂರಿನ ಚೆನ್ನಬಸವ (25), ಅಂಬರೀಷ್ (20) ಎಂದು ಗುರುತಿಸಲಾಗಿದೆ. ಇವರೆಲ್ಲ ಮದುವೆ ಮಂಟಪದ ಡೆಕೋರೇಷನ್ ಮಾಡುವ ಕೆಲಸಗಾರರಾಗಿದ್ದರು.

ಲಿಂಗಸುಗೂರು ಕಡೆಯಿಂದ ಸಿಂಧನೂರಿಗೆ ಬರುತ್ತಿದ್ದ ಲಾರಿ ಹಾಗೂ ಸಿಂಧನೂರಿನಿಂದ ಮಸ್ಕಿ ಕಡೆಗೆ ಹೊರಟಿದ್ದ ಸರಕು ಸಾಗಣೆ ವಾಹನದ ನಡುವೆ ಡಿಕ್ಕಿಯಾಗಿದೆ. ಸ್ಥಳದಲ್ಲೇ ಮೂವರು ಮೃತಪಟ್ಟಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ರವಿ ಬೊಕ್ಕನಟ್ಟಿ ಕೊನೆಯುಸಿರೆಳೆದಿದ್ದಾರೆ.

ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಐಡಿಯಿಂದ ಪ್ರೀತಮ್ ವಿಚಾರಣೆ

ಚಿಕ್ಕಮಗಳೂರು: ಪೊಲೀಸ್ ಮತ್ತು ವಕೀಲರ ನಡುವಿನ ಘರ್ಷಣೆ ಪ್ರಕರಣದ ತನಿಖೆ ಆರಂಭಿಸಿರುವ ಸಿಐಡಿ ಪೊಲೀಸರು, ಗುರುವಾರ ವಕೀಲ ಪ್ರೀತಮ್ ಅವರ ವಿಚಾರಣೆ ನಡೆಸಿದರು.

ನಗರದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಸಿಐಡಿ ಡಿಐಜಿ ವಂಶಿಕೃಷ್ಣ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.

ನ.30ರಂದು ಸಂಜೆ ಹೆಲ್ಮೆಟ್ ಹಾಕದೆ ಬಂದ ವಕೀಲ ಪ್ರೀತಮ್ ಮತ್ತು ಪೊಲೀಸರ ನಡುವೆ ನಡೆದ ವಾಗ್ವಾದ ಬಳಿಕ ಹಲವು ತಿರುವು ಪಡೆದುಕೊಂಡಿತ್ತು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025 ನ್ಯಾಕ 'ಎ' ಶ್ರೇಣಿ ಮಾನ್ಯತೆ
ಫೋನ್ : 0836-2222392, ಫ್ಯಾಕ್ಸ್ 0836-2223392
ಜಾಲತಾಣ : www.kslu.karnataka.gov.in
ಇ-ಮೇಲ್ : kslu.registrar@gmail.com

ಸಂಖ್ಯೆ: ಕರಾಕಾವಿ/ಆಡಳಿತ/ಹೊ.ಗು.ಭ.ಸಿ. ಟೆಂಡರ್/2023-24/2233
ದಿನಾಂಕ : 06/12-2023

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

2023-24ನೇ ಸಾಲಿಗಾಗಿ ಈ ವಿಶ್ವವಿದ್ಯಾಲಯದ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪೂರೈಸಲು **07** ದಿನಗಳ ಅಲ್ಪಾವಧಿ ಮರು ಟೆಂಡರನ್ನು ದಿನಾಂಕ: **14-12-2023** ರಂದು ಸಾಯಂಕಾಲ 5.00 ಗಂಟೆಯವರೆಗೆ ಟೆಂಡರ್‌ನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ. **50,97,000/-** ಇ.ಎಮ್.ಡಿ. ಮೊತ್ತ ರೂ. **1,27,425/-**
(1) ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ : **14-12-2023** ಸಾಯಂಕಾಲ: 5.00 ಗಂಟೆಯವರೆಗೆ (2) ತಾಂತ್ರಿಕ ಟೆಂಡರ್‌ನ್ನು ದಿನಾಂಕ : **16-12-2023** ಮುಂಜಾನೆ 11.00 ಗಂಟೆಗೆ ಅಥವಾ ಮರು ದಿನ ಕಛೇರಿ ವೇಳೆಯಲ್ಲಿ ತೆರೆಯಲಾಗುವುದು. (3) ಆರ್ಥಿಕ ಟೆಂಡರ್‌ನ್ನು ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ ತೆರೆಯಲಾಗುವುದು.
ಕಾರಣ, ಈ ಕುರಿತು ಷರತ್ತು ಹಾಗೂ ಇತರ ವಿವರಗಳಿಗಾಗಿ ಈ ವಿಶ್ವವಿದ್ಯಾಲಯದ ಅಂತರ್ಜಾಲ ತಾಣ **www.kslu.karnataka.gov.in** ಹಾಗೂ **https://kppp.karnataka.gov.in** ವನ್ನು ವೀಕ್ಷಿಸಲು ಕೋರಿದೆ.

ಸಹಿ/-ಕುಲಸಚಿವರು,
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
ವಾಸಾಸಂಇ/ಧಾ/ಕೆಎಸ್ಎಂಸಿಎ/556/2023-24

ಪಟ್ಟಣ ಪಂಚಾಯತ ಕಾರ್ಯಾಲಯ ಶಿರೂರ

ನಂ. ಪ.ಪಂ.ಶಿ/ಸ್ವ ಭಾ ಮಿ/ಟೆಂಡರ ಪ್ರಕಟಣೆ/2023-24 ದಿನಾಂಕ:04-12-2023

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಶಿರೂರ ಪಟ್ಟಣ ಪಂಚಾಯತಿಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆ ಅಧಿನಿಯಮ 2016ರ ನ್ವಯ ಹಾಗೂ ಹಸಿರು ನ್ಯಾಯಾಧಿಕರಣ ಆದೇಶ ಸಂಖ್ಯೆ 606/2018 ರನ್ವಯ ಸಂಪೂರ್ಣ ಅನುಷ್ಠಾನಕ್ಕಾಗಿ ಮಾನ್ಯ ಪೌರಾಡಳಿತಾ ನಿರ್ದೇಶನಾಲಯ ಬೆಂಗಳೂರು ರವರ ಆಡಳಿತ್ಮಾಕ ಅನುಮೋದನೆ ಪತ್ರ ದಿನಾಂಕ:04-08-2023 ರನ್ವಯ ಅನುಮೋದಿತ ವಿಸ್ತೃತ ಯೋಜನಾ ವರದಿಯಲ್ಲಿನ ಕಾಮಗಾರಿಗಳನ್ನು ನಿಯಮಾನುಸಾರವಾಗಿ ಅನುಷ್ಠಾನಗೊಳಿಸಲು ಪಟ್ಟಣ ಪಂಚಾಯತ ಅನುದಾನ/ರಾಜ್ಯ ಸರ್ಕಾರದ ಅನುದಾನ/ಕೇಂದ್ರ ಸರ್ಕಾರ ಅನುದಾನಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2001 ರ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವ್ಹಿಲ್/ವಿದ್ಯುತ್ ಗುತ್ತಿಗೆದಾರರಿಂದ ಟೆಂಡರ್ ದರಖಾಸ್ತು KW-1, KW-2, KW-3 ನಿಬಂಧನೆಗೊಳಪಟ್ಟಂತೆ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಾಮಾನ್ಯ ವರ್ಗದವರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮೀಸಲ್ಲಿದ್ದ ಇಂಡೆಂಟ್ ಸಂಖ್ಯೆಗಳು DMA/2023-24/OW/WORK_INDENT6828, 6860, 6924(ST), 6927, 7065, 7026, 6934, 6938, 6942, 6949(SC), 6994(SC) ಈ ಮೇಲಿನ ಇಂಡೆಂಟ್ ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆ ಪ್ರಚೂರ ಪಡಿಸಲಾಗಿದೆ ಆಸಕ್ತಿಯಳ್ಳ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ http://eproc.karanataka.gov.in ನಿಂದ ಟೆಂಡರ್ ದರಖಾಸ್ತು ಗಳುನ್ನು ಡೌನ್‌ಲೋಡ್ ಮಾಡಿಕೊಂಡು ನಿಗಧಿತ ದಾಖಲೆಗಳೊಂದಿಗೆ ನಿಯಮಾನುಸರ ವಾಗಿ ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಚೇರಿಯ ಲೋಕೋಪಯೋಗಿ ವಿಭಾಗಕ್ಕೆ ಸಂಪರ್ಕಿಸಬಹುದಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸುವ ಷೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ.

1	ಟೆಂಡರ ದರಖಾಸ್ತು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	02-01-2024	ಸಂಜೆ 4.30 ಗಂಟೆವರೆಗೆ	ಟೆಂಡರ ಪ್ರಕಟಣೆ ಅವಧಿ 30 ದಿನಗಳು

ಸೂಚನೆ:ಟೆಂಡರನಲ್ಲಿ ದಿನಾಂಕ ಹಾಗೂ ಇತರೇ ತಿದ್ದಪಡಿ ಇದ್ದಲ್ಲಿ ಇ ಪೋರ್ಟಲನಲ್ಲಿ ತಿಳಿಸಲಾಗುವುದು. ಯಾವದೇ ದಿನ ಪತ್ರಿಕೆಯಲ್ಲಿ ಪ್ರಚೂರುಪಡಿಸಲಾಗುವದಿಲ್ಲ.

ಸಹಿ/-(ಶಿವಾನಂದ ಆಲೂರ) ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಶಿರೂರ
ಸಹಿ/-(ಅಮರೇಶ ಪಮ್ಮಾರ) ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಶಿರೂರ
DIPR/BGK/RO-NO-213/KSMCA/2023-24

ಕೃಷ್ಣಾ ಭಾಗ್ಯ ಜಲ ನಿಗಮ ನಿ0ಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮ)
ಅಧೀಕ್ಷಕ ಇಂಜನೀ0ಯರರ ಕಚೇರಿ, ಕೃಭಾಜನಿ(ನಿ)
ಅಣೆಕಟ್ಟು ವೃತ್ತ, ಆಲಮಟ್ಟಿ.

ಸಂ/ಕೃಭಾಜನಿನಿ/ಆವಆ/ಸಇಂ-1/ನೀಸಸ/2023-24/2546 ದಿನಾಂಕ: 06-12-2023

ಪ್ರಕಟಣೆ

ವಿಷಯ:2023-24 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಆಣೆಕಟ್ಟು ವೃತ್ತ ಆಲಮಟ್ಟಿ ಅಡಿ ಬರುವ ಏತ ನೀರಾವರಿ ಯೋಜನೆಗಳ ಕಾಲುವೆ ಜಾಲಗಳಿಗೆ ನೀರನ್ನು ಹರಿಸದೇ ಇರುವ ಕುರಿತು.
ಉಲ್ಲೇಖ:ಸದಸ್ಯ ಕಾರ್ಯದರ್ಶಿಗಳು, ನೀರಾವರಿ ಸಲಹಾ ಸಮಿತಿ ಕೃ.ಮೇ.ಯೋ ಹಾಗೂ ಮುಖ್ಯ ಇಂಜನೀಯರರು, ಕೃಭಾಜನಿನಿ ಕಾಲುವೆ ವಲಯ ಸಂ. 1 ಭೀಮರಾಯನಗುಡಿ ಇವರ ಪತ್ರ ಸಂ. 1778 ದಿನಾಂಕ: 17-11-2023.

ದಿನಾಂಕ: 07-11-2023 ರಂದು ಜರುಗಿದ ಕೃಷ್ಣಾ ಮೇಲ್ದಂಡೆ ಯೋಜನೆಯ 2023-24 ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ, ಆಲಮಟ್ಟಿ ಮತ್ತು ನಾರಾಯಣಪೂರ ಜಲಾಶಯಗಳಲ್ಲಿ ಶೇಖರಣೆಗೊಂಡ ನೀರಿನ ಪ್ರಮಾಣ ಕಡಿಮೆ ಇರುವುದರಿಂದ 2023-24ನೇ ಸಾಲಿನ ಹಿಂಗಾರು ಹಂಗಾಮಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶದ ಕಾಲುವೆ ಜಾಲದಲ್ಲಿ ನೀರು ಹರಿಸಲು ಸಾಧ್ಯವಿರುವುದಿಲ್ಲ ಎಂದು ನಿರ್ಣಯಿಸಲಾಗಿರುತ್ತದೆ. ಮುಂದುವರೆದು, ಪ್ರಸ್ತುತ ಆಲಮಟ್ಟಿ ಆಣೆಕಟ್ಟುವಿನಲ್ಲಿ ಶೇಖರಣೆಗೊಂಡಿರುವ ನೀರನ್ನು ಜೂನ-2024 ರವರೆಗೆ ಜನ-ಜಾನುವಾರುಗಳಿಗೆ ಕುಡಿಯುವ ಸಲುವಾಗಿ ಬಳಸಿಕೊಳ್ಳಲಾಗುವದು. "ಕಾರಣ ಆಣೆಕಟ್ಟು ವೃತ್ತ ಆಲಮಟ್ಟಿ ಅಡಿಯಲ್ಲಿ ಬರುವ ಆಲಮಟ್ಟಿ ಎಡದಂಡೆ ಕಾಲುವೆ, ಆಲಮಟ್ಟಿ ಬಲದಂಡೆ ಕಾಲುವೆ, ತಿಮ್ಮಾಪೂರ ಏತ ಕಾಲುವೆ, ಚಿಮ್ಮಲಗಿ ಪಶ್ಚಿಮ ಕಾಲುವೆ ಮತ್ತು ಮರೋಳ ಏತ ಕಾಲುವೆ ಗಳಿಗೆ 2023-24 ನೇ ಸಾಲಿನ ಹಿಂಗಾರು ಹಂಗಾಮಿಗಾಗಿ ನೀರನ್ನು ಹರಿಸಲಾಗುವುದಿಲ್ಲ" ಎಂದು ರೈತರ ಗಮನಕ್ಕೆ ತರುತ್ತಾ ಹಿಂಗಾರು ಹಂಗಾಮಿನ ಬೆಳೆಗಳನ್ನು ಬೆಳೆಯದೇ ಇರಲು ವಿನಂತಿಸಲಾಗಿದೆ. ಅಲ್ಲದೇ ಹಿಂಗಾರು ಹಂಗಾಮಿನ ಬೆಳೆಗಳ ರಕ್ಷಣೆಯ ಕುರಿತಾಗಿ ಕೃಭಾಜನಿ(ನಿ)ದ ಯಾವದೇ ಹೊಣೆಗಾರಿಕೆ ಇರುವದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಮುಂದುವರೆದು, ಪ್ರಸ್ತುತ ಆಲಮಟ್ಟಿ ಜಲಾಶಯದಲ್ಲಿ ಶೇಖರಣಗೊಂಡ ನೀರನ್ನು ಜನ ಜಾನುವಾರುಗಳಿಗೆ ಕುಡಿಯಲು ಬಳಸಿಕೊಳ್ಳಲಾಗುತ್ತಿರುವುದರಿಂದ, ಜಲಾಶಯದಲ್ಲಿ ಹಿನ್ನೀರಿನಲ್ಲಿ ಯಾವುದೇ ತೆರೆನಾದ ಪಂಪಸೆಟ್ ಮೂಲಕ ನೀರನ್ನು ಪಡೆಯುವದನ್ನು ನಿರ್ಭಂದಿಸಲಾಗಿರುತ್ತದೆ. ಅನಧಿಕೃತವಾಗಿ ನೀರನ್ನು ಎತ್ತುತ್ತಿರುವುದು ಕಂಡು ಬಂದಲ್ಲಿ ನೀರಾವರಿ ಕಾಯ್ದೆ 1965 ರ ಪ್ರಕಾರ ಕ್ರಮ ಜರುಗಿಸಲಾಗುವುದು.

"ಜೀವ ಜಲ ಅತೀ ಅಮೂಲ್ಯ ಅದನ್ನು ಪೋಲು ಮಾಡಬೇಡಿ"

ಸಹಿ/-(ಬಸವರಾಜ ಡಿ)
ಅಧೀಕ್ಷಕ ಅಭಿಯಂತರರು,
ಕೃಭಾಜನಿನಿ ಆಣೆಕಟ್ಟು ವೃತ್ತ ಆಲಮಟ್ಟಿ
DIPR/BGK/RO-NO-219/KSMCA/2023-24

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

No: EE/RWSS/Dvn/SMG/TE/JJM/Kppp-Proc/2023-24/1628 Date : 05.12.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇಂಡೆಂಟ್ ಸಂಖ್ಯೆ : (1) 753 CALL2 (2) 714 CALL2 (3) 603 CALL3 (4) 823 CALL2 (5) 826 CALL2 (6) 717 CALL2 (7) 854 CALL2 (8) 861 CALL2 (9) 471 CALL2 (10) 387 CALL2 (11) 7119 (12) 1057 (13) 1058 (14) 7137 (15) 983 CALL2 (16) 843 CALL2 (17) 817 CALL2 (18) 816 CALL2 (19) 544 CALL2 (20) 320**

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https: //www.kppp.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು** (1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **12.12.2023 ರ ಸಂಜೆ 5.30** (2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **14.12.2023 ರ ಬೆಳಿಗ್ಗೆ 11.30** (3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **14.12.2023 ರ ಬೆಳಿಗ್ಗೆ 11.30** (4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **16.12.2023 ರ ಬೆಳಿಗ್ಗೆ 11.30** (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ಏಕ ಲಕೋಟೆ & ದ್ವಿ ಲಕೋಟೆ 6 ತಿಂಗಳು (180 ದಿನಗಳು).**

ಸಹಿ/- ಕಾರ್ಯಪಾಲಕ ಇಂಜಿನಿಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.22-12
ಝೇಂಕಾರ್/2023-24

ನಗರಸಭಾ ಕಾರ್ಯಾಲಯ, ಚಳ್ಳಕೆರೆ-577522 (ಚಿತ್ರದುರ್ಗ ಜಿಲ್ಲೆ)

ಫೋನ್ ನಂ. 08195-250958 ಇ-ಮೇಲ್:- ka.challakere.cmc@gmail.com

ಸಂಖ್ಯೆ:ಚ.ನ/ತಾಂತ್ರಿಕ/ಎನ್.ಎಂ.ಪಿ.ಸಿ.15ನೇ.ಹ.ಎಸ್.ಎಫ್.ಸಿ ಶೇ5, ಟಿ.ಎಸ್.ಪಿ /ಟೆಂಡರ್/ಸಿ.ಆರ್01/2023-24 ದಿ:06/12/2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ 2020-21ನೇ ಸಾಲಿನ 15ನೇ ಹಣಕಾಸು ಅನುದಾನ, 2022-23ನೇ ಸಾಲಿನ ಎಸ್.ಎಫ್.ಸಿ ಶೇ 5 ಹಾಗೂ ಟಿ.ಎಸ್.ಪಿ ಅನುದಾನ ಮತ್ತು 2021-22ನೇ ಸಾಲಿನ Undistributed million plus city ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ-2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1&2, ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಸಿವಿಲ್ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ:21/12/2023 ರ ಸಂಜೆ 5:30 ಗಂಟೆವರೆಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.
www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.
ಕಾಮಗಾರಿಯ ಹೆಸರು:- 2020-21ನೇ ಸಾಲಿನ 15ನೇ ಹಣಕಾಸು ಅನುದಾನದಡಿಯಲ್ಲಿ (ರೂ 27.10 ಲಕ್ಷಗಳು):- (1) ಚಳ್ಳಕೆರೆ ನಗರದ ಬಳ್ಳಾರಿ ರಸ್ತೆಯ ವೀರಶೈವ ರುದ್ರಭೂಮಿ, ಕ್ರಿಶ್ಚಿಯನ್ ಸ್ಮಶಾನ ಹಾಗೂ ಸೋಮಗುದ್ದು ರಸ್ತೆಯ ಹರಿಜನ ರುದ್ರಭೂಮಿ ಮತ್ತು ಬೆಂಗಳೂರು ರಸ್ತೆಯ ಖಬರಾಸ್ಥಾನ ಸ್ಮಶಾನದಲ್ಲಿ ಶೆಡ್, ರಸ್ತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿ. INDENT NO: DMA/2023-24/BD/WORK_INDENT8449 **ಅಂದಾಜು ಮೊತ್ತ ರೂ.27.10 ಲಕ್ಷಗಳು. 2021-22ನೇ ಸಾಲಿನ Undistributed million plus city ಅನುದಾನದಡಿಯಲ್ಲಿ (ರೂ 49.00 ಲಕ್ಷಗಳು):- (2) ಪ್ಯಾಕೇಜ್ ನಂ 01:- 1)** ಚಳ್ಳಕೆರೆ ನಗರದ ಪಾವಗಡ ರಸ್ತೆ ಕೆ.ಎಸ್.ಆರ್.ಟಿ.ಸಿ ಡಿಪೋ ಪಕ್ಕದಲ್ಲಿರುವ ನೆಲಮಟ್ಟ ಹಾಗೂ ಮೇಲ್ಮಟ್ಟದ ಜಲಸಂಗ್ರಾಹಗಾರದ ಸುತ್ತಲೂ ಸುರಕ್ಷತಾ ಕ್ರಮವಾಗಿ ಕಾಂಪೌಂಡ್ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ ರೂ. 26.50 ಲಕ್ಷಗಳು 2) ಚಳ್ಳಕೆರೆ ನಗರದ ಬೊಮ್ಮಸಮುದ್ರ ರಸ್ತೆಯ ಸರ್ಕಾರಿ ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಹಿಂಭಾಗವಿರುವ ನೆಲಮಟ್ಟ ಹಾಗೂ ಮೇಲ್ಮಟ್ಟದ ಜಲಸಂಗ್ರಾಹಗಾರದ ಸುತ್ತಲೂ ಸುರಕ್ಷತಾ ಕ್ರಮವಾಗಿ ಕಾಂಪೌಂಡ್ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ ರೂ. 22.50 ಲಕ್ಷಗಳು INDENT NO: DMA/2023-24/BD/WORK_INDENT8450 **ಅಂದಾಜು ಮೊತ್ತ ರೂ.49.00 ಲಕ್ಷಗಳು 2022-23ನೇ ಸಾಲಿನ ಎಸ್.ಎಫ್.ಸಿ ಟಿ.ಎಸ್.ಪಿ ಅನುದಾನದಡಿಯಲ್ಲಿ (ರೂ 4.80 ಲಕ್ಷಗಳು):-** (3) ಚಳ್ಳಕೆರೆ ನಗರದ ಪರಿಶಿಷ್ಟ ಪಂಗಡದ ವಾರ್ಡ್‌ಗಳಾದ ವಾರ್ಡ್ ನಂ:03,08,13,14,16,19,23&27 ರಲ್ಲಿ ಅವಶ್ಯವಿರುವ ಕಡೆ ಸಿಮೆಂಟ್ ಬೆಂಚ್ ಅಳವಡಿಸುವ ಕಾಮಗಾರಿ. INDENT NO: DMA/2023-24/OW/WORK_INDENT3750/CALL-3 **ಅಂದಾಜು ಮೊತ್ತ ರೂ. 4.80 ಲಕ್ಷಗಳು. 2022-23ನೇ ಸಾಲಿನ ಎಸ್.ಎಫ್.ಸಿ ಶೇ 5 ರ ಅನುದಾನದಡಿಯಲ್ಲಿ (ರೂ 1.47 ಲಕ್ಷಗಳು):-** (4) ಚಳ್ಳಕೆರೆ ನಗರಸಭೆ ವ್ಯಾಪ್ತಿಯ ವಿಕಲಾಂಗಚೇತನರಿಗೆ 03 ಚಕ್ರದ ಮೋಟರ್ ಸೈಕಲ್ ಖರೀದಿಸಿ ನೀಡುವುದು. INDENT NO: DMA/2023-24/OW/WORK_INDENT4449/CALL-3 **ಅಂದಾಜು ಮೊತ್ತ ರೂ. 1.47 ಲಕ್ಷಗಳು.**

RO.No.388:DIPR/CTA/KSMCA/2023-24
ಸಹಿ/- ಪೌರಾಯುಕ್ತರು, ನಗರಸಭೆ, ಚಳ್ಳಕೆರೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010.
ಟೆಲಿಫ್ಯಾಕ್ಸ್: 080-22024000 ಇ-ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2023-24/18 ದಿನಾಂಕ: 06-12-2023

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಐಟಂ ದರದ ಆಧಾರದ ಮೇಲೆ ದ್ವಿಲಕೋಟೆ ಪದ್ಧತಿಯಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರ ಅಗತ್ಯತೆಯಂತೆ ಈ ಕೆಳಕಂಡ ಸಂಬಂಧಿತ ಕಾಮಗಾರಿಗಳಲ್ಲಿ ಅನುಭವವಿರುವ ಏಜೆನ್ಸಿಗಳಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ರೂ.ಗಳಲ್ಲಿ)	ಕಾಮಗಾರಿ/ಸೇವೆಗಳು ಪೂರ್ಣಗೊಳ್ಳುವ ಕಾಲಾವಧಿ
1	ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರಿನಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ ಬದಲಾಯಿಸಬಹುದಾದ ಡಾಟಾ ಪ್ರಿಂಟಿಂಗ್‌ನೊಂದಿಗೆ ಐಎಂವಿ 133 ನೋಟೀಸ್‌ಗಳ ಮುದ್ರಣ ಯಂತ್ರದ ಸರಬರಾಜು.	2,04,00,000/-	3,06,000/-	ಒಂದು ತಿಂಗಳು (ಸರಬರಾಜಿಗೆ)
2	ಬಿ-ಟ್ರ್ಯಾಕ್ / ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ 2024 ರಿಂದ 2025ರ ಒಂದು ವರ್ಷದ ಅವಧಿಗೆ ಹಾಲಿಯಿರುವ 33 ಸಂಖ್ಯೆ ಅಡಾಪ್ಟಿವ್ ಸಂಚಾರ ಸಿಗ್ನಲ್ ದೀಪಗಳಿಗೆ ನಿರ್ವಹಣಾ ಸೇವೆಗಳನ್ನು ಒದಗಿಸುವುದು.	72,43,632/-	1,44,873/-	ಒಂದು ವರ್ಷ
3	ಬಿ-ಟ್ರ್ಯಾಕ್ / ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ 2024 ರಿಂದ 2027ರ ಮೂರು ವರ್ಷಗಳ ಅವಧಿಗೆ ಬೆಂಗಳೂರು ನಗರದ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರದ ಕಟ್ಟಡಕ್ಕೆ ಹೌಸ್‌ಕೀಪಿಂಗ್ ಸೇವೆಗಳು ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಸೇವೆಗಳನ್ನು ಒದಗಿಸುವುದು.	1,54,25,586/-	2,31,384/-	ಮೂರು ವರ್ಷಗಳು
4	ಬಿ-ಟ್ರ್ಯಾಕ್ / ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ 2024 ರಿಂದ 2027ರ ಮೂರು ವರ್ಷಗಳ ಅವಧಿಗೆ ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಇನ್‌ಸ್ಟಿಟ್ಯೂಟ್‌ಗೆ (ಟಿಟಿಆರ್‌ಎಸ್‌ಐ) ಹೌಸ್‌ಕೀಪಿಂಗ್ ಸೇವೆಗಳು ಮತ್ತು ನಿರ್ವಹಣಾ ಸೇವೆಗಳನ್ನು ಒದಗಿಸುವುದು.	1,52,88,181/-	2,29,323/-	ಮೂರು ವರ್ಷಗಳು
5	ಬೆಂಗಳೂರು ನಗರದ ರಸ್ತೆ ಸುರಕ್ಷತೆ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗಕ್ಕೆ ಬೆಂಗಳೂರು ನಗರದಲ್ಲಿ ಅಳವಡಿಸುವ ಹೊಸ 50 ಜಂಕ್ಷನ್‌ಗಳಿಗೆ ಆಟೋಮೇಟೆಡ್ ಸಂಚಾರ ಸಿಗ್ನಲ್‌ಗಳನ್ನು ಸರಬರಾಜು ಮಾಡಿ, ಅಳವಡಿಸಿ, ಕಾರ್ಯಚಾಲನೆಗೊಳಿಸಿ, ನಿರ್ವಹಣೆ ಮಾಡುವ ಕಾಮಗಾರಿ.	7,90,09,740/-	11,85,146/-	ಮೂರು ವರ್ಷಗಳು (ಸರಬರಾಜು ಮಾಡಿ ಅಳವಡಿಸಿ ಕಾರ್ಯಚಾಲನೆ ಮಾಡುವುದು)

ಆಸಕ್ತ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ ಹಾಗೂ ಬಿಡ್‌ಗಳು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು.

<u>**ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು:**</u> (1) ಟೆಂಡರ್‌ನ ಆಕ್ಷೇಪಣೆ/ವಿಚಾರಣೆಯನ್ನು ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **20.12.2023ರ 17.30 ಗಂಟೆವರೆಗೆ.** ಅರ್ಜಿದಾರರು ಎಲೆಕ್ಟ್ರಾನಿಕ್ ಮೇಲ್ **cekrdcl@gmail.com** ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕು. (2) ಪೂರ್ವ ಬಿಡ್ ಸಭೆಯ ದಿನಾಂಕ: **21.12.2023ರಂದು ಬೆಳಿಗ್ಗೆ 11.30 ಗಂಟೆಗೆ – ಜಂಟಿ ಪೊಲೀಸ್ ಆಯುಕ್ತರವರ ಕಚೇರಿ, ಬೆಂಗಳೂರು ನಗರ ಪೊಲೀಸ್, ನಂ. 5, ಸಂಚಾರ ನಿರ್ವಹಣಾ ಕೇಂದ್ರ, 2ನೇ ಮಹಡಿ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001.** (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **08.01.2024ರ 17.30 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **10.01.2024ರಂದು ಬೆಳಿಗ್ಗೆ 11.00 ಗಂಟೆಗೆ.**

* ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/- ಮುಖ್ಯ ಅಭಿಯಂತರರು
ಕರಅನಿನಿ, ಬೆಂಗಳೂರು
DIPR/CP/YC/2448/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕ್ವೀನ್ಸ್ ರಸ್ತೆ, ಶಿವಾಜಿನಗರ ವಿಭಾಗ, ಬೆಂಗಳೂರು.
ದಿನಾಂಕ: 07-12-2023

ತಿದ್ದುಪಡಿ

ಸಂಖ್ಯೆ:ಕಾ.ಪಾ.ಅ(ಶಿವಾನ)ಎಇ/ಇ-ಟೆಂಡರ್/11/2023-24 ದಿನಾಂಕ: 06-12-2023
ಟೆಂಡರ್ ಅಧಿಸೂಚನೆ ಉಲ್ಲೇಖದ ಅಡಿಯಲ್ಲಿ ಆಸಕ್ತ ಗುತ್ತಿಗೆದಾರರ ಗಮನಕ್ಕೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸರ್ವರ್ ಸಮಸ್ಯೆಗಳಿಂದಾಗಿ ಈ ಕೆಳಗಿನ ಬದಲಾವಣೆಗಳನ್ನು ಗಮನಿಸಬಹುದು.

ಕ್ರ. ಸಂ.	ಕೆಲಸದ ಹೆಸರು	ಕಾಮಗಾರಿಯ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)	ಇಎಂಡಿ ಮೊತ್ತ (ಅಧಿಸೂಚನೆಯ ಪ್ರಕಾರ) (ರೂ. ಗಳಲ್ಲಿ)	ಇಎಂಡಿ ಮೊತ್ತ (ಇದರಂತೆ ಓದಿ ಕೊಳ್ಳತಕ್ಕದ್ದು) (ರೂ. ಗಳಲ್ಲಿ)
1)	ಚಿನ್ನಪ್ಪ ಗಾರ್ಡನ್, ಲಿಂಕ್ ರಸ್ತೆ, 1ನೇ ಮುಖ್ಯ ರಸ್ತೆ, ಚರ್ಚ್ ರಸ್ತೆ, ಎಂಎಂ ರಸ್ತೆ, ಮುದ್ದಮ್ಮ ಗಾರ್ಡನ್, 3ನೇ ಅಡ್ಡರಸ್ತೆ, ಚಿನ್ನಪ್ಪ ಗಾರ್ಡನ್ 2ನೇ ಮುಖ್ಯ ರಸ್ತೆ, 13ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಿಸಿ ರಸ್ತೆ, ಒಳಚರಂಡಿ ಮತ್ತು ಪಾದಚಾರಿ ಮಾರ್ಗದ ಸಮಗ್ರ ಅಭಿವೃದ್ಧಿ ಕಾಮಗಾರಿಗಳು ಮತ್ತು ವಾರ್ಡ್ ನಂ:62ರ ಸುತ್ತಮುತ್ತಲಿನ ಪ್ರದೇಶ ಮತ್ತು ಮಡಿ ಮಸಿದಿ, ಚಿಕ್ಕ ಬಜಾರ್, ಪಾಯಪ್ಪ ಗಾರ್ಡನ್, ಹಳೆಯ ಸಿಮೆಂಟರಿ ರಸ್ತೆ, ಮಿಲ್ಕ್ ಮ್ಯಾನ್ ಸ್ಟ್ರೀಟ್, ಜಂಬುಮಹಲ್ ಪಾರ್ಕ್ ಮತ್ತು ವಾರ್ಡ್ ನಂ.66ರ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳು (ಪ್ಯಾಕೇಜ್ ಸಂಖ್ಯೆ: 01).	1000.00	10,00,000.00 (1,00,000.00 NEFT ಉಳಿದ 9,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)	15,00,000.00 (1,00,000.00 NEFT ಉಳಿದ 14,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)
2)	ವಾರ್ಡ್ ಸಂಖ್ಯೆ: 110ರ ಕಬ್ಬನ್ ಪೇಟೆ, ಬನ್ನಪ್ಪ ಪಾರ್ಕ್, ಟಾಸ್ಕರ್ ಟೌನ್, ಯೂನಿಯನ್ ಸ್ಟ್ರೀಟ್, ಲೇಡಿ ಕರ್ಜನ್ ರಸ್ತೆ, ಹೆಚ್‌ಎಲ್ ರಸ್ತೆ, ಸಫೀನಾ ಪ್ಲಾಜಾ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಅಡ್ಡರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಿಸಿ ರಸ್ತೆಗಳ ಮತ್ತು ಪಾದಚಾರಿ ಮಾರ್ಗದ ಅಭಿವೃದ್ಧಿ ಕಾಮಗಾರಿಗಳು (ಪ್ಯಾಕೇಜ್ ಸಂಖ್ಯೆ: 02).	1000.00	10,00,000.00 (1,00,000.00 NEFT ಉಳಿದ 9,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)	15,00,000.00 (1,00,000.00 NEFT ಉಳಿದ 14,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)
3)	ವಾರ್ಡ್ ಸಂಖ್ಯೆ: 93ರ ಶ್ರೀಕಾಂತರ್ ಲೇಔಟ್, ಚಕ್ರಾವತಿ ಅಯ್ಯಂಗಾರ್ ಲೇಔಟ್, ಶ್ರೀಪುರಂ ವಸಂತನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮತ್ತು ವಾರ್ಡ್ ಸಂಖ್ಯೆ: 90ರ ಹಲಸೂರು ಗುಪ್ತಾ ಲೇಔಟ್, ಕಾರ್ ಸ್ಟ್ರೀಟ್, ಸದಾಶಿವ ಮುದಲಿಯಾರ್ ರಸ್ತೆ, ಜಾಮಿಯಾ ಮಸೀದಿ ರಸ್ತೆ, ಹನುಮಯ್ಯ ರೆಡ್ಡಿ ರಸ್ತೆ, ಸುಬ್ಬಯ್ಯ ರೆಡ್ಡಿ ರಸ್ತೆ, ಆರ್‌ಕೆ ಮಠದ ರಸ್ತೆ, ಬಜಾರ್ ಬೀದಿ, ಭೋವಿ ಕಾಲೋನಿಗಳ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಿಸಿ ರಸ್ತೆ, ಒಳಚರಂಡಿ ಮತ್ತು ಪಾದಚಾರಿ ಮಾರ್ಗದ ಸಮಗ್ರ ಅಭಿವೃದ್ಧಿ ಕಾಮಗಾರಿಗಳು (ಪ್ಯಾಕೇಜ್ ಸಂಖ್ಯೆ: 03).	900.00	9,00,000.00 (1,00,000.00 NEFT ಉಳಿದ 8,00,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)	13,50,000.00 (1,00,000.00 NEFT ಉಳಿದ 12,50,000.00 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)

ಇತರೆ ಎಲ್ಲಾ ನಿಯಮ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೃಬೆಂಮಪಾ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಹೆಬ್ಬಾಳ ವಿಭಾಗ, 2ನೇ ಮಹಡಿ, ಬಿಬಿಎಂಪಿ ಕಟ್ಟಡ, ಜೆ.ಸಿ.ನಗರ ಮುಖ್ಯರಸ್ತೆ, ಮುನಿರೆಡ್ಡಿಪಾಳ್ಯ, ಬೆಂಗಳೂರು-560 032.

ಸಂ: ಕಾಪಾಅ/ಹೆಬ್ಬಾಳ/ಟೆಂಡರ್/06/2023-24 ದಿನಾಂಕ: 07.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	**ಪ್ಯಾಕೇಜ್-01** : ವಾರ್ಡ್ ಸಂಖ್ಯೆ 18, ರಾಧಾಕೃಷ್ಣ ದೇವಸ್ಥಾನದ ಆರ್.ಎಂ.ವಿ. 2ನೇ ಹಂತದಲ್ಲಿ ಡಾಲರ್ ಕಾಲೋನಿಯ 1ನೇ ಮುಖ್ಯರಸ್ತೆ, 7ನೇ ಕ್ರಾಸ್‌ನಿಂದ ಅಂಜನಮೂರ್ತಿ ವೃತ್ತ, ಆರ್.ಎಂ.ವಿ. 2ನೇ ಹಂತ, ನಾಗಶೆಟಿಹಳ್ಳಿ ಬಸ್ ನಿಲ್ದಾಣದಿಂದ ರೈಲ್ವೆ ಗೇಟ್‌ವರೆಗೆ (ರಿಂಗ್ ರಸ್ತೆಯ ಕಡೆಗೆ); ಹೆಚ್‌ಐಜಿ 3ನೇ ಮುಖ್ಯರಸ್ತೆ, ಡಾಲರ್ಸ್ ಕಾಲೋನಿಯ 4ನೇ, 5ನೇ ಮತ್ತು 6ನೇ ಅಡ್ಡರಸ್ತೆಯಲ್ಲಿ; ಪಾದಾಚಾರಿ ಮಾರ್ಗ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. ವಾರ್ಡ್ ಸಂಖ್ಯೆ 19, ಸಂಜಯನಗರದ ಮುಖ್ಯಸ್ತೆಯಲ್ಲಿ ಭೂಪಸಂದ್ರ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ವಿನಾಯಕ ಬಡಾವಣೆಯ 2ನೇ, 3ನೇ, 4ನೇ 5ನೇ ಅಡ್ಡರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆ ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು ಹಾಗೂ ಹೊಸ 50 ಹಾಸಿಗೆಗಳ ಆಸ್ಪತ್ರೆಯ ಕಟ್ಟಡ ನಿರ್ಮಾಣ (ಉಳಿದ ಕಾಮಗಾರಿಗಳು ಹಂತ-2). ವಾರ್ಡ್ ಸಂಖ್ಯೆ 20 ಗಂಗಾನಗರದ ಸಂಜಯನಗರ ಮುಖ್ಯರಸ್ತೆಯ 9ನೇ ಅಡ್ಡರಸ್ತೆ, ಲಕ್ಷ್ಮಯ್ಯ ಬ್ಲಾಕ್, 11ನೇ ಅಡ್ಡರಸ್ತೆ, ಆರ್‌ಬಿಐ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು, 2ನೇ ಮತ್ತು 3ನೇ ಅಡ್ಡರಸ್ತೆ, ಪಾಪಣ್ಣ ಬ್ಲಾಕ್, ವಸಂತಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು.	1000.00	ರೂ. 15,00,000/- (ರೂ. 1 ಲಕ್ಷ ಇ-ಪೇಮೆಂಟ್ ಮುಖಾಂತರ. ಉಳಿದ ರೂ. 14,00,000/- ಬ್ಯಾಂಕ್ ಗ್ಯಾರಂಟಿ ಮುಖಾಂತರ. ಬ್ಯಾಂಕ್ ಗ್ಯಾರಂಟಿಯನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.)
2	**ಪ್ಯಾಕೇಜ್-02:** ವಾರ್ಡ್ ಸಂಖ್ಯೆ 20 ಗಂಗಾನಗರದ ನೀರುಭಾವಿ ಕೆಂಪಣ್ಣ ಬಡಾವಣೆ, ಚಿನ್ನಮರಿ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. ವಾರ್ಡ್ ಸಂಖ್ಯೆ 21, ಹೆಬ್ಬಾಳದ ವಿನಾಯಕ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. ವಾರ್ಡ್ ಸಂಖ್ಯೆ 22, ವಿಶ್ವನಾಥ ನಾಗೇನಹಳ್ಳಿಯ 17ನೇ, 18ನೇ ಮತ್ತು 21ನೇ ಅಡ್ಡರಸ್ತೆ, ಕನಕನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು, 2ನೇ ಮತ್ತು 5ನೇ ಅಡ್ಡರಸ್ತೆ, ಕನಕನಗರ, (ಎಸ್‌ಡಬ್ಲ್ಯುಡಿಯಿಂದ ವಿ ನಾಗೇನಹಳ್ಳಿ ಮುಖ್ಯ ರಸ್ತೆ ಚರ್ಚ್) ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಗಂಗಮ್ಮ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಲಕ್ಷ್ಮಿ ಗೋಲ್ಡ್ ಪ್ಯಾರಡೈಸ್‌ನಿಂದ ವಿ ನಾಗೇನಹಳ್ಳಿ ಚರ್ಚ್ ಮುಖ್ಯ ರಸ್ತೆ (ಸುಲ್ತಾನಪಾಳ್ಯ ಮುಖ್ಯರಸ್ತೆ) ಮತ್ತು ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಗಾರ್ಮೆಂಟ್ ಫ್ಯಾಕ್ಟರಿಯಿಂದ ವಿ ನಾಗೇನಹಳ್ಳಿ ಚರ್ಚ್ (ಕನಕನಗರ ಮುಖ್ಯ ರಸ್ತೆ)ಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. ವಾರ್ಡ್ ಸಂಖ್ಯೆ 34, ಗಂಗೇನಹಳ್ಳಿಯ ಚಾಮುಂಡಲನಗರ ಮುಖ್ಯರಸ್ತೆಯ ಸುತ್ತಮುತ್ತಲಿನ ಪ್ರದೇಶಗಳು, ದೇನಾ ಬ್ಯಾಂಕ್ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು.	978.00	ರೂ. 14,67,000/- (ರೂ. 1 ಲಕ್ಷ ಇ-ಪೇಮೆಂಟ್ ಮುಖಾಂತರ. ಉಳಿದ ರೂ. 13,67,000/- ಬ್ಯಾಂಕ್ ಗ್ಯಾರಂಟಿ ಮುಖಾಂತರ. ಬ್ಯಾಂಕ್ ಗ್ಯಾರಂಟಿಯನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.)
3	**ಪ್ಯಾಕೇಜ್-03** : ವಾರ್ಡ್ ಸಂಖ್ಯೆ 33, ಮನೋರಾಯನಪಾಳ್ಯದ ಬಾಬುರೆಡ್ಡಿ ಬಡಾವಣೆ, ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಚಾಮುಂಡಿನಗರ ಮುಖ್ಯರಸ್ತೆ ಸುತ್ತಮುತ್ತಲಿನ ಪ್ರದೇಶಗಳು, ಕೌಸರ್ ನಗರ 4ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. ವಾರ್ಡ್ ಸಂಖ್ಯೆ 46, ಜೆ.ಸಿ. ನಗರದ ಪೆಮ್ಮಯ್ಯ ಬ್ಲಾಕ್, ಮುನಿಸ್ವಾಮಪ್ಪ ಬಡಾವಣೆ ಮುಖ್ಯರಸ್ತೆ, ಎಂವಿ ಸ್ಟ್ರೀಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು, 2ನೇ, 3ನೇ ಮುಖ್ಯರಸ್ತೆ ಮತ್ತು ವೆಂಕಟೇಶ್ವರ ದೇವಸ್ಥಾನ ಮಠದಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು, 11ನೇ, 12ನೇ, 9ನೇ ಅಡ್ಡರಸ್ತೆಗಳು, 1ನೇ ಬ್ಲಾಕ್ ಆರ್‌ಟಿ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣಾ ಕಾಮಗಾರಿಗಳು. ಹಾಗೂ ವಾರ್ಡ್ ಸಂಖ್ಯೆ 46, ಜೆ.ಸಿ. ನಗರ ಮುಖ್ಯರಸ್ತೆ, ಮುನಿರೆಡ್ಡಿಪಾಳ್ಯದ ಹೆಬ್ಬಾಳ ವಿಭಾಗ ಕಛೇರಿ ಕಟ್ಟಡದ ದುರಸ್ತಿ ಕಾಮಗಾರಿಗಳು. ವಾರ್ಡ್ ಸಂಖ್ಯೆ 46 ಜೆ ಸಿ ನಗರದ ದಿಣ್ಣೂರು ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡದಲ್ಲಿ 2ನೇ ಮಹಡಿಯ ನಿರ್ಮಾಣ ಮತ್ತು ವಾರ್ಡ್ ಸಂಖ್ಯೆ 19-ಸಂಜಯನಗರ, 20-ಗಂಗಾನಗರ, 21- ಹೆಬ್ಬಾಳ, 33-ಮನೋರಾಯನ ಪಾಳ್ಯ, 34-ಗಂಗೇನಹಳ್ಳಿ ಮತ್ತು 46-ಜೆ.ಸಿ.ನಗರದಲ್ಲಿ ಎಸ್‌ಎಸ್ ಸೈನೇಜ್ ನಾಮಫಲಕಗಳನ್ನು ಒದಗಿಸುವುದು.	1015.00	ರೂ. 15,00,000/- (ರೂ. 1 ಲಕ್ಷ ಇ-ಪೇಮೆಂಟ್ ಮುಖಾಂತರ. ಉಳಿದ ರೂ. 14,00,000/- ಬ್ಯಾಂಕ್ ಗ್ಯಾರಂಟಿ ಮುಖಾಂತರ. ಬ್ಯಾಂಕ್ ಗ್ಯಾರಂಟಿಯನ್ನು ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: **20.12.2023ರ ಅಪರಾಹ್ನ 3.00 ಗಂಟೆಗೆ.** 3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.12.2023 ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:**02.01.2024ರ ಸಂಜೆ 4.00 ಗಂಟೆಯ ನಂತರ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.kppp.karnataka.gov.in** ನಲ್ಲಿ ಲಾಗಿನ್ ಮಾಡಿ ಅಥವಾ ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ.

ರಾಜ್ಯಕ್ಕೆ ಬರಬೇಕಿದ್ದ ಹಣ ● 'ಪ್ರಜಾವಾಣಿ' ವರದಿ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್

'ಕೇಂದ್ರದಿಂದ ₹40 ಸಾವಿರ ಕೋಟಿ ಖೋತಾ'

ಪ್ರಜಾವಾಣಿ ವಾರ್ತೆ

ರಾಜ್ಯಕ್ಕೆ ಅನುದಾನ ಬಂದಿಲ್ಲ ಎಂಬುದರ ಕುರಿತು ಪ್ರಜಾವಾಣಿಯಲ್ಲಿ ಪ್ರಕಟವಾದ ವರದಿಯನ್ನು ವಿಧಾನ ಪರಿಷತ್‌ನಲ್ಲಿ ಸದಸ್ಯ ಯು.ಬಿ. ವೆಂಕಟೇಶ್ ಪ್ರದರ್ಶಿಸಿದರು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ವಿಧಾನ ಪರಿಷತ್: 'ಕಳೆದ ಐದು ವರ್ಷಗಳಿಂದ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ ಹಾಗೂ ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಪರಿಹಾರವಾಗಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾಗಿದ್ದ ₹40 ಸಾವಿರ ಕೋಟಿ ಅನುದಾನ ಕಡಿಮೆಯಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಪ್ರಶ್ನೋತ್ತರ ಕಲಾಪದ ವೇಳೆ ಸೆ. 4ರ 'ಪ್ರಜಾವಾಣಿ' ಸಂಚಿಕೆಯಲ್ಲಿ ಪ್ರಕಟವಾದ 'ಕೇಂದ್ರ ಪುರಸ್ಕೃತ 61 ಯೋಜನೆ: ಅನುದಾನ ಶೂನ್ಯ' ವರದಿಯನ್ನು ಪ್ರದರ್ಶಿಸಿ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವರು ಉತ್ತರಿಸಿದರು.

'ಕೇಂದ್ರದಿಂದ 61 ಇಲಾಖೆಗಳಿಗೆ ಬರಬೇಕಿದ್ದ ಅನುದಾನದಲ್ಲಿ ನಯಾ ಪೈಸೆ ಬಂದಿಲ್ಲ' ಎಂದು ವೆಂಕಟೇಶ್ ಪ್ರಸ್ತಾಪಿಸುತ್ತಿದ್ದಂತೆ, ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ವೈ.ಎ. ನಾರಾಯಣಸ್ವಾಮಿ ಮತ್ತಿತರರು, 'ಕೇಂದ್ರದಿಂದ ಎಷ್ಟು ಅನುದಾನ ಬಂದಿದೆ ಎಂಬುದರ ಬಗ್ಗೆ ಚರ್ಚಿಸಲು ನಾವೂ ಸಿದ್ಧರಿದ್ದೇವೆ. ಕೇಂದ್ರ ಸರ್ಕಾರ ಅನುದಾನ ನೀಡಿದರೂ ಅದನ್ನು ರಾಜ್ಯ ಸರಿಯಾಗಿ ಸದ್ಬಳಕೆ ಮಾಡಿಕೊಂಡಿಲ್ಲ. ಆರೋಪ ಮಾಡುವುದು ಸರಿಯಲ್ಲ' ಎಂದರು.

ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಸಭಾಪತಿ ಬಸವರಾಜ ಹೊರಟ್ಟಿ ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಆಗ ಉತ್ತರಿಸಿದ ಸಚಿವರು, 'ಕೇಂದ್ರ ಪುರಸ್ಕೃತ ಕೆಲವು ಯೋಜನೆಗಳಿಗೆ ಕೇಂದ್ರದಿಂದ ಅನುದಾನ ಇನ್ನೂ ಬಂದಿಲ್ಲ. ಬರಬಹುದೆಂಬ ನಿರೀಕ್ಷೆಯಿದೆ. 14 ಮತ್ತು 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ಒಟ್ಟು ₹11,495 ಕೋಟಿ ಮತ್ತು ಜಿಎಸ್‌ಟಿ ಪರಿಹಾರದ ಬಾಕಿ ಮೊತ್ತ ಬರಬೇಕಿದೆ. ನಮ್ಮ ರಾಜ್ಯದ ಬಜೆಟ್ ಗಾತ್ರ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ತೆರಿಗೆ ಪಾಲು ಹೆಚ್ಚಳವಾಗಿದೆ. ಆದರೆ, ಬಜೆಟ್ ಗಾತ್ರಕ್ಕೆ ಹೋಲಿಸಿದರೆ, ಕೇಂದ್ರದಿಂದ ಬರುವ ಅನುದಾನ ಕಡಿಮೆಯಾಗಿದೆ. ಇದರಿಂದ ನಮ್ಮ ಸಂಪನ್ಮೂಲ ಕ್ರೋಡೀಕರಣಕ್ಕೆ ಹೆಚ್ಚಿನ ಹೊಡೆತ ಬಿದ್ದಿದೆ' ಎಂದು ವಿವರಿಸಿದರು.

ಕಾರ್ಮಿಕ ಸಾರಿಗೆ ವಲಯ ಸ್ಥಾಪನೆ- ಲಾಡ್: (ವಿಧಾನ ಪರಿಷತ್) 'ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಮಾದರಿಯಲ್ಲೇ ಕಾರ್ಮಿಕ ಸಾರಿಗೆ ವಲಯವನ್ನು ಸ್ಥಾಪಿಸಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಬಿಜೆಪಿಯ ಪ್ರತಾಪಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಮಾದರಿಯಲ್ಲಿ ಸಾರಿಗೆ ವಲಯ ಸ್ಥಾಪನೆಯಾದರೆ, ನೋಂದಾಯಿತ ವಾಣಿಜ್ಯ ವಾಹನ ಬಳಕೆದಾರರಿಗೆ ಹೆಚ್ಚಿನ ಅನುಕೂಲ ಆಗಲಿದೆ' ಎಂದರು.

'ಚಾಲಕರು, ಕ್ಲೀನರ್, ಮೆಕ್ಯಾನಿಕ್‌ಗಳು, ಪಂಕ್ಚರ್ ಅಂಗಡಿಗಳಲ್ಲಿ ಕೆಲಸ ಮಾಡುವವರು ಮತ್ತಿತರರು ಇದರ ಲಾಭ ಪಡೆಯಲಿದ್ದಾರೆ. ರಾಜ್ಯದಲ್ಲಿ ಈ ರೀತಿಯ 35 ಲಕ್ಷ ಕಾರ್ಮಿಕರಿದ್ದಾರೆ. ಈ ಸಂಬಂಧ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದೇನೆ' ಎಂದರು.

'ಸಾರಿಗೆ ಇಲಾಖೆಯ ಶೇ 10ರಷ್ಟು ಸೆಸ್ ಮೊತ್ತ ಅಂದಾಜು ₹274 ಕೋಟಿಯನ್ನು ಸಾರಿಗೆ ಇಲಾಖೆಗೆ ಹಸ್ತಾಂತರ ಮಾಡಲಿದ್ದೇವೆ. ತಿಂಗಳೊಳಗೆ ಈ ಯೋಜನೆ ಅನುಷ್ಠಾನ ಮಾಡಲಾಗುವುದು' ಎಂದರು ಹೇಳಿದರು.

ಅಕ್ರಮ ವಲಸಿಗರ ಗಡೀಪಾರು- ಸಚಿವ ಪರಮೇಶ್ವರ: (ವಿಧಾನ ಪರಿಷತ್) 'ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ವಲಸಿಗರನ್ನು ವಿಶೇಷ ಕಾರ್ಯಾಚರಣೆ ಮೂಲಕ ಪತ್ತೆಹಚ್ಚಿ ಗಡಿಯವರೆಗೂ ಕರೆದೊಯ್ದು ಬಿಟ್ಟು ಬರಲಾಗುತ್ತಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಕಾಂಗ್ರೆಸ್ಸಿನ ಉಮಾಶ್ರೀ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ನೆಲೆಸಿರುವ ಬಾಂಗ್ಲಾದೇಶದ ಅಕ್ರಮ ನಿವಾಸಿಗಳನ್ನು ಪತ್ತೆಹಚ್ಚಲಾಗುತ್ತಿದೆ' ಎಂದರು.

'ಇತ್ತೀಚೆಗೆ 45 ದಿನ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸ್ ಇಲಾಖೆ, ಐದು ಸಾವಿರಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದೆ. ಅಕ್ರಮ ವಲಸಿಗರು ಇರುವ 28 ಹಾಟ್‌ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ಹೀಗೆ ಹಂತ ಹಂತವಾಗಿ ಅಕ್ರಮ ವಲಸಿಗರನ್ನು ಪತ್ತೆಹಚ್ಚುವ ಕಾರ್ಯ ಮುಂದುವರಿದಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ವಾಸಿಸುತ್ತಿರುವ ಬಾಂಗ್ಲಾ ಹಾಗೂ ವಿದೇಶಿ ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವ ಸಲುವಾಗಿ ಗುಪ್ತಚರ ವಿಭಾಗದ ಸಿಬ್ಬಂದಿ, ಠಾಣಾ ಸಿಬ್ಬಂದಿ ಸೂಕ್ತ ಗಸ್ತು ಮಾಡುತ್ತಿದ್ದಾರೆ' ಎಂದರು.

'ಇದುವರೆಗೆ ಬಾಂಗ್ಲಾ ಮತ್ತು ವಿದೇಶಿ ಅಕ್ರಮ ವಲಸಿಗರ ಮೇಲೆ ಒಟ್ಟು 764 ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ಅಕ್ರಮ ಬಾಂಗ್ಲಾ ವಲಸಿಗರ ವಿರುದ್ಧ 53 ಪ್ರಕರಣಗಳು ದಾಖಲಾಗಿವೆ. ವಿದೇಶಿಯರ ವಿರುದ್ಧವೂ 711 ಪ್ರಕರಣಗಳು ದಾಖಲಾಗಿವೆ. ಜೊತೆಗೆ, ಒಟ್ಟು 135 ಜನ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲಾಗಿದೆ' ಎಂದರು.

'ಅಕ್ರಮ ವಲಸಿಗರಿಗೆ ನಕಲಿ ಆಧಾರ್ ಕಾರ್ಡ್ ಸೇರಿದಂತೆ ಇತರ ದಾಖಲೆಗಳನ್ನು ಮಾಡಿ ಕೊಡುತ್ತಿರುವ ಏಜೆಂಟರನ್ನು ಪತ್ತೆ ಮಾಡಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ಒಪಿಎಸ್ ಜಾರಿ: ಎಸಿಎಸ್ ಸಮಿತಿ ಶೀಘ್ರ ಪುನರ್‌ರಚನೆ'

ವಿಧಾನಪರಿಷತ್: 'ರಾಜ್ಯದಲ್ಲಿ ಹಳೆ ಪಿಂಚಣಿ ಯೋಜನೆಯನ್ನು (ಒಪಿಎಸ್) ಜಾರಿಗೊಳಿಸುವ ಸಂಬಂಧ ಅಧ್ಯಯನ ನಡೆಸಿ ವರದಿ ಸಲ್ಲಿಸಲು ರಚಿಸಿರುವ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ಸಮಿತಿಗೆ ಇನ್ನಷ್ಟು ಸದಸ್ಯರನ್ನು ಸೇರಿಸಿ 10 ದಿನಗಳ ಒಳಗೆ ಪುನರ್ ರಚಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ, ಬಿಜೆಪಿಯ ಎಸ್.ವಿ. ಸಂಕನೂರ, ಹೇಮಲತಾ ನಾಯಕ್ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಉತ್ತರಿಸಿದ ಕೃಷ್ಣ ಬೈರೇಗೌಡ, 'ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಮುಂದುವರಿಸಬೇಕೇ? ಒಪಿಎಸ್ ವ್ಯವಸ್ಥೆ ಜಾರಿ ಮಾಡಬೇಕೇ ಎಂಬುದರ ಬಗ್ಗೆ ವಿಸ್ತೃತ ವರದಿ ನೀಡುವಂತೆ ಎಸಿಎಸ್ ಅವರ ಏಕ ವ್ಯಕ್ತಿ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಈಗಾಗಲೇ ಮೂರು ಬಾರಿ ಸಭೆ ನಡೆಸಿದೆ. ಆದಷ್ಟು ಬೇಗ ವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿತ್ತು. ಕೆಲವು ತಾಂತ್ರಿಕ ಕಾರಣಗಳಿಂದ ವರದಿ ನೀಡಲು ಸಾಧ್ಯವಾಗಿಲ್ಲ' ಎಂದರು.

'ಮೂರರಿಂದ ಐವರು ಸದಸ್ಯರನ್ನು ಸೇರಿಸಿ ಸಮಿತಿಯನ್ನು ಪುನರ್ ರಚಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಅಲ್ಲದೆ, ಒಪಿಎಸ್ ಜಾರಿಗೆ ಮುಂದಾಗಿರುವ ರಾಜಸ್ಥಾನ, ಛತ್ತೀಸಗಢ, ಪಂಜಾಬ್ ರಾಜ್ಯಗಳಿಗೆ ಭೇಟಿ ನೀಡಿ ವರದಿ ಸಿದ್ಧಪಡಿಸುವಂತೆ ಅವರು ತಿಳಿಸಿದ್ದಾರೆ. ಸಮಿತಿಯ ಕಾರ್ಯವ್ಯಾಪ್ತಿ, ವರದಿ ಕೊಡಲು ಕಾಲಮಿತಿ ಸೇರಿದಂತೆ ಷರತ್ತು ಮತ್ತು ನಿಯಮಗಳನ್ನು ಶೀಘ್ರದಲ್ಲಿ ರಚಿಸಲಾಗುವುದು. ಆದಷ್ಟು ಬೇಗ ವರದಿ ನೀಡುವಂತೆಯೂ ಸಮಿತಿಗೆ ಸೂಚಿಸಲಾಗುವುದು' ಎಂದರು.

'ಸದಸ್ಯರು ನೀಡಿದ ಸಲಹೆಯಂತೆ, ಅನುದಾನಿತ ಸಂಸ್ಥೆಗಳ ಸಿಬ್ಬಂದಿಯೂ ಪಿಂಚಣಿಯಿಂದ ವಂಚಿತರಾಗದಂತೆ ಗಮನಹರಿಸಲಾಗುವುದು' ಎಂದರು.

'ಎನ್‌ಪಿಎಸ್ ಯೋಜನೆಯಂತೆ ಭವಿಷ್ಯ ನಿಧಿ (ಪಿಎಫ್) ಪಾವತಿಸಿದ್ದು, ಆ ಮೊತ್ತ ಕೇಂದ್ರದ ಖಾತೆಯಲ್ಲಿದೆ. ಎನ್‌ಪಿಎಸ್ ಯೋಜನೆಯಿಂದ ಹೊರಬರಬೇಕಾದರೆ ಈ ಹಣ ವಾಪಸ್ ಬರಬೇಕು. ರಾಜಸ್ಥಾನ ಸರ್ಕಾರ ಈಗಾಗಲೇ ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆದಿದೆ. ಆದರೆ, ಕೇಂದ್ರ ಅದಕ್ಕೆ ಒಪ್ಪಿಲ್ಲ. ಈ ಸಮಸ್ಯೆಯೂ ಇದೆ' ಎಂದೂ ಸಚಿವರು ವಿವರಿಸಿದರು.

'ಹೊಸ ಮದ್ಯದಂಗಡಿ ಪರವಾನಗಿ ಪ್ರಸ್ತಾವ ಇಲ್ಲ'

ವಿಧಾನ ಪರಿಷತ್: 'ರಾಜ್ಯದಲ್ಲಿ ಹೊಸದಾಗಿ ಮದ್ಯದಂಗಡಿಗಳನ್ನು ತೆರೆಯಲು ಪರವಾನಗಿ ನೀಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ' ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಸ್ಪಷ್ಟಪಡಿಸಿದರು.

ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಈ ಕುರಿತ ಕೆಲವು ವದಂತಿಗಳಿಗೆ ಕಿವಿಗೊಡಬಾರದು' ಎಂದು ಮನವಿ ಮಾಡಿದರು.

'ಗ್ರಾಮೀಣ ಭಾಗಗಳಲ್ಲಿ ಅಂಗಡಿ ಮತ್ತಿತರ ಕಡೆಗಳಲ್ಲಿ ಮದ್ಯವನ್ನು ಮಾರಾಟ ಮಾಡಲಾಗುತ್ತಿದೆ. ಇದನ್ನು ತಪ್ಪಿಸಲು ಸಿಎಲ್-7ನಲ್ಲಿ ಕೆಲವು ವಿನಾಯಿತಿಗಳನ್ನು ನೀಡಲಾಗಿದೆಯೇ ಹೊರತು ಮದ್ಯಪಾನಕ್ಕೆ ಎಲ್ಲಿಯೂ ಉತ್ತೇಜನ ನೀಡಿಲ್ಲ' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

'ಹಂದಿ ಮಾಂಸ ತಿನ್ನಲು ಬಿಡಿ'

ವಿಧಾನಸಭೆ: 'ಬೆಳೆಹಾನಿ ಮಾಡುವ ಕಾಡು ಹಂದಿಯನ್ನು ರೈತರು ಗುಂಡು ಹೊಡೆದು ಸಾಯಿಸಿದ ಪ್ರಕರಣಗಳಲ್ಲಿ ಅವುಗಳ ಮಾಂಸವನ್ನು ಅವರು ತಿನ್ನಲು ಅವಕಾಶ ನೀಡಬೇಕು' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಆಗ್ರಹಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ವನ್ಯಜೀವಿ- ಮಾನವ ಸಂಘರ್ಷದ ಕುರಿತ ಚರ್ಚೆಯಲ್ಲಿ ಮಧ್ಯ ಪ್ರವೇಶ ಮಾಡಿದ ಅವರು, 'ಬೆಳೆ ಹಾನಿ ಮಾಡುವ ಕಾಡು ಹಂದಿಗೆ ಗುಂಡು ಹೊಡೆದು ಸಾಯಿಸಲು ಅರಣ್ಯ ಕಾಯ್ದೆಯಲ್ಲಿ ಅವಕಾಶವಿದೆ. ಆದರೆ, ಹಂದಿಯ ಮಾಂಸ ತಿನ್ನುವಂತಿಲ್ಲ. ಈ ರೀತಿ ಹಂದಿ ಮಾಂಸ ಕತ್ತರಿಸುತ್ತಿದ್ದ ನನ್ನ ಕ್ಷೇತ್ರದ ಜನರನ್ನು ಬಂಧಿಸಲಾಗಿದೆ. ಇಂತಹ ಕಾನೂನನ್ನು ಮೊದಲು ಬದಲಾವಣೆ ಮಾಡಿ' ಎಂದು ಒತ್ತಾಯಿಸಿದರು.

ಕಾಡುಹಂದಿಯ ಮಾಂಸ ತಿನ್ನಲು ಯತ್ನಿಸಿದರು ಎಂಬ ಕಾರಣಕ್ಕೆ ರೈತರನ್ನು ಬಂಧಿಸುವುದು ಯಾವ ನ್ಯಾಯ? ಇದು ಎಂಥಹ ಕಾನೂನು ಎಂದು ಪ್ರಶ್ನಿಸಿದರು.

ಮಂಗ, ಕಾಡುಕೋಣ, ಕಾಡೆಮ್ಮೆ, ಕಾಡು ಹಂದಿಗಳ ಹಾವಳಿಯಿಂದ ರೈತರು ಬದುಕುವುದೇ ಕಷ್ಟವಾಗಿದೆ. ಬೆಳೆ ಉಳಿಸಿಕೊಳ್ಳಲು ಏನು ಮಾಡಬೇಕು ಎಂಬುದು ಗೊತ್ತಾಗುತ್ತಿಲ್ಲ. ವನ್ಯಜೀವಿ ಹಾವಳಿ ತಡೆಗೆ ಸರ್ಕಾರ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದಲಿತರ ಮೇಲೆ ದೌರ್ಜನ್ಯ ಹೆಚ್ಚಳ ಹನುಮಂತಯ್ಯ ಕಳವಳ

ನವದೆಹಲಿ: ದೇಶದಲ್ಲಿ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಕಳವಳ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಗುರುವಾರ ವಿಷಯ ಪ್ರಸ್ತಾಪಿಸಿದ ಅವರು, 'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯ ಪ್ರಕಾರ ಒಂದು ವರ್ಷದಲ್ಲಿ ದಲಿತರ ಮೇಲಿನ ದೌರ್ಜನ್ಯಗಳಲ್ಲಿ ಶೇ 13ರಷ್ಟು ಏರಿಕೆಯಾಗಿದೆ' ಎಂದರು.

'2020ರಲ್ಲಿ 50,291, 2021ರಲ್ಲಿ 50,900 ಹಾಗೂ 2022ರಲ್ಲಿ 57,582 ಪ್ರಕರಣಗಳು ವರದಿಯಾಗಿವೆ. ಉತ್ತರ ಪ್ರದೇಶ, ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಹೆಚ್ಚು ಪ್ರಕರಣಗಳು ನಡೆಯುತ್ತಿವೆ. ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ಗಣನೀಯವಾಗಿ ಜಾಸ್ತಿ ಆಗಿವೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಈ ರೀತಿಯ ಮಾನವ ಹತ್ಯಾಕಾಂಡವನ್ನು ತಡೆಯಲು ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ತಕ್ಷಣ ₹10 ಸಾವಿರ ಕೋಟಿ ಬಿಡುಗಡೆ ಆಗಲಿ'

ಬರದ ಮೇಲಿನ ಚರ್ಚೆ: ₹2 ಲಕ್ಷದವರೆಗೆ ಕೃಷಿ ಸಾಲ ಮನ್ನಾಕ್ಕೆ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ವಿಧಾನಸಭೆ: ಬರದಿಂದಾಗಿ ರೈತರು ಸಂಕಷ್ಟದಲ್ಲಿದ್ದು ₹2 ಲಕ್ಷದವರೆಗಿನ ಕೃಷಿ ಸಾಲ ಮನ್ನಾ ಮಾಡುವುದರ ಜತೆಗೆ ಬರ ಪರಿಹಾರಕ್ಕಾಗಿ ₹10 ಸಾವಿರ ಕೋಟಿಯನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು.

ಬರದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯವ್ಯಾಪಿ ವಿವಿಧ ಬೆಳೆಗಳ ನಷ್ಟವಾಗಿದೆ. ಉತ್ತರ ಕರ್ನಾಟಕ ಭಾಗದ ರೈತರು ಬೆಂಗಳೂರು, ಮುಂಬೈ ಅಲ್ಲದೇ ವಿವಿಧ ರಾಜ್ಯಗಳಿಗೆ ಗುಳೇ ಹೋಗುತ್ತಿದ್ದಾರೆ. ಇದನ್ನು ತಡೆಯಲು ನರೇಗಾ ಅಡಿ ಉದ್ಯೋಗ ಕೊಡಿಸಬೇಕು ಎಂದು ಆಗ್ರಹಿಸಿದರು.

'ನರೇಗಾ ಯೋಜನೆ ಸಾಕಷ್ಟು ದುರ್ಬಳಕೆಗೆ ಕಾರಣವಾಗಿದೆ. ಯಾರಿಗೆ ಅಗತ್ಯವಿದೆಯೋ ಅವರಿಗೆ ಉದ್ಯೋಗ ಸಿಗುತ್ತಿಲ್ಲ. ಅದು ಹೇಗೆ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತು. ಅಧಿಕಾರಿಗಳು ಬರ ನಿರ್ವಹಣೆಯಲ್ಲಿ ಅಸಡ್ಡೆ ತೋರುತ್ತಿದ್ದಾರೆ. ಇತ್ತೀಚೆಗೆ ಬರ ವೀಕ್ಷಣೆಗೆ ಕೇಂದ್ರ ತಂಡ ಬಂದಾಗ ತಹಶೀಲ್ದಾರ್ ಒಬ್ಬರು ತಮ್ಮ ಕಾರಿನಲ್ಲಿ ನಿದ್ದೆ ಮಾಡಿದ್ದರು. ಅಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳದಿದ್ದರೆ ಅಧಿಕಾರಿಗಳಿಗೆ ಸರ್ಕಾರದ ಬಗ್ಗೆ ಭಯ- ಭಕ್ತಿ ಇರುವುದಿಲ್ಲ' ಎಂದು ಕುಮಾರಸ್ವಾಮಿ ಹೇಳಿದರು.

> ನಮ್ಮ ಜಿಲ್ಲೆಯಲ್ಲಿ ಬರ ಪರಿಹಾರಕ್ಕಾಗಿ ಪಿಡಿಎಫ್ ಖಾತೆಯಲ್ಲಿ ಇಟ್ಟಿರುವ ₹8 ಕೋಟಿ ಹಣಕ್ಕೆ ಜಿಲ್ಲಾಧಿಕಾರಿಗಳು ಪ್ರತಿ ದಿನ ಬೆಳಿಗ್ಗೆ ಗಂಧದಕಡ್ಡಿ ಹಚ್ಚಿ ಪೂಜೆ ಮಾಡುತ್ತಾರೆ
> **ಎಚ್‌.ಡಿ.ರೇವಣ್ಣ,** ಜೆಡಿಎಸ್ ಶಾಸಕ

ಕೇಂದ್ರದಲ್ಲಿ ಯಾವುದೇ ಸರ್ಕಾರ ಇದ್ದರೂ ಅಷ್ಟೇ, ಪರಿಹಾರ ಹಣ ಬಿಡುಗಡೆಗೆ ಒಂದೇ ಮಾನದಂಡವನ್ನು ಅನುಸರಿಸಲಾಗುತ್ತದೆ. ಕೇಂದ್ರದಿಂದ ಮೊದಲ ಕಂತಿನ ಹಣ ಈಗಾಗಲೇ ಬಂದಿರಬಹುದು. ಎರಡನೇ ಕಂತಿನ ಹಣ ಬರಬೇಕಾಗಿದೆ. ಈ ಬಗ್ಗೆ ಕಂದಾಯ ಸಚಿವರು ಮಾಹಿತಿ ನೀಡಬೇಕು ಎಂದು ಹೇಳಿದರು.

16 ಬಾರಿ ಬಜೆಟ್ ಮಂಡಿಸಿದವರು ಇದ್ದಾರೆ. ಕೃಷಿಕನಾಗಿ ಹುಟ್ಟಿ, ವೃತ್ತಿಯಲ್ಲಿ ವಾಣಿಜ್ಯೋದ್ಯಮಿಯಾಗಿ ಹವ್ಯಾಸಕ್ಕಾಗಿ ರಾಜಕಾರಣಿಯಾಗಿರುವ ಮತ್ತೊಬ್ಬ ಮಹಾನ್ ನಾಯಕರೂ ಇರುವ ಈ ಸರ್ಕಾರಕ್ಕೆ ಬರ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಕಾಲೆಳೆದರು.

ರೈತರ ಎಟಿಎಂ ಆಗಿ: ರಾಜ್ಯದ ಕಾಂಗ್ರೆಸ್ ಸರ್ಕಾರ ಐದು ರಾಜ್ಯಗಳ ಚುನಾವಣೆಗೆ 'ಎಟಿಎಂ' ಆಗಿ ಕೆಲಸ ಮಾಡಿದೆ. ರೈತರ ಪಾಲಿಗೆ ಎಟಿಎಂ ಆಗಿ ಕೆಲಸ ಮಾಡಲಿ ಎಂದು ಜೆಡಿಎಸ್‌ನ ಜಿ.ಟಿ. ದೇವೇಗೌಡ ಆಗ್ರಹಿಸಿದರು.

ಬರದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡ ಅವರು, ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸರ್ಕಾರ ಸಾಲ ನೀಡುತ್ತಿದೆ. ಮರುಪಾವತಿ ಅಥವಾ ಕಂತು ಒಂದು ದಿನ ವಿಳಂಬವಾದರೂ ಬಡ್ಡಿ ವಸೂಲು ಮಾಡಲಾಗುತ್ತದೆ. ಜನವರಿ 25ರವರೆಗೆ ರೈತರು ಪಾವತಿಸಬೇಕಾದ ಬಡ್ಡಿ ಬಾಕಿಯನ್ನಾದರೂ ಮನ್ನಾ ಮಾಡಿ ಎಂದು ಒತ್ತಾಯಿಸಿದರು.

ಸಿಎಂ ಕುರ್ಚಿಯಲ್ಲಿ ಕುಳಿತ ನಯನಾ!

ತೆಲಂಗಾಣ ವಿಧಾನಸಭೆಯ ಫಲಿತಾಂಶದ ಕಾರಣಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲು ಮುಂದಿನ ಸಾಲಿಗೆ ಬಂದ ಮೂಡಿಗೆರೆ ಶಾಸಕಿ ನಯನಾ ಮೋಟಮ್ಮ ಅವರು ಮುಖ್ಯಮಂತ್ರಿ ಆಸನದಲ್ಲಿ ಕುಳಿತರು, ಇದರಿಂದ ಗಲಿಬಿಲಿಗೊಂಡ ಶಿವಕುಮಾರ್ ಅವರು ತಕ್ಷಣವೇ 'ಇದು ಮುಖ್ಯಮಂತ್ರಿಯವರ ಆಸನ ಅಲ್ಲಿ ಕೂರಬಾರದು' ಎಂದು ಕೈಹಿಡಿದು ಎಬ್ಬಿಸಿದರು.

ತೆಲಂಗಾಣ ಮುಖ್ಯಮಂತ್ರಿ ಪ್ರಮಾಣ ಸ್ವೀಕಾರ ಕಾರ್ಯಕ್ರಮದ ಬಳಿಕ ಶಿವಕುಮಾರ್ ಅವರು ನೇರವಾಗಿ ಸದನಕ್ಕೆ ಬಂದರು.

ಅಕ್ಕಿ, ಸಕ್ಕರೆ, ಈರುಳ್ಳಿ ರಫ್ತು ನಿಷೇಧ ತಪ್ಪು

ಕೇಂದ್ರ ಸರ್ಕಾರವು ಅಕ್ಕಿ, ಸಕ್ಕರೆ, ಈರುಳ್ಳಿ ಸೇರಿ ಹಲವು ಕೃಷಿ ಉತ್ಪನ್ನಗಳ ರಫ್ತಿನ ಮೇಲೆ ನಿಷೇಧ ವಿಧಿಸಿರುವುದರಿಂದ ರೈತರಿಗೆ ತೊಂದರೆ ಆಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ರಫ್ತು ಮಾಡುವುದರಿಂದ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತಿತ್ತು. ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ಕೊಬ್ಬರಿ ಬೆಲೆ ಕುಸಿದಿದೆ ಎಂದು ಹೇಳಿದರು.

ಸರ್ಕಾರಕ್ಕೆ ವಿಪಕ್ಷ ನಾಯಕ ಆರ್‌. ಅಶೋಕ ಆಗ್ರಹ

'ಎಕರೆಗೆ ₹25 ಸಾವಿರ ಪರಿಹಾರ ಕೊಡಿ'

ಪ್ರಜಾವಾಣಿ ವಾರ್ತೆ

ಆರ್‌.ಅಶೋಕ

ವಿಧಾನಸಭೆ: ತೀವ್ರ ಬರಗಾಲದಿಂದ ಬೆಳೆ ನಷ್ಟಕ್ಕೀಡಾಗಿ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಪ್ರತಿ ಎಕರೆಗೆ ₹25,000 ಪರಿಹಾರ ನೀಡಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಸರ್ಕಾರವನ್ನು ಆಗ್ರಹಿಸಿದರು.

ಬರಗಾಲ ಕುರಿತು ಮುಂದುವರಿದ ಚರ್ಚೆಯಲ್ಲಿ ಗುರುವಾರ ಮಾತನಾಡಿದ ಅವರು, 'ಹಿಂದೆ ನಾವು ಅಧಿಕಾರದಲ್ಲಿ ಇದ್ದಾಗಲೂ ಪ್ರಕೃತಿ ವಿಕೋಪದಿಂದ ಬೆಳೆ ಹಾನಿ ಸಂಭವಿಸಿತ್ತು. ಆಗ ಕೇಂದ್ರದ ಕಡೆ ಬೆರಳು ತೋರಿಸುತ್ತಾ ಕೈಕಟ್ಟಿ ಕುಳಿತಿರಲಿಲ್ಲ. ರಾಜ್ಯ ಸರ್ಕಾರವೇ ಸ್ವಯಂಪ್ರೇರಿತವಾಗಿ ಪರಿಹಾರ ವಿತರಿಸಿತ್ತು. ಈಗಿನ ಸರ್ಕಾರಕ್ಕೆ ಪರಿಹಾರ ನೀಡಲು ಏನು ಸಮಸ್ಯೆಯಾಗಿದೆ' ಎಂದು ಪ್ರಶ್ನಿಸಿದರು.

ಹಿಂದೆ ಅತಿವೃಷ್ಟಿಯಿಂದ ಬೆಳೆಹಾನಿ ಆದಾಗ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿಯ ದುಪ್ಪಟ್ಟು ಪರಿಹಾರವನ್ನು ವಿತರಿಸಲಾಗಿತ್ತು. ಈಗಿನ ಸರ್ಕಾರ ರೈತರಿಗೆ ₹2,000 ಪರಿಹಾರ ವಿತರಣೆಗೆ ನಿರ್ಧರಿಸಿದೆ. ಈ ಸರ್ಕಾರ ರೈತರನ್ನು ಯಾವ ರೀತಿ ನೋಡುತ್ತಿದೆ ಎಂಬುದಕ್ಕೆ ಇದು ಸಾಕ್ಷಿ ಎಂದರು.

'ಸರ್ಕಾರ ಆರ್ಥಿಕವಾಗಿ ದಿವಾಳಿ ಆಗಿದೆ ಎಂಬ ಅನುಮಾನ ಕಾಡುತ್ತಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಬಳಿಕ ಹಾಲಿನಿಂದ ಮದ್ಯದವರೆಗೆ ಆರು ರೀತಿಯ ತೆರಿಗೆಗಳನ್ನು ರಾಜ್ಯದ ಜನರ ಮೇಲೆ ಹೇರಲಾಗಿದೆ. ಆದರೆ, ರೈತರಿಗೆ ಪರಿಹಾರ ನೀಡಲು ಹಣವಿಲ್ಲ ಎಂದರೆ ಹೇಗೆ? ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಬೇಕು' ಎಂದು ಅಶೋಕ ಆಗ್ರಹಿಸಿದರು.

ತೆಲಂಗಾಣದ ಚುನಾವಣೆಗೆ ಸಮಯ ವ್ಯಯಿಸುವವರಿಗೆ ಬರ ನಿರ್ವಹಣೆಗೆ ಕೆಲಸ ಮಾಡಲು ಪುರಸೊತ್ತಿಲ್ಲ. ಕುಡಿಯುವ ನೀರು ಪೂರೈಕೆ, ಜಾನುವಾರುಗಳಿಗೆ ಮೇವಿನ ಖರೀದಿ ಮತ್ತು ದಾಸ್ತಾನು, ಆಹಾರದ ಕೊರತೆ ನಿಭಾಯಿಸಲು ಸರ್ಕಾರ ಯಾವ ಸಿದ್ಧತೆಯನ್ನೂ ಮಾಡಿಲ್ಲ ಎಂದು ಟೀಕಿಸಿದರು.

'ಪ್ರತಿಯೊಬ್ಬ ಜಾಣನಿಗೂ ಅಹಂಕಾರ ಇದ್ದೇ ಇರುತ್ತದೆ, ತಾನೊಬ್ಬ ಕೋಣನೆಂದು ತಿಳಿಯುವವರೆಗೂ' ಎಂದು ಸಾಹಿತಿ ಬೀಚಿಯವರು ಹೇಳಿದ್ದರು. ಈ ಸರ್ಕಾರದಲ್ಲಿನ ಸಚಿವರ ಪರಿಸ್ಥಿತಿಯೂ ಹಾಗೆಯೇ ಇದೆ ಎಂದರು.

ಪ್ರಮುಖ ಒತ್ತಾಯಗಳು

- ಶಾಸಕರ ಅಧ್ಯಕ್ಷತೆಯ ಕಾರ್ಯಪಡೆಗಳಿಗೆ ತಲಾ ₹5 ಕೋಟಿ ಬಿಡುಗಡೆ ಮಾಡಬೇಕು
- ಕಾರ್ಮಿಕರು, ರೈತರು ಗುಳೆ ಹೋಗುವುದನ್ನು ತಪ್ಪಿಸಲು ಆಹಾರದ ಕಿಟ್ ವಿತರಿಸಬೇಕು
- ರೈತ ವಿದ್ಯಾನಿಧಿ ಯೋಜನೆಯನ್ನು ಪುನರಾರಂಭ ಮಾಡಬೇಕು
- ಫ್ರೂಟ್ಸ್ ತಂತ್ರಾಂಶದ ಆಧಾರದಲ್ಲಿ ಬರ ಪರಿಹಾರ ವಿತರಣೆ ನಿರ್ಧಾರ ಕೈಬಿಡಬೇಕು
- ಕಿಸಾನ್ ಸಮ್ಮಾನ್ ನಿಧಿಯಡಿ ರಾಜ್ಯ ಸರ್ಕಾರ ನೀಡುವ ನೆರವನ್ನು ಪುನರಾರಂಭಿಸಬೇಕು
- ಕುಡಿಯುವ ನೀರು ಪೂರೈಕೆಗೆ ಹೊಸ ಕೊಳವೆ ಬಾವಿ ಕೊರೆಯಲು ಅವಕಾಶ ನೀಡಬೇಕು
- ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಿಸಬೇಕು

'ಕುಡಿಯುವ ನೀರಿಗೆ ಪ್ರತ್ಯೇಕ ಅನುದಾನ'

'ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಸಲು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಮೂಲಕ ಪ್ರತಿ ಜಿಲ್ಲೆಗೆ ತಲಾ ₹1 ಕೋಟಿ ಪ್ರತ್ಯೇಕ ಅನುದಾನ ಒದಗಿಸಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

'ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಯೋಜನೆ ರೂಪಿಸಲಾಗುತ್ತಿದೆ. ಜಲ ಮೂಲಗಳನ್ನು ಗುರುತಿಸುವುದು ಮತ್ತು ನೀರಿನ ಪೂರೈಕೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. ಈ ಕುರಿತು ಅಧ್ಯಯನ ನಡೆಸಲು ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳ ತಜ್ಞರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ 'ಜಲ ಆಡಿಟ್ ಸಮಿತಿ' ರಚಿಸಲಾಗಿದೆ ಎಂದು ತಿಳಿಸಿದರು.

ಮುದ್ರಾಂಕ ಶುಲ್ಕ ಹೆಚ್ಚಳಕ್ಕೆ ಮಸೂದೆ

ಒಂದನೇ ಪುಟದಿಂದ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಸೂದೆಯನ್ನು ಸದನದಲ್ಲಿ ಮಂಡಿಸಿದರು.

ವಿವಾಹ ವಿಚ್ಛೇದನ ಪ್ರಮಾಣಪತ್ರ, ವಿಭಾಗ ಪತ್ರ, ಬಾಂಡ್, ಗುತ್ತಿಗೆ ಒಪ್ಪಂದ ಸಹ ಈ ಮಸೂದೆ ವ್ಯಾಪ್ತಿಯಲ್ಲಿವೆ. ಕಂಪನಿ ಆರಂಭಕ್ಕೆ ಸಂಬಂಧಿಸಿದ ಒಪ್ಪಂದ, ಚಿಟ್ ಫಂಡ್ ಒಪ್ಪಂದ, ವಕೀಲರ ಪ್ರಮಾಣಪತ್ರಗಳ ಮುದ್ರಾಂಕ ಶುಲ್ಕವನ್ನು ಹೆಚ್ಚಿಸುವ ಪ್ರಸ್ತಾವವೂ ಈ ಮಸೂದೆಯಲ್ಲಿದೆ.

ಕರ್ನಾಟಕಕ್ಕೆ ಹೋಲಿಸಿದರೆ ಇತರ ರಾಜ್ಯಗಳಲ್ಲಿ ಮುದ್ರಾಂಕ ಶುಲ್ಕದ ಪ್ರಮಾಣ ಜಾಸ್ತಿ ಇದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಮುದ್ರಾಂಕ ಶುಲ್ಕ ಹೆಚ್ಚಳ ಮಾಡಬೇಕು ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು. ಅದರ ಆಧಾರದಲ್ಲಿ ಈ ತಿದ್ದುಪಡಿ ಮಸೂದೆಯನ್ನು ರೂಪಿಸಲಾಗಿದೆ.

ಮಕ್ಕಳ ಪುಳಕ

ವಿಧಾನಮಂಡಲ ಚಳಿಗಾಲದ ಅಧಿವೇಶನದ ಕಲಾಪ ವೀಕ್ಷಿಸಲು ಗುರುವಾರ ಬಂದಿದ್ದ ಬೆಳಗಾವಿ ತಾಲ್ಲೂಕಿನ ಹೊಸೂರ(ಬಿ) ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಸುವರ್ಣ ವಿಧಾನಸೌಧದ ಎದುರು ಕುಣಿದು ಕುಪ್ಪಳಿಸಿದರು
ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಎನ್‌ಇಪಿ–ಎಸ್‌ಇಪಿ ಪರ–ವಿರೋಧ ವಾಗ್ವಾದ

ವಿಧಾನ ಪರಿಷತ್: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹಾಗೂ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ವಿಷಯದ ಪ್ರಸ್ತಾಪ ಬಿಜೆಪಿ–ಕಾಂಗ್ರೆಸ್ ಸದಸ್ಯರ ಮಧ್ಯೆ ವಾಗ್ವಾದಕ್ಕೆ ದಾರಿ ಮಾಡಿಕೊಟ್ಟಿತು.

ನಿಯಮ 330ರ ಅಡಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ದೇಶದಲ್ಲೇ ಏಕ ರೀತಿಯ ಶಿಕ್ಷಣದ ಧ್ಯೇಯೋದ್ದೇಶದಿಂದ ರೂಪಿಸಿರುವ ಎನ್‌ಇಪಿಯನ್ನು ರಾಜ್ಯ ಸರ್ಕಾರ ರಾಜಕೀಯ ಕಾರಣಗಳಿಗಾಗಿ ರದ್ದು ಮಾಡುತ್ತಿರುವುದು ಸಲ್ಲದು. ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮ ಅನುಸರಿಸುವ ಖಾಸಗಿ ಶಾಲೆಗಳು ಎನ್‌ಇಪಿ ಅಳವಡಿಸಿಕೊಳ್ಳುವಾಗ, ಒಂದು ಕೋಟಿಗೂ ಹೆಚ್ಚಿನ ಮಕ್ಕಳು ಪ್ರತ್ಯೇಕ ಪಠ್ಯಕ್ರಮ ಅನುಸರಿಸುವುದು ಸೂಕ್ತವಲ್ಲ. ಇದರಿಂದ ಮಕ್ಕಳ ಶಿಕ್ಷಣದಲ್ಲಿ ತಾರತಮ್ಯ ಮಾಡಿದಂತಾಗುತ್ತದೆ ಎಂದರು.

ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, 2020ಕ್ಕಿಂತ ಮೊದಲು ಮಕ್ಕಳು ಉತ್ತಮವಾಗಿ ಓದಿಲ್ಲವೇ? ದೇಶ, ವಿದೇಶಗಳಲ್ಲಿ ಹೆಸರು ಮಾಡಿಲ್ಲವೇ? ರಾಜ್ಯ ಶಿಕ್ಷಣ ನೀತಿಯನ್ನು ಏಕೆ ಲಘುವಾಗಿ ಪರಿಗಣಿಸುವಿರಿ ಎಂದರು.

ತೇಜಸ್ವಿನಿ ಗೌಡ, ನವೀನ್‌ಕುಮಾರ್, ಎನ್.ರವಿಕುಮಾರ್, ಎಂ.ನಾಗರಾಜ್, ಯು.ಬಿ.ವೆಂಕಟೇಶ್, ಶಶೀಲ್ ನಮೋಶಿ, ಎಸ್.ವಿ.ಸಂಕನೂರ, ಡಿ.ಎಸ್.ಅರುಣ್, ಹಣಮಂತ ನಿರಾಣಿ, ಟಿ.ಎ.ಶರವಣ, ಛಲವಾದಿ ನಾರಾಯಣ ಸ್ವಾಮಿ, ಸುನೀಲ್ ವಲ್ಯಾಪುರೆ ಸೇರಿದಂತೆ 20ಕ್ಕೂ ಹೆಚ್ಚು ಸದಸ್ಯರು ಎರಡೂ ಶಿಕ್ಷಣ ನೀತಿಗಳ ಪರ-ವಿರುದ್ಧ ಅಭಿಪ್ರಾಯ ಮಂಡಿಸಿದರು. ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ, ಯಾವುದೇ ನೀತಿಯಾಗಲಿ ಪೂರ್ಣ ಪ್ರಮಾಣದ ಶಿಕ್ಷಕರು, ಸಿಬ್ಬಂದಿ ಒಳಗೊಂಡ ಸಮಗ್ರ ಶಿಕ್ಷಣ ನೀತಿ ರಾಜ್ಯಕ್ಕೆ ನೀಡಲಿ ಎಂದರು.

ರಾಜ್ಯ ಶಿಕ್ಷಣ ನೀತಿಯನ್ನು ಬಲವಾಗಿ ಸಮರ್ಥಿಸಿಕೊಂಡ ಜೆಡಿಎಸ್‌ನ ಮರಿತಿಬ್ಬೇಗೌಡ, ಎನ್‌ಇಪಿ ಬಡವರು ಉನ್ನತ ಶಿಕ್ಷಣ ಪಡೆಯದಂತೆ ಮಾಡುತ್ತದೆ. ಅವೈಜ್ಞಾನಿಕ ನೀತಿಯಿಂದಾಗಿ ಹಲವು ಕಾಲೇಜುಗಳು ಈಗಾಗಲೇ ಬಾಗಿಲು ಮುಚ್ಚಿವೆ ಎಂದು ಹೇಳಿದ್ದು ಬಿಜೆಪಿ ಸದಸ್ಯರನ್ನು ಕೆರಳಿಸಿತು. ಗದ್ದಲದ ಮಧ್ಯೆಯೇ ಎಲ್ಲರ ಮಾತನ್ನೂ ಆಲಿಸುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಉತ್ತರ ನೀಡುವುದಾಗಿ ಹೇಳಿದರು. ಸಭಾಪತಿ ಸ್ಥಾನದಲ್ಲಿದ್ದ ಉಪ ಸಭಾಪತಿ ಕೆ.ಎಂ. ಪ್ರಾಣೇಶ್, ಒಂದೇ ವಿಷಯದ ಮೇಲೆ ಅರ್ಧದಿನ ನಡೆದ ಕಲಾಪವನ್ನು ಮರುದಿನಕ್ಕೆ ಮುಂದೂಡಿದರು.

'ಮುಂದಿನ ವರ್ಷ ಬೈಸಿಕಲ್ ವಿತರಣೆಗೆ ಯತ್ನ'

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ವಿಧಾನಸಭೆ: 'ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಉಚಿತವಾಗಿ ಬೈಸಿಕಲ್ ವಿತರಿಸಲು ಪ್ರಯತ್ನ ಮಾಡಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ಕಾಂಗ್ರೆಸ್‌ನ ಪ್ರದೀಪ್ ಈಶ್ವರ್ ಪ್ರಶ್ನೆಗೆ ಗುರುವಾರ ಉತ್ತರಿಸಿದ ಅವರು, '2019–2020ನೇ ಸಾಲಿನವರೆಗೂ ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ವಿತರಿಸಲಾಗಿತ್ತು. ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ಈ ಯೋಜನೆಯನ್ನು ಸ್ಥಗಿತಗೊಳಿಸಿತ್ತು. ಈ ಶೈಕ್ಷಣಿಕ ವರ್ಷದಲ್ಲಿ ಬೈಸಿಕಲ್ ವಿತರಣೆಗೆ ಅನುದಾನ ಒದಗಿಸಿಲ್ಲ' ಎಂದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸರ್ಕಾರಿ ಬಸ್‌ಗಳ ಮೂಲಕ ಶಾಲೆಗಳಿಗೆ ಹೋಗಲು ಉಚಿತ ಪಾಸ್ ವಿತರಿಸಲಾಗುತ್ತಿದೆ. ದೂರದ ಊರುಗಳ ಶಾಲೆಗಳಿಗೆ ತೆರಳುವ ಮಕ್ಕಳಿಗೆ ಕೇಂದ್ರ ಸರ್ಕಾರದ ಪ್ರಾಯೋಜಿತ 'ಸಮಗ್ರ ಶಿಕ್ಷಣ ಕರ್ನಾಟಕ' ಯೋಜನೆಯಡಿ ಆರು ತಿಂಗಳ ಅವಧಿಗೆ ಪ್ರತಿ ತಿಂಗಳಿಗೆ ₹600 ಸಾರಿಗೆ ಭತ್ಯೆ ನೀಡಲಾಗುತ್ತಿದೆ ಎಂದು ತಿಳಿಸಿದರು.

'ಹಲವು ಹಳ್ಳಿಗಳಿಗೆ ಸರ್ಕಾರಿ ಬಸ್‌ಗಳ ಸೌಲಭ್ಯವೇ ಇಲ್ಲ. ಅಂತಹ ಹಳ್ಳಿಗಳ ಮಕ್ಕಳು ಶಾಲೆಗೆ ಹೋಗುವುದಕ್ಕೆ ಕಷ್ಟವಾಗುತ್ತಿದ್ದು, ಬೈಸಿಕಲ್ ವಿತರಣೆ ಯೋಜನೆಯನ್ನು ಪುನರಾರಂಭ ಮಾಡಬೇಕು' ಎಂದು ಪ್ರದೀಪ್ ಈಶ್ವರ್ ಆಗ್ರಹಿಸಿದರು.

ಬೇಡಿಕೆಗೆ ದನಿಗೂಡಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಬಸ್ಸಿನ ಕೊರತೆಯಿಂದ ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸಲು ಉಚಿತವಾಗಿ ಬೈಸಿಕಲ್ ವಿತರಣೆ ಯೋಜನೆ ಜಾರಿಗೊಳಿಸಲಾಗಿತ್ತು. ಈಗ ಪುನರಾರಂಭ ಮಾಡಿದರೆ ಮಕ್ಕಳ ಸಮಸ್ಯೆ ಪರಿಹಾರವಾಗುತ್ತದೆ' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ನಮ್ಮ ಸರ್ಕಾರದ ಮೊದಲ ಬಜೆಟ್‌ನಲ್ಲಿ ಈ ಯೋಜನೆಗೆ ಅನುದಾನ ಮೀಸಲಿಟ್ಟಿಲ್ಲ. ಮುಂದಿನ ವರ್ಷ ಅನುದಾನ ಒದಗಿಸಿ, ಬೈಸಿಕಲ್ ವಿತರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸುತ್ತೇನೆ' ಎಂದು ತಿಳಿಸಿದರು.

ಕೊಠಡಿ ನಿರ್ಮಾಣಕ್ಕೆ ₹500 ಕೋಟಿ: ಕಾಂಗ್ರೆಸ್‌ನ ಯು.ಬಿ. ಬಣಕಾರ್ ಪ್ರಶ್ನೆಗೆ ಉತ್ತರಿಸಿದ ಮಧು ಬಂಗಾರಪ್ಪ, '2020–21ರಿಂದ 2022–23ರವರೆಗೆ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 9,604 ಕೊಠಡಿಗಳ ನಿರ್ಮಾಣಕ್ಕೆ ₹1,297.68 ಕೋಟಿ ಒದಗಿಸಲಾಗಿತ್ತು. ಈವರೆಗೆ ₹894.50 ಕೋಟಿ ವೆಚ್ಚ ಮಾಡಲಾಗಿದೆ' ಎಂದರು.

ಪ್ರಸಕ್ತ ವರ್ಷ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ₹500 ಕೋಟಿ ಒದಗಿಸಲು ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ಅನುದಾನ ಲಭ್ಯವಾದ ಬಳಿಕ ಕಾಮಗಾರಿಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

ಬಿಜೆಪಿ ನಾಯಕರ ತಿಕ್ಕಾಟ ಸ್ಫೋಟ

ಒಂದನೇ ಪುಟದಿಂದ

ಬೆಳಗಾವಿ ಪಾಲಿಕೆ ಸದಸ್ಯ ಅಭಿಜಿತ ಜವಳಕರ್ ಮೇಲೆ ರಮೇಶ ಪಾಟೀಲ ಮತ್ತಿತರು ಹಲ್ಲೆ ನಡೆಸಿದ ಪ್ರಕರಣದಲ್ಲಿ, ಜವಳಕರ್ ಅವರನ್ನೇ ಬಂಧಿಸಿದ್ದನ್ನು ಆರ್. ಅಶೋಕ, ಅಭಯ ಪಾಟೀಲ, ಬಸನಗೌಡ ಪಾಟೀಲ ಯತ್ನಾಳ ಅವರು ಶೂನ್ಯವೇಳೆಯಲ್ಲಿ ಪ್ರಶ್ನಿಸಿದ್ದರು.

ಚನ್ನರಾಜ ಮೇಲಿನ ಆರೋಪಕ್ಕೆ ಸಂಬಂಧಿಸಿ ಸರ್ಕಾರ ಕೂಡಲೇ ಉತ್ತರ ಕೊಡಬೇಕು ಎಂದು ಆಗ್ರಹಿಸಿದ್ದ ವಿಜಯೇಂದ್ರ, ಆಡಳಿತ-ವಿರೋಧ ಪಕ್ಷದ ಸದಸ್ಯರ ವಾಗ್ವಾದದ ಮಧ್ಯೆಯೇ ಏಕಾಏಕಿ ಸಭಾಧ್ಯಕ್ಷರ ಪೀಠದ ಎದುರು ಧರಣಿಗೆ ನುಗ್ಗಿದ್ದರು. ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ ಅವರಿಗೆ ಏನು ನಡೆಯುತ್ತಿದೆ ಎಂಬುದು ಗೊತ್ತಾಗದೇ ಕಕ್ಕಾಬಿಕ್ಕಿಯಾಗಿದ್ದರು. ಗುರುವಾರ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ಕೊಟ್ಟ ಬಳಿಕ ಧರಣಿ ವಾಪಸ್ ಪಡೆಯಲಾಗಿತ್ತು.

ಶೂನ್ಯವೇಳೆಯಲ್ಲಿ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ ಅವರು, ಪೃಥ್ವಿಸಿಂಗ್ ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ. ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು. ಅಭಿಜಿತ್ ಜವಳಕರ ಪ್ರಕರಣದಲ್ಲಿ, ಮೊದಲ ಆರೋಪಿ ರಮೇಶ ಪಾಟೀಲ ಸೇರಿ 8–10 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ರಮೇಶರನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

> ನಾನು ಯಾರ ಒತ್ತಡಕ್ಕೂ ಮಣಿದಿಲ್ಲ. ಅಪರಾಧ ಪ್ರಕರಣಗಳಲ್ಲಿ ಯಾರೊಬ್ಬರನ್ನು ರಕ್ಷಿಸುವ ಕೆಲಸವನ್ನೂ ಮಾಡುವುದಿಲ್ಲ.
> **ಜಿ. ಪರಮೇಶ್ವರ,** ಗೃಹ ಸಚಿವ

> ಎರಡು ಪ್ರಕರಣಗಳಲ್ಲಿ ಸರ್ಕಾರ ಭಿನ್ನ ನಿಲುವು ತಳೆದಿದೆ. ಇದನ್ನು ಖಂಡಿಸಿ ಸಭಾತ್ಯಾಗ ಮಾಡುತ್ತೇವೆ
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

ಈ ವೇಳೆ, ತಮ್ಮ ಪಕ್ಷದ ಸದಸ್ಯರನ್ನು ಧರಣಿಗೆ ಹುರಿದುಂಬಿಸಿದ ವಿಜಯೇಂದ್ರ, ಅಶೋಕ ಬಳಿ ಹೋಗಿ ಅವರಲ್ಲಿ ಕಿವಿಯಲ್ಲಿ ಏನೋ ಉಸುರಿಸಿದರು. ಅಶೋಕ ಮಾತನಾಡಲು ಆರಂಭಿಸುತ್ತಿದ್ದಂತೆ ಬಿಜೆಪಿಯ ಬಹುತೇಕ ಸದಸ್ಯರು, ಸಭಾಧ್ಯಕ್ಷರ ಪೀಠದತ್ತ ಧಾವಿಸಿದ್ದರು. ಎಲ್ಲರನ್ನೂ ವಾಪಸ್ ಹೋಗುವಂತೆ ಸೂಚಿಸಿದ ಅಶೋಕ, ಆಸ್ಪತ್ರೆಯ ಹಾಸಿಗೆ ಮೇಲೆ ಮಲಗಿದ್ದ ಜವಳಕರ್ ಅವರನ್ನು ಪೊಲೀಸರು ಬಂಧಿಸಿಕೊಂಡು ಹೋಗಿದ್ದಾರೆ. ಆಯುಧದಲ್ಲಿ ಇರಿದಿದ್ದರೂ ಈವರೆಗೂ ಆರೋಪಿಗಳನ್ನು ಬಂಧಿಸಿಲ್ಲ. ಪಾಲಿಕೆ ಸದಸ್ಯರಿಗೆ ಹೀಗಾದರೆ ಜನರಿಗೆ ರಕ್ಷಣೆ ಹೇಗೆ? ಸರ್ಕಾರದ ನಿಲುವನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇವೆ ಎಂದು ಹೇಳಿ ಹೊರಟರು.

ಧರಣಿ ನಡೆಸಲು ತಯಾರಾಗಿ ತಮ್ಮ ಆಸನದ ಎದುರು ನಿಂತಿದ್ದ ಬಿಜೆಪಿ ಸದಸ್ಯರ ಪೈಕಿ ಕೆಲವರು ಸದನದಿಂದ ಹೊರನಡೆದರು. ವಿಜಯೇಂದ್ರ ಸುತ್ತ ಗುಂಪುಗೂಡಿದ ಮತ್ತೆ ಕೆಲವು ಸದಸ್ಯರು, ಯಾವ ದಿಕ್ಕಿನೆಡೆಗೆ ಹೋಗುವುದೆಂದು ಕೆಲ ಹೊತ್ತು ಚರ್ಚಿಸುತ್ತಾ ಅಲ್ಲಿಯೇ ನಿಂತರು. ಏತನ್ಮಧ್ಯೆ, ಬೆಳಗಾವಿ ಶಾಸಕ ಅಭಯ ಪಾಟೀಲ, ಜವಳಕರ ಅವರನ್ನು ಬಂಧಿಸಿದ ಪಿಎಸ್‌ಐ ಅಮಾನತಿಗೆ ಆಗ್ರಹಿಸುತ್ತಾ ಏಕಾಂಗಿಯಾಗಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು.

ಸಭಾತ್ಯಾಗ ನಡೆಸಿ ಹೊರಹೋಗಿದ್ದ ಕೆಲವರು, ಮತ್ತೆ ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿದ್ದ ಅಭಯ ಪಾಟೀಲಗೆ ಬೆಂಬಲ ಸೂಚಿಸಲು ಮುಂದೆ ಹೋಗ ತೊಡಗಿದರು.

ಮಧ್ಯಪ್ರವೇಶಿಸಿದ, ಗೃಹ ಸಚಿವ ಪರಮೇಶ್ವರ ಅವರು 'ತನಿಖೆ ಹಂತದಲ್ಲಿರುವಾಗ ಸರ್ಕಾರ ಮಧ್ಯಪ್ರವೇಶ ಮಾಡುವುದಿಲ್ಲ' ಎಂದರು.

ಮೂರನೇ ಬಾರಿ ನಡೆ: ವಿರೋಧ ಪಕ್ಷದ ನಾಯಕನ ಗಮನಕ್ಕೆ ತರದೇ ಈ ರೀತಿ ಸದಸ್ಯರು ಏಕಾಏಕಿ ಧರಣಿ ನಡೆಸಿರುವುದು ಇದು ಮೊದಲೇನಲ್ಲ. ಬೆಳ್ತಂಗಡಿ ಶಾಸಕ ಹರೀಶ ಪೂಂಜಾ ಅವರ ಹಕ್ಕುಚ್ಯುತಿಯಾಗಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ನಡೆ ವಿರೋಧಿಸಿ ಚರ್ಚೆ ನಡೆಯುತ್ತಿತ್ತು. ಆಗ, ಏಕಾಏಕಿ ಸಭಾಧ್ಯಕ್ಷರ ಪೀಠದ ಎದುರು ನುಗ್ಗಿದ್ದ ಕರಾವಳಿ ಭಾಗದ ವಿ.ಸುನಿಲ್ ಕುಮಾರ್, ಭರತ್ ಶೆಟ್ಟಿ, ವೇದವ್ಯಾಸ ಕಾಮತ್ ಮೊದಲಾದವರು ಧರಣಿ ನಡೆಸಿದ್ದರು. ಆಗಲೂ ಏನಾಗುತ್ತದೆ ಎಂಬುದು ಅಶೋಕ ಅವರಿಗೆ ಗೊತ್ತಾಗಿರಲಿಲ್ಲ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಂದ ವೈಮಾನಿಕ ಸಮೀಕ್ಷೆ • ಕೇಂದ್ರ ಸರ್ಕಾರದಿಂದ ಪರಿಹಾರ ಭರವಸೆ

ಚೆನ್ನೈ: ತಗ್ಗದ ಪ್ರವಾಹ, ತಪ್ಪದ ಬವಣೆ

ಚೆನ್ನೈ (ಪಿಟಿಐ): ಮಿಚಾಂಗ್ ಚಂಡಮಾರುತದಿಂದ ತತ್ತರಿಸಿರುವ ಚೆನ್ನೈನ ವಿವಿಧ ಪ್ರದೇಶಗಳಲ್ಲಿ ಮಳೆ ನೀರಿನ ಮಟ್ಟ ತಗ್ಗಿಲ್ಲ. ಜಲಾವೃತ ಪ್ರದೇಶಗಳಲ್ಲಿ ಜನತೆ ಸಂಕಷ್ಟದಲ್ಲೇ ದಿನ ದೂಡುವಂತಾಗಿದೆ.

ಚೆನ್ನೈ, ತಿರುವಳ್ಳೂರ್, ಕಾಂಚಿಪುರಂ ಮತ್ತು ಚೆಂಗಲ್‌ಪೇಟ್‌ನಲ್ಲಿ ಸಮಸ್ಯೆ ಹೆಚ್ಚಿದೆ. ನೀರನ್ನು ಪಂಪ್ ಮಾಡಿ ತೆರವುಗೊಳಿಸಲು ಸಿಬ್ಬಂದಿ ಒತ್ತು ನೀಡಿದ್ದಾರೆ. ವೇಲಾಚೇರಿ ಮತ್ತು ತಾಂಬರಂನ ಬಹುತೇಕ ಭಾಗಗಳು ಇನ್ನು ಮುಳುಗಡೆಯಾಗಿವೆ.

ನಿವಾಸಿಗಳಿಗೆ ಹೆಲಿಕಾಪ್ಟರ್ ಮೂಲಕ ಆಹಾರದ ಪೊಟ್ಟಣ ವಿತರಿಸಲಾಗುತ್ತಿದೆ. ಮಾನಾಲಿಯಲ್ಲಿ 15 ಸಾವಿರ ಮಂದಿ ಸಂಕಷ್ಟಕ್ಕೆ ಸಿಲುಕಿದ್ದು, 12 ಸಾವಿರ ಲೀಟರ್ ಹಾಲು, ಹಾಲಿನ ಪುಡಿ, ಬೆಡ್‌ಶೀಟ್, ಆಹಾರ ಪೊಟ್ಟಣಗಳನ್ನು ಪೂರೈಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಗುರುವಾರವು ರಕ್ಷಣಾ ಕಾರ್ಯವನ್ನು ಪರಿಶೀಲಿಸಿದರು. ಅಂಕಪುತ್ತೂರುಗೆ ಭೇಟಿ ನೀಡಿ ಜನರಿಗೆ

ಮಳೆ ಬಾಧಿತ ಪ್ರದೇಶಗಳಲ್ಲಿ ಸೇನೆಯ ಮದ್ರಾಸ್ ರೆಜಿಮೆಂಟ್‌ನ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಆಹಾರ ಸಾಮಗ್ರಿಗಳನ್ನು ಒದಗಿಸಿದರು.

ಪರಿಹಾರ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಬೇಕು ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಪಳನಿಸ್ವಾಮಿ, ಪಿಎಂಕೆ ಮುಖ್ಯಸ್ಥ ಅನ್ಬುಮಣಿ ರಾಮದಾಸ್ ಒತ್ತಾಯಿಸಿದರು.

ರಾಜನಾಥ್ ಸಿಂಗ್ ವೈಮಾನಿಕ ಸಮೀಕ್ಷೆ: ತಮಿಳುನಾಡಿಗೆ ನೆರೆ ಪರಿಹಾರದ ಎರಡನೇ ಕಂತು ₹450 ಕೋಟಿ ಬಿಡುಗಡೆಗೆ ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ತಿಳಿಸಿದರು.

ಮಳೆ ಬಾಧಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು. ಮೊದಲ ಕಂತಿನಲ್ಲಿ ಈಗಾಗಲೇ ₹450 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

‘ಪ್ರವಾಹ ತಡೆಗೆ ₹561 ಕೋಟಿ ನೆರವು’

ನವದೆಹಲಿ: ಸಂಯೋಜಿತ ನಗರ ಪ್ರವಾಹ ನಿರ್ವಹಣಾ ಕಾರ್ಯಕ್ರಮದಡಿ ಚೆನ್ನೈನಲ್ಲಿ ನೆರೆ ಪರಿಹಾರ ಕಾರ್ಯಕ್ರಮಗಳಿಗೆ ₹561.29 ಕೋಟಿ ನೆರವು ನೀಡಲು ಕೇಂದ್ರ ನಿರ್ಧರಿಸಿದೆ. ನೀಡಿದೆ.

ಚೆನ್ನೈನಲ್ಲಿ ಪ್ರವಾಹ ಸ್ಥಿತಿ ಸರ್ವೇ ಸಾಮಾನ್ಯ. ಯೋಜನೆಯಡಿ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಬೃಹತ್ ನಗರಗಳಲ್ಲಿ ಅತಿಹೆಚ್ಚು ಮಳೆ ಸುರಿಯುವುದರಿಂದ ದಿಢೀರ್ ಪ್ರವಾಹದ ಭೀತಿ ತಲೆದೋರುತ್ತಿದೆ. ಅದರಲ್ಲೂ ಚೆನ್ನೈ ಪದೇ ಪದೇ ಸಂಕಷ್ಟಕ್ಕೆ ಸಿಲುಕುತ್ತಿದೆ. ಕಳೆದ ಎಂಟು ವರ್ಷಗಳಲ್ಲಿ ಮೂರನೇ ಬಾರಿಗೆ ಅತಿದೊಡ್ಡ ಅವಾಂತರಕ್ಕೆ ಸಾಕ್ಷಿಯಾಗಿದೆ. ನಗರ ಪ್ರವಾಹ ಸಮಸ್ಯೆಯ ಪರಿಹಾರಕ್ಕೆ ಸಂಬಂಧಿಸಿದ ಮೊದಲ ಯೋಜನೆ ಇದಾಗಿದೆ ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಯೋಜನೆಗೆ ಒಪ್ಪಿಗೆ ನೀಡಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಡಿ ಯೋಜನೆಯನ್ನು ಕೈಗೆತ್ತಿಕೊಳ್ಳಲಿದ್ದು, ಕೇಂದ್ರ ಸರ್ಕಾರವು ₹500 ಕೋಟಿ ಅನುದಾನ ವ್ಯಯಿಸಲಿದೆ ಎಂದು ತಿಳಿಸಿದ್ದಾರೆ.

‘ಹತಾಶೆಯಿಂದ ಯತ್ನಾಳ ವಿವಾದ ಸೃಷ್ಟಿ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಮೌಲ್ವಿ ತನ್ವೀರ್ ಪೀರಾ ಅವರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವೇದಿಕೆ ಹಂಚಿಕೊಂಡಿದ್ದಕ್ಕೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ಷೇಪಿಸಿದ್ದಾರೆ. ಈ ಹಿಂದೆ ಬಿಜೆಪಿಯ ನಿತಿನ್ ಗಡ್ಕರಿ ಅವರು ತನ್ವೀರ್ ಪೀರಾ ಜತೆ ಚಿತ್ರ ತೆಗೆಸಿಕೊಂಡಿದ್ದಾರೆ. ಅದಕ್ಕೆ ಯತ್ನಾಳ ಏನು ಹೇಳುವರು?’ ಎಂದು ಅಂಜುಮನ್ ಸಂಸ್ಥೆ ಮಾಜಿ ಅಧ್ಯಕ್ಷ ಮಹಮ್ಮದ್ ಇಸ್ಮಾಯಿಲ್ ತಮಟಗಾರ ಪ್ರಶ್ನಿಸಿದರು.

‘ಯತ್ನಾಳ ಅವರ ವರ್ತನೆ ಖಂಡನೀಯ. ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಅಪಪ್ರಚಾರ ಮಾಡುವುದು, ಧಾರ್ಮಿಕ ವಿವಾದ ಸೃಷ್ಟಿಸುವುದು ಬಿಟ್ಟು ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡಬೇಕು. ಅವರು ಜನತಾ ದಳದಲ್ಲಿ ಇದ್ದಾಗ ಮುಸ್ಲಿಮರ ಜತೆ ಓಡಾಡಿಲ್ಲವೇ? ವಿಜಯಪುರದಲ್ಲಿ ನಿಮ್ಮ ಜೊತೆ ಯಾವ ಪೀರಾ ಇದ್ದಾರೆ ಎಲ್ಲವೂ ನಮಗೆ ಗೊತ್ತಿದೆ. ಅವರು ಹತಾಶರಾಗಿದ್ದು, ಧಾರವಾಡದ ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ಒಳ್ಳೆಯದು’ ಎಂದ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಕುಟುಕಿದರು.

‘ಪೀರಾ ಅವರ ಇರಾಕ್‌ನ ಬಾಗ್ದಾದ್‌ನಲ್ಲಿರುವ ಎ ಅಜಂ ಮೆಹಬೂಬ್ ಸುಬಾನಿ ದರ್ಗಾಕ್ಕೆ 12 ವರ್ಷಗಳ ಹಿಂದೆ ಭೇಟಿ ನೀಡಿದ್ದ ಚಿತ್ರವನ್ನು ಯತ್ನಾಳ ‘ಎಕ್ಸ್’ ಖಾತೆಯಲ್ಲಿ ಹಾಕಿದ್ದಾರೆ. ವಿರೋಧ ಪಕ್ಷದ ನಾಯಕ ಸ್ಥಾನ, ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಸಿಗದಿದ್ದಕ್ಕೆ ಹತಾಶರಾಗಿ ವಿವಾದ ಸೃಷ್ಟಿಸಿದ್ದಾರೆ’ ಎಂದು ಛೇಡಿಸಿದರು.

‘ಸುಬಾನಿ ದರ್ಗಾದ ಸಜ್ಜಾದ ನಿಶಾನ್ ಖಾಲಿದ್ ಗಿಲಾನಿ ಅವರ ಜೊತೆ ತನ್ವೀರ್ ಪೀರಾ ತೆಗೆಸಿಕೊಂಡಿದ್ದ ಚಿತ್ರಗಳು al.hasmi.org ವೆಬ್‌ಸೈಟ್‌ನಲ್ಲಿ ಇವೆ. ಚಿತ್ರದಲ್ಲಿರುವ ಬಾವುಟ ಇರಾಕ್‌ನದ್ದು. ಈ ದರ್ಗಾವು ಯಾತ್ರಾ ಸ್ಥಳ. ಭಾರತದ ಬಹಳಷ್ಟು ಮಂದಿ ಈ ಯಾತ್ರಾಸ್ಥಳಕ್ಕೆ ಭೇಟಿ ನೀಡುತ್ತಾರೆ’ ಎಂದು ಹೇಳಿದರು.

ಬಿಜೆಪಿಯ ನಿತಿನ್ ಗಡ್ಕರಿ ಮತ್ತು ತನ್ವೀರ್ ಪೀರಾ ಜತೆಗಿರುವ ಚಿತ್ರ

‘ಯತ್ನಾಳ ಮೇಲೆ ಮಾನನಷ್ಟ ಮೊಕದ್ದಮೆಗೆ ಚರ್ಚೆ’

ಬೆಳಗಾವಿ: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಮೇಲೆ ಮಾನನಷ್ಟ ಮೊಕದ್ದಮೆ ಹಾಕಲು ಮುಸ್ಲಿಂ ಸಮುದಾಯದ ಧರ್ಮ ಗುರುಗಳು ಚರ್ಚೆ ನಡೆಸಿದ್ದಾರೆ. ಚರ್ಚೆಯ ಬಳಿಕ ನಿರ್ಧಾರ ಹೇಳುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಯತ್ನಾಳ ಅವರು ಪ್ರಚಾರಕ್ಕಾಗಿ ಗಾಳಿಯಲ್ಲಿ ಗುಂಡು ಹೊಡೆಯಬಾರದು. ಧರ್ಮಗುರುಗಳ ಮೇಲಿನ ಆಪಾದನೆ ಸಾಬೀತು ಮಾಡಲಿ’ ಎಂದು ಸವಾಲು ಹಾಕಿದರು.

‘ಮುಸ್ಲಿಂ ಧರ್ಮಗುರುಗಳ ಬಗ್ಗೆ ಯತ್ನಾಳ ಹಗುರವಾಗಿ ಮಾತನಾಡಿದ್ದಾರೆ. ಐಎಸ್ ನಂಟಿದ್ದವರು ವೇದಿಕೆ ಎಂದು ಯತ್ನಾಳ ಯಾವ ಸಭೆಯ ಬಗ್ಗೆ ಹೇಳಿದ್ದಾರೋ ಅದರಲ್ಲಿ ನಾನೂ ಇದ್ದೆ. ಅಂತಹ ಯಾವುದೇ ಘಟನೆ ನಡೆದಿಲ್ಲ. ಆ ವೇದಿಕೆಯಲ್ಲಿ ಅಂಥವರು ಯಾರೂ ಕುಳಿತಿರಲಿಲ್ಲ. ಕೀಳುಮಟ್ಟದ ಹೇಳಿಕೆ ಕೊಡುವುದನ್ನು ಬಿಡಬೇಕು’ ಎಂದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ, ‘ಯತ್ನಾಳ ಮೌಲ್ವಿ ಅವರ ಮೇಲೆ ಸಾಕ್ಷಿ ಸಮೇತ ಆರೋಪ ಮಾಡಬೇಕು. ಸಾಕ್ಷಿ ಇದ್ದರೆ ಮಾತ್ರ ಆರೋಪಕ್ಕೆ ಅರ್ಥ ಬರುತ್ತದೆ. ಕೇಂದ್ರ ಗೃಹ ಸಚಿವರು ಈ ವಿಚಾರದಲ್ಲಿ ಏನು ಕ್ರಮ ಕೈಗೊಳ್ಳುತ್ತಾರೋ ನೋಡೋಣ’ ಎಂದರು.

ಯತ್ನಾಳ, ಮೌಲ್ವಿ ಕುಟುಂಬ ಉದ್ಯಮದ ಪಾಲುದಾರರು

ಒಂದನೇ ಪುಟದಿಂದ

‘ಯತ್ನಾಳ ಮತ್ತು ಮೌಲ್ವಿ ಇಬ್ಬರ ಮಧ್ಯೆ ಉತ್ತಮ ಒಡನಾಟವಿತ್ತು’ ಎಂದು ಹೇಳುವ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಸಿ. ಮುಲ್ಲಾ ಅವರು ಚುನಾವಣೆ ಸಂದರ್ಭಗಳಲ್ಲಿ ಮೌಲ್ವಿ ಮತ್ತು ಯತ್ನಾಳ ಅವರನ್ನು ತಮ್ಮ ಮನೆಯಲ್ಲೇ ಖುದ್ದು ಭೇಟಿ ಮಾಡಿಸಿದ್ದಾರೆ. ‘ಇಬ್ಬರೂ ಒಟ್ಟಿಗೆ ಊಟ ಮಾಡಿದ್ದಾರೆ ಮತ್ತು ಹಲವು ಬಾರಿ ವೇದಿಕೆಯು ಹಂಚಿಕೊಂಡಿದ್ದಾರೆ’ ಎಂದು ಅವರು ‘ಪ್ರಜಾವಾಣಿ’ಗೆ ದೃಢಪಡಿಸಿದ್ದಾರೆ.

‘ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮೌಲ್ವಿ ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಇದ್ದರು ಎಂಬ ಒಂದೇ ಕಾರಣಕ್ಕೆ ಅವರ ವಿರುದ್ಧ ಯತ್ನಾಳ ಅವರಿಗೆ ಕೋಪ ಬಂದಿದೆ. ಮೌಲ್ವಿ ಅವರ ಫೇಸ್‌ಬುಕ್ ಖಾತೆಯಲ್ಲಿನ ಚಿತ್ರಗಳನ್ನು ಇಟ್ಟುಕೊಂಡು ಐಎಸ್ ಜೊತೆ ನಂಟಿದೆ ಎಂದು ಅಪಪ್ರಚಾರ ಮಾಡಿದ್ದಾರೆ. ಅವರು ಹೀಗೆ ಮಾಡಿದ್ದು ಸರಿಯಲ್ಲ’ ಎಂದು ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ ಹೇಳಿದ್ದಾರೆ.

ಸಮಿತಿಗೆ ಭ್ರಷ್ಟಾಚಾರದ ದಾಖಲೆ ಸಲ್ಲಿಕೆ

ಬೆಂಗಳೂರು: ‘ಹಿಂದಿನ ಬಿಜೆಪಿ ಸರ್ಕಾರದಲ್ಲಿನ ಶೇ 40ರಷ್ಟು ಕಮಿಷನ್ ಹಾಗೂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್ ದಾಸ್ ಸಮಿತಿಗೆ ದಾಖಲೆ ಸಲ್ಲಿಸಲಾಗಿದೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ತಿಳಿಸಿದರು.

‘ಏನೇನು ದಾಖಲೆ ಇವೆಯೋ ಅವೆಲ್ಲವನ್ನೂ ಕೊಟ್ಟಿದ್ದೇನೆ. ಇನ್ನೂ ಕೆಲವು ದಾಖಲೆಗಳಿವೆ. ಅವುಗಳನ್ನೂ ಮುಂದಿನ ದಿನಗಳಲ್ಲಿ ಸಮಿತಿಗೆ ಸಲ್ಲಿಸಲಾಗುತ್ತದೆ’ ಎಂದು ಸುದ್ದಿಗಾರರಿಗೆ ಗುರುವಾರ ಮಾಹಿತಿ ನೀಡಿದರು.

‘ಎಲ್ಲ ಸರ್ಕಾರದಲ್ಲೂ ಭ್ರಷ್ಟಾಚಾರ ನಡೆದಿದೆ. ಈಗಿನ ಸರ್ಕಾರದಲ್ಲಿ ಅಧಿಕಾರಿಗಳ ರಾಜ್ಯಭಾರವಿದೆ. ಹಿಂದಿನ ಸರ್ಕಾರದಲ್ಲಿ ರಾಜಕಾರಣಿಗಳ ರಾಜ್ಯಭಾರವಿತ್ತು. ಈ ಸರ್ಕಾರದಲ್ಲಿ ಈವರೆಗೆ ರಾಜಕಾರಣಿ ವೈಯಕ್ತಿಕವಾಗಿ ಭ್ರಷ್ಟಾಚಾರದಲ್ಲಿ ತೊಡಗಿಲ್ಲ’ ಎಂದು ಹೇಳಿದರು.

‘ಅಧಿಕಾರಿಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವಂತೆ ಮುಖ್ಯಮಂತ್ರಿಯವರಿಗೂ ಪತ್ರ ಬರೆದಿದ್ದೆ. ಅಧಿಕಾರಿಗಳದ್ದೇ ರಾಜ್ಯಭಾರವಾಗಿದೆ’ ಎಂದು ದೂರಿದರು.

ಜಲಸಂಪನ್ಮೂಲ, ಲೋಕೋಪಯೋಗಿ, ಆರೋಗ್ಯ ಇಲಾಖೆ, ಬಿಬಿಎಂಪಿ ಸೇರಿ ಹಲವು ಇಲಾಖೆಗಳಲ್ಲಿನ ಭ್ರಷ್ಟಾಚಾರದ ದಾಖಲೆಗಳನ್ನು ಸಲ್ಲಿಸಲಾಗಿದೆ. ಆಡಿಯೊ, ವಿಡಿಯೊ ಜೊತೆಗೆ 6 ಸಾವಿರ ಪುಟಗಳ ದಾಖಲೆ ಸಮಿತಿಗೆ ನೀಡಲಾಗಿದೆ ಎನ್ನಲಾಗಿದೆ.

ಪತ್ರಿಕಾಗೋಷ್ಠಿಗೆ ಮುನ್ನವೇ ಮಣಿಕಂಠ ರಾಠೋಡ ಸೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಸಚಿವ ಪ್ರಿಯಾಂಕ್ ಖರ್ಗೆ ಅವರು ತನ್ನ ಮೇಲೆ ಮಾಡಿರುವ ಆರೋಪಗಳ ಬಗ್ಗೆ ಸ್ಪಷ್ಟೀಕರಣ ನೀಡಲು ಕರೆದಿದ್ದ ಪತ್ರಿಕಾಗೋಷ್ಠಿಗೂ ಮುನ್ನವೇ ಬಿಜೆಪಿ ಮುಖಂಡ ಮಣಿಕಂಠ ರಾಠೋಡನನ್ನು ಪೊಲೀಸರು ಗುರುವಾರ ಬಂಧಿಸಿ ಕರೆದೊಯ್ದರು.

ಬೆಳಿಗ್ಗೆ 11ಕ್ಕೆ ಮಣಿಕಂಠ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಕರೆದಿದ್ದ. ಈ ಬಗ್ಗೆ ಮಾಹಿತಿ ಪಡೆದಿದ್ದ ಪೊಲೀಸರು, ಬೆಳಿಗ್ಗೆಯೇ ಪತ್ರಿಕಾ ಭವನಕ್ಕೆ ಬಂದು ಕುಳಿತಿದ್ದರು.

ಪೊಲೀಸರು ತನಗಾಗಿ ಕಾಯುತ್ತಿರುವುದನ್ನು ಅರಿತ ಮಣಿಕಂಠ, ಹುಮನಾಬಾದ್ ರಿಂಗ್ ರಸ್ತೆಯಲ್ಲಿರುವ ‘ಭಾರತ ಪ್ರೈಡ್ ಅಪಾರ್ಟ್‌ಮೆಂಟ್’ಗೆ ಬರುವಂತೆ ವಾಟ್ಸ್‌ಆ್ಯಪ್ ಮೂಲಕ ಮನವಿ ಮಾಡಿದ್ದ. ಅದರಂತೆ ಅಪಾರ್ಟ್‌ಮೆಂಟ್ ಬಳಿ ಮಾಧ್ಯಮ ಪ್ರತಿನಿಧಿಗಳು ತೆರಳಿದರು. ಅಲ್ಲಿಯೂ ಕಾಯುತ್ತಿದ್ದ ಪೊಲೀಸರು, ಪತ್ರಕರ್ತರೊಂದಿಗೆ ಮಾತನಾಡಲೂ ಅವಕಾಶ ನೀಡದೇ ಮಣಿಕಂಠನನ್ನು ವಶಕ್ಕೆ ಪಡೆದು ಕರೆದೊಯ್ದರು.

ಇದಕ್ಕೂ ಮುನ್ನ ಲಿಖಿತ ಹೇಳಿಕೆ ನೀಡಿರುವ ಮಣಿಕಂಠ, ‘ಪ್ರಿಯಾಂಕ್ ಖರ್ಗೆ ಅವರ ಜನ್ಮದಿನದ ನಿಮಿತ್ತ ನಡೆದ ಕ್ರಿಕೆಟ್ ಪಂದ್ಯದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ಟಾಸ್ ಹಾರಿಸಿ ಬ್ಯಾಟಿಂಗ್ ಮಾಡಿದ ಬಗ್ಗೆ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದೆ. ಇದರಿಂದ ಮುಜುಗರಕ್ಕೆ ಒಳಗಾದ ಎಸ್ಪಿ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ’ ಎಂದು ದೂರಿದ್ದಾನೆ.

ಮಣಿಕಂಠ

‘ಕಾರಿನಲ್ಲಿ ಬರುತ್ತಿದ್ದಾಗ ತನ್ನ ಮೇಲೆ ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲಿಗರು ಹಲ್ಲೆ ನಡೆಸಿದ್ದಾರೆ’ ಎಂದು ಮಣಿಕಂಠ ದೂರು ನೀಡಿದ್ದ. ಆದರೆ, ಈ ಕುರಿತು ತನಿಖೆ ನಡೆಸಿದ ಪೊಲೀಸರು, ‘ಕಾರು ಅಪಘಾತದಲ್ಲಿ ಆಗಿದ್ದ ಗಾಯವನ್ನು ರಾಜಕೀಯ ಉದ್ದೇಶದಿಂದ ಹಲ್ಲೆ ನಡೆದಿದೆ ಎಂದು ಮಣಿಕಂಠ ಬಿಂಬಿಸಿದ್ದ’ ಎಂದು ಸ್ಪಷ್ಟಪಡಿಸಿದ್ದರು. ಇದರ ಬೆನ್ನಲ್ಲೇ ಬುಧವಾರ ಸುದ್ದಿಗೋಷ್ಠಿ ನಡೆಸಿದ್ದ ಪ್ರಿಯಾಂಕ್ ಖರ್ಗೆ, ‘ತಮ್ಮ ಮೇಲೆ ಸುಳ್ಳು ಆರೋಪ ಮಾಡಿದ್ದ ಮಣಿಕಂಠನ ವಿರುದ್ಧ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ’ ಎಂದು ಹೇಳಿಕೆ ನೀಡಿದ್ದರು.

ಕಾನೂನು ಸುವ್ಯವಸ್ಥೆಗೆ ಧಕ್ಕೆ ತರಲಿದ್ದಾರೆ ಎಂಬ ಮಾಹಿತಿ ಬಂದ ಹಿನ್ನೆಲೆಯಲ್ಲಿ ಮಣಿಕಂಠ ರಾಠೋಡನನ್ನು ಬಂಧಿಸಲಾಗಿದೆ

ಚೇತನ್ ಆರ್.

ಕಲಬುರಗಿ ಪೊಲೀಸ್ ಕಮಿಷನರ್

ಗಲಭೆಗೆ ಸಂಚು?

‘ಕಲಬುರಗಿ ಜಿಲ್ಲೆಯ ವಾಡಿಯ ಅದಾನಿ ಒಡೆತನದ ಎಸಿಸಿ ಸಿಮೆಂಟ್ ಕಾರ್ಖಾನೆಯಲ್ಲಿ ಎಂಜಿನಿಯರ್ ಆಗಿದ್ದ ರಮೇಶ್ ಪವಾರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತನ್ನ ಹಿಂಬಾಲಕರೊಂದಿಗೆ ಅಲ್ಲಿಗೆ ತೆರಳಿ ಗಲಾಟೆ ಮಾಡಲು ಮಣಿಕಂಠ ರಾಠೋಡ ಸಿದ್ಧತೆ ನಡೆಸಿದ್ದ. ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಆತನನ್ನು ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಭಾರತ ಸರ್ಕಾರ
ಸಂಪರ್ಕ ಸಚಿವಾಲಯ
ದೂರಸಂಪರ್ಕ ಇಲಾಖೆ, ಸಂಪರ್ಕ ಲೆಕ್ಕ ನಿಯಂತ್ರಕರ ಕಛೇರಿ
ಅಮೇನಿಟಿ ಬ್ಲಾಕ್, ಪ್ಯಾಲೇಸ್ ರೋಡ್, ಬೆಂಗಳೂರು–560001

ನಿವೃತ್ತಿ ವೇತನದಾರರ ಪೆನ್ಷನ್ ಅದಾಲತ್ ನಡೆಸುವ ಸಂಬಂಧ ಪ್ರಕಟಣೆ

34ನೇ ಪೆನ್ಷನ್ ಅದಾಲತ್‌ನ್ನು ದಿನಾಂಕ: 22.12.2023ರಂದು ಮೇಲ್ಕಂಡ ಕಛೇರಿಯಲ್ಲಿ ಕರ್ನಾಟಕ ವೃತ್ತದಲ್ಲಿರುವ ದೂರಸಂಪರ್ಕ ಇಲಾಖೆ ಅಥವಾ ಬಿ.ಎಸ್.ಎನ್.ಎಲ್.ನಿಂದ ನಿವೃತ್ತರಾದವರಿಗೆ ನಡೆಸಲು ಉದ್ದೇಶಿಸಲಾಗಿದೆ. ಸಂಬಂಧಪಟ್ಟಂತಹ ನಿವೃತ್ತದಾರರು/ ಕುಟುಂಬ ಪಿಂಚಣಿದಾರರು ತಮ್ಮ ಅಹವಾಲುಗಳನ್ನು ತಮ್ಮ ಪಿ.ಪಿ.ಒ ಸಂಖ್ಯೆಯನ್ನು ನಮೂದಿಸಿ ಅಂಚೆ ಅಥವಾ ಮಿಂಚಂಚೆ ಮೂಲಕ (jtcca2.kar-dot@gov.in) ಇಲ್ಲಿಗೆ 15/12/2023ರ ಒಳಗೆ ಕಳುಹಿಸಬಹುದು. ನ್ಯಾಯಾಲಯಕ್ಕೆ ಸಂಬಂಧಿಸಿದ ಹಾಗೂ ಉತ್ತರಾಧಿಕಾರಿ ಸಂಬಂಧಿತ ಅಥವಾ ನೀತಿ/ನಿಯಮಾವಳಿ ಸಂಬಂಧಿತ ವಿಷಯಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಜಂಟಿ ದೂರಸಂಪರ್ಕ ಲೆಕ್ಕ ನಿಯಂತ್ರಕರು

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in

ಸಂಖ್ಯೆ: ಅಸಂನಿ/ಹೌಕೀಸೇ/ಸಿಆರ್–01/2023–24 ದಿನಾಂಕ:07–12–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಂಗಳೂರು ನಗರದ ವಸಂತನಗರದಲ್ಲಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿ ಮೌಲಾನಾ ಆಜಾದ್ ಭವನದ ಹೌಸ್ ಕೀಪಿಂಗ್ ಸೇವೆ/ ಸ್ವಚ್ಛತೆ/ ಸೆಕ್ಯೂರಿಟಿ ಸರ್ವಿಸ್ ನೀಡಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯುರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ದತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

(1) ಟೆಂಡರ್ ಪ್ರಕಟಣೆಯ ದಿನಾಂಕ : 08.12.2023, (2) ಟೆಂಡರ್ ಮೊತ್ತ: ರೂ. 25.00 ಲಕ್ಷಗಳು, (3) ಇ.ಎಂ.ಡಿ ಮೊತ್ತ: ರೂ. 50,000 /–, (4) ಟೆಂಡರ್ ಕುರಿತು ಪೂರ್ವಭಾವಿ ಸಭೆ: ದಿನಾಂಕ: 14.12.2023 ಬೆಳಗ್ಗೆ 11.00 ಗಂಟೆಗೆ, (5) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 22.12.2023, ಸಂಜೆ 5.30 ಗಂಟೆಯೊಳಗೆ, (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 26.12.2023, ಬೆಳಗ್ಗೆ 11.00 ಗಂಟೆಗೆ, (7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 28.12.2023, ಬೆಳಗ್ಗೆ 11.00 ಗಂಟೆಗೆ, (ತಾತ್ಕಾಲಿಕ) (8) ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: ಮೌಲಾನಾ ಆಜಾದ್ ಭವನ, ನಂ.16 ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–52. (9) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22535902, 080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಸಹಾಯಕ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/2458/Zen/2023-24

ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ 10ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ ಹಾಗೂ ಈಡಿಗ ಮತ್ತು 25 ಪಂಗಡಗಳ ಬೃಹತ್ ಜಾಗೃತಿ ಸಮಾವೇಶವು ಡಿ.10ರಂದು ಬೆಳಿಗ್ಗೆ 11ಕ್ಕೆ ಅರಮನೆ ಮೈದಾನದಲ್ಲಿ ನಡೆಯಲಿದೆ.

‘ನಮ್ಮ ಕುಲಕಸುಬನ್ನು ಕಿತ್ತುಕೊಂಡಿರುವ ಸರ್ಕಾರವು ಅದಕ್ಕೆ ಪರ್ಯಾಯ ಪರಿಹಾರವನ್ನು ನೀಡಿಲ್ಲ. ನಿಗಮವನ್ನೂ ಮಾಡಿಲ್ಲ. ನಮ್ಮ ಸಮಾಜದ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ಈ ಸಮಾವೇಶ ಹಮ್ಮಿಕೊಂಡಿದ್ದೇವೆ’ ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾರಾಯಣಗುರು ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ₹500 ಕೋಟಿ ಅನುದಾನವನ್ನು ನಿಗಮಕ್ಕೆ ಒದಗಿಸಬೇಕು. ಎಲ್ಲ ಜಿಲ್ಲೆಗಳಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡಗಳಾಗಬೇಕು. ಅದಕ್ಕೆ ಅನುದಾನ ಒದಗಿಸಬೇಕು ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಆರ್ಯ ಈಡಿಗರ ಸಂಘವನ್ನು ಕೆ.ಎನ್. ಗುರುಸ್ವಾಮಿ, ಕೆ. ವೆಂಕಟಸ್ವಾಮಿ ಅವರು ಸ್ಥಾಪನೆ ಮಾಡಿ 78 ವರ್ಷಗಳಾಗಿವೆ. 75ನೇ ವರ್ಷಕ್ಕೆ ಅಮೃತ ಮಹೋತ್ಸವ ಮಾಡಬೇಕಿತ್ತು. ಆಗ ಕೋವಿಡ್ ಇದ್ದಿದ್ದರಿಂದ ಅಮೃತ ಮಹೋತ್ಸವ ಆಚರಿಸಲಾಗಿಲ್ಲ. ಕಳೆದ ವರ್ಷ ಸಂಘದ ಚುನಾವಣೆಯ ಕಾರಣಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಲಿಲ್ಲ ಎಂದು ವಿವರ ನೀಡಿದರು.

ಈಡಿಗ, ಬಿಲ್ಲವ, ಪೂಜಾರಿ, ದೀವರು, ಭಂಡಾರಿ, ಬೆಲ್ಚಡ, ಹಾಲ ಕ್ಷತ್ರೀಯ, ದೇಶ ಭಂಡಾರಿ, ದೇವರ, ದೇವರ ಮಕ್ಕಳು, ದೀವರ ಮಕ್ಕಳು, ಎಳಿಗ, ಎಳವ, ಗಾಮಲ್ಲ, ಗೌಂಡ್ಲ, ಹಳೇಪೈಕರು, ಹಳೇಪೈಕ್, ಇಲ್ಲಾವನ್, ಕಲಾಲ್, ಮಲೆಯಾಳಿ ಬಿಲ್ಲವ, ನಾಡಾರ್, ನಾಮಧಾರಿ, ತಿಯಾನ್ ತಿಯ್ಯ, ಈಳಿಗ, ಗೊಂಡ್ಲತಿಯನ್ ಹೀಗೆ 26 ಪಂಗಡಗಳಿವೆ. ಈ ಸಮುದಾಯಗಳಲ್ಲಿ ಜಾಗೃತಿಗಾಗಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಾವೇಶದಲ್ಲಿ ಸೋಲೂರು ಈಡಿಗ ಮಹಾಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ಧರ್ಮಸ್ಥಳ ಕನ್ಯಾಡಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ನಿಟ್ಟೂರು ರೇಣುಕಾನಂದ ಸ್ವಾಮೀಜಿ, ಕಾರ್ತೀಕೇಯ ಪೀಠದ ಯೋಗೇಂದ್ರ ಅವಧೂತ, ನಿಪ್ಪಾಣಿ ಅರುಣಾನಂದ ಸ್ವಾಮೀಜಿ, ಶಿವಗಿರಿ ಸತ್ಯಾನಂದತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ಸಮುದಾಯ ಪ್ರತಿನಿಧಿಸುವ ಎಲ್ಲ ಸಚಿವರು, ಶಾಸಕರು, ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ವಿವರ ನೀಡಿದರು.

ಈಡಿಗರ ಸಂಘದ ಉಪಾಧ್ಯಕ್ಷರಾದ ಟಿ. ಶಿವಕುಮಾರ್, ಎಸ್.ಎಚ್. ಪದ್ಮ ರವೀಂದ್ರ, ಪ್ರಧಾನ ಕಾರ್ಯದರ್ಶಿ ಎಚ್.ಟಿ. ಮೋಹನ್‌ದಾಸ್, ಜಂಟಿ ಕಾರ್ಯದರ್ಶಿಗಳಾದ ಜಿ.ಓ. ಕೃಷ್ಣ, ಆರ್.ಪಿ. ಪ್ರಕಾಶ್, ಮುಖಂಡರಾದ ಎಸ್.ಜೆ. ಕಾಳೇಗೌಡ, ಕೇಶವ ಪೂಜಾರಿ, ವಾಸನ್, ಸಂಪತ್ ಕುಮಾರ್ ಭಾಗವಹಿಸಿದ್ದರು.

‘ಪ್ರಣವಾನಂದ ಸ್ವಾಮೀಜಿಗೂ ಸಂಘಕ್ಕೂ ಸಂಬಂಧವಿಲ್ಲ’

‘ಪ್ರಣವಾನಂದ ಸ್ವಾಮೀಜಿಗೂ ನಮ್ಮ ಸಂಘಕ್ಕೂ ಯಾವುದೇ ಸಂಬಂಧವಿಲ್ಲ. ಅವರು ನಮ್ಮ ಸಮಾಜದ ಸ್ವಾಮೀಜಿ ಅಲ್ಲ’ ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಸ್ಪಷ್ಟನೆ ನೀಡಿದರು.

ಮುರುಘಾ ಮಠ: ಶರಣರಿಗೆ ಅಧಿಕಾರ ಹಸ್ತಾಂತರ

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ: ಹೈಕೋರ್ಟ್ ನಿರ್ದೇಶನದ ಮೇರೆಗೆ ಮುರುಘಾ ಮಠದ ತಾತ್ಕಾಲಿಕ ಆಡಳಿತಾಧಿಕಾರಿಯಾಗಿದ್ದ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶೆ ಕೆ.ಬಿ.ಗೀತಾ ಅವರು ಪೀಠಾಧಿಪತಿ ಶಿವಮೂರ್ತಿ ಶರಣರಿಗೆ ಅಧಿಕಾರ ಹಸ್ತಾಂತರಿಸಿದ್ದಾರೆ.

ಪೀಠಾಧಿಪತಿಗೆ ಅಧಿಕಾರ ಮರಳಿಸಿದ ಆದೇಶ ಡಿ.5ರಂದು ಹೊರಬಿದ್ದಿದ್ದು, ನ್ಯಾಯಾಧೀಶರ ಕಚೇರಿ ಗುರುವಾರ ಅಧಿಕೃತ ಪತ್ರವನ್ನು ಮಠಕ್ಕೆ ತಲುಪಿಸಿದೆ. ಬಸವಪ್ರಭು ಸ್ವಾಮೀಜಿ ನ್ಯಾಯಾಲಯದ ಆದೇಶ ಪ್ರತಿ ಸ್ವೀಕರಿಸಿ ಶಿವಮೂರ್ತಿ ಮುರುಘಾ ಶರಣರಿಗೆ ತಲುಪಿಸಿದ್ದಾರೆ. ಚಿತ್ರದುರ್ಗ ಜಿಲ್ಲಾ ಪ್ರವೇಶಕ್ಕೆ ನಿರ್ಬಂಧ ಇರುವುದರಿಂದ ಶರಣರು ಹೊರಗಿನಿಂದಲೇ ಆಡಳಿತ ನಡೆಸಲಿದ್ದಾರೆ.

‘ಮುರುಘಾ ಮಠ ಹಾಗೂ ಎಸ್‌ಜೆಎಂ ವಿದ್ಯಾಪೀಠದ ಆಡಳಿತವನ್ನು ನ್ಯಾಯಾಧೀಶರು ಪೀಠಾಧಿಪತಿಗೆ ಹಸ್ತಾಂತರಿಸಿದ್ದಾರೆ. ಮಠದ ಸದ್ಭಕ್ತರು ಸಹಕರಿಸಬೇಕು’ ಎಂದು ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷರೂ ಆಗಿರುವ ಶಿವಮೂರ್ತಿ ಶರಣರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಪ್ರಕರಣದಲ್ಲಿ 2022ರ ಸೆ.1ರಂದು ಬಂಧಿತರಾಗಿದ್ದರು. ಶರಣರು ನ್ಯಾಯಾಂಗ ಬಂಧನದಲ್ಲಿದ್ದರಿಂದ ಮಠದ ಸುಗಮ ಆಡಳಿತಕ್ಕಾಗಿ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ವಸ್ತ್ರದ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ರಾಜ್ಯ ಸರ್ಕಾರ 2022ರ ಡಿ.13ರಂದು ಆದೇಶಿಸಿತ್ತು.

ಮಠದ ಉಸ್ತುವಾರಿಯಾಗಿದ್ದ ಬಸವಪ್ರಭು ಸ್ವಾಮೀಜಿ ಅವರು ಸರ್ಕಾರದ ಈ ಕ್ರಮವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಸರ್ಕಾರದ ಆಡಳಿತಾಧಿಕಾರಿ ನೇಮಕ ಆದೇಶವನ್ನು ರದ್ದುಪಡಿಸಿದ ನ್ಯಾಯಾಲಯ, ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ನಿಯೋಜಿಸಿ ಜುಲೈ 3ರಂದು ಆದೇಶಿಸಿತ್ತು. ಶಿವಮೂರ್ತಿ ಶರಣರು ನ.16ರಂದು ಜಾಮೀನು ಮೇಲೆ ಕಾರಾಗೃಹದಿಂದ ಹೊರಬಂದ ಬಳಿಕ ಈ ಆದೇಶ ರದ್ದಾಗಿತ್ತು.

ಹಣ ದುರುಪಯೋಗ: ನೋಟಿಸ್

ಮುರುಘಾ ಮಠ ಹಾಗೂ ಎಸ್‌ಜೆಎಂ ವಿದ್ಯಾಪೀಠದ ₹ 24 ಲಕ್ಷವನ್ನು ದುರುಪಯೋಗ ಮಾಡಿಕೊಂಡ ಆರೋಪ ಎದುರಿಸುತ್ತಿರುವ ಬಸವಪ್ರಭು ಸ್ವಾಮೀಜಿ ಅವರಿಗೆ ತಾತ್ಕಾಲಿಕ ಆಡಳಿತಾಧಿಕಾರಿ ನೀಡಿದ್ದ ನೋಟಿಸ್ ಮುನ್ನೆಲೆಗೆ ಬಂದಿದೆ.

ಅಡಗೂರು ಮಠದ ₹ 6 ಲಕ್ಷ, ಚಿತ್ರದುರ್ಗದ ಎಸ್‌ಜೆಎಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ₹ 8 ಲಕ್ಷ ಹಾಗೂ ಬೆಂಗಳೂರಿನ ಕಾನಿಷ್ಕ ಗ್ರ್ಯಾಂಡ್ ಹೋಟೆಲ್ ಮಾಲೀಕರಿಂದ ಪಡೆದ ₹ 10 ಲಕ್ಷವನ್ನು ಕಾನೂನು ಬಾಹಿರವಾಗಿ ಬಳಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ನೀಡಿದ ಸಮಜಾಯಿಷಿ ಸರಿಯಾಗಿಲ್ಲ. ಕೂಡಲೇ ಹಣವನ್ನು ಮಠ ಅಥವಾ ವಿದ್ಯಾಪೀಠಕ್ಕೆ ಮರಳಿಸಬೇಕು. ತಪ್ಪಿದರೆ ಹಣ ವಸೂಲಿ ಪ್ರಕ್ರಿಯೆಗೆ ದಾವೆ ಹೂಡಬೇಕಾಗುತ್ತದೆ ಎಂದು ನ. 4ರಂದು ನೀಡಿದ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

‘ತಾತ್ಕಾಲಿಕ ಆಡಳಿತಾಧಿಕಾರಿಯಾಗಿದ್ದ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರು ಈ ನೋಟಿಸ್ ನೀಡಿದ್ದರು. ಈಗ ಆಡಳಿತಾಧಿಕಾರಿ ನೇಮಕ ಆದೇಶ ರದ್ದಾಗಿದೆ. ಪೀಠಾಧಿಪತಿ ಶಿವಮೂರ್ತಿ ಶರಣರು ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಮಠದ ಮೂಲಗಳು ಮಾಹಿತಿ ನೀಡಿವೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ, ತಾ : ಹುಣಸಗಿ

Office of the EXECUTIVE ENGINEER, KBJNL, Dam Division. Narayanpur-585219

ಸಂ: ಕೃಭಾಜನಿನಿ/ಆವಿನಾ/ಪಿಬಿ/ಟೆಂಡರ್/ಸಾಮಗ್ರಿ/2023–24/1052 ದಿನಾಂಕ : 06–12–2023

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ ಇವರು Indent No. KBJNL/2023-24/IND0002 ಹಾಗೂ Indent No. KBJNL/2023-24/IND0003 ರಲ್ಲಿ ನೋಂದಾಯಿತ ಅರ್ಹ ಸಂಸ್ಥೆಗಳಿಂದ/ ಮೂಲ ತಯಾರಕರು/ ಅಧಿಕೃತ ವಿತರಕರಿಂದ 2023–24 ನೇ ಸಾಲಿಗೆ ಮುಖ್ಯ ಅಭಿಯಂತರರ ಕಛೇರಿ, ಕೃಭಾಜನಿನಿ, ಕಾರ್ಯಾಚರಣೆ ಮತ್ತು ನಿರ್ವಹಣೆ ವಲಯ, ನಾರಾಯಣಪೂರ ಹಾಗೂ ಅಧೀನ ಕಛೇರಿಗಳಿಗೆ ದಿನ ನಿತ್ಯದ ಕಛೇರಿ ಕೆಲಸಕ್ಕೆ ಅತಿ ಅವಶ್ಯಕತೆ ಇರುವ ಲೇಖನ ಸಾಮಾಗ್ರಿಗಳು, ಪ್ರಿಂಟರ್ ಝುರಾಕ್ಸ ಕಾಟ್ರೇಜಗಳು ಹಾಗೂ ಪ್ರಿಂಟಿಂಗ್ ಮುದ್ರಿತ ಸಾಮಾಗ್ರಿಗಳ ಹಾಗೂ ವಾಹನದ ಟೈಯರ್, ಟ್ಯೂಬ್, ಬ್ಯಾಟರಿಗಳನ್ನು ಸರಬರಾಜು ಮಾಡಲು ದರ ಸಂದಾನಕ್ಕಾಗಿ (Rate contract) ಇ–ಟೆಂಡರ್ ಕರೆದಿದ್ದು (E-Procurement Tender) ಅರ್ಹ ಟೆಂಡರ್‌ದಾರರು www.kppp.karnataka.gov.in ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ: 07.12.2023 ರಿಂದ ದಿ:20.12.2023 ಸಂಜೆ 5.00 ಗಂಟೆಯವರೆಗೆ
2	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	20.12.2023 ಸಂಜೆ 5:00 ಗಂಟೆಗೆ
3.	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರ ಕಚೇರಿಯಲ್ಲಿ)	21.12.2023 ಸಂಜೆ 5:30 ಗಂಟೆಗೆ
4.	ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರ ಕಚೇರಿಯಲ್ಲಿ)	26.12.2023 ಬೆಳಿಗ್ಗೆ 11:00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಸಂಸ್ಥೆಗಳು/ ಮೂಲ ತಯಾರಕರು/ ಅಧಿಕೃತ ವಿತರಕರು ಇ–ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– (ಶ್ರೀ ಅಶೋಕರೆಡ್ಡಿ ಪಾಟೀಲ್)
ಕಾರ್ಯನಿರ್ವಾಹಕ ಅಭಿಯಂತರರು
ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
Tel. No.: 08338-275101 E-Mail:ee.rdws.ckd@gmail.com

ಸಂಖ್ಯೆ:ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು3&4:ಟೆಂಡರ್: 2023–24/15/1902 ದಿನಾಂಕ:04/12/2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3,&4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No 5277, 5864, 5862

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪ್ರೊಟಾಲ್ (https://kppp.karnataka.gov.in/) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01)ಟೆಂಡರ ಪೂರ್ವಬಾವಿ ಸಭೆ:08–12–2023 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ, 02)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:11–12–2023 ಸಾಯಂಕಾಲ 17.00 ಘಂಟೆವರೆಗೆ, 03)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:12–12–2023 ಬೆಳಗ್ಗೆ 11.00 ಘಂಟೆ ನಂತರ ತೆರೆಯಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.
DIPR/BGM/RO-NO-716/KSMCA/2023-24

ಸುಭಾಷಿತ
ಕಪಟಿಗಳು ಯಾರೆಂದರೆ, ತಾವು ಅನ್ವಯಿಸಿಕೊಳ್ಳಲು ಒಲ್ಲದ ಮಾನದಂಡಗಳನ್ನು ಇತರರ ಮೇಲೆ ಹೇರುವವರು.
–ನೋಮ್ ಚೋಮ್‌ಸ್ಕಿ

ನಾಗರಿಕ ಪ್ರಾಧಿಕಾರಗಳ ನಿರ್ಲಕ್ಷ್ಯ ಬೆಂಗಳೂರಿನಲ್ಲಿ ಅತಿ ಹೆಚ್ಚು ಸಾವು

ಬೆಂಗಳೂರು ನಗರವನ್ನು ಜಾಗತಿಕ ಮಟ್ಟದ ನಗರವನ್ನಾಗಿ ಬೆಳೆಸಲಾಗುವುದು ಎಂಬ ಭರವಸೆ ನೀಡಿ ಪ್ರತಿವರ್ಷವೂ ರಾಜ್ಯದ ಬಜೆಟ್‌ನ ಗಣನೀಯವಾದ ಭಾಗವನ್ನು ಈ ಸಲುವಾಗಿ ಮೀಸಲಿಡಲಾಗುತ್ತಿದೆ. ಹಾಗಿದ್ದರೂ ಬೆಂಗಳೂರು ನಗರ ಮಾತ್ರ ಅವ್ಯವಸ್ಥೆಯ ಆಗರವಾಗಿಯೇ ಇದೆ. ನಗರದ ನಾಗರಿಕ ಸೇವೆಗಳ ಪ್ರಾಧಿಕಾರಗಳು ಪರಸ್ಪರ ಸಮನ್ವಯ ಇಲ್ಲದೆ ಕೆಲಸ ಮಾಡುತ್ತಾ ಜನರ ಜೀವನವನ್ನು ದುಃಸ್ವಪ್ನವಾಗಿಸಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) ವರದಿಯ ಪ್ರಕಾರ, ನಾಗರಿಕ ಸೇವಾ ಪ್ರಾಧಿಕಾರಗಳ ನಿರ್ಲಕ್ಷ್ಯದಿಂದಾಗಿ ದೇಶದ ನಗರಗಳ ಪೈಕಿ ಬೆಂಗಳೂರಿನಲ್ಲಿ ಅತಿ ಹೆಚ್ಚು ಜನರು ಮೃತಪಟ್ಟಿದ್ದಾರೆ. ಸತತ ಮೂರು ವರ್ಷಗಳಿಂದ ಈ ದಾಖಲೆ ಹೀಗೆಯೇ ಇದೆ. 2018ರಲ್ಲಿ ಇಂತಹ ಮೂರು ಪ್ರಕರಣಗಳು ವರದಿಯಾಗಿದ್ದವು. 2019ರಲ್ಲಿ ಅದು 49ಕ್ಕೆ ಏರಿತು. 2022ರಲ್ಲಿ ಇಡೀ ದೇಶದಲ್ಲಿ ನಡೆದ ಇಂತಹ ಘಟನೆಗಳಲ್ಲಿ ಅರ್ಧದಷ್ಟು ಬೆಂಗಳೂರಿನಿಂದಲೇ ವರದಿಯಾಗಿವೆ. ಪಾದಚಾರಿ ಮಾರ್ಗ ಇಲ್ಲದಿರುವುದು ಅಥವಾ ಅವುಗಳ ಒತ್ತುವರಿಯ ಕಾರಣ ಜನರು ರಸ್ತೆಯಲ್ಲಿಯೇ ನಡೆಯಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅಪಘಾತವಾಗಿ ಜನರು ಜೀವ ಕಳೆದುಕೊಂಡಿದ್ದಾರೆ. ರಸ್ತೆಯಲ್ಲಿ ಅಪಾಯಕಾರಿಯಾದ ಗುಂಡಿಗಳು, ವಿದ್ಯುತ್ ಆಘಾತದಂತಹ ಕಾರಣಗಳಿಂದಲೂ ಜನರು ಬಲಿಯಾಗಿದ್ದಾರೆ. ನಿರ್ಲಕ್ಷ್ಯದ ಪ್ರಕರಣಗಳಲ್ಲಿ ಅಪಾಯಕ್ಕೆ ಕಾರಣವಾದ ಅಂಶವೇನು ಮತ್ತು ಅದರಿಂದ ಆಗಿರುವ ಪರಿಣಾಮ ಏನು ಎಂಬುದನ್ನು ನಿಖರವಾಗಿ ಗುರುತಿಸಬಹುದು. ರಾಜ್ಯದ ಮೂಲಸೌಕರ್ಯ ವ್ಯವಸ್ಥೆಯ ಕುರಿತ ನಿರ್ಲಕ್ಷ್ಯ ಧೋರಣೆಯು ಅಡಿಗಡಿಗೂ ಅಪಾಯವು ಎದುರಾಗುವಂತೆ ಮಾಡಿದೆ. ರಸ್ತೆಯಲ್ಲಿರುವ ಗುಂಡಿಯ ಕಾರಣಕ್ಕೆ ಉಂಟಾಗುವ ಅಪಘಾತಗಳು ಸಮರ್ಪಕವಾಗಿ ವರದಿ ಆಗುವುದಿಲ್ಲ. ಚಾಲಕನ ನಿರ್ಲಕ್ಷ್ಯವೇ ಕಾರಣ ಎಂದು ನೆಪ ಹೇಳಲಾಗುತ್ತದೆ. ಮಹಿಳೆ ಮತ್ತು ಅವರ ಮಗು ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಮೆಟ್ಟಿ ಬೆಂಗಳೂರಿನಲ್ಲಿ ಇತ್ತೀಚೆಗೆ ಮೃತಪಟ್ಟರು. ಬೆಂಗಳೂರು ನಗರವನ್ನು 'ಸ್ಮಾರ್ಟ್ ಸಿಟಿ' ಆಗಿಸಲು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದ್ದರೂ ಪರಿಸ್ಥಿತಿ ಹೀಗಿದೆ. ನಿರ್ಲಕ್ಷ್ಯದ ಕಾರಣಕ್ಕೆ ನಾಗರಿಕ ಸೇವಾ ಪ್ರಾಧಿಕಾರಗಳ ವಿರುದ್ಧ ಅತಿಹೆಚ್ಚು ದೂರುಗಳು ದಾಖಲಾಗಿದ್ದು ಕೂಡ ಬೆಂಗಳೂರಿನಲ್ಲಿಯೇ ಎಂಬುದರಲ್ಲಿ ಆಶ್ಚರ್ಯದ ವಿಚಾರ ಏನೂ ಇಲ್ಲ.

ಬೆಂಗಳೂರು ನಗರದ ಎಲ್ಲ ನಾಗರಿಕ ಸೇವಾ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿರುವ ಸಂಸ್ಥೆಯೊಂದರ ಅಗತ್ಯ ಇದೆ

ಬೆಂಗಳೂರಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಖಾಸಗಿ ವಾಹನಗಳಿಗೇ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಸಾರ್ವಜನಿಕ ಸಾರಿಗೆ, ಸೈಕಲ್ ಸವಾರರು ಮತ್ತು ಪಾದಚಾರಿಗಳಿಗೆ ಬೇಕಾದ ರೀತಿಯಲ್ಲಿ ನಗರವನ್ನು ವಿನ್ಯಾಸ ಮಾಡಲಾಗಿಲ್ಲ. ಇತ್ತೀಚೆಗೆ ನಿರ್ಮಿಸಲಾದ ಕೆಲವು ರಸ್ತೆಗಳಲ್ಲಿ ಪಾದಚಾರಿ ಮಾರ್ಗ ನಿರ್ಮಿಸಲಾಗಿದೆ. ಆದರೆ, ಕೆಟ್ಟ ವಿನ್ಯಾಸ, ನಿರ್ವಹಣೆ ಇಲ್ಲದಿರುವುದು ಅಥವಾ ಎರಡೂ ಕಾರಣಗಳಿಂದಾಗಿ ಪಾದಚಾರಿ ಮಾರ್ಗದ ಬಹುಭಾಗ ನಿರುಪಯೋಗಿ ಆಗಿರುತ್ತದೆ. ವಿದ್ಯುತ್ ತಂತಿ ಜಾಲವನ್ನು ಭೂಮಿಯ ಅಡಿಗೆ ವರ್ಗಾಯಿಸುವ ಕೆಲಸ ಶೇ 95ರಷ್ಟು ಪೂರ್ಣಗೊಂಡಿದೆ ಎಂದು ಬೆಸ್ಕಾಂ ಹೇಳಿಕೊಳ್ಳುತ್ತಿದೆ. ಹೈಟೆನ್ಶನ್ ತಂತಿಗಳು ನಗರದ ವಿವಿಧ ಭಾಗಗಳಲ್ಲಿ ನೇತಾಡುತ್ತಿರುತ್ತವೆ. ಬೆಂಗಳೂರಿನ ಜೊತೆಗೆ ಕೆಲವು ವರ್ಷಗಳ ಹಿಂದೆ ವಿಲೀನಗೊಂಡ ನೂರಕ್ಕೂ ಹೆಚ್ಚು ಗ್ರಾಮಗಳ ಸ್ಥಿತಿಯನ್ನು ಕಡಿಮೆ ಹೇಳಿದಷ್ಟೂ ಒಳ್ಳೆಯದು.

ನಾಗರಿಕ ಸೇವಾ ಸಂಸ್ಥೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಕೆಲಸ ಮಾಡುತ್ತಿರುವುದೇ ಬೆಂಗಳೂರಿನ ಬಹುದೊಡ್ಡ ಸಮಸ್ಯೆ. ಎಲ್ಲ ಸಂಸ್ಥೆಗಳ ಉಸ್ತುವಾರಿ ಇರುವ ಏಕೈಕ ಪ್ರಾಧಿಕಾರ ಇಲ್ಲಿ ಇಲ್ಲ. ಹಾಗಾಗಿ, ನಗರದ ಸಮಸ್ಯೆಗಳಿಗೆ ನಾಗರಿಕ ಸೇವಾ ಸಂಸ್ಥೆಗಳು ಒಂದನ್ನೊಂದು ದೂಷಿಸಿಕೊಂಡು ಕಾಲ ಕಳೆಯುತ್ತಿವೆ. ಬೆಂಗಳೂರು ನಗರದ ಎಲ್ಲ ನಾಗರಿಕ ಸೇವಾ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿರುವ ಸಂಸ್ಥೆಯೊಂದು ಬೇಕಿದೆ. ನಗರವು ಯೋಜಿತವಾಗಿ ಬೆಳೆಯುವಂತೆ ನೋಡಿಕೊಳ್ಳಲು ಮತ್ತು ನಗರವನ್ನು ಸುರಕ್ಷಿತವಾಗಿಸಲು ಇದು ಅಗತ್ಯ. ಬೆಂಗಳೂರಿನ 'ಬ್ರ್ಯಾಂಡ್ ಮೌಲ್ಯ' ಹೆಚ್ಚಿಸುವುದಕ್ಕಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ್ ಘೋಷಿಸಿದ್ದಾರೆ. ನಗರದ ಮೂಲಭೂತ ಅಗತ್ಯಗಳನ್ನೇ ಪೂರೈಸದೆ ಇಂತಹ ಬೃಹತ್ ಯೋಜನೆಗಳನ್ನು ಘೋಷಿಸಿ ಉಪಯೋಗ ಏನು?

ದಿನದ ಟ್ವೀಟ್

ಭರವಸೆದಾಯಕ ಪಯಣ

ಶಾಸಕಿ ಸೀತಕ್ಕ (ಧನಸರಿ ಅನಸೂಯ) ಅವರ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ವೀಕ್ಷಿಸುತ್ತಿದ್ದೆ. ಹದಿಹರೆಯದಲ್ಲಿ ನಕ್ಸಲೀಯಳಾಗಿ, ಬಳಿಕ ಶರಣಾಗತಳಾಗಿ, ಹೊಸ ಬದುಕು ಆರಂಭಿಸಿ, ಶಿಕ್ಷಣದ ಮೂಲಕ ಸಮರ್ಥಳಾಗಿ, ಜನಪ್ರತಿನಿಧಿಯಾಗಿ, ಈಗ ಸಚಿವೆಯಾಗಿ ಪ್ರಮಾಣವಚನ ಸ್ವೀಕರಿಸುವುದು ಎಂತಹ ಅದ್ಭುತವಾದ, ಅಚ್ಚರಿದಾಯಕ ಪಯಣ! ಸಮೃದ್ಧ ಅನುಭವ ಹೊಂದಿರುವ ಈ ಹೋರಾಟಗಾರ್ತಿ ದೊಡ್ಡ ಭರವಸೆ ಮೂಡಿಸಿದ್ದಾರೆ.

ಸುನೀತಾ ಕೃಷ್ಣನ್, ಸಾಮಾಜಿಕ ಹೋರಾಟಗಾರ್ತಿ

ಕಿಡಿನುಡಿ

ಒಬ್ಬ ವ್ಯಕ್ತಿಯು ದುಷ್ಟಶಕ್ತಿಗಳೊಂದಿಗೆ ಹೋರಾಡುವುದರ ಬದಲಿಗೆ, ಖಿನ್ನತೆಗೆ ಒಳಗಾಗಿ, ತಾನು ಬದುಕುವುದರಿಂದ ಯಾವುದೇ ಪ್ರಯೋಜನವಿಲ್ಲ ಅಥವಾ ತನ್ನಿಂದ ಹೋರಾಟ ಸಾಧ್ಯವಿಲ್ಲ ಎಂದು ನಿರ್ಧರಿಸಿದರೆ, ಸಮಾಜದಲ್ಲಿರುವ ದುಷ್ಟಶಕ್ತಿಗಳಿಗೆ ಇನ್ನಷ್ಟು ಕುಮ್ಮಕ್ಕು ಮತ್ತು ಪ್ರೋತ್ಸಾಹ ನೀಡಿದಂತೆ ಆಗುತ್ತದೆ. ಮಹಿಳೆಯರು ದನಿ ಎತ್ತಿ ಹೋರಾಡಬೇಕೇ ವಿನಾ ಆತ್ಮಹತ್ಯೆ ಮಾಡಿಕೊಳ್ಳುವುದಲ್ಲ.

(ವರದಕ್ಷಿಣೆ ಬೇಡಿಕೆ ಪೂರೈಸಲಾಗದ ಕಾರಣಕ್ಕೆ ಪ್ರಿಯಕರ ಮದುವೆಯಾಗಲು ನಿರಾಕರಿಸಿದ್ದರಿಂದ, ಕೇರಳದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ಸಹನಾ

25 ವರ್ಷಗಳ ಹಿಂದೆ
ಮಂಗಳವಾರ, 8-12-1998

• **ನ್ಯಾಯಾಲಯದ ಹಸ್ತಕ್ಷೇಪ ಲೋಕಸಭೆಯಲ್ಲಿ ಟೀಕೆ**

ನವದೆಹಲಿ, ಡಿ. 7 – ಇನ್ನೂ ಭರವಸೆಯಾಗಿಯೇ ಉಳಿದಿರುವ ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ನಿಧಿ ಏರಿಕೆ, ತಡೆಹಿಡಿಯಲಾಗಿರುವ ದೂರವಾಣಿ ಮತ್ತು ಅಡುಗೆ ಅನಿಲ ಸೌಲಭ್ಯ ಇಂದು ಲೋಕಸಭೆಯಲ್ಲಿ ಬಿಸಿ ಚರ್ಚೆಗೆ ಎಡೆಕೊಟ್ಟು, ಈ ಬಗೆಗೆ ನ್ಯಾಯಾಲಯಗಳ 'ಹಸ್ತಕ್ಷೇಪ'ವು ಇಂದು ತೀವ್ರವಾಗಿ ಟೀಕೆಗೆ ಗುರಿಯಾಯಿತು.

ಸಮಾಜವಾದಿ ಪಕ್ಷದ ಶೈಲೇಂದ್ರ ಕುಮಾರ್, ಸಂಸತ್ ಸದಸ್ಯರ ವಿವೇಚನೆಗೆ ಅವರವರ ಕ್ಷೇತ್ರದ ಅಭಿವೃದ್ಧಿಗೆ ನೀಡುವ ಒಂದು ಕೋಟಿ ಹಣವು ಸಕಾಲಕ್ಕೆ ಬಿಡುಗಡೆ ಆಗುತ್ತಿಲ್ಲ ಎಂದು ಶೂನ್ಯವೇಳೆಯಲ್ಲಿ ಮಾಡಿದ ಪ್ರಸ್ತಾಪ, ದೂರವಾಣಿ ಮತ್ತು ಅಡುಗೆ ಅನಿಲ ಸೌಲಭ್ಯದ ತಡೆಯೂ ಸೇರಿದ್ದರಿಂದ 45 ನಿಮಿಷ ಕಾಲ ಚರ್ಚೆಗೆ ಎಡೆಮಾಡಿತು.

• **ಸಾಬೂನು ಕಾರ್ಖಾನೆ: ನಾಲ್ವರು ಅಧಿಕಾರಿಗಳ ಅಮಾನತು**

ಬೆಂಗಳೂರು, ಡಿ. 7 – ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಯಲ್ಲಿ 1990-92ರ ಅವಧಿಯಲ್ಲಿ ಸಾಬೂನು ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳನ್ನು ನಿಯಮ ಬಾಹಿರವಾಗಿ ಖರೀದಿಸಿರುವ ಆರೋಪದ ಮೇಲೆ ನಾಲ್ವರು ಅಧಿಕಾರಿಗಳನ್ನು ಅಮಾನತಿನಲ್ಲಿ ಇಡಲಾಗಿದೆ.

50 ವರ್ಷಗಳ ಹಿಂದೆ
ಶನಿವಾರ, 8-12-1973

• **ರಾಜಕೀಯ ಬಿಕ್ಕಟ್ಟಿಗಾಗಿ ರಾಜ್ಯದ ವಿದ್ಯಾರ್ಥಿಗಳಿಗೆ ಕೆಂಗಲ್ ಅಭಿನಂದನೆ**

ಬೆಂಗಳೂರು, ಡಿ. 7– ಇಂದು ರಾಜ್ಯದಲ್ಲಿ ಕರ್ನಾಟಕದ ಯುವಕರು, ವಿದ್ಯಾರ್ಥಿಗಳು ಉಂಟು ಮಾಡಿರುವ 'ರಾಜಕೀಯ ಬಿಕ್ಕಟ್ಟಿಗಾಗಿ' ರಾಜ್ಯದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಅವರನ್ನು ಅಭಿನಂದಿಸಿದರು.

ತಾವು ವರ್ಷದ ಹಿಂದೆ ರಾಜಕೀಯ ಶುದ್ಧೀಕರಣವಾಗಬೇಕೆಂದು ಹೇಳಿದಾಗ ತಮಗೆ ಸಹಕಾರ ದೊರಕಲಿಲ್ಲವೆಂದ ಅವರು, 'ಜಾತಿ ವೈಷಮ್ಯ ಬೆಳೆಸಿ ಅದನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದನ್ನು ನಿಲ್ಲಿಸಬೇಕೆಂದು ಹೇಳಿದ್ದೆ. ನಾವು ಹಿರಿಯರು ಮಾಡದಿದ್ದುದನ್ನು ಕರ್ನಾಟಕದ ಯುವಕರು, ವಿದ್ಯಾರ್ಥಿಗಳು ಮಾಡಿದ್ದಾರೆ. ಅದಕ್ಕಾಗಿ ಅವರು ಅಭಿನಂದನೀಯರು'– ಎಂದರು.

• **ಬಸವಲಿಂಗಪ್ಪ ನಿವೃತ್ತಿ ಆಗದೆ ಅನ್ಯಮಾರ್ಗವಿಲ್ಲ**

ಬೆಂಗಳೂರು, ಡಿ. 7 – ಪೌರಾಡಳಿತ ಮಂತ್ರಿ ಬಸವಲಿಂಗಪ್ಪ ಅವರನ್ನು ಸಚಿವ ಸಂಪುಟದಿಂದ ತೆಗೆಯದೇ, ಇಲ್ಲಿ ಈಗ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿಗೆ ಅನ್ಯ ಪರಿಹಾರ ಮಾರ್ಗ ಇಲ್ಲ ಎಂಬ ಪರಿಸ್ಥಿತಿ ಸ್ಪಷ್ಟವಾಗತೊಡಗಿದೆ.

ಬಸವಲಿಂಗಪ್ಪನವರು ಮುಂದಿನ ಮಂತ್ರಿ ಮಂಡಲದಲ್ಲಿ ಇರದಂತೆ ನೋಡಿಕೊಳ್ಳುವ 'ಸ್ಪಷ್ಟ ಹಾಗೂ ದಿಟ್ಟ ನಿಲುವನ್ನು' ದೆಹಲಿಯ ಕಾಂಗ್ರೆಸ್ ವರಿಷ್ಠರು ತಾಳಬೇಕು ಎಂದು ಇಲ್ಲಿಂದ, ಬಸವಲಿಂಗಪ್ಪ ವಿರೋಧಿ ಸಚಿವರು ಕೇಂದ್ರಕ್ಕೆ ತಿಳಿಸಿದ್ದಾರೆ ಅಥವಾ ತಿಳಿಸಲಿದ್ದಾರೆ ಎಂದು ವಿಶ್ವಸನೀಯವಾಗಿ ತಿಳಿದುಬಂದಿದೆ.

ನೀಡಿದ ಒಪ್ಪಿಗೆಯನ್ನು ಹಿಂಪಡೆಯುವ ಅಧಿಕಾರ ರಾಜ್ಯಕ್ಕೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ

ಇಲ್ಲದ ಅಧಿಕಾರವನ್ನು ಬಳಸಿದ ಸಂಪುಟ



ವಿಶ್ಲೇಷಣೆ
ಕೆ.ವಿ.ಧನಂಜಯ

ಲಂಚ ಪಡೆಯುವ ಸಾರ್ವಜನಿಕ ಸೇವಕರನ್ನು ಲಂಚ ಪಡೆಯುತ್ತಿರುವ ಸಂದರ್ಭದಲ್ಲಿಯೇ ಹಿಡಿಯುವುದು ಕಷ್ಟ ಎಂಬುದನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ-1988 ಗುರುತಿಸಿದೆ. ಹೀಗಾಗಿ, ಲಂಚ ಪಡೆದ ವ್ಯಕ್ತಿ ಆ ಹಣವನ್ನೆಲ್ಲ ತನ್ನ ಅಥವಾ ತನ್ನ ಕುಟುಂಬದ ಸದಸ್ಯರ ಸಂಪತ್ತಿಗೆ ಸೇರಿಸುತ್ತಾನೆ, ತನ್ನ ಅಥವಾ ಕುಟುಂಬದ ಸದಸ್ಯರ ಸಂಪತ್ತಿನಲ್ಲಿ ಹೆಚ್ಚಳ ಆಗಿದ್ದು ಹೇಗೆ ಎಂಬುದಕ್ಕೆ ಆತನಿಂದ ಸರಿಯಾದ ವಿವರಣೆ ನೀಡಲು ಸಾಧ್ಯವಾಗುವುದಿಲ್ಲ ಎಂದು ಕಾಯ್ದೆಯು ಭಾವಿಸುತ್ತದೆ. 2014ರಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಆಗಿದ್ದ ಜೆ. ಜಯಲಲಿತಾ ಅವರನ್ನು ಈ ಕಾಯ್ದೆಯ ಅಡಿಯಲ್ಲಿ ನಾಲ್ಕೂವರೆ ವರ್ಷ ಜೈಲು ಶಿಕ್ಷೆಗೆ ಗುರಿಪಡಿಸಲಾಗಿತ್ತು, ₹ 100 ಕೋಟಿ ದಂಡ ವಿಧಿಸಲಾಗಿತ್ತು. ತಮ್ಮ ಆಸ್ತಿಯಲ್ಲಿ ಆದ ₹ 54 ಕೋಟಿಯಷ್ಟು ಹೆಚ್ಚಳಕ್ಕೆ ವಿವರಣೆ ನೀಡುವುದಕ್ಕೆ ಜಯಲಲಿತಾ ಅವರಿಗೆ ಸಾಧ್ಯವಾಗಿರಲಿಲ್ಲ.

ಇದೇ ಕಾನೂನಿನ ಅಡಿ, ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಿಬಿಐ ವಿಚಾರಣೆ ಎದುರಿಸುತ್ತಿದ್ದಾರೆ. ಅವರು ಘೋಷಿತ ಆದಾಯಕ್ಕಿಂತ ಹೆಚ್ಚುವರಿಯಾಗಿ ಸಂಪಾದಿಸಿರುವ ಆಸ್ತಿಯ ಮೌಲ್ಯ ₹ 75 ಕೋಟಿ ಎಂದು ಸಿಬಿಐ ಆರೋಪಿಸಿದೆ. ಈ ಆರೋಪಕ್ಕೆ ಸಂಬಂಧಿಸಿದ ತನಿಖೆಯು ಕೆಲವು ತಿಂಗಳುಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಈ ಸಂದರ್ಭದಲ್ಲಿ, ಶಿವಕುಮಾರ್ ವಿರುದ್ಧದ ತನಿಖೆಗೆ ಸಿಬಿಐಗೆ ನೀಡಿದ್ದ ಅನುಮತಿಯನ್ನು ರಾಜ್ಯ ಸಚಿವ ಸಂಪುಟವು ಹಿಂಪಡೆಯಲು ತೀರ್ಮಾನಿಸಿದೆ ಎಂದು ವರದಿಯಾಗಿದೆ. ತನಿಖೆಯನ್ನು ರಾಜ್ಯ ಪೊಲೀಸರಿಗೆ ವರ್ಗಾಯಿಸಬೇಕು ಎಂಬುದು ಸಂಪುಟದ ಇಚ್ಛೆ. ಇಂಥದ್ದು ಹಿಂದೆಂದೂ ಆಗಿರಲಿಲ್ಲ. ಕಾನೂನಿನ ದೃಷ್ಟಿಯಿಂದ ಇದು ತರ್ಕಹೀನ. ಪೊಲೀಸ್ ವ್ಯವಸ್ಥೆ ಮತ್ತು ಕಾನೂನು ಸುವ್ಯವಸ್ಥೆಯ ಹೊಣೆ ರಾಜ್ಯಗಳ ವ್ಯಾಪ್ತಿಯಲ್ಲಿದೆ. ಆದರೆ ಇದಕ್ಕೆ ಕೆಲವು ವಿನಾಯಿತಿಗಳೂ ಇವೆ. ಶಿವಕುಮಾರ್ ಅವರು ಕರ್ನಾಟಕ ಸರ್ಕಾರದ ಅಧೀನದ ಸಾರ್ವಜನಿಕ ಸೇವಕ ಆಗಿದ್ದ ಕಾರಣ, ಘೋಷಿತ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದಿಸಿದ ವಿಚಾರವಾಗಿ ಅವರ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಬೇಕಿದ್ದರೆ, ಅದಕ್ಕೆ ಸಂಬಂಧಿಸಿದ ಮೂಲ ಅಧಿಕಾರ ಇರುವುದು ಕರ್ನಾಟಕ ಪೊಲೀಸರಿಗೆ ಮಾತ್ರ. ಆದರೆ ಪೊಲೀಸರು ತನಿಖೆ ನಡೆಸಬಹುದಾದ ಅಪರಾಧಗಳನ್ನು ರಾಜ್ಯ ಸರ್ಕಾರವು ಬಯಸಿದಲ್ಲಿ ಸಿಬಿಐಗೆ ವರ್ಗಾವಣೆ ಮಾಡಬಹುದು. ಶಿವಕುಮಾರ್ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರವು 2019ರ ಸೆಪ್ಟೆಂಬರ್‌ನಲ್ಲಿ ಒಪ್ಪಿಗೆ ನೀಡಿತು. ಆದರೆ ಆ ಒಪ್ಪಿಗೆಯು ಕಾನೂನುಬಾಹಿರವಾಗಿತ್ತು ಎಂದು ಸರ್ಕಾರ ಈಗ ಹೇಳುತ್ತಿದೆ.

ಒಪ್ಪಿಗೆ ನೀಡುವ ಅಧಿಕಾರವು ರಾಜ್ಯ ಸರ್ಕಾರಕ್ಕೆ ಇದೆ ಎಂದಾದರೆ, ಅದಾಗಲೇ ನೀಡಿರುವ ಒಪ್ಪಿಗೆಯನ್ನು ಹಿಂಪಡೆಯುವ ಅಧಿಕಾರವೂ ಸರ್ಕಾರಕ್ಕೆ ಇರುತ್ತದೆ ಎಂದು ಸಂಪುಟ ಹೇಳುತ್ತಿದೆ. ನಿರ್ದಿಷ್ಟ ಕೆಲಸವೊಂದನ್ನು ಮಾಡುವ ಅಧಿಕಾರ ಇದೆ ಎಂದಾದರೆ, ಅದಾಗಲೇ ಮಾಡಿರುವ ಕೆಲಸದ ವಿಚಾರವಾಗಿ ಹಿಂದಡಿ ಇರಿಸುವ ಅಧಿಕಾರವೂ ಇರುತ್ತದೆ ಎಂಬುದು ಕಾನೂನಿನ ಮೂಲ ತತ್ವ ಎಂದು ಸಂಪುಟದ ತೀರ್ಮಾನದ ಪರವಾಗಿ ಇರುವವರು ಹೇಳುತ್ತಿದ್ದಾರೆ. ಇದು ಸರಿಯೇ?

ಕಾನೂನಿನ ಅಡಿ, ಅಧಿಕಾರ ಚಲಾಯಿಸುವ ಸ್ವಾತಂತ್ರ್ಯದ ಭಾಗವಾಗಿ ಇರುವುದು ಆ ಅಧಿಕಾರವನ್ನು ಚಲಾಯಿಸದೇ ಇರುವ ಸ್ವಾತಂತ್ರ್ಯ ಮಾತ್ರ. ಅಂದರೆ, 2019ರ ಸೆಪ್ಟೆಂಬರ್‌ನಲ್ಲಿ ಸಿಬಿಐ ತನಿಖೆಗೆ ಒಪ್ಪಿಗೆ ನೀಡುವ ಮೊದಲು, ಒಪ್ಪಿಗೆ ನೀಡದಿರುವ ಸ್ವಾತಂತ್ರ್ಯವೂ ಸರ್ಕಾರಕ್ಕೆ ಇತ್ತು. ಆಡಳಿತಾತ್ಮಕ ಕಾನೂನಿನ ಈ ಮೂಲ ತತ್ವವನ್ನು ಸಂಪುಟವು ಸಂಪೂರ್ಣವಾಗಿ ತಪ್ಪಾಗಿ ಅರ್ಥಮಾಡಿಕೊಂಡಿದೆ. ಒಮ್ಮೆ ಒಂದು ತೀರ್ಮಾನ ಕೈಗೊಂಡಾದ ನಂತರ, ಅದಕ್ಕೆ ಸಂಬಂಧಿಸಿದ ಶಾಸನಾತ್ಮಕ ಪರಿಣಾಮಗಳು ಇರುತ್ತವೆ. ತೀರ್ಮಾನ ಕೈಗೊಂಡ ವ್ಯಕ್ತಿಗೆ, ತನ್ನ ತೀರ್ಮಾನ ಹಿಂಪಡೆಯುವ ಅಧಿಕಾರ ಉಳಿದಿರುವುದಿಲ್ಲ. ಶಿವಕುಮಾರ್ ವಿರುದ್ಧ ಸಿಬಿಐ ಆರಂಭಿಸಿರುವ ತನಿಖೆ ನಿಲ್ಲಿಸಲು ಸರ್ಕಾರಕ್ಕೆ ಅಧಿಕಾರ ಇಲ್ಲ. ಏಕೆಂದರೆ, ದೇಶದ ಅಪರಾಧ ದಂಡಪ್ರಕ್ರಿಯೆಯು ಆ ರೀತಿ ನಿಲ್ಲಿಸುವುದಕ್ಕೆ ಮಾನ್ಯತೆ ನೀಡುವುದಿಲ್ಲ.

ವ್ಯಕ್ತಿಯೊಬ್ಬ ಸಂಕೀರ್ಣ ಶಸ್ತ್ರಚಿಕಿತ್ಸೆಯೊಂದಕ್ಕೆ ಒಪ್ಪಿಗೆ ನೀಡಿ, ಶಸ್ತ್ರಚಿಕಿತ್ಸೆಯ ನಡುವಿನಲ್ಲಿ ತಾನು ಸಮ್ಮತಿಯನ್ನು ಹಿಂಪಡೆಯುತ್ತಿದ್ದೇನೆ ಎಂದು ಹೇಳುವಂತಹ ಕೆಲಸವನ್ನು ಸರ್ಕಾರ ಈಗ ಮಾಡಿದೆ. ಸಿಬಿಐಗೆ ನೀಡಿದ್ದ ಸಮ್ಮತಿಯನ್ನು ಹಿಂದಕ್ಕೆ ಪಡೆದಿರುವುದಕ್ಕೆ ಸಂಪುಟವು ಮುಂದಿರಿಸಿರುವ ವಾದಗಳು ಸಾರ್ವಜನಿಕ ಚರ್ಚೆಗೂ ಅರ್ಹವಾಗಿಲ್ಲ. ಸಂಪುಟದ ಸದಸ್ಯರೊಬ್ಬರ ರಕ್ಷಣೆಗೆ ಬೇರೆ ಯಾವುದೇ ಸಂಪುಟವು ಇಂತಹ ಕೆಲಸವೊಂದನ್ನು ಮಾಡಿದಂತೆ ಕಾಣುತ್ತಿಲ್ಲ. ಇದು ಒಳ್ಳೆಯ ಆಡಳಿತಕ್ಕೆ ಒಂದು ಪೆಟ್ಟು.

1987ರಲ್ಲಿ ಸಿಕ್ಕಿಂ ಮುಖ್ಯಮಂತ್ರಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಸಿಬಿಐ ತನಿಖೆ ಎದುರಿಸುತ್ತಿದ್ದರು. ತಮ್ಮನ್ನು ರಕ್ಷಿಸಿಕೊಳ್ಳಲು ಅವರು ಬಯಸಿದರು. ಆದರೆ ಅವರ ನೇತೃತ್ವದ ಸರ್ಕಾರವು ಮುಖ್ಯಮಂತ್ರಿ ವಿರುದ್ಧದ ಪ್ರಕರಣಗಳ ತನಿಖೆಗೆ ಸಿಬಿಐಗೆ ನೀಡಿದ್ದ ಅನುಮತಿ ಹಿಂಪಡೆಯಲಾಗುತ್ತದೆ ಎಂದು ಹೇಳಲಿಲ್ಲ. ಅದರ ಬದಲಿಗೆ, 1979ರ ನಂತರದಲ್ಲಿ ಸಿಬಿಐಗೆ ವಹಿಸಿದ್ದ ಎಲ್ಲ ಪ್ರಕರಣಗಳಿಗೆ ಸಂಬಂಧಿಸಿದ ಅನುಮತಿಯನ್ನು ಹಿಂಪಡೆಯಲಾಗುತ್ತಿದೆ ಎಂದು ಹೇಳಿತು. ತನ್ನ ವ್ಯಾಪ್ತಿಯಲ್ಲಿ ಸಿಬಿಐ ತನಿಖೆಗೆ ಒಪ್ಪಿಗೆ ನೀಡುವ ಸ್ವಾತಂತ್ರ್ಯವಿರುವ ಸರ್ಕಾರಕ್ಕೆ, ಒಪ್ಪಿಗೆ ನೀಡದಿರುವ ಸ್ವಾತಂತ್ರ್ಯವೂ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿತು. ಆದರೆ, ಒಪ್ಪಿಗೆಯನ್ನು ಹಿಂದಕ್ಕೆ ಪಡೆಯುವ ಸ್ವಾತಂತ್ರ್ಯ ಇಲ್ಲ ಎಂದು ಹೇಳಿತು. ಏಕೆಂದರೆ, ಒಮ್ಮೆ ಒಪ್ಪಿಗೆ ಕೊಟ್ಟ ನಂತರದಲ್ಲಿ ಅದರ ಶಾಸನಾತ್ಮಕ ಪರಿಣಾಮಗಳನ್ನು ಎದುರಿಸಲೇಬೇಕಾಗುತ್ತದೆ. ಅನುಮತಿ ಹಿಂಪಡೆದ ಸರ್ಕಾರದ ಆದೇಶದ ಅರ್ಥವನ್ನು ಕಿರಿದು ಮಾಡಿದ ಸುಪ್ರೀಂ ಕೋರ್ಟ್, ಭವಿಷ್ಯದಲ್ಲಿ ಸಿಬಿಐ ನಡೆಸುವ ತನಿಖೆಗಳಿಗೆ ಅನುಮತಿ ಇರುವುದಿಲ್ಲ ಎಂಬ ಅರ್ಥವನ್ನಷ್ಟೇ ಆ ಆದೇಶವು ನೀಡಬಹುದು ಎಂದು ಹೇಳಿತು. ಇದರಿಂದ, ಮುಖ್ಯಮಂತ್ರಿ ವಿರುದ್ಧದ ತನಿಖೆಯನ್ನು ಸಿಬಿಐ ಯಾವ ಅಡ್ಡಿಯೂ ಇಲ್ಲದೆ ಮುಂದುವರಿಸಿತು.

1998ರಲ್ಲಿ ಕೇರಳ ಸರ್ಕಾರವು ನಿರ್ದಿಷ್ಟ ಪ್ರಕರಣವೊಂದರಲ್ಲಿ ಸಿಬಿಐಗೆ ನೀಡಿದ್ದ ಅನುಮತಿಯನ್ನು ತಾನು ಹಿಂದಕ್ಕೆ ಪಡೆಯಬೇಕಿದೆ, ಆಗ ರಾಜ್ಯ ಪೊಲೀಸರು ಇನ್ನೂ ಪರಿಣಾಮಕಾರಿಯಾಗಿ ತನಿಖೆ ನಡೆಸಲು ಸಾಧ್ಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಮುಂದೆ ವಾದಿಸಿತು. ಒಪ್ಪಿಗೆ ನೀಡಿದ್ದನ್ನು ಹಿಂದಕ್ಕೆ ಪಡೆಯುವ ಅಧಿಕಾರವು ರಾಜ್ಯಕ್ಕೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತು. ಆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಕೇರಳ ಸರ್ಕಾರದ ಉದ್ದೇಶದ ಬಗ್ಗೆ ಅನುಮಾನ ವ್ಯಕ್ತಪಡಿಸಿ ಲಕ್ಷಾಂತರ ರೂಪಾಯಿ ದಂಡ ವಿಧಿಸಿತು.

ಸಿಬಿಐಗೆ ನೀಡಿದ್ದ ಅನುಮತಿ ಹಿಂಪಡೆಯುವ ತೀರ್ಮಾನವನ್ನು ಸಂಪುಟ ಕೈಗೊಂಡಿದ್ದೇಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ನಿರ್ದಿಷ್ಟ ಪ್ರಕ್ರಿಯೆಯೊಂದನ್ನು ಪಾಲಿಸದೇ ಇದ್ದ ಕಾರಣಕ್ಕೆ ಹಿಂದಿನ ಮುಖ್ಯ ಕಾರ್ಯದರ್ಶಿ ನೀಡಿದ್ದ ಅನುಮತಿ ಲೋಪದಿಂದ ಕೂಡಿತ್ತು ಎಂದು ಸರ್ಕಾರ ಹೇಳಿದೆ. ಶಿವಕುಮಾರ್ ವಿರುದ್ಧ ತನಿಖೆ ಆರಂಭಕ್ಕೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯಬೇಕಿತ್ತು ಎಂದು ಕೂಡ ಹೇಳಿದೆ. ಇವೆರಡೂ ವಾದ ಸರಿ ಎಂದು ಒಪ್ಪಿಕೊಂಡರೂ ಅವು ಪ್ರಕ್ರಿಯೆಯ ಪಾಲನೆಯಲ್ಲಿ ಲೋಪವೊಂದಕ್ಕೆ ಸಂಬಂಧಿಸಿದವಾಗುತ್ತವೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿ ತನಿಖೆಯೊಂದನ್ನು ಇಂತಹ ಲೋಪಕ್ಕಾಗಿ ನಿಲ್ಲಿಸಲು ಆಗುವುದಿಲ್ಲ. ಇಂತಹ ಲೋಪದಿಂದ ನ್ಯಾಯದಾನದಲ್ಲಿ ವೈಫಲ್ಯ ಆಗಿದೆ, ಅಂದರೆ ಅಮಾಯಕ ವ್ಯಕ್ತಿಯೊಬ್ಬ ಶಿಕ್ಷೆಗೆ ಗುರಿಯಾಗುವ ಸಾಧ್ಯತೆ ಇದೆ ಎಂದು ಕೋರ್ಟ್‌ಗೆ ಅನ್ನಿಸಿದರೆ ಮಾತ್ರ ತನಿಖೆ ನಿಲ್ಲಿಸಬಹುದು.

ವಾಸ್ತವದಲ್ಲಿ, ರಾಜ್ಯ ಸರ್ಕಾರವು ತನಿಖೆಗೆ ಅನುಮತಿ ನೀಡುವುದಕ್ಕೆ ನಿರ್ದಿಷ್ಟ ಪ್ರಕ್ರಿಯೆಯನ್ನು ಪಾಲಿಸಬೇಕು ಎಂದು ಕಾನೂನಿನಲ್ಲಿ ಹೇಳಿಲ್ಲ. ರಾಜ್ಯ ಸರ್ಕಾರದ ಸಂಬಂಧಪಟ್ಟ ಅಧಿಕಾರಿಯು ಒಂದು ಒಪ್ಪಿಗೆ ಪತ್ರ ನೀಡಿದರೆ ಸಾಕಾಗುತ್ತದೆ. ಶಿವಕುಮಾರ್ ವಿರುದ್ಧ ತನಿಖೆಗೆ ಸ್ಪೀಕರ್ ಅನುಮತಿಯ ಅಗತ್ಯ ಇರುವುದಿಲ್ಲ. ರಾಜ್ಯದ ಸಂಪುಟವು ಕಾನೂನಿನ ದೃಷ್ಟಿಯಿಂದ ತರ್ಕರಹಿತ ಕೆಲಸವೊಂದನ್ನು ಮಾಡಿದೆ. ಕಾನೂನಿನ ಅಡಿಯಲ್ಲಿ ತನಗೆ ಇಲ್ಲದಿರುವ ಅಧಿಕಾರ ಬಳಸಿ, ಸಂಪುಟದ ಸದಸ್ಯರೊಬ್ಬರನ್ನು ಭ್ರಷ್ಟಾಚಾರದ ಪ್ರಕರಣದಲ್ಲಿ ರಕ್ಷಿಸಲು ಮುಂದಾಗಿರುವುದು ಆಡಳಿತಾತ್ಮಕ ಅಧಿಕಾರದ ದುರ್ಬಳಕೆ ಮತ್ತು ಸಂಪುಟದ ಮೇಲೆ ಸಾರ್ವಜನಿಕರು ಇರಿಸಿರುವ ನಂಬಿಕೆಗೆ ಧಕ್ಕೆ ತರುವಂಥದ್ದು.

ಲೇಖಕ: ಸುಪ್ರೀಂ ಕೋರ್ಟ್ ವಕೀಲ

ಚುರುಮುರಿ

ಲೌಡ್ ಸ್ಪೀಕರು!

• ಬಿ.ಎನ್.ಮಲ್ಲೇಶ್

ತೆಪರೇಸಿ ಮನೇಲಿ ಬೆಳ್ಳಂಬೆಳಿಗ್ಗೆ ಸಿಬಿಐ ತನಿಖೆ ಶುರುವಾಗಿತ್ತು. ಹೆಂಡ್ತಿ ಪಮ್ಮಿ ಸೌಟು ಹಿಡಿದು ನಿಂತಿದ್ದಳು. 'ನಿನ್ನೆ ರಾತ್ರಿ ಹನ್ನೊಂದೂವರಿ ಆದ್ರೂ ಮನಿಗೆ ಬಂದಿರ್ಲಿಲ್ಲ... ಹೇಳಿ, ಎಲ್ಲಿದ್ರಿ?'

ತೆಪರೇಸಿ ತಡವರಿಸಿದ 'ಅದೂ... ಅಸೆಂಬ್ಲೀಲಿ ಯತ್ನಾಳ್ ಸಾಹೇಬ್ರು ಗರಂ ಆಗಿದ್ರಲ್ಲ...'

'ನೀವು ತಣ್ಣಗೆ ಮಾಡಾಕೆ ಹೋಗಿದ್ರಾ?'

'ಅದಲ್ಲಲೆ, ನಮ್ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅದಾರಲ್ಲ'.

'ಅವ್ರು ಹೆಂಗಾದ್ರು ಇರ್ಲಿ, ನೀವೆಲ್ಲಿದ್ರಿ ಹೇಳಿ'.

'ಥೋ... ನಂಗೆ ಮಾತಾಡಕಾದ್ರು ಬಿಡೆ. ಅಲ್ಲಿ 'ಇಂಡಿಯ' ಸಭೆಗೆ ಶಿವಸೇನೆ, ಟಿಎಂಸಿ ಗೈರು ಹಾಜರಾಗಿದ್ವಂತೆ'.

'ನೀವು ಹಾಜರಾತಿ ಹಾಕಾಕೆ ಹೋಗಿದ್ರಾ?'

'ನಾನ್ಯಾಕೆ ಹೋಗ್ಲಿ? ಇಲ್ಲಿ ಜಮೀರ್ ಅಹ್ಮದ್ ಮಿನಿಸ್ಟ್ರು ಅಸೆಂಬ್ಲಿಗೆ ಹೋಗಿಲ್ಲಂತೆ, ಹಂಗಂತ ನಾನು ಹೋಗಾಕಾಗುತ್ತಾ?'

'ಅದ್ನೇ ಕೇಳ್ತಿರೋದು, ಎಲ್ಲಿ ಹೋಗಿದ್ರಿ ಅಂತ'.

'ಮಿಚಾಂಗ್ ಚಂಡಮಾರುತ ಭಾರೀ ಜೋರೈತಂತೆ, ನಿನ್ ತರ. ತಮಿಳುನಾಡಿಗೀಗ ಕಾವೇರಿ ನೀರೇ ಬ್ಯಾಡಂತೆ'.

'ಮಾತು ಮರೆಸಬೇಡಿ, ಈ ಕಾಗಕ್ಕ, ಗುಬ್ಬಕ್ಕನ ಕತಿ ಎಲ್ಲ ಬ್ಯಾಡ' ಪಮ್ಮಿ ರಾಂಗಾದಳು.

'ಆತುಬಿಡು, ಅಲ್ಲಿ ಲೋಕಸಭೇಲಿ ಕಾಂಗ್ರೆಸ್ನೋರು, ಇಲ್ಲಿ ಬೆಳಗಾವಿ ಅಧಿವೇಶನದಾಗೆ ಬಿಜೆಪಿಯೋರು ಸಭಾತ್ಯಾಗ ಮಾಡಿದ್ರಂತೆ'.

'ಅವರಿಗೇನ್ ಕೆಲ್ಸ ಇತ್ತೋ ಪಾಪ, ಸಭಾತ್ಯಾಗ ಮಾಡಿರ್ತಾರೆ, ನಿಮಿಗೇನ್ ಕೆಲ್ಸ ಇತ್ತು ಅದನ್ನ ಹೇಳಿ'.

'ಈ ಎಲ್ಲ ವಿಷ್ಯದ ಬಗ್ಗೆ ನಾವು ಹರಟೆಕಟ್ಟೆ ಫ್ರೆಂಡ್ಸ್ ಬಾರಲ್ಲಿ ಕುಂತು ಓವರ್ ದ ಪೆಗ್ ಚರ್ಚೆ ಮಾಡ್ತಿದ್ವಿ, ಅದ್ಕೆ ಲೇಟಾತು ಏನೀಗ? ನೀನಿಂಗೆ ತಲಿ ತಿಂತಿದ್ರೆ ನಾನೂ ಸಭಾತ್ಯಾಗ ಮಾಡಬೇಕಾಗ್ತತಿ ನೋಡು' ತೆಪರೇಸಿಗೆ ಸಿಟ್ಟು ಬಂತು.

'ನೀವು ಸಭಾತ್ಯಾಗ ಮಾಡಾಕೆ ಇದು ಅಸೆಂಬ್ಲಿ ಅಲ್ಲ, ನಾನು ಸ್ಪೀಕರೂ ಅಲ್ಲ'.

'ನೀನು ಸ್ಪೀಕರಲ್ಲ ಅನ್ನೋದು ಗೊತ್ತು...'

'ಮತ್ತೇನು?'

'ಲೌಡ್ ಸ್ಪೀಕರು...!'

ಸಂಗತ

ಬದುಕಬೇಕು ಹೆಜ್ಜೇನು, ಜೊತೆಗೆ ಮಾನವನೂ

ಜೇನುಹುಳುಗಳನ್ನು ಕೊಲ್ಲದೆ ಸ್ಥಳಾಂತರಿಸುವ ಮೂಲಕ ಅವುಗಳ ಸಂರಕ್ಷಣೆಯ ಜೊತೆಗೆ ಮಾನವನ ಮೇಲೆ ಅವು ದಾಳಿ ಮಾಡುವುದನ್ನೂ ತಡೆಗಟ್ಟಬಹುದು

• ಕೆ.ಟಿ.ವಿಜಯಕುಮಾರ್

ರಾಜ್ಯದಲ್ಲಿ ಹೆಜ್ಜೇನು ದಾಳಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಮೇಲುಕೋಟೆ ಜಾತ್ರೆಗೆ ಬಂದಿದ್ದ 80ಕ್ಕೂ ಹೆಚ್ಚು ಭಕ್ತರು ಹಾಗೂ ಹೂವಿನಹಡಗಲಿಯ ಶಾಲೆಯೊಂದರ ವಿದ್ಯಾರ್ಥಿಗಳು ಹೆಜ್ಜೇನು ದಾಳಿಯಿಂದ ಆಸ್ಪತ್ರೆ ಸೇರಬೇಕಾಯಿತು. ಚನ್ನಗಿರಿ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ತಲಾ ಒಬ್ಬರು ಹೆಜ್ಜೇನು ದಾಳಿಗೆ ಬಲಿಯಾಗಿದ್ದು, ಜನರಲ್ಲಿ ಆತಂಕಕ್ಕೆ ಕಾರಣವಾಗಿದೆ. ಹೆಜ್ಜೇನುಗಳಿಂದ ರಕ್ಷಿಸಿಕೊಳ್ಳುವ ಮಾರ್ಗಗಳ ಬಗ್ಗೆ ಯೋಚಿಸುವಂತೆ ಮಾಡಿದೆ.

ಜೇನು ಸಂತತಿಯಲ್ಲಿ ಹೆಜ್ಜೇನು, ಕಡ್ಡಿಜೇನು, ತುಡುವೆ, ಮೆಲ್ಲಿಫೆರಾ, ಮುಜಂಟಿ ಎಂಬ ಐದು ಬಗೆಯ ಪ್ರಭೇದಗಳಿವೆ. ತುಡುವೆ, ಮೆಲ್ಲಿಫೆರಾ ಮತ್ತು ಮುಜಂಟಿ ಜೇನು ಕುಟುಂಬಗಳನ್ನು ಪೆಟ್ಟಿಗೆಗಳಲ್ಲಿಟ್ಟು ಸಾಕಬಹುದು. ಆದರೆ ಹೆಜ್ಜೇನು ಮತ್ತು ಕಡ್ಡಿಜೇನುಗಳು ಅಲೆಮಾರಿಗಳಾಗಿದ್ದು, ಇವುಗಳನ್ನು ಸಾಕುವುದು ಅಸಾಧ್ಯ. ಜೇನುಹುಳುಗಳು ನಡೆಸುವ ಪರಾಗಸ್ಪರ್ಶದಿಂದ ಸಸ್ಯಗಳ ವಂಶಾಭಿವೃದ್ಧಿಗೆ ಅನುಕೂಲ ಆಗುತ್ತದೆ ಮತ್ತು ಬೆಳೆಗಳ ಇಳುವರಿ ವೃದ್ಧಿಗೂ ಸಹಕಾರಿ. ಹೆಜ್ಜೇನು ಕುಟುಂಬಗಳು ಮರದ ರೆಂಬೆ, ಟೆಲಿಫೋನ್ ಟವರ್, ಮನೆಗಳ ಸಜ್ಜಾ, ಸೇತುವೆಗಳ ಮೇಲೆ ಹೆಚ್ಚಾಗಿ ಗೂಡುಗಳನ್ನು ಕಟ್ಟಿ ಮೂರ್ನಾಲ್ಕು ತಿಂಗಳು ನೆಲೆಯೂರುತ್ತವೆ. ಒಂದು ಗೂಡಿನಿಂದ 15 ಕೆ.ಜಿ.ಗೂ ಹೆಚ್ಚು ಜೇನುತುಪ್ಪವನ್ನು ಕೊಯ್ಲು ಮಾಡುವ ಸೋಲಿಗ, ಜೇನುಕುರುಬ, ಕಾಡುಕುರುಬ, ಬೇಡ, ಸಿದ್ದಿ ಜನಾಂಗದವರಿಗೆ ಹೆಜ್ಜೇನು ತುಪ್ಪ ಸಂಗ್ರಹಿಸುವಿಕೆ ಪರ್ಯಾಯ ಜೀವನೋಪಾಯದ ಮಾರ್ಗ. ಹೆಜ್ಜೇನಿನ ತುಪ್ಪ ಅಷ್ಟೇ ರುಚಿಕರ ಮತ್ತು ಆರೋಗ್ಯಕರ.

ಹೆಜ್ಜೇನುಗಳು ವಿನಾಕಾರಣ ಯಾರ ಮೇಲೂ ದಾಳಿ ಮಾಡುವುದಿಲ್ಲ. ಗೂಡಿಗೆ ಕಲ್ಲು ಎಸೆದರೆ, ಹಕ್ಕಿಗಳು ತಾಕಿದರೆ, ಸಣ್ಣ ಮಟ್ಟದ ಹೊಗೆಯಾಡಿದರೆ ಅವು ದಾಳಿಗೆ ಸಜ್ಜಾಗುತ್ತವೆ. ಅವು ಕುಟುಕಿದಾಗ ಬರುವ ವಿಷವು ಮಾನವನ ದೇಹ ಸೇರಿದಾಗ ಅಲರ್ಜಿಯಿಂದ ಕೆಂಪಾಗುವುದು, ಕೆರೆತ ಮತ್ತು ಊತ ಸಾಮಾನ್ಯ. ತಲೆ ಸುತ್ತುವುದು, ಉಸಿರಾಟದಲ್ಲಿ ತೊಂದರೆ, ಎದೆಬಡಿತದಲ್ಲಿ ಏರಿಕೆ, ರಕ್ತದೊತ್ತಡದಲ್ಲಿ ಏರುಪೇರಿನಂತಹ ಲಕ್ಷಣಗಳು ಕೆಲವರಲ್ಲಿ ಕಾಣಬಹುದು. ಹೆಜ್ಜೇನು ದಾಳಿ ಮಾಡಿದಾಗ ಜೋರಾಗಿ ಹೊಗೆ ಹಾಕಿದರೆ ಅವು ಹೆದರಿ ಜಾಗ ಖಾಲಿ ಮಾಡುತ್ತವೆ. ಭಯದಿಂದ ಓಡುವ ಬದಲು, ನಿಂತ ಜಾಗದಲ್ಲೇ ಬೋರಲಾಗಿ ಅಲುಗಾಡದಂತೆ ಮಲಗಬೇಕು. ಜೇನುಹುಳು ಕುಟುಕಿದರೆ, ಮೊದಲಿಗೆ ಆ ಮುಳ್ಳನ್ನು ತೆಗೆಯಬೇಕು. ಇಲ್ಲದಿದ್ದರೆ ಆ ಮುಳ್ಳು ಮತ್ತು ಅದಕ್ಕಂಟಿದ ವಿಷವು ಬೇರೆ ನೂರಾರು ಹುಳುಗಳು ಕುಟುಕುವಂತೆ ಪ್ರೇರೇಪಿಸುತ್ತವೆ. ಜೇನು ಕುಟುಕಿದ ಜಾಗವನ್ನು ಯಾವುದಾದರೂ ಸಸ್ಯದ ಎಲೆಯ ರಸ, ನೀರು ಅಥವಾ ಎಂಜಲಿನಿಂದ ಉಜ್ಜಿದಾಗ ಬೇರೆ ಹುಳುಗಳನ್ನು ಆಕರ್ಷಿಸುವುದನ್ನು ತಡೆಯಬಹುದು. ನಂತರ ಮಂಜುಗಡ್ಡೆ ಅಥವಾ ಕ್ಯಾಲಮೈನ್ ಕ್ರೀಂ ಲೇಪಿಸುವುದರಿಂದ ಊತ ಶಮನ ಆಗುತ್ತದೆ. ದಾಳಿಯ ಪ್ರಮಾಣ ತೀವ್ರವಾಗಿದ್ದಾಗ ತ್ವರಿತವಾಗಿ ವೈದ್ಯರನ್ನು ಸಂಪರ್ಕಿಸಬೇಕು.

ಹೆಜ್ಜೇನು ವಾಸಸ್ಥಾನದಲ್ಲಿ ಹೆಚ್ಚು ನಿಗಾ ವಹಿಸಬೇಕು. ಸುಗಂಧದ್ರವ್ಯ ಬಳಸಿದಾಗ ಹೆಜ್ಜೇನು ಗೂಡುಗಳ ಸಮೀಪ ತೆರಳಬಾರದು. ಸುತ್ತಮುತ್ತ ಸಭೆ ಸಮಾರಂಭ ಹಮ್ಮಿಕೊಳ್ಳುವುದಿದ್ದರೆ ಜೇನುಕೃಷಿಕರಿಂದ ಆ ಗೂಡುಗಳನ್ನು ಸ್ಥಳಾಂತರಿಸಬೇಕು. ಗೂಡುಗಳಿಗೆ ಕೀಟನಾಶಕ ಸಿಂಪಡಿಸಬಾರದು, ಬೆಂಕಿ ಹಚ್ಚಬಾರದು. ಹೆಜ್ಜೇನಿನ ಸ್ಥಳಾಂತರಕ್ಕೆ ಮೂರು ಮಾರ್ಗಗಳಿವೆ. ಅವುಗಳ ಗೂಡನ್ನು (ರಾಡೆ) ಕತ್ತರಿಸಿ ಹೊಗೆ ಕೊಟ್ಟರೆ ಹೆಜ್ಜೇನುಗಳು ಜಾಗ ಖಾಲಿ ಮಾಡುತ್ತವೆ. ಎರಡನೆಯದಾಗಿ, ರಾಡೆಯನ್ನು ಕತ್ತರಿಸಿ ಮರದ ಹಲಗೆಗೆ ಕಟ್ಟಿ ಮೂಲ ಸ್ಥಳದಲ್ಲಿಟ್ಟರೆ, ಜೇನುಹುಳುಗಳು ಅದರ ಮೇಲೆ ಕೂತಾಗ ಸುರಕ್ಷಿತ ಪ್ರದೇಶಗಳಿಗೆ ವರ್ಗಾಯಿಸಬಹುದು. ಕೊನೆಯದಾಗಿ, ರಾತ್ರಿ ಸಣ್ಣ ರಂಧ್ರದ ಚೀಲದಿಂದ ಜೇನುಹುಳುಗಳನ್ನು ಹಿಡಿದು ದೂರದ ಸ್ಥಳಕ್ಕೆ ಬಿಡಬಹುದು. ಜೇನುಗೂಡು ಬಿಡಿಸುವಾಗ ರಕ್ಷಣಾ ಕವಚ, ಹೊಗೆ ತಿದಿ, ಪ್ರಥಮ ಚಿಕಿತ್ಸಾ ಸಾಮಗ್ರಿಗಳನ್ನು ತಪ್ಪದೇ ಕೊಂಡೊಯ್ಯಬೇಕು. ಗೂಡು ಕಿತ್ತ ಖಾಲಿ ಜಾಗಕ್ಕೆ ಯಾವುದಾದರೂ ರಾಸಾಯನಿಕ ಸಿಂಪಡಣೆ ಅಥವಾ ಗೋಡೆ ಬಣ್ಣ ಹಚ್ಚುವುದರಿಂದ ಮತ್ತೆ ಜೇನುಗಳು ಅಲ್ಲಿಗೆ ಬರುವುದನ್ನು ತಡೆಯಬಹುದು.

ನವೆಂಬರ್‌ನಿಂದ ಏಪ್ರಿಲ್‌ವರೆಗಿನ ಅವಧಿಯಲ್ಲಿ ಹೆಜ್ಜೇನುಗಳು ನಗರಗಳತ್ತ ಹೆಚ್ಚು ವಲಸೆ ಬರುತ್ತವೆ. ಕಟ್ಟಡಗಳ ಸಜ್ಜಾಗಳಿಗೆ ಮುಳ್ಳುಗಳ ಬಲೆ ಅಥವಾ ಮೆಶ್‌ಗಳನ್ನು ಹಾಕಿದ್ದರೆ ಗೂಡುಗಳನ್ನು ಕಟ್ಟಲು ಸ್ಥಳಾವಕಾಶವಿಲ್ಲದೆ ಮರಗಳನ್ನು ಆಶ್ರಯಿಸುತ್ತವೆ. ಕೀಟಗಳು ಒಳನುಸುಳದಂತೆ ಕಿಟಕಿಗಳಿಗೆ ಮೆಶ್ ಹಾಕಿಸುವುದು, ವಿದ್ಯುತ್ ಬೆಳಕು ನೇರವಾಗಿ ಗೂಡಿನ ಮೇಲೆ ಬೀಳದಂತೆ ನೋಡಿಕೊಳ್ಳುವುದು ಸೂಕ್ತ. ಕಾಡುಮೇಡು ನಾಶವಾದಾಗ ಹೆಜ್ಜೇನುಗಳು ಎತ್ತರದ ಕಟ್ಟಡಗಳನ್ನು ಆಶ್ರಯಿಸಲು ನಗರಗಳಿಗೆ ವಲಸೆ ಬರುವುದು ಅನಿವಾರ್ಯ. ಮಾನವ ಮತ್ತು ಹೆಜ್ಜೇನಿನ ನಡುವಿನ ಸಂಘರ್ಷ ವಿಪರೀತಗೊಂಡಿದೆ. ಆದರೆ ನೆನಪಿರಲಿ, ಜೇನುಹುಳುಗಳು ಭೂಮಿಯಿಂದ ನಿರ್ಗಮಿಸಿದರೆ ಅವು ಸಸ್ಯಗಳಲ್ಲಿ ನಡೆಸುವ ಪರಾಗಸ್ಪರ್ಶ ಕ್ರಿಯೆ ಕುಂಠಿತಗೊಂಡು ಆಹಾರ ಪದಾರ್ಥಗಳ ಉತ್ಪಾದನೆ ಗಣನೀಯವಾಗಿ ಇಳಿಮುಖವಾಗುತ್ತದೆ.

ಜೇನುಹುಳುಗಳನ್ನು ಕೊಲ್ಲದೆ ಸ್ಥಳಾಂತರಿಸುವ ಮೂಲಕ ಅವುಗಳನ್ನು ಸಂರಕ್ಷಿಸುವುದರ ಜೊತೆಗೆ ಅವುಗಳಿಂದಾಗುವ ದಾಳಿಯನ್ನೂ ತಡೆಗಟ್ಟಬಹುದು. ಪ್ರಕೃತಿಯೊಂದಿಗಿನ ಸಹಬಾಳ್ವೆಯ ತತ್ವವನ್ನು ನಾವು ಅಳವಡಿಸಿಕೊಂಡು ಸಾಗುವ ಸೂತ್ರದಲ್ಲಿ, ಭೂಮಿಯ ಮೇಲೆ ಸರ್ವ ಜೀವಿಗಳೂ ಉಳಿಯುವ ಮಾರ್ಗವಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ, ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆ, ಬೆಂಗಳೂರು

ವಾಚಕರ ವಾಣಿ

ಎಲ್ಲ ಶಿಕ್ಷಕರಿಗೂ ಬೇಕು ಮತದಾನದ ಅವಕಾಶ

ರಾಜ್ಯದ ಶಿಕ್ಷಕರ ಕ್ಷೇತ್ರಗಳಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬರೀ ಪ್ರೌಢಶಾಲೆ, ಪಿಯುಸಿ, ಪದವಿ ಕಾಲೇಜು, ಪಾಲಿಟೆಕ್ನಿಕ್, ಐಟಿಐ, ವಿಶ್ವವಿದ್ಯಾಲಯ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾಯಂ ಬೋಧಕರಿಗೆ ಮಾತ್ರ ಮತದಾನಕ್ಕೆ ಅವಕಾಶ ಕಲ್ಪಿಸಿರುವುದು ಅರ್ಥಹೀನವಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಅತಿ ಮಹತ್ವಪೂರ್ಣವಾದ, ಶಿಕ್ಷಣದ ಬುನಾದಿಯಂತಿರುವ ಪ್ರಾಥಮಿಕ ಶಾಲೆಗಳ ಶಿಕ್ಷಕರು, ಪದವೀಧರ ಶಿಕ್ಷಕರು ಹಾಗೂ ಹಲವಾರು ವರ್ಷಗಳಿಂದ ಶಾಲಾ-ಕಾಲೇಜುಗಳಲ್ಲಿ ಬೋಧನಾ ವೃತ್ತಿಯಲ್ಲಿ ನಿರತರಾಗಿರುವ ಅತಿಥಿ ಶಿಕ್ಷಕರು-ಉಪನ್ಯಾಸಕರು ಮತದಾನದಿಂದ ವಂಚಿತರಾಗಿದ್ದಾರೆ. ಇಂತಹ ಶೇ 80ರಷ್ಟು ಶಿಕ್ಷಕರು ಮತದಾನದಿಂದ ಹೊರಗುಳಿದಿರುವುದು ವಿಪರ್ಯಾಸವೇ ಸರಿ. ಶಿಕ್ಷಕರಾಗಿರುವ ಎಲ್ಲರಿಗೂ ಮತದಾನಕ್ಕೆ ಅರ್ಹತೆ ನೀಡದ ಈ ಚುನಾವಣೆಗೆ 'ಶಿಕ್ಷಕರ ಕ್ಷೇತ್ರದ ಚುನಾವಣೆ' ಎಂದು ಕರೆಯುವುದರಲ್ಲಿ ಅರ್ಥವಿಲ್ಲ.

ಇದೇ ವಿಧಾನಪರಿಷತ್‌ನ ಪದವೀಧರ ಕ್ಷೇತ್ರಗಳಿಗೆ ನಡೆಯುವ ಚುನಾವಣೆಯಲ್ಲಿ ಪದವಿ ಪಡೆದ ಎಲ್ಲರಿಗೂ, ಸ್ಥಳೀಯ ಸಂಸ್ಥೆಗಳಿಂದ ನಡೆಯುವ ಚುನಾವಣೆಯಲ್ಲಿ ಎಲ್ಲ ಸ್ಥಳೀಯ ಸಂಸ್ಥೆಗಳ ಸದಸ್ಯರಿಗೂ ಮತದಾನಕ್ಕೆ ಅವಕಾಶವಿದೆ. ಹೀಗಿರುವಾಗ, ಈ ನಿಯಮ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಮಾತ್ರ ಏಕೆ ಅನ್ವಯಿಸುವುದಿಲ್ಲ? ಸರ್ಕಾರವು ಸಂಬಂಧಪಟ್ಟ ಕಾಯ್ದೆಗೆ ತಿದ್ದುಪಡಿ ತಂದು, ಬೋಧನಾ ವೃತ್ತಿಯಲ್ಲಿ ನಿರತರಾಗಿರುವ ಎಲ್ಲ ಶಿಕ್ಷಕರಿಗೂ ಮತದಾನಕ್ಕೆ ಅವಕಾಶ ಕಲ್ಪಿಸಿಕೊಡುವ ಮೂಲಕ ಶಿಕ್ಷಕರ ಕ್ಷೇತ್ರದ ಚುನಾವಣೆಯನ್ನು ಅರ್ಥಪೂರ್ಣಗೊಳಿಸಬೇಕಿದೆ.

ನಂಜಿರೆಡ್ಡಿ, ಮಿಟ್ಟೇಮರಿ, ಬಾಗೇಪಲ್ಲಿ

ಮಾವುತರು, ಕಾವಾಡಿಗರಿಗೆ ಮನ್ನಣೆ ಸಿಗಲಿ

ಆನೆ ದ್ರೋಣ ಇದ್ದ ಕಾಲದಿಂದಲೂ ನಾನು ಮಕ್ಕಳಿಗೆ ಆನೆಗಳನ್ನು ತೋರಿಸುವ ಸಲುವಾಗಿ ಎಚ್.ಡಿ.ಕೋಟೆ ತಾಲ್ಲೂಕಿನ ಬಳ್ಳೆ ಆನೆ ಶಿಬಿರಕ್ಕೆ ಆಗಾಗ ಹೋಗಿ ಬರುತ್ತಿದ್ದೆ. ಆಗಿನ್ನೂ ಪ್ರೌಢಾವಸ್ಥೆಯಲ್ಲಿದ್ದ ಅರ್ಜುನನಿಗೆ ತರಬೇತಿ ನೀಡಲಾಗುತ್ತಿತ್ತು. ದೈತ್ಯ ಪ್ರಾಣಿ ಆನೆಯನ್ನು ಪಳಗಿಸುವುದು ಅಷ್ಟು ಸುಲಭದ ಕೆಲಸವಲ್ಲ. ಮಾವುತರು ಹಾಗೂ ಕಾವಾಡಿಗರು ಆನೆಗಳನ್ನು ತಮ್ಮ ಮಕ್ಕಳಂತೆಯೇ ಪ್ರೀತಿಯಿಂದ ಸಾಕುವುದರ ಜೊತೆಗೆ ತರಬೇತಿಯನ್ನು ನೀಡುತ್ತಾರೆ.

ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ಭಾರಿ ತೂಕದ ಅಂಬಾರಿಯನ್ನು ಹೊತ್ತ ಆನೆಯು ಜನಜಂಗುಳಿಗೆ ಬೆದರದೆ ಗಾಂಭೀರ್ಯದಿಂದ ಸಾಗಿ, ದಸರಾ ಮೆರವಣಿಗೆಗೆ ಕಳೆ ಕಟ್ಟುವಂತೆ ಮಾಡುತ್ತದೆ. ನನಗೆ ತಿಳಿದಿರುವಂತೆ, ಇದುವರೆಗೂ ಯಾವುದೇ ದಸರಾ ಮೆರವಣಿಗೆಯಲ್ಲಿ ಆನೆಗಳಿಂದ ಅನಾಹುತ ನಡೆದಿಲ್ಲ. ಹಾಗಾಗಿ, ಪ್ರತಿ ದಸರೆಯೂ ಸಾಂಗವಾಗಿ ನೆರವೇರಲು ಆನೆಗಳಿಗೆ ಮಾರ್ಗದರ್ಶನ ಮಾಡುವ ಮಾವುತರು ಹಾಗೂ ಕಾವಾಡಿಗರ ಶ್ರಮ ಪ್ರಮುಖವಾಗಿರುತ್ತದೆ. ಅವರು ತಮ್ಮ ಇಡೀ ಜೀವನವನ್ನು ಆನೆಗಳ ತರಬೇತಿಯಲ್ಲೇ ಕಳೆಯುತ್ತಾರೆ. ಹಾಗಾಗಿ, ಸರ್ಕಾರವು ಇವರ ಸಾಧನೆಯನ್ನು ಗುರುತಿಸಬೇಕು. ಹಲವು ಕ್ಷೇತ್ರಗಳಲ್ಲಿನ ಸಾಧಕರಿಗೆ ನೀಡಲಾಗುವ ರಾಜ್ಯೋತ್ಸವ ಪ್ರಶಸ್ತಿಗೆ, ನಮ್ಮ ಸಂಸ್ಕೃತಿ ಮತ್ತು ಪರಂಪರೆಗೆ ಕೊಡುಗೆ ನೀಡುತ್ತಿರುವ ಇವರನ್ನೂ ಪರಿಗಣಿಸಬೇಕು.

ಭಾಗ್ಯ ಎಸ್., ಎಚ್.ಡಿ.ಕೋಟೆ

ನಮ್ಮದಾದ ಆಯ್ಕೆ: ನಡೆಯಲಿ ಚಿಂತನೆ

ಮಾಜಿ ಶಾಸಕ ಗೂಳಿಹಟ್ಟಿ ಶೇಖರ್ ಅವರು ಆರ್‌ಎಸ್‌ಎಸ್ ಕಚೇರಿ ಪ್ರವೇಶಾವಕಾಶ ಕುರಿತು ನೀಡಿದ್ದಾರೆ ಎನ್ನಲಾದ ಆಡಿಯೊ, ಆ ಸಂಬಂಧದ ಆರೋಪ, ಪ್ರತ್ಯಾರೋಪ ಮತ್ತು ಸ್ಪಷ್ಟನೆಯ ನಡುವೆ ನಾವು ಅರ್ಥೈಸಿಕೊಳ್ಳಬೇಕಾದ ವಿಷಯವೊಂದಿದೆ. ಅದೆಂದರೆ, ಜೀವನದಲ್ಲಿ ನಮ್ಮದಾದ ಮತ್ತು ನಮ್ಮದಲ್ಲದ ಎಂಬ ಎರಡು ಬಗೆಯ ಆಯ್ಕೆಗಳಿರುತ್ತವೆ.

ಎಲ್ಲ ಜೀವಿಗಳ ಹುಟ್ಟುವಿಕೆಯು ನಿಸರ್ಗದ ಒಂದು ಆಕಸ್ಮಿಕ. ಮನುಷ್ಯಜೀವಿ ಇದಕ್ಕೆ ಹೊರತಾಗಿಲ್ಲ. ನಾವು ಇದೇ ಧರ್ಮ, ಜಾತಿ, ಲಿಂಗ ಅಥವಾ ಸಮುದಾಯದಲ್ಲಿ ಜನಿಸಬೇಕು ಎನ್ನುವುದು ಕೂಡ ನಮ್ಮದಲ್ಲದ ಆಯ್ಕೆ. ಹಾಗೆಯೇ ಸಾವು ಸಹ ನಮ್ಮದಾದ ಆಯ್ಕೆಯಲ್ಲ. ಆದರೆ ಈ ಹುಟ್ಟು ಮತ್ತು ಸಾವಿನ ಮಧ್ಯೆ ಇರುವ ಒಳ್ಳೆಯದು ಶ್ರೇಷ್ಠ ಮತ್ತು ಕೆಟ್ಟದ್ದು ಕನಿಷ್ಠ ಎಂಬುದು ಜೀವನಪರ್ಯಂತ ಇರುವ ನಮ್ಮದಾದ ಎರಡು ಆಯ್ಕೆಗಳು. ನಾಡಿನ ಶರಣರು, ದಾಸರು, ಸಂತರು ಮತ್ತು ಮಹನೀಯರು ಹಾಕಿಕೊಟ್ಟ ಮನುಜಮತದ ಪಥಗಳಾದ, ದಯವಿಲ್ಲದ ಧರ್ಮ ಯಾವುದಯ್ಯಾ? ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ? ಮನುಷ್ಯನಿಗೆ ಇರುವುದು ಎರಡೇ ಜಾತಿ, ಅವೆಂದರೆ ಹೆಣ್ಣು ಮತ್ತು ಗಂಡು, ಮನುಷ್ಯ ಧರ್ಮವೇ ಶ್ರೇಷ್ಠ ಧರ್ಮ, ಮನುಕುಲದ ಉದ್ಧಾರಕ್ಕಾಗಿ ಧರ್ಮಗಳ ಪಾತ್ರ ಅನನ್ಯ ಎಂಬ ಬಗ್ಗೆ ಚಿಂತನ, ಮಂಥನ ನಡೆಸುವುದು ನಮ್ಮ ಆಯ್ಕೆಯಾಗಬೇಕು. ಆಗ ಮಾತ್ರ ಅವು ನಮ್ಮ ಮುಂದಿನ ಪೀಳಿಗೆಗೆ ನಾವು ನೀಡಬಹುದಾದ ಅತ್ಯುತ್ತಮ ಕೊಡುಗೆಗಳಾಗಿರುತ್ತವೆ.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

'ಪ್ರಶಸ್ತಿ ಉದ್ಯಮ' ತಡೆಗಟ್ಟುವುದು ಹೇಗೆ?

ಗುಣಮಟ್ಟದ ಸಾಹಿತ್ಯಕ್ಕೆ ಸೋಲಿಲ್ಲ ಎಂದಿದ್ದಾರೆ ಸಂತೇಬೆನ್ನೂರು ಫೈಜ್ನಟ್ರಾಜ್ (ವಾ.ವಾ., ಡಿ. 7). ಗಟ್ಟಿ ಸಾಹಿತ್ಯ ಸದಾ ಕಾಲ ಉಳಿಯುತ್ತದೆ ಎಂಬ ಅವರ ಮಾತೂ ಒಪ್ಪತಕ್ಕದ್ದೇ. ಆದರೆ ಪ್ರಶ್ನೆ ಅದಲ್ಲ. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಹಿರಿಯ ಸಾಹಿತಿಯೊಬ್ಬರು ನಂತರ ಕೃತಿಚೌರ್ಯ ಮಾಡಿದ ಆರೋಪಕ್ಕೆ ಒಳಗಾಗಿದ್ದರು. ಇದೇ ಥರದ ಇನ್ನೂ ಎರಡು- ಮೂರು ಪ್ರಕರಣಗಳು ನಡೆದಿವೆ. ಅಂದರೆ, ಗಟ್ಟಿ ಸಾಹಿತ್ಯಕ್ಕೆ ಮಾತ್ರ ಮನ್ನಣೆ ಎಂಬ ಮಾನದಂಡ ನಮ್ಮ ಸಮಾಜದಲ್ಲಿ ಎಲ್ಲಿ ಹೋಯಿತು?

ಸಾಮಾನ್ಯವಾಗಿ ಉದಯೋನ್ಮುಖ ಸಾಹಿತಿಗಳು, ಕಲಾವಿದರನ್ನು ಪ್ರಶಸ್ತಿಯ ಹಪಹಪಿಗೆ ದೂಡಿ, ಅವರಲ್ಲಿ ಸ್ವಾಭಿಮಾನ, ಘನತೆ, ಗೌರವವನ್ನು ಹಾಳುಮಾಡುವ 'ಪ್ರಶಸ್ತಿ ಉದ್ಯಮ'ವನ್ನು ನಾವು ತಡೆಗಟ್ಟುವುದು ಹೇಗೆ? ಈ ದಿಸೆಯಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯ, ಅಕಾಡೆಮಿಯಂತಹ ಜವಾಬ್ದಾರಿಯುತ ಸಂಸ್ಥೆಗಳು ಸಹ ಮಾಡುತ್ತಿಲ್ಲ. ಹೀಗಾಗಿ, ಪ್ರಶಸ್ತಿಯ ಮೌಲ್ಯಕ್ಕೆ ಕುಂದುಂಟಾಗುತ್ತಿದೆ. ನಿಜಕ್ಕೂ ಪ್ರಶಸ್ತಿಗೆ ಅರ್ಹರಾದರೂ, ಪ್ರಶಸ್ತಿಯಿಂದ ವಂಚಿತರಾದ ಹಲವು ಸ್ವಾಭಿಮಾನಿಗಳಿಗೆ ಇದರಿಂದ ಮುಜುಗರ ಉಂಟಾಗುತ್ತದೆ. ಆದ್ದರಿಂದ, ಅರುಣ್ ಜೋಳದಕೂಡ್ಲಿಗಿ ಅವರು ಎತ್ತಿರುವ ಅನೇಕ ಪ್ರಶ್ನೆಗಳು (ಸಂಗತ, ಡಿ. 6) ಸೂಕ್ತವಾಗಿವೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುಎಪಿಎ ಪ್ರಕರಣ ಆಮೆ ನಡಿಗೆಯ ವಿಚಾರಣೆ

ದೇಶದ ಅತ್ಯಂತ ಕಠಿಣ ಕಾನೂನುಗಳಲ್ಲಿ ಯುಎಪಿಯ ಮೊದಲನೆಯದ್ದು. ಜಾಮೀನು ಕಷ್ಟಸಾಧ್ಯವಾದ ಈ ಕಾಯ್ದೆಯಡಿ ಸಾವಿರಾರು ಮಂದಿ ಬಂಧನದಲ್ಲಿದ್ದಾರೆ. ತನಿಖೆ ಮತ್ತು ವಿಚಾರಣೆ ಪೂರ್ಣಗೊಳ್ಳದೆ ನ್ಯಾಯದಾನ ವಿಳಂಬವಾಗುತ್ತಿರುವ ಕಾರಣ ಸಾವಿರಾರು ಆರೋಪಿಗಳು ಹಲವು ವರ್ಷಗಳ ಸೆರೆವಾಸ ಅನುಭವಿಸುವಂತಾಗಿದೆ. ತನ್ನ ವಿರುದ್ಧ ಮಾತನಾಡುವವರನ್ನು ಹತ್ತಿಕ್ಕಲು ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಆರೋಪವೂ ಇದೆ

• ಜಯಸಿಂಹ ಆರ್.

ವಿಧ್ವಂಸಕಾರಿ ಕೃತ್ಯಗಳು ಮತ್ತು ಭಯೋತ್ಪಾದನಾ ಚಟುವಟಿಕೆಗಳ ವಿರುದ್ಧ ವಿಧಿಸಲಾಗುವ 'ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆ–ಯುಎಪಿಎ'ಯು ಭಾರತದಲ್ಲಿರುವ ಅತ್ಯಂತ ಕಠಿಣ ಕಾಯ್ದೆಗಳಲ್ಲಿ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಈ ಕಾಯ್ದೆ ಅಡಿ ಪ್ರಕರಣ ದಾಖಲಿಸಿದರೆ, ಜಾಮೀನು ಸಿಗುವುದು ಕಷ್ಟಸಾಧ್ಯ. ಯುಎಪಿಎ ಅಡಿ ಬಂಧಿಸಲಾದ ಆರೋಪಿಗಳಿಗೆ ಜಾಮೀನು ನೀಡಬಾರದು ಎಂದು ಕಾಯ್ದೆ ಹೇಳುತ್ತದೆ. ಹೀಗಾಗಿ ಈ ಕಾಯ್ದೆ ಅಡಿ ಬಂಧನಕ್ಕೆ ಒಳಗಾದವರು, ಪ್ರಕರಣ ವಿಲೇವಾರಿಯಾಗದೆ ಬಿಡುಗಡೆಯಾಗುವುದು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ.

ಈ ಕಾಯ್ದೆ ಅಡಿ ಬಂಧನಕ್ಕೆ ಒಳಗಾದವರನ್ನು ತ್ವರಿತ ವಿಚಾರಣೆ ಇಲ್ಲದೇ ಸೆರೆವಾಸದಲ್ಲಿ ಇರಿಸಿದರೆ, ಅದು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. 2019–2022ರ ಅವಧಿಯಲ್ಲಿ ದೇಶದಾದ್ಯಂತ ಒಟ್ಟು 7,526 ಜನರನ್ನು ಈ ಕಾಯ್ದೆ ಅಡಿ ಬಂಧಿಸಲಾಗಿದೆ. ಆದರೆ ಇವರಲ್ಲಿ ಶೇ 90.80ರಷ್ಟು ಆರೋಪಿಗಳು ತನಿಖೆ ಮತ್ತು ವಿಚಾರಣೆ ಪೂರ್ಣಗೊಳ್ಳದೆ ಸೆರೆವಾಸ ಅನುಭವಿಸುತ್ತಿದ್ದಾರೆ.

ಭೀಮಾ ಕೋರೆಂಗಾವ್ ಹಿಂಸಾಚಾರ–ಎಲ್ಗಾರ್ ಪರಿಷದ್ ಸಂಚು ಆರೋಪದಲ್ಲಿ ಹಲವು ಸಾಮಾಜಿಕ ಕಾರ್ಯಕರ್ತರ ವಿರುದ್ಧ 2018ರಲ್ಲಿ ಯುಎಪಿಎ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಈ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತ ಸ್ಟ್ಯಾನ್ ಸ್ವಾಮಿ ಅವರನ್ನು 2020ರ ಅಕ್ಟೋಬರ್‌ನಲ್ಲಿ ಬಂಧಿಸಲಾಗಿತ್ತು. ಸೆರೆವಾಸದಲ್ಲಿ ಇದ್ದಾಗಲೇ ಅವರ ಆರೋಗ್ಯ ತೀವ್ರವಾಗಿ ಹದಗೆಟ್ಟಿತ್ತು. ಹಲವು ಅರ್ಜಿಗಳ ಹೊರತಾಗಿಯೂ ಅವರಿಗೆ ಜಾಮೀನು ದೊರೆತಿರಲಿಲ್ಲ. ವಿಚಾರಣಾಧೀನ ಕೈದಿಯಾಗಿಯೇ ಅವರು ತೀವ್ರ ಅನಾರೋಗ್ಯದಿಂದ ಮೃತಪಟ್ಟಿದ್ದರು. ಇದು ದೇಶ ಮಾತ್ರವಲ್ಲದೆ, ವಿದೇಶಗಳಲ್ಲೂ ತೀವ್ರ ಟೀಕೆಗೆ ಗುರಿಯಾಗಿತ್ತು. ಆದರೆ, ಹೀಗೆ ತನಿಖೆ ಮತ್ತು ವಿಚಾರಣೆ ಪೂರ್ಣಗೊಳ್ಳದೆ 2019–2022ರ ಅವಧಿಯಲ್ಲಿ ಜೈಲಿನಲ್ಲೇ ದಿನಗಳನ್ನು ಕಳೆಯುತ್ತಿದ್ದಂತಹ ಆರೋಪಿಗಳ ಸಂಖ್ಯೆ 6,835. ಇವರಲ್ಲಿ ತನಿಖೆಯೇ ಪೂರ್ಣಗೊಳ್ಳದ ಆರೋಪಿಗಳ ಸಂಖ್ಯೆ 1,874ರಷ್ಟಿದ್ದರೆ, ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವ ಆರೋಪಿಗಳ ಸಂಖ್ಯೆ 4,961.

ಸಾಮಾನ್ಯವಾಗಿ ಭಯೋತ್ಪಾದನಾ ಚಟುವಟಿಕೆ, ಉಗ್ರರೊಂದಿಗೆ ಸಂಪರ್ಕ ಮತ್ತು ಹಣಕಾಸು ನೆರವು ನೀಡಿದವರ ಮೇಲೆ ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತದೆ. ಆದರೆ, 2019ರ ನಂತರ ಕೇಂದ್ರ ಸರ್ಕಾರದ ವಿರುದ್ಧ ದನಿ ಎತ್ತಿದವರ ವಿರುದ್ಧವೂ ಯುಎಪಿಎ ಪ್ರಯೋಗಿಸಲಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪ.

ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಯುವತಿಯ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣದ ವಿರುದ್ಧ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಯುತ್ತಿತ್ತು. ಅತ್ಯಾಚಾರವನ್ನು ತಡೆಗಟ್ಟುವಲ್ಲಿ ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂಬ ಆಕ್ರೋಶ ವ್ಯಕ್ತವಾಗಿತ್ತು. ಇದರ ವರದಿಗಾರಿಕೆಗೆ ತೆರಳಿದ್ದ ಕೇರಳದ ಪತ್ರಕರ್ತ ಸಿದ್ದಿಕ್ ಕಪ್ಪನ್ ಅವರನ್ನು 2020ರ ಅಕ್ಟೋಬರ್‌ನಲ್ಲಿ ಬಂಧಿಸಲಾಗಿತ್ತು. ಅವರ ವಿರುದ್ಧ ಯುಎಪಿಎ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈ ಪ್ರಕರಣಗಳಲ್ಲಿ ಜಾಮೀನು ದೊರೆತು, ಬಿಡುಗಡೆಯಾಗುವಷ್ಟರಲ್ಲಿ ಅವರು 846 ದಿನಗಳನ್ನು ಜೈಲಿನಲ್ಲಿ ಕಳೆದಿದ್ದರು. ಹೀಗೆ ಹಲವು ಪತ್ರಕರ್ತರ ವಿರುದ್ಧವೂ ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

2019–2022ರ ಅವಧಿಯಲ್ಲಿ ಪೊಲೀಸರು ಒಟ್ಟು 3,841 ಪ್ರಕರಣಗಳನ್ನು ದಾಖಲಿಸಿದ್ದಾರೆ. ಆದರೆ 2022ರ ಡಿಸೆಂಬರ್ ಅಂತ್ಯಕ್ಕೆ ಇವುಗಳಲ್ಲಿ ತನಿಖೆ ಪೂರ್ಣಗೊಂಡು ಆರೋಪ ಪಟ್ಟಿ ಸಲ್ಲಿಕೆಯಾಗಿದ್ದು 2,171 ಪ್ರಕರಣಗಳಲ್ಲಿ ಮಾತ್ರ. ಈ ಅವಧಿಯ ಅಂತ್ಯದಲ್ಲಿ 1,670 ಪ್ರಕರಣಗಳ ತನಿಖೆಯೇ ಪೂರ್ಣಗೊಂಡಿರಲಿಲ್ಲ. ಒಟ್ಟು ಪ್ರಕರಣಗಳಲ್ಲಿ ಶೇ 43ರಷ್ಟಿರುವ ತನಿಖಾ ಹಂತದ ಪ್ರಕರಣಗಳಲ್ಲಿ ಬಂಧಿತರಾಗಿರುವವರು, ವರ್ಷಗಳ ಕಾಲ ಜೈಲುವಾಸ ಅನುಭವಿಸುತ್ತಿದ್ದಾರೆ. ಈ ಅವಧಿಯಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾಗಿ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿದ್ದ ಒಟ್ಟು ಆರೋಪಿಗಳಲ್ಲಿ ಶಿಕ್ಷೆಯಾಗಿದ್ದು ಶೇ 3.8ರಷ್ಟು ಮಂದಿಗೆ ಮಾತ್ರ. ಪ್ರಕರಣ ವಜಾ ಆಗಿ ಬಿಡುಗಡೆಯಾದವರು (ಶೇ 0.7ರಷ್ಟು) ಮತ್ತು ಖುಲಾಸೆ ಆದವರನ್ನು (ಶೇ 7.6ರಷ್ಟು) ಹೊರತುಪಡಿಸಿದರೆ, ಶೇ 88ರಷ್ಟು ಆರೋಪಿಗಳು ವಿಚಾರಣೆ ಪೂರ್ಣಗೊಳ್ಳದೆ ಜೈಲುವಾಸ ಅನುಭವಿಸುತ್ತಿದ್ದಾರೆ.

ಇಂತಹ ಪ್ರಕರಣಗಳಲ್ಲಿ ನ್ಯಾಯದಾನ ಕ್ಷಿಪ್ರಗತಿಯಲ್ಲಿ ಆಗುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ನಿಜವಾಗಿಯೂ ಇಂತಹ ಕೃತ್ಯ ಎಸಗಿದ್ದವರಿಗೆ ಶಿಕ್ಷೆ ಘೋಷಣೆಯಾಗಿಲ್ಲ, ಇನ್ನೊಂದೆಡೆ ಹುಸಿ ಪ್ರಕರಣಗಳಲ್ಲಿ ಸೆರೆಯಲ್ಲಿರುವವರಿಗೆ ಬಿಡುಗಡೆಯೂ ದೊರೆತಿಲ್ಲ. ಸುಪ್ರೀಂ ಕೋರ್ಟ್‌ನ ವ್ಯಾಖ್ಯಾನದಂತೆ ಇದು ಮಾನವ ಹಕ್ಕುಗಳ ಉಲ್ಲಂಘನೆಯೇ ಆಗುತ್ತದೆ.

ಬಂಧಿಗಳ ಸಂಖ್ಯೆ ಭಾರಿ ಏರಿಕೆ



ಹೆಚ್ಚು ಪ್ರಕರಣಗಳು ದಾಖಲಾದ ರಾಜ್ಯಗಳು



ಆರೋಪಿಗಳ ಸ್ಥಿತಿಗತಿ



ರಾಜ್ಯದಲ್ಲಿ 12 ಪ್ರಕರಣ

ಕರ್ನಾಟಕದಲ್ಲಿ ಈ ಅವಧಿಯಲ್ಲಿ ಒಟ್ಟು 12 ಪ್ರಕರಣಗಳು ದಾಖಲಾಗಿವೆ. 2019ರಲ್ಲಿ 7, 2020ರಲ್ಲಿ 1 ಮತ್ತು 2022ರಲ್ಲಿ 4 ಪ್ರಕರಣಗಳು ದಾಖಲಾಗಿವೆ. 2021ರಲ್ಲಿ ಒಂದೂ ಪ್ರಕರಣ ದಾಖಲಾಗಿಲ್ಲ. ಈ ಪ್ರಕರಣಗಳ ತನಿಖೆ ಮತ್ತು ವಿಚಾರಣೆಯ ಸ್ಥಿತಿಗತಿಯ ವಿವರವು ಎನ್‌ಸಿಆರ್‌ಬಿಯ ವರದಿಯಲ್ಲಿ ಲಭ್ಯವಿಲ್ಲ.

ಪ್ರಕರಣ ವಾಪಸ್ ಪಡೆದಿದ್ದ ತಮಿಳುನಾಡು

2019ರಲ್ಲಿ ತಮಿಳುನಾಡಿನಲ್ಲಿ ಯುಎಪಿಎ ಅಡಿಯಲ್ಲಿ 270 ಪ್ರಕರಣಗಳನ್ನು ದಾಖಲಿಸಲಾಗಿತ್ತು. 2018ರಲ್ಲಿ ತೂತುಕುಡಿಯಲ್ಲಿ ತಾಮ್ರ ಸಂಸ್ಕರಣ ಘಟಕ ಸ್ಥಾಪನೆಯ ವಿರುದ್ಧ ಪ್ರತಿಭಟನೆ ನಡೆಸಿದ್ದ ನೂರಾರು ಜನರ ವಿರುದ್ಧ ಎಐಎಡಿಎಂಕೆ ಸರ್ಕಾರವು ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಿತ್ತು. ಸರ್ಕಾರದ ಈ ಕ್ರಮದ ವಿರುದ್ಧ ದಕ್ಷಿಣ ಭಾರತದ ಇತರ ರಾಜ್ಯಗಳಲ್ಲಿ ತೀವ್ರ ಪ್ರತಿಭಟನೆ ನಡೆದಿತ್ತು. ಮದ್ರಾಸ್ ಹೈಕೋರ್ಟ್‌ನಲ್ಲಿ ಹಲವು ವರ್ಷಗಳ ದೀರ್ಘ ಕಾನೂನು ಹೋರಾಟದ ನಂತರ ಡಿಎಂಕೆ ಸರ್ಕಾರವು ಈ ಪ್ರಕರಣಗಳನ್ನು ವಾಪಸ್ ಪಡೆದಿತ್ತು.

7,526 2019–2022ರ ಅವಧಿಯಲ್ಲಿ ಯುಎಪಿಎ ಕಾಯ್ದೆ ಅಡಿ ದೇಶದಾದ್ಯಂತ ಬಂಧನಕ್ಕೆ ಒಳಗಾದ ಆರೋಪಿಗಳ ಒಟ್ಟು ಸಂಖ್ಯೆ

5,652 ಈ ಅವಧಿಯಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾದ ಆರೋಪಿಗಳ ಸಂಖ್ಯೆ

1,874 ಆರೋಪ ಪಟ್ಟಿ ಸಲ್ಲಿಕೆಯಾಗದೆ, ಸೆರೆಯಲ್ಲೇ ಉಳಿದಿರುವ ಆರೋಪಿಗಳ ಸಂಖ್ಯೆ

ಆಧಾರ: ಎನ್‌ಸಿಆರ್‌ಬಿಯ 'ಭಾರತದಲ್ಲಿ ಅಪರಾಧ' ವರದಿಗಳು, ಪಿಟಿಐ

ಎಲ್ಲೆಡೆ ಕನ್ನಡ ಚಿತ್ರದ ಸದ್ದು ಬಾಜಪೇಯಿ

"ನನ್ನ ಪೂರ್ವಜರು ಕರ್ನಾಟಕದವರು. ಕನ್ನಡ ಚಿತ್ರರಂಗ ಈಗ ಎಲ್ಲೆಡೆ ಸದ್ದು ಮಾಡುತ್ತಿದೆ. 'ಗರುಡ ಗಮನ...', 'ಕಾಂತಾರ' ಚಿತ್ರಗಳನ್ನು ನೋಡಿದ್ದೇನೆ. ಅವು ನನ್ನನ್ನು ತುಂಬ ಕಾಡಿವೆ. ಇಂತಹ ಚಿತ್ರಗಳು ನನಗೆ ಧೈರ್ಯ, ಸ್ಫೂರ್ತಿ ತುಂಬುತ್ತವೆ" ಹಾಗೆಂದು ದಕ್ಷಿಣ ಭಾರತದ ಚಿತ್ರರಂಗವನ್ನು ಹೊಗಳಿದ್ದು ಬಾಲಿವುಡ್‌ನ ಖ್ಯಾತ ನಟ ಮನೋಜ್ ಬಾಜಪೇಯಿ.

ಇಂದು(ಡಿ.8) ತೆರೆಗೆ ಬರುತ್ತಿರುವ 'ಜೋರಾಮ್' ಚಿತ್ರ ಪ್ರಚಾರಕ್ಕಾಗಿ ಅವರು ಬೆಂಗಳೂರಿನಲ್ಲಿದ್ದರು. ಆದಿವಾಸಿ ಜನಾಂಗ ಕಥೆ ಹೊಂದಿರುವ ಚಿತ್ರಕ್ಕೆ ದೇವಶಿಷ್ ಮಖೀಜಾ ಆ್ಯಕ್ಷನ್ ಕಟ್ ಹೇಳಿದ್ದಾರೆ. ಈಗಾಗಲೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ಚಿತ್ರದ ಟ್ರೇಲರ್‌ಗೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

'ಈ ಚಿತ್ರದ ಒಂದು ದೃಶ್ಯದಲ್ಲಿ ಮೂರು ತಿಂಗಳ ಮಗುವಿನೊಂದಿಗೆ ಓಡುವುದು, ಫೈಟ್ ಮಾಡುವುದು ತುಂಬಾ ಕಷ್ಟವಾಗಿತ್ತು. ಚಿತ್ರಕ್ಕಾಗಿ ಮುಂಬೈನಿಂದ ಜಾರ್ಖಂಡ್ ಕಾಡಿಗೆ ಪಯಣ ಬೆಳೆಸಿದ್ದು ಅನನ್ಯ ಅನುಭವ' ಎಂದರು ಬಾಜಪೇಯಿ.

ಜೀ ಸ್ಟುಡಿಯೋಸ್ ನಿರ್ಮಿಸಿರುವ ಚಿತ್ರದಲ್ಲಿ ತನ್ನಿಷ್ಟ ಚಟರ್ಜಿ, ರಾಜಶ್ರೀ ದೇಶಪಾಂಡೆ, ಮೊಹ್ಮದ್ ಜುಶಾನ್ ಮುಂತಾದವರು ಅಭಿನಯಿಸಿದ್ದಾರೆ. ಮಂಗೇಶ್ ಧಾಕ್ಡೆ ಸಂಗೀತ, ಪಿಯೂಷ್ ಪುಟಿ ಛಾಯಾಗ್ರಹಣ ಚಿತ್ರಕ್ಕಿದೆ.

ಮನೋಜ್ ಬಾಜಪೇಯಿ, ದೇವಶಿಷ್ ಮಖೀಜಾ

2024ಕ್ಕೆ 'ದಿ ಗೋಟ್ ಲೈಫ್' ಬಿಡುಗಡೆ



ಪೃಥ್ವಿರಾಜ್ ಸುಕುಮಾರನ್ ಅಭಿನಯದ 'ದಿ ಗೋಟ್ ಲೈಫ್' ಸಿನಿಮಾ 2024ರ ಏಪ್ರಿಲ್ 10ರಂದು ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ. ರಾಷ್ಟ್ರ ಪ್ರಶಸ್ತಿ ವಿಜೇತ ಬ್ಲೆಸ್ಸಿ ನಿರ್ದೇಶನದ ಸಿನಿಮಾ ಇದಾಗಿದೆ.

ಚಿತ್ರದಲ್ಲಿ ಪೃಥ್ವಿರಾಜ್ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸಿನಿಮಾ ನೈಜ ಕಥೆ ಆಧರಿಸಿದ ಚಿತ್ರವಾಗಿದ್ದು, 'ವಿಷ್ಯುವಲ್ ರೊಮ್ಯಾನ್ಸ್' ಇದನ್ನು ನಿರ್ಮಿಸಿದೆ. ಈ ಚಿತ್ರದಲ್ಲಿ ಹಾಲಿವುಡ್ ನಟ ಜಿಮ್ಮಿ ಜೀನ್-ಲೂಯಿಸ್, ಅಮಲಾ ಪೌಲ್, ಕೆ.ಆರ್.ಗೋಕುಲ್ ಮತ್ತು ಪ್ರಸಿದ್ಧ ಅರಬ್ ನಟರಾದ ತಾಲಿಬ್ ಅಲ್ ಬಲೂಶಿ ಮತ್ತು ರಿಕಾಬಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಎ.ಆರ್.ರೆಹಮಾನ್ ಮತ್ತು ರಸೂಲ್ ಪೂಕುಟ್ಟಿ ಅವರ ಸಂಗೀತ ನಿರ್ದೇಶನ ಮತ್ತು ಧ್ವನಿ ವಿನ್ಯಾಸ ಈ ಚಿತ್ರಕ್ಕಿದೆ. ಸುನಿಲ್ ಕೆ.ಎಸ್ ಛಾಯಾಚಿತ್ರಗ್ರಹಣ, ಶ್ರೀಕರ್ ಪ್ರಸಾದ್ ಸಂಕಲನ ಸಿನಿಮಾಗಿದೆ. ಈ ಚಿತ್ರ ಮಲಯಾಳಂ ಸಾಹಿತ್ಯ ಪ್ರಪಂಚದ ಅತ್ಯಂತ ಜನಪ್ರಿಯ ಕಾದಂಬರಿ 'ಆಡು ಜೀವಿತಂ' ಆಧರಿಸಿದೆ. ಈ ಕಾದಂಬರಿ 12 ಭಾಷೆಗಳಲ್ಲಿ ಅನುವಾದಗೊಂಡಿದೆ. 'ದಿ ಗೋಟ್ ಲೈಫ್' ಏಪ್ರಿಲ್ 10 ರಂದು ಹಿಂದಿ, ಮಲಯಾಳಂ, ತಮಿಳು, ತೆಲುಗು ಮತ್ತು ಕನ್ನಡದಲ್ಲಿ ಬಿಡುಗಡೆಯಾಗಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಸಿಲ್ಕ್ಯಾರಾ ಸುರಂಗ ದುರಂತದಲ್ಲಿ ಕಾರ್ಮಿಕರನ್ನು ರಕ್ಷಿಸಿದ್ದ, ಸುರಂಗ ರಕ್ಷಣಾ ಕಾರ್ಯಕರ್ತ ಅರ್ನಾಲ್ಡ್ ಡಿಕ್ಸ್ ಅವರ ಮೂಲ ಹೆಸರು ಆನಂದ್ ದೀಕ್ಷಿತ್. ಅವರ ಹುಟ್ಟೂರು ಕಾನ್ಪುರ. ಉನ್ನತ ವಿದ್ಯಾಭ್ಯಾಸಕ್ಕೆಂದು ಅಮೆರಿಕಕ್ಕೆ ತೆರಳಿದ್ದ ಅವರು, ಅಲ್ಲಿಯೇ ನೆಲೆಸಿದರು. ಹಲವು ವರ್ಷಗಳ ನಂತರ ತಮ್ಮ ಹೆಸರನ್ನು ಅರ್ನಾಲ್ಡ್ ಡಿಕ್ಸ್ ಎಂದು ಬದಲಿಸಿಕೊಂಡರು. ಈಗ ತಾಯಿನೆಲದ ಜನರು ಸಂಕಷ್ಟಕ್ಕೆ ಸಿಲುಕಿದ್ದನ್ನು ನೋಡಿ, ಮರುಗಿ ಅವರು ರಕ್ಷಣಾ ಕಾರ್ಯಾಚರಣೆಗೆಂದು ಭಾರತಕ್ಕೆ ಬಂದಿದ್ದರು. ಅವರು ಸನಾತನ ಧರ್ಮದವರೇ ಆಗಿದ್ದರಿಂದ ರಕ್ಷಣಾ ಕಾರ್ಯಾಚರಣೆ ವೇಳೆ ಪೂಜೆ ಸಲ್ಲಿಸಿದ್ದರು' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದು ಸುಳ್ಳು ಮಾಹಿತಿ.

✓ 'ಅರ್ನಾಲ್ಡ್ ಡಿಕ್ಸ್ ಅವರು ಅಮೆರಿಕದವರಲ್ಲ ಮತ್ತು ಭಾರತದ ಕಾನ್ಪುರದವರೂ ಅಲ್ಲ. ಬದಲಿಗೆ ತಾನು ಆಸ್ಟ್ರೇಲಿಯಾದ ಮೆಲ್ಬರ್ನ್‌ನವನು ಎಂದು ಅವರೇ ಹೇಳಿಕೊಂಡಿದ್ದಾರೆ. ಮೆಲ್ಬರ್ನ್‌ನಲ್ಲೇ ಹುಟ್ಟಿ, ಅಲ್ಲಿಯೇ ಓದು ಪೂರೈಸಿರುವ ಅವರು ಸುರಂಗ ಅವಘಡ ರಕ್ಷಣಾ ಪರಿಣತ. ಭಾರತದಲ್ಲಿನ ಆಸ್ಟ್ರೇಲಿಯಾದ ಎಂಬೆಸಿ ಸಹ ಇದನ್ನು ದೃಢಪಡಿಸಿದೆ. ಅವರ ಮೂಲ ಹೆಸರು ಆನಂದ್ ದೀಕ್ಷಿತ್ ಎಂಬುದು ಸುಳ್ಳು' ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಗೌರವ ಗುಣಕ್ಕೇ ಹೊರತು ಚರ್ಮದ ಬಣ್ಣಕ್ಕಲ್ಲ

ನುಡಿ ಬೆಳಗು

ಪ್ರೊ.ಎಂ. ಕೃಷ್ಣೇಗೌಡ

ಇದೊಂದು ಕುತೂಹಲಕರ ಮೊಕದ್ದಮೆ. ಇದು ನಡೆದದ್ದು 2013ರಲ್ಲಿ. ವಿಷಯ ಏನಪ್ಪಾ ಅಂದರೆ, ಚಿರಾಯು ಜೈನ್ ಎಂಬ ಹುಡುಗ - ಆಗಿನ್ನೂ ಆತ ನಮ್ಮ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್‌ನ ಮೊದಲನೆಯ ವರ್ಷದ ಕಾನೂನು ವಿದ್ಯಾರ್ಥಿ- ಕರ್ನಾಟಕ ರಾಜ್ಯ ಬಳಕೆದಾರರ ಆಯೋಗದ ಮುಂದೆ ಒಂದು ಮೊಕದ್ದಮೆ ಹೂಡಿದ. ಏನು ವ್ಯಾಜ್ಯ? ಅಲ್ಲೇ ಇರೋದು ವಿಶೇಷ. ಕೇಳಿ.

ಮಕ್ಕಳು ಬಳಸುವ ಬಣ್ಣದ ಪೆನ್ಸಿಲ್ (Crayons) ಒಂದೊಂದರ ಮೇಲೂ ಆ ಪೆನ್ಸಿಲ್‌ನಲ್ಲಿರುವ ಬಣ್ಣದ ಹೆಸರು ಬರೆದಿರುತ್ತಾರಷ್ಟೆ? - ರೆಡ್, ಯೆಲ್ಲೋ, ಬ್ಲೂ, ಪಿಂಕ್....ಹೀಗೆ, ಅದರಲ್ಲಿ ಒಂದು ಪೆನ್ಸಿಲ್‌ನ ಬಣ್ಣ 'ಸ್ಕಿನ್' (ಚರ್ಮ) ಅಂತ ಬರೆದಿತ್ತು. ಅದು ಬಿಳಿಯ ತೊಗಲಿನ ಬಣ್ಣಕ್ಕೆ ಸಮೀಪದ ಬಣ್ಣ. ಇಂಗ್ಲಿಷ್‌ನಲ್ಲಿ ಆ ಬಣ್ಣವನ್ನು 'ಪೀಚ್' ಎಂದು ಕರೆಯಲಾಗುತ್ತದೆ. ಇದನ್ನು ನೋಡಿ ಚಿರಾಯು ಜೈನ್‌ಗೆ ಒಂಥರಾ ಕಸಿವಿಸಿ ಆಯಿತು. ಆ ಕಸಿವಿಸಿಗೆ ಕಾರಣ, ಆ ಪೀಚ್ ಬಣ್ಣವನ್ನು ಆ ಕಂಪೆನಿಯು ಚರ್ಮದ ಬಣ್ಣ ಎಂದು ಕರೆಯುವುದಾದರೆ ಅದನ್ನು ಓದಿದ ಮಕ್ಕಳ ಗ್ರಹಿಕೆ ಏನಾಗುತ್ತದೆ? ಅದು ಮಾತ್ರವೇ ಚರ್ಮದ ಬಣ್ಣ, ಬೇರೆ ಕಂದು, ಕಪ್ಪು ಬಣ್ಣವೆಲ್ಲಾ ಚರ್ಮದ ಬಣ್ಣವಲ್ಲ ಎಂದು ತಾನೆ? ಹಾಗಾದರೆ ಭಾರತದಲ್ಲಿ ಬಹುಪಾಲು ಕಂದು, ಕಪ್ಪು ಬಣ್ಣದ ಚರ್ಮದವರೇ ಇರುವಾಗ ಆ ಬಣ್ಣದ ಚರ್ಮ ಇರುವವರಿಗೆ ಒಂದು ಬಗೆಯ ಕೀಳರಿಮೆ ಬರುವುದಿಲ್ಲವೇ? ಇಂಥ ವರ್ಣಭೇದವನ್ನು ಎಳೆಯ ಮನಸ್ಸುಗಳಿಗೆ ತುಂಬುವುದು ತಪ್ಪಲ್ಲವೇ? ಅದು ದೊಡ್ಡ ಮಾರುಕಟ್ಟೆ ಇರುವ ಪ್ರಖ್ಯಾತ ಕಂಪೆನಿಯೊಂದು ಉತ್ಪಾದಿಸುವ ಪೆನ್ಸಿಲ್ ಬೇರೆ. ಹಾಗೆಂದು ಹೇಳಿ ಚಿರಾಯು ಕರ್ನಾಟಕ ರಾಜ್ಯ ಬಳಕೆದಾರರ ಕೋರ್ಟ್ ಮುಂದೆ ಮೊಕದ್ದಮೆ ಹೂಡಿದ.

ತನ್ನ ಚರ್ಮ ಕಂದು ಬಣ್ಣದ್ದಾಗಿರುವುದರಿಂದ ತನ್ನ ಭಾವನೆಗಳಿಗೆ ಘಾಸಿಯುಂಟು ಮಾಡಿದ ಆ ಪೆನ್ಸಿಲ್ ಕಂಪೆನಿಯು ಒಂದು ಲಕ್ಷ ರೂಪಾಯಿಗಳ ಪರಿಹಾರ ನೀಡಬೇಕು ಮತ್ತು ಕಂಪೆನಿಯು ಆ ಪೆನ್ಸಿಲ್ ನ ಮೇಲೆ 'ಸ್ಕಿನ್' ಎಂದು ಬರೆದಿರುವುದನ್ನು ಅಳಿಸಿಹಾಕಿ 'ಪೀಚ್' ಎಂದು ಬರೆಯುವಂತೆ ಆದೇಶಿಸಬೇಕು ಎಂದು ನ್ಯಾಯಾಲಯವನ್ನು ಪ್ರಾರ್ಥಿಸಿದ.

ಆ ಯುವಕನ ವಾದವನ್ನು ನ್ಯಾಯಾಲಯ ಮಾನ್ಯ ಮಾಡಿತು. ಕಂಪೆನಿಯು ಪೆನ್ಸಿಲ್ ಮೇಲೆ ಬಣ್ಣದ ಹೆಸರನ್ನು ಸ್ಕಿನ್ ಎಂದು ಬರೆಯದಿರಲು ಒಪ್ಪಿಕೊಂಡಿತು.

ಇದನ್ನು ಇಲ್ಲಿ ಯಾಕೆ ಹೇಳಿದೆನೆಂದರೆ, ತೊಗಲಿನ ಬಣ್ಣದ ಮೇಲೆ ಮೇಲು, ಕೀಳು ಅಥವಾ ಸೌಂದರ್ಯ, ಕುರೂಪ ಎಂದು ನಿರ್ಧರಿಸುವ ಸಮಾಜ ಪ್ರಬುದ್ಧವಾದುದಲ್ಲ. ಮಕ್ಕಳ ಮನಸ್ಸಿನಲ್ಲಿ ತೊಗಲಿನ ಬಣ್ಣದ ಕಾರಣವಾಗಿ ಹೆಮ್ಮೆ ಅಥವಾ ಕೀಳರಿಮೆ ಉಂಟಾಗದಂತೆ ನೋಡಿಕೊಳ್ಳುವುದು ಒಂದು ಒಳ್ಳೆಯ ಸಮಾಜದ ಲಕ್ಷಣ. ಒಬ್ಬ ವ್ಯಕ್ತಿಯ ಸಾಮಾಜಿಕ ಗೌರವ ಮಾನ್ಯತೆಗಳು ಆತನ ಜ್ಞಾನ ಮತ್ತು ಮಾನವೀಯ ಗುಣಗಳಿಂದ ನಿರ್ಧಾರವಾಗಬೇಕೇ ಹೊರತು ಚರ್ಮದ ಬಣ್ಣದಿಂದಲ್ಲ (ಜಾತಿ ಮತ ಪಂಥಗಳಿಂದಲೂ ಅಲ್ಲ) ಎಂದು ನ್ಯಾಯಾಲಯದ ಮತ್ತು ಸಮಾಜದ ಗಮನ ಸೆಳೆದ ಚಿರಾಯು ಜೈನ್ ಅಭಿನಂದನೆಗೆ ಅರ್ಹ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶುಕ್ರವಾರ ಡಿಸೆಂಬರ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಏಕಾದಶಿ ಅಹೋರಾತ್ರ ನಕ್ಷತ್ರ: ಹಸ್ತ ಗಂ. 08-54 ಯೋಗ: ಸೌಭಾಗ್ಯ ಗಂ 24-04 ಕರಣ: ಬವ ಗಂ. 17-54, ವೃಶ್ಚಿಕ ಮಾಸದ 22 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-45 ಸೂರ್ಯಾಸ್ತ : 06-00
ಮುಸ್ಲಿಂ ದಿನಾಂಕ : 23 ಜುಮಾದುಲ್ಲಾವಲ್
ದಿನ ವಿಶೇಷ : ಹನುಕಾಹ್ (ಜ್ಯೂಯಿಷ್), ಅದೃಷ್ಟ ಸಂಖ್ಯೆ : 8, 11

ಮೇಷ: ಆರ್ಥಿಕ ಸ್ಥಿತಿಯು ನಾನಾ ರೀತಿಯಲ್ಲಿ ಅವನತಿಯ ಹಂತವನ್ನು ಹೊಂದುವ ಪರಿಸ್ಥಿತಿ ನಿಮ್ಮ ಗೋಚರಕ್ಕೆ ಬರಬಹುದು, ಜಾಗ್ರತೆ ವಹಿಸಿ. ಕಬ್ಬಿಣ ದಾಸ್ತಾನು ಹೊಂದಿದವರಿಗೆ ತಕ್ಕ ಮಟ್ಟಿಗೆ ಉತ್ತಮ ಆದಾಯ ಸಿಗಲಿದೆ.

ವೃಷಭ: ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಸನ್ನು ದೂರಪಡಿಸಿಕೊಂಡು ಉತ್ತಮ ಕೆಲಸಗಳನ್ನು ಮಾಡುವಲ್ಲಿ ಮುಂದಾಗುವಿರಿ. ಪತ್ರಿಕಾ ವರದಿಗಾರರಿಗೆ ಕೆಲಸದಲ್ಲಿನ ದಕ್ಷತೆಯಿಂದ ಯಶಸ್ಸು ಕಾಣುವರು.

ಮಿಥುನ: ರೈತಾಪಿ ವರ್ಗದವರು ತಮ್ಮ ವೃತ್ತಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿಯನ್ನು ನೋಡಬಹುದು. ಗುರಿ ಸಾಧನೆಗೆ ಲಕ್ಷ್ಯವಿರಿಸಲು ಮಕ್ಕಳಿಗೆ ಬುದ್ಧಿವಾದ ಹೇಳುವುದು ಒಳ್ಳೆಯದು.

ಕರ್ಕಾಟಕ: ಕೈಗೆಟಕುವ ಕಾರ್ಯವೊಂದು ನಿಮ್ಮ ಸತತ ಪ್ರಯತ್ನದಿಂದ ಆಶ್ಚರ್ಯಕರ ರೀತಿಯಲ್ಲಿ ಥಟ್ಟನೆ ಸಿದ್ಧಿಸಬಹುದು. ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ವಿಶೇಷ ಗಮನ ಹರಿಸಬೇಕಾಗುತ್ತದೆ. ಇಲ್ಲವಾದರೆ ಸಮಸ್ಯೆ ಎದುರಾಗುವುದು.

ಸಿಂಹ: ಸಂಗಾತಿಯೊಂದಿಗೆ ಸ್ನೇಹದಿಂದ ವರ್ತಿಸಿದರೆ ಭಿನ್ನಾಭಿಪ್ರಾಯ ತಪ್ಪುವುದು. ಕೋರ್ಟಿನ ವ್ಯವಹಾರಗಳು ಸಿಹಿ-ಕಹಿಯ ಮಿಶ್ರಫಲದಲ್ಲಿ ಇತ್ಯರ್ಥವಾಗಲಿದೆ. ಅನುಕಂಪಕ್ಕೆ ಅರ್ಹರಲ್ಲದವರಿಗೆ ಸಹಾಯ ಹಸ್ತ ಚಾಚಬೇಡಿ.

ಕನ್ಯಾ: ವ್ಯಾಪಾರ–ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮದ ಜೊತೆಯಲ್ಲಿ ಬುದ್ಧಿವಂತಿಕೆಯೂ ಮುಖ್ಯವಾಗುವುದೆಂದು ತಿಳಿದುಬರುವುದು. ತಂದೆ–ತಾಯಿಯ ಇಷ್ಟಾರ್ಥಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ.

ತುಲಾ: ಕಾರ್ಯರಂಗದಲ್ಲಿ ಪರಿವರ್ತನೆ ಕಂಡು ಬರುವುದರಿಂದ ದುಡುಕದೆ ಕೆಲವೊಂದು ವಿಚಾರಗಳ ಬಗ್ಗೆ ಮತ್ತೆ ಆಲೋಚನೆ ಮಾಡುವುದು ಉತ್ತಮ. ನಿಮ್ಮ ಪರಿಶ್ರಮದಿಂದ ಆರ್ಥಿಕ ಸ್ಥಿತಿ ಕ್ರಮೇಣವಾಗಿ ಉತ್ತಮಗೊಳ್ಳಲಿದೆ.

ವೃಶ್ಚಿಕ: ಯಂತ್ರೋಪಕರಣಗಳ ಮಾರಾಟದಿಂದ ಮತ್ತು ಅದರ ಸೇವೆಯಿಂದ ಲಾಭ ಪಡೆಯುವಿರಿ. ಏಕಮುಖಿ ನಿರ್ಧಾರಗಳಿಂದ ಕತ್ತರಿಗೆ ಸಿಲುಕುವ ಸ್ಥಿತಿ ಎದುರಾಗಬಹುದು. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆಯ ಸಂಭವವಿದೆ.

ಧನು: ಈ ದಿನ ಎದುರಾಗುವ ಸಂದಿಗ್ಧ ಪರಿಸ್ಥಿತಿಯನ್ನು ನೀವು ಸಂಪೂರ್ಣವಾಗಿ ಅವಲೋಕಿಸಿ ನಿಮ್ಮ ಇಷ್ಟದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ. ಶುಭ ಕಾರ್ಯಗಳಿಗೆ ಹೆಚ್ಚು ಹಣ ವಿನಿಯೋಗವಾಗುವುದು.

ಮಕರ: ಮಾತಿನಿಂದ ಕಾರ್ಯ ಸಾಧಿಸುವ ನಿಮ್ಮ ಗುಣದಿಂದ ಅನುಕೂಲಕರ ವಾತಾವರಣವನ್ನು ಕಾಣುವಿರಿ. ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟವಾಗುವುದಿಲ್ಲ.

ಕುಂಭ: ವ್ಯವಹಾರದಲ್ಲಿ ಮಂದಗತಿಯ ನಡೆ ಕಂಡರೂ ಅಭಿವೃದ್ಧಿಯಂತೂ ಖಚಿತ. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಮತ್ತು ರಿಪೇರಿಯಿಂದ ಆದಾಯ ಹೆಚ್ಚುವುದು. ಮನೆಗೆ ಹೊಸ ವಸ್ತುಗಳನ್ನು ಕೊಳ್ಳುವ ಯೋಗವಿದೆ.

ಮೀನ: ನಿಮ್ಮ ಒಳ್ಳೆಯ ಸ್ನೇಹಪರ ವರ್ತನೆಯಿಂದ ಅಕ್ಕ ಪಕ್ಕದವರಲ್ಲಿ ಬಾಂಧವ್ಯ ಬೆಳೆಯಲಿದೆ. ಭೂ ಸಂಬಂಧದ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡುವ ಮುನ್ನ ಎರಡೆರಡು ಬಾರಿ ಯೋಚಿಸುವುದು ಉತ್ತಮ.

ಪದಬಂಧ 5523

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹದಿನೈದು ದಿನಗಳ ಅವಧಿ (2)
3.ಟಾರ ರಸ್ತೆ ಹತ್ತಿರವಿರುವ ಮೋರಿ (3)
5.ಮರಿ ಬಿದ್ದ ಆಳವಾದ ಗುಂಡಿ (3)
7.ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
9.ಸಮಾಧಾನ ಈ ರೀತಿ ಬಂದಿದೆ (3)
10.ಏಡಿಯನ್ನು ಹೀಗೂ ಹೇಳುವರು (3)
11.ಮುಂದಾಳು ಇಲ್ಲಿದ್ದಾನೆ (4)
13.ನೇಯುವ ರಾಟೆಯಿದು (3)
15.ನರನು ನೋಡಿದ ಪಟ್ಟಣ (3)
16.ಮಾಣಿಕ್ಯ ಹಿಡಿದಿರುವ ಹುಡುಗ ತಿರುಗಿದ್ದಾನಲ್ಲಾ! (2)

ಮೇಲಿಂದ ಕೆಳಕ್ಕೆ
2.ಕ್ಷಣದಲ್ಲೇ ನಾಶವಾಗುವಂಥದ್ದು (3)
3.ದೊಡ್ಡ ಹಾರೆಯಿದು (3)
4.ತಿರುಗಿ ನಿಂತಿರುವ ರಾಕ್ಷಸ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
8.ಎಳ್ಳಿನಿಂದಿರಿಸಿದ ಬೊಟ್ಟು (3)
9.ಒನಪು ತೋರಿದಾಗ ಬಂದಿರುವ ಸ್ಮರಣೆ (3)
10.ಈತ ಕಬ್ಬಿಣದ ಕೆಲಸಗಾರ (3)
12.ಜೋತಿಷ್ಯರಾಶಿಯಲ್ಲಿನ ಜೋಡಿ (3)
13.ತುರಗದ ಹತ್ತಿರವಿರುವ ಜಾಣ (3)
14.ಮೆಟ್ಟಿಲುಳ್ಳ ಚೌಕಾಕಾರದ ಕೊಳ (3)



5522ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಯಜ್ಞಪಶು 3.ಜಲಜ 4.ಕರ್ನಾಟಕ 6.ಮಾತು 7.ಆಕಸ್ಮಿಕ 8.ಕಾಮನೆ 9.ಪರದಾಟ 12.ರಂಪ 13.ಗತ್ಯಂತರ 15.ಯೋಜನೆ 16.ವಿನಿಯೋಗ

ಮೇಲಿಂದ ಕೆಳಕ್ಕೆ: 1.ಯಜಮಾನ 2.ಶುಕ 3.ಜಟಿಲ 5.ಕನಕ 7.ಆನೆ 8.ಕಾಟ 9.ಪಲ್ಲಂಗ 10.ಉಪಯೋಗ 11.ವರ್ಣನೆ 14.ರವಿ

ಸುಡೊಕು 5909

		3	1			4		
6	1			5				8
	4		8				6	
4			5		9	2		1
	2						5	
3		5	2		8		4	6
5	7					8		9
		1	4	8	5			
	8			7			3	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5908 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ತೆಲಂಗಾಣ ಮುಖ್ಯಮಂತ್ರಿ ನಿವಾಸದ ಸುತ್ತಲಿನ ಬೇಲಿ ತೆರವು • ಪ್ರಗತಿ ಭವನಕ್ಕೆ ಹೊಸ ಹೆಸರು ಕೊಟ್ಟ ರೇವಂತ್

ಹರ್ಷೋದ್ಗಾರದ ನಡುವೆ ರೆಡ್ಡಿ ಪ್ರಮಾಣ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ನೌಕೆಯನ್ನು ಅಧಿಕಾರದ ದಡದತ್ತ ನಡೆಸಿದ ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರು ಬೆಂಬಲಿಗರ ಹರ್ಷೋದ್ಗಾರದ ನಡುವೆ ರಾಜ್ಯದ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ಹೈದರಾಬಾದ್‌ನ ಲಾಲ್ ಬಹದ್ದೂರ್ ಶಾಸ್ತ್ರಿ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲೆ ತಮಿಳ್‌ಇಸೈ ಸೌಂದರ್‌ರಾಜನ್ ಅವರು ರೇವಂತ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇದೇ ವೇಳೆ, ರೇವಂತ್ ಸಂಪುಟದ 11 ಸಚಿವರು ಪ್ರಮಾಣವಚನ ಸ್ವೀಕರಿಸಿದರು.

ಉಪ ಮುಖ್ಯಮಂತ್ರಿಯಾಗಿ ಮಲ್ಲು ಭಟ್ಟಿ ವಿಕ್ರಮಾರ್ಕ ಪ್ರಮಾಣ ವಚನ ಸ್ವೀಕರಿಸಿದರು. ಎನ್. ಉತ್ತಮ್ ಕುಮಾರ್ ರೆಡ್ಡಿ, ಸಿ. ದಾಮೋದರ್ ರಾಜಾನರಸಿಂಹ, ಕೋಮಟಿರೆಡ್ಡಿ ವೆಂಕಟ್ ರೆಡ್ಡಿ, ಪೊನ್ನಮ್ ಪ್ರಭಾಕರ್, ಡಿ. ಶ್ರೀಧರ್ ಬಾಬು, ಪಂಗುಲೇಟಿ ಶ್ರೀನಿವಾಸ್ ರೆಡ್ಡಿ, ಕೊಂಡ ಸುರೇಖಾ, ಡಿ. ಅನುಸೂಯ (ಸೀತಕ್ಕ), ತುಮ್ಮಲ ನಾಗೇಶ್ವರ ರಾವ್ ಹಾಗೂ ಜುಪಲ್ಲಿ ಕೃಷ್ಣ ರಾವ್ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಹಿರಿಯ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಸೇರಿ ಕಾಂಗ್ರೆಸ್‌ನ ಪ್ರಮುಖ ನಾಯಕರು ಸಮಾರಂಭದಲ್ಲಿ ಭಾಗಿಯಾಗಿದ್ದರು.

ಹೈದರಾಬಾದ್‌ನಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ತೆಲಂಗಾಣ ರಾಜ್ಯಪಾಲೆ ತಮಿಳ್‌ಇಸೈ ಸೌಂದರ್‌ರಾಜನ್, ನೂತನ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮತ್ತು ಅವರ ಪತ್ನಿ ಗೀತಾ ರೆಡ್ಡಿ —ಪಿಟಿಐ ಚಿತ್ರ

ನಕ್ಸಲ್ ಚಳವಳಿಯಿಂದ ಸಂಪುಟದವರೆಗೆ

ರೇವಂತ್ ರೆಡ್ಡಿ ಸಂಪುಟದಲ್ಲಿ ಸ್ಥಾನ ಪಡೆದಿರುವ ಮುಲುಗು ಮೀಸಲು ಕ್ಷೇತ್ರದ ಶಾಸಕಿ ದನಸಾರಿ ಅನಸೂಯ ಅಲಿಯಾಸ್ ಸೀತಕ್ಕ ಅವರು ಸಾಗಿ ಬಂದ ಹಾದಿಯು ಕುತೂಹಲಕಾರಿಯಾಗಿದೆ. ಈ ಕ್ಷೇತ್ರದಿಂದ ಮೂರು ಬಾರಿ ಶಾಸಕಿಯಾಗಿ ಆಯ್ಕೆ ಆಗಿರುವ ಅವರು ಮಾಜಿ ನಕ್ಸಲ್. ಅವರು ಕಮಾಂಡರ್ ಆಗಿ ನಕ್ಸಲ್ ಪಡೆಗಳನ್ನು ಮುನ್ನಡೆಸಿದ್ದರು.

1987ರಲ್ಲಿ 14 ವರ್ಷದ ಬಾಲಕಿಯಾಗಿದ್ದಾಗಲೇ ಜನಶಕ್ತಿ ನಕ್ಸಲ್ ಪಡೆ ಸೇರಿದ ಅವರು, 1997ರಲ್ಲಿ ಪೊಲೀಸರೆದುರು ಶರಣಾದರು. ಬಳಿಕ ಕಾನೂನು ವ್ಯಾಸಂಗ ಮಾಡಿ, 2004ರಲ್ಲಿ ತೆಲುಗುದೇಶಂ ಪಕ್ಷ ಸೇರುವ ಮೂಲಕ ರಾಜಕೀಯ ಪ್ರವೇಶಿಸಿದರು. ಮುಲುಗು ಕ್ಷೇತ್ರದಿಂದಲೇ ಮೊದಲ ಬಾರಿಗೆ ಕಣಕ್ಕಿಳಿದ ಅವರು ಸೋಲು ಅನುಭವಿಸಿದರು. 2009ರಲ್ಲಿ ಅದೇ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು.

2014ರ ವಿಧಾನಸಭೆ ಚುನಾವಣೆಯಲ್ಲಿ ಪುನಃ ಸೋಲುಂಡ ಅವರು, 2017ರಲ್ಲಿ ರೇವಂತ್ ರೆಡ್ಡಿ ಅವರ ಜೊತೆ ಟಿಡಿಪಿ ತೊರೆದು ಕಾಂಗ್ರೆಸ್ ಸೇರಿದರು. ನಂತರ, 2018 ಮತ್ತು 2023ರ ಚುನಾವಣೆಯಲ್ಲಿ ಸತತ ಗೆಲುವು ದಾಖಲಿಸಿದರು. ಕೋವಿಡ್– 19 ಸಾಂಕ್ರಾಮಿಕದ ಸಮಯದಲ್ಲಿ ಮಾಡಿದ ಉತ್ತಮ ಕೆಲಸಗಳಿಂದ ಮತ್ತಷ್ಟು ಪ್ರಸಿದ್ಧಿ ಪಡೆದರು.

ದನಸಾರಿ ಅನಸೂಯ

ಜಾತಿ ಸಮೀಕರಣ: ಸಂಪುಟ ಸದಸ್ಯರ ಆಯ್ಕೆಯಲ್ಲಿ ವಿವಿಧ ಜಾತಿಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ದಲಿತರು (2), ಪರಿಶಿಷ್ಟ ವರ್ಗ (1), ವೇಲಮ (1), ಹಿಂದುಳಿದ ವರ್ಗಗಳು (2), ಬ್ರಾಹ್ಮಣ (1) ಮತ್ತು ಕಮ್ಮ (1) ಸಮುದಾಯಗಳಿಗೆ ಸೇರಿದ ಶಾಸಕರು ಸಂಪುಟ ಸೇರಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಏಳು ಮಂದಿ ರೇವಂತ್ ಸಂಪುಟ ಸೇರಲಿದ್ದಾರೆ ಎನ್ನಲಾಗಿದೆ.

ಆರು ಗ್ಯಾರಂಟಿಗಳಿಗೆ ಅಂಕಿತ

ಹೈದರಾಬಾದ್: ಪ್ರಮಾಣ ವಚನ ಸ್ವೀಕರಿಸಿದ ರೇವಂತ್ ರೆಡ್ಡಿ ಅವರು ಎರಡು ಕಡತಗಳಿಗೆ ಸಹಿ ಹಾಕಿದ್ದಾರೆ. ಚುನಾವಣೆಗೂ ಮೊದಲು ಕಾಂಗ್ರೆಸ್ ನೀಡಿದ್ದ ಆರು ಭರವಸೆಗಳು ಮತ್ತು ಅಭಯ ಹಸ್ತಂ ಕಾಯ್ದೆಗೆ (ತೆಲಂಗಾಣ ಸ್ವಸಹಾಯ ಸಂಘಗಳಿಗೆ ಸಂಬಂಧಿಸಿದ್ದು) ಸಂಬಂಧಿಸಿದ ಕಡತ ಅದರಲ್ಲಿ ಒಂದು. ಎರಡನೆಯದು ರಜನಿ ಎಂಬ ಅಂಗವಿಕಲ ಮಹಿಳೆಯ ಉದ್ಯೋಗಕ್ಕೆ ಸಂಬಂಧಿಸಿದ ಕಡತ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೊದಲು ಮಾಡುವ ಕೆಲಸವೇ ಗ್ಯಾರಂಟಿಗಳ ಅನುಷ್ಠಾನ ಎಂದು ಚುನಾವಣಾ ಪ್ರಚಾರದ ವೇಳೆ ರೇವಂತ್ ರೆಡ್ಡಿ ಭರವಸೆ ನೀಡಿದ್ದರು. ಜೊತೆಗೆ, ವಾರ್ಷಿಕ ಉದ್ಯೋಗ ಕ್ಯಾಲೆಂಡರ್ ರನ್ನು ಪರಿಚಯಿಸಲಾಗುವುದು ಎಂದೂ ಭರವಸೆ ನೀಡಿದ್ದರು. ಮೊದಲ ಉದ್ಯೋಗವನ್ನು ಅಂಗವಿಕಲ ಮಹಿಳೆಗೆ ನೀಡುವ ಮೂಲಕ ಉದ್ಯೋಗ ಖಾತ್ರಿಗೆ ನಾಂದಿ ಹಾಡಿದರು.

ಜನರ ಸರ್ಕಾರದ ಪ್ರತಿಜ್ಞೆ: ಪ್ರಮಾಣ ವಚನ ಸ್ವೀಕರಿಸಿ ಮಾತನಾಡಿದ ರೇವಂತ್ ರೆಡ್ಡಿ, ಜನರ ಸರ್ಕಾರ ನೀಡುವುದಾಗಿ ಪ್ರತಿಜ್ಞೆ ಮಾಡಿದರು. ಒಂದು ದಶಕದ ದುರಾಡಳಿತಕ್ಕೆ ರಾಜ್ಯದ ಜನರು ಕೊನೆಹಾಡಿದ್ದಾರೆ ಎಂದರು. ‘ಪ್ರಗತಿ ಭವನದ (ತೆಲಂಗಾಣ ಮುಖ್ಯಮಂತ್ರಿಯ ಸರ್ಕಾರಿ ನಿವಾಸ) ಸುತ್ತ ಇರುವ ಕಬ್ಬಿಣದ ಬೇಲಿಯನ್ನು ತೆರವುಗೊಳಿಸಲಾಗಿದೆ. ರಾಜ್ಯದ ಏಳಿಗೆಯಲ್ಲಿ ಭಾಗಿಯಾಗಲು ಬಯಸುವ ಎಲ್ಲರನ್ನೂ ಅಲ್ಲಿ ಬರಮಾಡಿಕೊಳ್ಳಲಾಗುವುದು’ ಎಂದರು.

ಪ್ರಗತಿ ಭವನವನ್ನು ‘ಜ್ಯೋತಿರಾವ್ ಫುಲೆ ಪ್ರಜಾ ಭವನ’ ಎಂದು ಮರು ನಾಮಕರಣ ಮಾಡಿದ ರೆಡ್ಡಿ ಅವರು, ‘ಪ್ರತಿ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಅಲ್ಲಿ ಪ್ರಜಾ ದರ್ಬಾರ್ ನಡೆಸಲಾಗುವುದು. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರುಗಳನ್ನು ಅಲ್ಲಿ ಸ್ವೀಕರಿಸಲಾಗುವುದು’ ಎಂದರು.

‘ಮುಖ್ಯಮಂತ್ರಿಗಳನ್ನು ಏಕೆ ಘೋಷಿಸಿಲ್ಲ’

ನವದೆಹಲಿ (ಪಿಟಿಐ): ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢ ವಿಧಾನಸಭೆ ಚುನಾವಣೆಯನ್ನು ಗೆದ್ದ ಬಿಜೆಪಿಯು ಆ ರಾಜ್ಯಗಳಿಗೆ ಮುಖ್ಯಮಂತ್ರಿಯ ಹೆಸರು ಘೋಷಿಸಲು ವಿಳಂಬ ಮಾಡುತ್ತಿರುವ ಕುರಿತು ಕಾಂಗ್ರೆಸ್ ಗುರುವಾರ ವ್ಯಂಗ್ಯವಾಡಿದೆ. ತೆಲಂಗಾಣ ಮುಖ್ಯಮಂತ್ರಿಯಾಗಿ ರೇವಂತ್ ರೆಡ್ಡಿ ಅವರು ಪ್ರಮಾಣ ವಚನ ಸ್ವೀಕಾರ ಮಾಡಿದ್ದನ್ನು ಉಲ್ಲೇಖಿಸಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಧಾನಿ ಅಭಿನಂದನೆ: ತೆಲಂಗಾಣದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ರೆಡ್ಡಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಅಭಿನಂದಿಸಿದ್ದಾರೆ. ‘ತೆಲಂಗಾಣದ ಅಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕೆ ಕೇಂದ್ರ ಸರ್ಕಾರವು ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ನಾನು ಭರವಸೆ ನೀಡುತ್ತೇನೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಕೇಶವಾನಂದ ಭಾರತಿ’ ತೀರ್ಪು ಕನ್ನಡದಲ್ಲಿ

ನವದೆಹಲಿ (ಪಿಟಿಐ): ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆಯನ್ನು ವಿವರಿಸಿ, ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ಐತಿಹಾಸಿಕ ತೀರ್ಪು ಈಗ ಕನ್ನಡ ಸೇರಿದಂತೆ ದೇಶದ ಹತ್ತು ಭಾಷೆಗಳಲ್ಲಿ ಲಭ್ಯವಿದೆ.

ಈ ತೀರ್ಪು ಬಂದು ಐವತ್ತು ವರ್ಷಗಳು ಸಂದಿರುವ ಈ ಹೊತ್ತಿನಲ್ಲಿ, ತೀರ್ಪಿನ ಪ್ರತಿಯನ್ನು ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ 10 ಭಾಷೆಗಳಲ್ಲಿ ನೀಡಲಾಗಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಗುರುವಾರ ಹೇಳಿದರು.

1973ರಲ್ಲಿ ಬಂದ ಈ ತೀರ್ಪು, ಸಂವಿಧಾನಕ್ಕೆ ತಿದ್ದುಪಡಿ ತರುವ ವಿಚಾರದಲ್ಲಿ ಸಂಸತ್ತಿಗೆ ಇದ್ದ ವ್ಯಾಪಕ ಅಧಿಕಾರವನ್ನು ಮೊಟಕುಗೊಳಿಸಿತು. ಅಲ್ಲದೆ, ಸಂವಿಧಾನಕ್ಕೆ ತರುವ ಯಾವುದೇ ತಿದ್ದುಪಡಿಯನ್ನು, ಅದು ಸಂವಿಧಾನದ ಮೂಲ ಸ್ವರೂಪಕ್ಕೆ ಅನುಗುಣವಾಗಿ ಇದೆಯೇ ಎಂಬ ಆಧಾರದಲ್ಲಿ ಪರಿಶೀಲನೆಗೆ ಒಳಪಡಿಸುವ ಅಧಿಕಾರವನ್ನು ನ್ಯಾಯಾಂಗಕ್ಕೆ ನೀಡಿತು.

‘ಕೇಶವಾನಂದ ಭಾರತಿ ಪ್ರಕರಣದ ತೀರ್ಪು ಪ್ರಕಟವಾಗಿ ಐವತ್ತು ವರ್ಷಗಳ ಸಂದ ನೆನಪಿಗಾಗಿ ನಾವು ಒಂದು ವೆಬ್ ಪುಟವನ್ನು ಸೃಷ್ಟಿಸಿದ್ದೆವು. ಸಮಾಜದ ಇನ್ನಷ್ಟು ಜನರನ್ನು ತಲುಪಬೇಕು ಎಂಬ ಉದ್ದೇಶದಿಂದ, ತೀರ್ಪನ್ನು ಭಾರತದ ಇತರ ಭಾಷೆಗಳಿಗೆ ಅನುವಾದಿಸಬಹುದು ಎಂಬ ಆಲೋಚನೆ ನನಗೆ ಬಂತು’ ಎಂದು ಸಿಜೆಐ ಅವರು ಗುರುವಾರ ಹೇಳಿದರು.

ಈಗ ತೀರ್ಪಿನ ಪ್ರತಿಯು ಹಿಂದಿ, ತೆಲುಗು, ತಮಿಳು, ಒಡಿಯಾ, ಮಲಯಾಳ, ಗುಜರಾತಿ, ಕನ್ನಡ, ಬಂಗಾಳಿ, ಅಸ್ಸಾಮಿ ಮತ್ತು ಮರಾಠಿ ಭಾಷೆಗಳಲ್ಲಿ ಲಭ್ಯವಿದೆ ಎಂದು ತಿಳಿಸಿದರು. ಆದೇಶಗಳು ಪ್ರಾದೇಶಿಕ ಭಾಷೆಗೆ ಅನುವಾದ ಆಗುವಂತೆ ನೋಡಿಕೊಳ್ಳಲು ಸಿದ್ಧವಿರುವುದಾಗಿ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ತಮಗೆ ಈಚೆಗೆ ತಿಳಿಸಿದ್ದಾರೆ ಎಂದು ಸಿಜೆಐ ಹೇಳಿದರು.

ಮಹುವಾ ಪ್ರಕರಣ: ಇಂದು ವರದಿ ಮಂಡನೆ ಸಾಧ್ಯತೆ

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಹಣ ಪಡೆದಿರುವುದಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್‌ನ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಸದನದಿಂದ ಉಚ್ಚಾಟಿಸಬೇಕು ಎಂದು ಶಿಫಾರಸು ಮಾಡಿರುವ ನೀತಿ ಸಮಿತಿಯ ವರದಿಯನ್ನು ಲೋಕಸಭೆಯಲ್ಲಿ ಶುಕ್ರವಾರ ಮಂಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವರದಿಯನ್ನು ಡಿಸೆಂಬರ್ 4ರಂದು ಮಂಡಿಸಲು ಕಾರ್ಯಸೂಚಿ ಪಟ್ಟಿಯಲ್ಲಿ ಸೇರಿಸಿದ್ದರೂ, ಅಂದು ಮಂಡನೆಯಾಗಿರಲಿಲ್ಲ. ಸಂಸತ್ತಿನ ನೀತಿ ಸಮಿತಿ ಮಾಡಿರುವ ಶಿಫಾರಸಿನ ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಸಬೇಕು. ಚರ್ಚೆ ಬಳಿಕವೇ ಉಚ್ಚಾಟನೆ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು ಎಂದು ವಿವಿಧ ವಿರೋಧ ಪಕ್ಷಗಳು ನಾಯಕರು ಆಗ್ರಹಿಸಿದ್ದರು.

ಮಹುವಾ ಮೊಯಿತ್ರಾ

ಎಫ್‌ಬಿಐ ಮುಖ್ಯಸ್ಥರ ಭಾರತ ಭೇಟಿ ಮುಂದಿನ ವಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕದ ತನಿಖಾ ಸಂಸ್ಥೆಯಾಗಿರುವ, ಎಫ್‌ಬಿಐನ ನಿರ್ದೇಶಕ ಕ್ರಿಸ್ಟೋಫರ್ ರೇ ಅವರು ಮುಂದಿನ ವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ.

ಅಮೆರಿಕದಲ್ಲಿ ಸಿಖ್ ಪ್ರತ್ಯೇಕತಾವಾದಿಯೊಬ್ಬರ ಹತ್ಯೆಗೆ ಭಾರತ ಸರ್ಕಾರದ ಅಧಿಕಾರಿಯೊಬ್ಬರು ಸಂಚು ನಡೆಸಿದ್ದರು ಎಂದು ಅಮೆರಿಕದ ಆರೋಪದ ಬೆನ್ನಲ್ಲೆ ಈ ಭೇಟಿಯು ಮಹತ್ವ ಪಡೆದುಕೊಂಡಿದೆ.

ಆದರೆ, ಈ ಆರೋಪವನ್ನು ಭಾರತ ಅಲ್ಲಗಳೆದಿದೆ. ರೇ ಭೇಟಿ ಕುರಿತಂತೆ ಅಂತರಕಾಯ್ದುಕೊಂಡಿರುವ ಸರ್ಕಾರ, ಅವರ ಪ್ರವಾಸವು ಈ ಹಿಂದೆಯೇ ನಿರ್ಧಾರವಾಗಿತ್ತು ಎಂದು ತಿಳಿಸಿದೆ.

ಭಾರತದಲ್ಲಿ ಪ್ರತ್ಯೇಕ ಸಿಖ್ ರಾಜ್ಯ ಪ್ರತಿಪಾದಿಸಿದ್ದ ನ್ಯೂಯಾರ್ಕ್ ನಗರದ ನಿವಾಸಿಯೊಬ್ಬರ ಹತ್ಯೆಗೆ ಭಾರತೀಯ ಪ್ರಜೆಯೊಬ್ಬರ ಜೊತೆಗೂಡಿ ಸರ್ಕಾರದ ಅಧಿಕಾರಿಯೊಬ್ಬರು ಸಂಚು ನಡೆಸಿದ್ದರು ಎಂದು ಮ್ಯಾನ್‌ಹಾಟನ್‌ನಲ್ಲಿ ತನಿಖಾಧಿಕಾರಿ ಆರೋಪಿಸಿದ್ದರು.

ತನಿಖೆಗೆ ಸಮಿತಿ

ನವದೆಹಲಿ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ಹತ್ಯೆ ಸಂಚಿನಲ್ಲಿ ಭಾರತದ ಪಾತ್ರವಿತ್ತು ಎಂಬ ಅಮೆರಿಕದ ಆರೋಪ ಕುರಿತಂತೆ ತನಿಖೆಗೆ ತನಿಖಾ ಸಮಿತಿ ರಚಿಸಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ತಿಳಿಸಿದ್ದಾರೆ. ಸಚಿವರು ರಾಜ್ಯಸಭೆಯಲ್ಲಿ ಈ ವಿಷಯ ಪ್ರಕಟಿಸಿದರು. ಆದರೆ, ಖಾಲಿಸ್ತಾನಿ ಮೂಲಭೂತವಾದಿಯ ಹತ್ಯೆ ಪ್ರಕರಣದಲ್ಲಿ ಭಾರತೀಯ ಏಜೆಂಟರ ಪಾತ್ರವಿದೆ ಎಂಬ ಕೆನಡಾದ ಆರೋಪ ಕುರಿತು ಇದೇ ತೀರ್ಮಾನ ಇರದು ಎಂದರು.

ಮೂರು ರಾಜ್ಯಗಳಿಗೆ ಇಂದು ಬಿಜೆಪಿಯಿಂದ ವೀಕ್ಷಕರನ್ನು ನೇಮಿಸುವ ಸಾಧ್ಯತೆ

ಸಿ.ಎಂ ಆಯ್ಕೆ: ಮುಂದುವರಿದ ಕಸರತ್ತು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮಧ್ಯಪ್ರದೇಶ, ಛತ್ತೀಸಗಢ ಮತ್ತು ರಾಜಸ್ಥಾನದಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆಗೆ ತೆರೆಮರೆಯ ಕಸರತ್ತು ಮುಂದುವರಿದಿದ್ದು, ಈ ವಾರಾಂತ್ಯಕ್ಕೆ ಆಯ್ಕೆ ಅಂತಿಮಗೊಳ್ಳುವ ಸಾಧ್ಯತೆಯಿದೆ.

ಈ ಮೂರು ರಾಜ್ಯಗಳಲ್ಲಿ ಶಾಸಕಾಂಗ ಪಕ್ಷದ ನಾಯಕರ ನೇಮಕಕ್ಕೆ ಬಿಜೆಪಿ ಹೈಕಮಾಂಡ್ ಶುಕ್ರವಾರ ವೀಕ್ಷಕರನ್ನು ನೇಮಿಸಲಿದ್ದು, ಅವರು ಆಯಾ ರಾಜ್ಯಕ್ಕೆ ತೆರಳಿ ಶಾಸಕರ ಅಭಿಪ್ರಾಯ ಸಂಗ್ರಹಿಸಲಿದ್ದಾರೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

‘ಯಾರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ಬಗ್ಗೆ ಯಾವುದೇ ತೀರ್ಮಾನ ಆಗಿಲ್ಲ. ಪಕ್ಷವು ಈ ಮೂರು ರಾಜ್ಯಗಳಲ್ಲಿ ಸಿ.ಎಂ ಆಯ್ಕೆ ಮಾಡುವಾಗ ಸಾಮಾಜಿಕ, ಪ್ರಾದೇಶಿಕ, ಆಡಳಿತ ಮತ್ತು ಸಾಂಸ್ಥಿಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳಲಿದೆ’ ಎಂದು ಅವರು ಹೇಳಿದರು.

ಮೂರು ರಾಜ್ಯಗಳ ಮುಖಂಡರು ಹಾಗೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಪಕ್ಷದ ನಾಯಕರನ್ನು ನವದೆಹಲಿಯಲ್ಲಿ ಭೇಟಿಯಾಗುತ್ತಿದ್ದಾರೆ. ಇದು ಸಹಜ ಭೇಟಿಯಾಗಿದ್ದು, ಹೆಚ್ಚಿನ ಮಹತ್ವ ನೀಡುವ ಅಗತ್ಯವಿಲ್ಲ ಎಂದು ಮೂಲಗಳು ಹೇಳಿವೆ.

‘ಈ ರಾಜ್ಯಗಳ ಹಲವು ಮುಖಂಡರು ಪಕ್ಷದ ರಾಷ್ಟ್ರೀಯ ನಾಯಕರನ್ನು ಭೇಟಿಯಾಗುತ್ತಿದ್ದಾರೆ. ಮುಖ್ಯಮಂತ್ರಿಯಾಗಲು ಅವಕಾಶವಿರುವುದು ಮೂವರಿಗೆ ಮಾತ್ರ. ಆದ್ದರಿಂದ ಭೇಟಿಗೆ ವಿಪರೀತ ಅರ್ಥ ಕಲ್ಪಿಸುವುದು ಬೇಡ’ ಎಂದು ತಿಳಿಸಿವೆ.

ಕೇಂದ್ರ ಸಚಿವರೂ ಆಗಿರುವ ಮಧ್ಯಪ್ರದೇಶದ ಬಿಜೆಪಿ ಮುಖಂಡ ನರೇಂದ್ರ ಸಿಂಗ್ ತೋಮರ್ ಮತ್ತು ರಾಜಸ್ಥಾನದ ಬಾಬಾ ಬಾಲಕನಾಥ ಅವರು ಗುರುವಾರ ಅಮಿತ್ ಶಾ ಅವರನ್ನು ಭೇಟಿಯಾದರು. ವಿಧಾನಸಭೆಗೆ ಆಯ್ಕೆಯಾದ ಕಾರಣ ಇವರಿಬ್ಬರು ಲೋಕಸಭೆ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದ್ದರು.

ಮಧ್ಯಪ್ರದೇಶದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಶಿವರಾಜ್ ಸಿಂಗ್ ಚೌಹಾಣ್, ತೋಮರ್ ಮತ್ತು ಪ್ರಹ್ಲಾದ್ ಸಿಂಗ್ ಪಟೇಲ್ ಅವರ ಹೆಸರು ಕೇಳಿಬರುತ್ತಿದೆ.

ಛತ್ತೀಸಗಢದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವ್, ಕೇಂದ್ರ ಸಚಿವರಾದ ಗೋಮತಿ ಸಾಯ್ ಮತ್ತು ಲತಾ ಉಸೆಂಡೀ ಅವರ ಹೆಸರು ಮುಂಚೂಣಿಯಲ್ಲಿದೆ. ಅರುಣ್ ಅವರು ಇತರೆ ಹಿಂದುಳಿದ ವರ್ಗಕ್ಕೆ ಸೇರಿದರೆ, ಗೋಮತಿ ಮತ್ತು ಲತಾ ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು.

ನಡ್ಡಾ ಭೇಟಿಯಾದ ವಸುಂಧರಾ

ಜೈಪುರ: ನೂತನ ಶಾಸಕರ ಸಭೆ ನಡೆಸಿ ಅಚ್ಚರಿಗೆ ಕಾರಣರಾಗಿರುವ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರು ಪಕ್ಷದ ಅಧ್ಯಕ್ಷ ನಡ್ಡಾ ಅವರನ್ನು ಗುರುವಾರ ನವದೆಹಲಿಯಲ್ಲಿ ಭೇಟಿಯಾದರು.

ರಾಜಸ್ಥಾನದಲ್ಲಿ ಬಿಜೆಪಿ 115 ಸ್ಥಾನಗಳನ್ನು ಗೆದ್ದಿದೆ. ಫಲಿತಾಂಶದ ಬೆನ್ನಲ್ಲೇ 47 ಶಾಸಕರು ರಾಜೇ ಅವರನ್ನು ಅಭಿನಂದಿಸಲು ಅವರ ನಿವಾಸಕ್ಕೆ ಬಂದಿದ್ದರು. ಕೆಲವು ಶಾಸಕರು ಅವರನ್ನು ಬೆಂಬಲಿಸಿ ಬಹಿರಂಗ ಹೇಳಿಕೆ ನೀಡಿದ್ದರು. ರಾಜೇ ಅವರ ‘ಬಲ ಪ್ರದರ್ಶನ’ ಮತ್ತು ‘ಒತ್ತಡ ತಂತ್ರ’ವನ್ನು ಪಕ್ಷದ ವರಿಷ್ಠರು ಗಂಭೀರವಾಗಿ ಪರಿಗಣಿಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಒಡಿಶಾ: ಡಿಸ್ಟಿಲರಿ ಮೇಲೆ ದಾಳಿ ಅಪಾರ ಹಣ ವಶ

ಭುವನೇಶ್ವರ (ಪಿಟಿಐ): ಆದಾಯ ತೆರಿಗೆ ಅಧಿಕಾರಿಗಳು ಗುರುವಾರ ಒಡಿಶಾ ಮೂಲದ ಡಿಸ್ಟಿಲರಿ ಕಂಪನಿಯೊಂದರ ಕಚೇರಿ ಮೇಲೆ ದಾಳಿ ನಡೆಸಿದ್ದು, ಸುಮಾರು ₹ 30 ಕೋಟಿಯಿಂದ 50 ಕೋಟಿ ಮೊತ್ತವನ್ನು ವಶಪಡಿಸಿಕೊಂಡಿದ್ದಾರೆ.

ಬುಧವಾರ ದಾಳಿ ನಡೆಸಲಾಗಿದೆ. ನಿಖರವಾದ ಮೊತ್ತ ಗೊತ್ತಾಗಿಲ್ಲ. ಯಂತ್ರದ ಮೂಲಕ ಹಣ ಎಣಿಕೆ ಮಾಡಲಾಗುತ್ತಿದೆ.

ಭುವನೇಶ್ವರ, ಬೊಲಾಂಗಿರ್, ಸಂಬಾಲ್‌ಪುರ್, ರಾಂಚಿ ಹಾಗೂ ಕೋಲ್ಕತ್ತದಲ್ಲಿ ದಾಳಿ ನಡೆದಿದೆ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 99457191526

Part-Time Jobs

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 8050198999, 6366430266

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ12,000-17,000, 8951315839, 7022770052

ಭವಿಷ್ಯ

Astrology

“ಕೆಲಸ ಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಪ್ರವಾಸ

Travel

10 ದಿನಗಳ ಗುಜರಾತ್. 8 ದಿನಗಳ ಕಾಶಿಯಾತ್ರೆ. 12 ದಿನಗಳ ಮಧ್ಯಪ್ರದೇಶ. 6 ದಿನಗಳ ದುಬೈ ಪ್ರವಾಸ. ಶ್ರೀನಂದಿ ಹಾಲಿಡೇಸ್ 9740228186 9980270467

ಭಾರತಪರಂಪರ ದರ್ಶನ 15.12.2023, 7ದಿನ ನವಗ್ರಹಸಹಿತ,ತಮಿಳುನಾಡು. 16.1.2024 11ದಿನ ಗುಜರಾತ್ ಮಧ್ಯಪ್ರದೇಶ, 4ಜ್ಯೋತಿರ್ಲಿಂಗ 8.2.2024 ಕಾಶಿ,ಅಯೋಧ್ಯ 7ದಿನ. 9448792891.

17.12.2023 ರಿಂದ ವಿಮಾನ/ AC ಬಸ್ಸು/ AC ರೂಮ್ ವ್ಯವಸ್ಥೆಗಳೊಂದಿಗೆ: ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ,ಮಹಾಕಾಳೇಶ್ವರ, 14.02.2024 ಕಾಶಿ,ಬುದ್ಧಗಯಾ ಬೈದ್ಯನಾಥ್,ಅಯೋಧ್ಯಾ, 02.03.2024 ಮಹಾಶಿವರಾತ್ರಿ ಪ್ರಯುಕ್ತ ನೇಪಾಳ ಪಶುಪತಿನಾಥ ದರ್ಶನ. 24.12.2023 ಪಂಚರಾಮ ಕ್ಷೇತ್ರಗಳು,ಶಕ್ತಿಪೀಠ ದಕ್ಷಿಣ ಮತ್ತು ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 7204173686 8431888138

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ಸಹಜೀವನ ಅಪಾಯಕಾರಿ’

ನವದೆಹಲಿ (ಪಿಟಿಐ): ಸಹಜೀವನವನ್ನು ‘ಅಪಾಯಕಾರಿ ಕಾಯಿಲೆ’ ಎಂದು ಕರೆದಿರುವ ಹರಿಯಾಣದ ಬಿಜೆಪಿ ಸಂಸದ ಧರಂವೀರ್ ಸಿಂಗ್, ‘ಸಹಜೀವನ ಸಂಬಂಧವನ್ನು ಸಮಾಜದಿಂದ ತೊಲಗಿಸಬೇಕು’ ಎಂದು ಕರೆಕೊಟ್ಟಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಸಹಜೀವನ ಎಂಬ ಹೊಸ ಪಿಡುಗು ಸಮಾಜದಲ್ಲಿ ತಲೆಯೆತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವಾಗಿರುವ ಇಂತಹ ಸಂಬಂಧ ನಮ್ಮ ಸಮಾಜದಲ್ಲೂ ವೇಗವಾಗಿ ಪ್ರಚಾರ ಪಡೆಯುತ್ತಿದ್ದು, ಅದರ ಪರಿಣಾಮಗಳು ಭಯಾನಕವಾಗಿವೆ. ದೆಹಲಿಯಲ್ಲಿ ಆಫ್ತಾಬ್ ಪೂನಾವಾಲಾ ತನ್ನ ಸಹಜೀವನ ಸಂಗಾತಿ ಶ್ರದ್ಧಾ ವಾಲ್ಕರ್ ಅವರನ್ನು ಹತ್ಯೆ ಮಾಡಿದ್ದು ಎಲ್ಲರಿಗೂ ತಿಳಿದಿದೆ. ಅಂತಹ ಪ್ರಕರಣಗಳು ಹೆಚ್ಚೆಚ್ಚು ವರದಿಯಾಗುತ್ತಿವೆ’ ಎಂದು ಎಚ್ಚರಿಸಿದರು.

‘ಸಹಜೀವನ ಸಂಬಂಧ ನಮ್ಮ ಸಮಾಜವನ್ನು ವಿನಾಶದತ್ತ ತಳ್ಳುವುದು ಮಾತ್ರವಲ್ಲದೆ, ದ್ವೇಷ ಹರಡುತ್ತಿದೆ. ಇದು ಮುಂದುವರಿಯಲು ಅವಕಾಶ ನೀಡಬಾರದು. ಸಹಜೀವನ ಸಂಬಂಧ ನಿಯಂತ್ರಿಸಲು ಕಾನೂನು ರೂಪಿಸುವಂತೆ ನಾನು ಸಚಿವರಲ್ಲಿ ಮನವಿ ಮಾಡುತ್ತೇನೆ’ ಎಂದು ಭಿವಾನಿ ಮಹೇಂದ್ರಗಢ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅವರು ಹೇಳಿದರು.

ಮಣಿಪುರ: ಪಾನ ನಿಷೇಧ ರದ್ದು

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಮದ್ಯ ಮಾರಾಟ ಮತ್ತು ಸೇವನೆಗೆ ಕಾನೂನು ಮಾನ್ಯತೆಯನ್ನು ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. 30 ವರ್ಷಗಳಿಂದ ರಾಜ್ಯದಲ್ಲಿ ಮದ್ಯ ಮಾರಾಟವನ್ನು ನಿಷೇಧಿಸಲಾಗಿತ್ತು. ಗ್ರೇಟರ್ ಇಂಫಾಲ್, ಜಿಲ್ಲಾ ಕೇಂದ್ರಗಳು, ಪ್ರವಾಸಿ ತಾಣಗಳು ಮತ್ತು 20ಕ್ಕೂ ಹೆಚ್ಚು ಕೊಠಡಿಗಳಿರುವ ಲಾಡ್ಜ್ ಹೋಟೆಲ್‌ಗಳಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಮದ್ಯ ಮಾರಾಟದಿಂದ ವಾರ್ಷಿಕ ₹ 600 ಕೋಟಿ ಆದಾಯ ನಿರೀಕ್ಷಿಸಲಾಗಿದೆ ತಿಳಿಸಿದ್ದಾರೆ.

ನ್ಯಾಯಮೂರ್ತಿ: ಎಸ್‌ಸಿ ಪಾಲು ಶೇ 3.54

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಆರು ವರ್ಷಗಳಲ್ಲಿ ಬೇರೆ ಬೇರೆ ಹೈಕೋರ್ಟ್‌ಗಳಿಗೆ ನೇಮಕ ಆಗಿರುವ ಒಟ್ಟು 650 ನ್ಯಾಯಮೂರ್ತಿಗಳ ಪೈಕಿ, ಶೇಕಡ 75.7ರಷ್ಟು (492) ಮಂದಿ ಸಾಮಾನ್ಯ ವರ್ಗಕ್ಕೆ ಸೇರಿದವರು. ಪರಿಶಿಷ್ಟ ಜಾತಿಗಳಿಗೆ ಸೇರಿದವರ ಪ್ರಮಾಣ ಶೇ 3.54ರಷ್ಟು (23 ಮಂದಿ).

ಪರಿಶಿಷ್ಟ ಪಂಗಡಗಳಿಗೆ ಸೇರಿದವರ ಪ್ರಮಾಣ ಶೇ 1.54ರಷ್ಟು (10 ಮಂದಿ), ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರ ಪ್ರಮಾಣ ಶೇ 11.7ರಷ್ಟು (76 ಮಂದಿ) ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರ ಪ್ರಮಾಣ ಶೇ 5.54ರಷ್ಟು (36 ಮಂದಿ) ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯವು ರಾಜ್ಯಸಭೆಗೆ ಮಾಹಿತಿ ನೀಡಿದೆ.

ಈ ಅವಧಿಯಲ್ಲಿ ಹೈಕೋರ್ಟ್‌ಗಳಿಗೆ ನೇಮಕ ಆಗಿರುವ 13 ಮಂದಿ ನ್ಯಾಯಮೂರ್ತಿಗಳ ಪ್ರವರ್ಗ ಅಥವಾ ಜಾತಿಗೆ ಸಂಬಂಧಿಸಿದ ಮಾಹಿತಿ ಲಭ್ಯವಿಲ್ಲ ಎಂದು ಸಚಿವಾಲಯವು ಸದಸ್ಯ ಜಾನ್ ಬ್ರಿಟ್ಟಾಸ್ ಅವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಿಗೆ ಸಂಬಂಧಿಸಿದಂತೆ ಪ್ರವರ್ಗ ಆಧಾರಿತ ಮಾಹಿತಿ ಸರ್ಕಾರದ ಬಳಿ ಇರುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಈಗ ಕರ್ತವ್ಯದಲ್ಲಿರುವ 790 ಮಂದಿ ಹೈಕೋರ್ಟ್ ನ್ಯಾಯಮೂರ್ತಿಗಳ ಪೈಕಿ ಮಹಿಳೆಯರ ಪ್ರಾತಿನಿಧ್ಯವು ಶೇ 14.1ರಷ್ಟು (111 ಮಂದಿ) ಇದೆ ಎಂದು ತಿಳಿಸಲಾಗಿದೆ.

ಮಹಿಳಾ ನ್ಯಾಯಮೂರ್ತಿಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ. ಇಲ್ಲಿ 15 ಮಂದಿ ಮಹಿಳಾ ನ್ಯಾಯಮೂರ್ತಿಗಳು ಇದ್ದಾರೆ. ಇದಾದ ನಂತರದ ಸ್ಥಾನಗಳಲ್ಲಿ ಮದ್ರಾಸ್ ಹೈಕೋರ್ಟ್ (12 ಮಂದಿ ಮಹಿಳಾ ನ್ಯಾಯಮೂರ್ತಿಗಳು) ಹಾಗೂ ಬಾಂಬೆ ಹೈಕೋರ್ಟ್ (11 ಮಂದಿ ಮಹಿಳಾ ನ್ಯಾಯಮೂರ್ತಿಗಳು) ಇವೆ.

ಸುಪ್ರೀಂ ಕೋರ್ಟ್‌ನಲ್ಲಿ ಈಗ ಮೂವರು ಮಹಿಳಾ ನ್ಯಾಯಮೂರ್ತಿಗಳು ಇದ್ದಾರೆ. ಅಂದರೆ, ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆಯಲ್ಲಿ ಇಲ್ಲಿ ಮಹಿಳಾ ನ್ಯಾಯಮೂರ್ತಿಗಳ ಪ್ರಮಾಣ ಶೇ 8.82ರಷ್ಟು ಇದೆ.

‘112 ನ್ಯಾಯಮೂರ್ತಿಗಳ ನೇಮಕಕ್ಕೆ ಪ್ರಕ್ರಿಯೆ’

ನವದೆಹಲಿ (ಪಿಟಿಐ): ಹೈಕೋರ್ಟ್‌ಗಳಿಗೆ 112 ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯು ಚಾಲ್ತಿಯಲ್ಲಿದೆ ಇದೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಗುರುವಾರ ರಾಜ್ಯಸಭೆಗೆ ತಿಳಿಸಿದ್ದಾರೆ.

ನ್ಯಾಯಾಂಗದ ಉನ್ನತ ಹುದ್ದೆಗಳಿಗೆ ನೇಮಕ ಮಾಡುವುದು ಸಮನ್ವಯದಿಂದ ನಡೆಯಬೇಕಿರುವ ಕೆಲಸ. ಇದರಲ್ಲಿ ನ್ಯಾಯಾಂಗ ಹಾಗೂ ಕಾರ್ಯಾಂಗದ ಭಾಗವಹಿಸುವಿಕೆ ಇರುತ್ತದೆ. ಸಾಂವಿಧಾನಿಕ ಹುದ್ದೆಗಳಲ್ಲಿ ಇರುವ ಬೇರೆ ಬೇರೆ ವ್ಯಕ್ತಿಗಳಿಂದ ಅನುಮೋದನೆ ಪಡೆಯಬೇಕಾಗುತ್ತದೆ ಎಂದು ಮೇಘವಾಲ್ ಅವರು ಪ್ರಶ್ನೋತ್ತರ ಅವಧಿಯಲ್ಲಿ ಹೇಳಿದರು.

ಬೇರೆ ಬೇರೆ ಹೈಕೋರ್ಟ್ ಕೊಲಿಜಿಯಂಗಳು 292 ಹೆಸರುಗಳನ್ನು ಶಿಫಾರಸು ಮಾಡಿವೆ. ಈ ಪೈಕಿ 110 ಮಂದಿಯನ್ನು ನೇಮಕ ಮಾಡಿ ಆಗಿದೆ. 112 ಮಂದಿಯ ನೇಮಕದ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಸಚಿವರು ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘ಪಶ್ಚಿಮ ಘಟ್ಟ: ವರದಿಗೆ ಕಾಯುತ್ತಿರುವ ಸರ್ಕಾರ’

ನವದೆಹಲಿ (ಪಿಟಿಐ): ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳನ್ನು (ಇಎಸ್‌ಎ) ಅಧಿಕೃತವಾಗಿ ಗುರುತಿಸುವ ಕರಡು ಅಧಿಸೂಚನೆಯನ್ನು ಅಂತಿಮಗೊಳಿಸಲು ಹೊಸದಾಗಿ ರಚಿಸಲಾಗಿರುವ ಸಮಿತಿಯ ವರದಿಗಾಗಿ ಸರ್ಕಾರ ಕಾಯುತ್ತಿದೆ ಎಂದು ಪರಿಸರ ಸಚಿವ ಭೂಪೇಂದರ್ ಯಾದವ್ ಗುರುವಾರ ರಾಜ್ಯಸಭೆಗೆ ತಿಳಿಸಿದರು.



ಕೇಂದ್ರ ಪರಿಸರ ಸಚಿವಾಲಯವು ಕಸ್ತೂರಿ ರಂಗನ್ ಸಮಿತಿಯ ವರದಿ ಆಧರಿಸಿ 2014ರಲ್ಲಿ ಇಎಸ್‌ಎಗಳನ್ನು ಗುರುತಿಸುವ ಕರಡು ಅಧಿಸೂಚನೆಯನ್ನು ಪ್ರಕಟಿಸಿತ್ತಲ್ಲದೆ, ಆ ಪ್ರದೇಶಗಳ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಿತ್ತು.

ಆದರೆ ಪರಿಸರ ಸೂಕ್ಷ್ಮ ಪ್ರದೇಶಗಳ ಗುರುತಿಸುವಿಕೆಗೆ ಸಂಬಂಧಿಸಿದ ಕರಡು ಅಧಿಸೂಚನೆಯಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳಿಗೆ ಕೆಲವು ರಾಜ್ಯಗಳು ವಿರೋಧ ವ್ಯಕ್ತಪಡಿಸಿದ್ದವು. ಅದಕ್ಕಾಗಿ ಹೊಸ ಸಮಿತಿ ರಚಿಸಲಾಗಿತ್ತು.

ಮಾಧವ್ ಗಾಡ್ಗೀಳ್ ಅಧ್ಯಕ್ಷತೆಯ ಸಮಿತಿ ವರದಿ ಸಲ್ಲಿಸಿದ 12 ವರ್ಷಗಳ ಬಳಿಕ ಮತ್ತು ಕಸ್ತೂರಿ ರಂಗನ್ ನೇತೃತ್ವದ ಸಮಿತಿ ವರದಿ ಸಲ್ಲಿಸಿದ ಒಂದು ದಶಕದ ಬಳಿಕ ಸರ್ಕಾರ ಹೊಸ ಸಮಿತಿಯನ್ನು ನೇಮಿಸಿತ್ತು. ಕಳೆದ ವರ್ಷ ತನ್ನ ವರದಿ ಸಲ್ಲಿಸಬೇಕಿದ್ದ ಸಮಿತಿಯು, ಇನ್ನಷ್ಟು ಕಾಲಾವಕಾಶ ಕೇಳಿತ್ತು.

‘ಈ ಹಿಂದಿನ ಕರಡು ಅಧಿಸೂಚನೆಯಿಂದ ಆಗಿರುವ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಅರಣ್ಯ ಸಚಿವಾಲಯದ ಮಾಜಿ ಮಹಾನಿರ್ದೇಶಕ ಸಂಜಯ್ ಕುಮಾರ್ ನೇತೃತ್ವದ ಮತ್ತೊಂದು ಸಮಿತಿಯನ್ನು ನೇಮಿಸಲಾಗಿದೆ. ಹೊಸ ಸಮಿತಿಯು ತೃಪ್ತಿಕರ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂಬುದು ನನ್ನ ನಂಬಿಕೆ’ ಎಂದು ಈ ವಿಷಯದ ಕುರಿತ ಪ್ರಶ್ನೆಯೊಂದಕ್ಕೆ ಪರಿಸರ ಸಚಿವರು ಉತ್ತರಿಸಿದರು.

ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್: ಬಿಎಸಿ ಈಜುಪಟುಗಳ ಆಧಿಪತ್ಯ

ಶರಣ್, ಸಮನ್ವಿಗೆ ಡಬಲ್ ಚಿನ್ನದ ಸಂಭ್ರಮ

ಪ್ರಜಾವಾಣಿ ವಾರ್ತೆ

ಉಡುಪಿ: ಬೆಂಗಳೂರಿನ ಪಿ.ಎಂ ಈಜು ಕೇಂದ್ರದ ಶರಣ್ ಎಸ್ ಮತ್ತು ಬಸವನಗುಡಿ ಈಜು ಕೇಂದ್ರದ (ಬಿಎಸಿ) ಸಮನ್ವಿ ಇ.ಎಸ್ ಅವರು ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಶ್ರಯದ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನ ಗಳಿಸಿ ಮಿಂಚಿದರು.

ಅಜ್ಜರಕಾಡು ಈಜುಕೊಳದಲ್ಲಿ ಗುರುವಾರ ಆರಂಭಗೊಂಡ ಚಾಂಪಿಯನ್‌ಷಿಪ್‌ನ ಮೊದಲ ದಿನ ಬಿಎಸಿ ಆಧಿಪತ್ಯ ಸ್ಥಾಪಿಸಿದ್ದು, ಬೆಂಗಳೂರಿನ ನೆಟ್ಟಕಲ್ಲಪ್ಪ ಈಜುಕೇಂದ್ರ ಮತ್ತು ಡಾಲ್ಫಿನ್ ಅಕ್ವಾಟಿಕ್ಸ್‌ನ ಈಜುಪಟುಗಳು ಕೂಡ ಉತ್ತಮ ಸಾಮರ್ಥ್ಯ ತೋರಿದ್ದಾರೆ.

ಮೊದಲ ದಿನದ ಫಲಿತಾಂಶಗಳು: ಗುಂಪು-1: ಬಾಲಕರು: 50 ಮೀ ಫ್ರೀಸ್ಟೈಲ್: ಚಿಂತನ್ ಎಸ್. ಶೆಟ್ಟಿ (ಮಂಗಳಾ ಸ್ವಿಮ್ಮಿಂಗ್ ಕ್ಲಬ್)-1, ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ಡಾಲ್ಫಿನ್ ಅಕ್ವಾಟಿಕ್ಸ್)-2, ಶ್ರೇಯಸ್ ಮಂಜುನಾಥ್ (ಬಿಎಸಿ)-3. ಕಾಲ: 24.46; 100 ಮೀ ಬ್ರೆಸ್ಟ್ ಸ್ಟ್ರೋಕ್: ಶ್ರೇಯಸ್ ಮಂಜುನಾಥ್ (ಬಿಎಸಿ)-1, ಸೂರ್ಯ ಜೋಯಪ್ಪ (ಬಿಎಸಿ)-2, ವಿಶಗನ್ ಶರವಣನ್ (ಬಿಎಸಿ)-3. ಕಾಲ: 1:06.62; 200 ಮೀ ಬಟರ್‌ಫ್ಲೈ: ಸ್ವರೂಪ್ ಧನುಚೆ (ಬಿಎಸಿ)-1, ನಿರಂಜನ್ ಕಾರ್ತಿಕ್ (ಗ್ಲೋಬಲ್ ಈಜು ಕೇಂದ್ರ)-2, ಸ್ಟಿವ್ ಜೆಫ್ ಲೋಬೊ (ಡಾಲ್ಫಿನ್ ಅಕ್ವಾಟಿಕ್)-3. ಕಾಲ: 2:08.51; 400 ಮೀ ಫ್ರೀಸ್ಟೈಲ್: ಅಲೆಸ್ಟರ್ ಸ್ಯಾಮ್ಯುಯೆಲ್ ರೇಗೊ (ಡಾಲ್ಫಿನ್ ಅಕ್ವಾಟಿಕ್ಸ್)-1, ಚಿಂತನ್ ಎಸ್.ಶೆಟ್ಟಿ (ಮಂಗಳಾ ಸ್ವಿಮ್ಮಿಂಗ್ ಕ್ಲಬ್)-2, ರೇಣುಕಾಚಾರ್ಯ ಹೊಡಮನಿ (ಬಿಎಸಿ)-3. ಕಾಲ: 4:09.19;

ಬಾಲಕಿಯರು: 50 ಮೀ ಫ್ರೀಸ್ಟೈಲ್: ಇಂಚರಾ ಫಣೀಂದ್ರನಾಥ್ (ಎಲಿಟ್ ಸ್ಪೋರ್ಟ್ಸ್ ಅಕಾಡೆಮಿ)-1, ಸಾಕ್ಷಿ ದ್ಯಾಮನ್ನವರ (ಡಾಲ್ಫಿನ್ ಅಕ್ವಾಟಿಕ್ಸ್)-2, ಶ್ರುತಿ ಕೆ.ಆರ್ (ಗ್ಲೋಬಲ್ ಈಜು ಕೇಂದ್ರ)-3. ಕಾಲ: 28.69; 200 ಮೀ ಬಟರ್‌ಫ್ಲೈ: ಜನ್ಯಾ ಬಿ.ಎಸ್ (ಬಿಎಸಿ)-1, ಸಹನಾ ನಂದಕುಮಾರ್ (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್)-2, ಯೋಶಿತಾ ಜಗದೀಶನ್ (ಜೀ ಸ್ವಿಮ್ ಅಕಾಡೆಮಿ)-3. ಕಾಲ: 2:32.30; 4x50 ಮೀ ಮೆಡ್ಲೆ: ಡಾಲ್ಫಿನ್ ಅಕ್ವಾಟಿಕ್ಸ್-1, ಬಿಎಸಿ-2, ಬಿಎಸಿ 'ಬಿ'-3. ಕಾಲ 2:07.67; 1500 ಮೀ ಫ್ರೀಸ್ಟೈಲ್: ರೇಣುಕಾಚಾರ್ಯ ಹೊಡಮನಿ (ಬಿಎಸಿ)-1, ಯಜತ್ ಅಯ್ಯಪ್ಪ (ಬಿಎಸಿ)-2, ಸಾಹಿಲ್ (ಬಿಎಸಿ)-3. ಕಾಲ: 16:39.10; ಗುಂಪು-1: ಮಹಿಳೆಯರು: 100 ಮೀ ಬ್ರೆಸ್ಟ್ ಸ್ಟ್ರೋಕ್: ಸಮನ್ವಿ ಇ.ಎಸ್ (ಬಿಎಸಿ)-1, ಹಿತೈಷಿ ವಿ (ವಿಜಯನಗರ ಈಜುಕೇಂದ್ರ)-2, ಚಾರು ಹಂಸಿನಿ (ನೆಟ್ಟಕಲ್ಲಪ್ಪ ಈಜುಕೇಂದ್ರ)-3. ಕಾಲ: 1:17.16; 400 ಮೀ ಫ್ರೀಸ್ಟೈಲ್: ಸಮನ್ವಿ ಇ.ಎಸ್ (ಬಿಎಸಿ)-1, ಜನ್ಯಾ ಬಿ.ಎಸ್ (ಬಿಎಸಿ)-2, ಆಸರಾ ಸುಧೀರ್ (ಬಿಎಸಿ)-3. ಕಾಲ: 4:41.86; 1500 ಮೀ ಫ್ರೀಸ್ಟೈಲ್: ಜನ್ಯಾ ಬಿ.ಎಸ್ (ಬಿಎಸಿ)-1, ಆಸರಾ ಸುಧೀರ್ (ಬಿಎಸಿ)-2, ರಿಷಿಕಾ ಎಂ.ವಿ (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)-3. ಕಾಲ: 18:26.23;

ಗುಂಪು-2: ಬಾಲಕರು: 50 ಮೀ ಫ್ರೀ ಸ್ಟೈಲ್: ಸಾತ್ವಿಕ್ ನಾಯಕ್ ಸುಜೀರ್ (ಡಾಲ್ಫಿನ್ ಅಕ್ವಾಟಿಕ್ಸ್)-1, ನಿಶಾತ್ ಜೆ (ನೆಟ್ಟಕಲ್ಲಪ್ಪ ಈಜುಕೇಂದ್ರ)-2, ಅನಿಶ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜು ಕೇಂದ್ರ)-3, ಅಗಸ್ತ್ಯ ಮಂಜುನಾಥ್ (ಏಕಲವ್ಯ ಸ್ಪೋರ್ಟ್ಸ್ ಅಕಾಡೆಮಿ)-4. ಕಾಲ: 26.03; 100 ಮೀ ಬ್ರೆಸ್ಟ್ ಸ್ಟ್ರೋಕ್: ದಕ್ಷ್ ಮಟ್ಟ (ಬಿಎಸಿ)-1, ಡ್ಯಾನಿಯಲ್ ಪಾಲ್ (ಬಿಎಸಿ)-2, ಸಪ್ತಾಶ್ವ ಬ್ಯಾನರ್ಜಿ (ಬಿಎಸಿ)-3. ಕಾಲ: 1:10.82; 200 ಮೀ ಬಟರ್‌ಫ್ಲೈ: ಯುವನ್ ಆದಿತ್ಯ (ಬಿಎಸಿ)-1, ಧ್ರುಪದ್ ರಾಮಕೃಷ್ಣ (ಬಿಎಸಿ)-2, ಅಕ್ಷಜ್ ಪಿ (ಬಿಎಸಿ)-3. ಕಾಲ: 2:18.96; 400 ಮೀ ಫ್ರೀಸ್ಟೈಲ್: ಶರಣ್ ಎಸ್ (ಪಿಎಂಎಸ್‌ಸಿ)-1, ಸಾತ್ವಿಕ್ ನಾಯಕ್ ಸುಜೀರ್ (ಡಾಲ್ಫಿನ್ ಅಕ್ವಾಟಿಕ್ಸ್)-2, ರಿಶಿತ್ ರಂಗನ್ (ಬಿಎಸಿ)-3. ಕಾಲ: 4:18.82;

ಬಾಲಕಿಯರು: 50 ಮೀ ಫ್ರೀ ಸ್ಟೈಲ್: ತಿಸ್ಯಾ ಸೋನಾರ್ (ಪಿಎಂಎಸ್‌ಸಿ)-1, ಚರಿತಾ ಫಣೀಂದ್ರನಾಥ್ (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)-2, ತ್ರಿಶಾ ಸಿಂಧು (ಡಿಕೆವಿ ಈಜುಕೇಂದ್ರ)-3. ಕಾಲ: 28.18; 100 ಬ್ರೆಸ್ಟ್ ಸ್ಟ್ರೋಕ್: ತಿಸ್ಯ ಸೋನಾರ್ (ಪಿಎಂಎಸ್‌ಸಿ)-1, ಹಿಯಾ ಮಾಚಂಡ (ಡಾಲ್ಫಿನ್ ಅಕ್ವಾಟಿಕ್ಸ್)-2, ಗಗನಾ ಸಿ.ಎಂ (ಗ್ಲೋಬಲ್ ಈಜು ಕೇಂದ್ರ)-3. ಕಾಲ: 1:18.07; 200 ಮೀ ಬಟರ್‌ಫ್ಲೈ: ತನಿಶಾ ವಿನಯ್ (ಬಸವನಗುಡಿ ಈಜು ಕೇಂದ್ರ)-1, ಅಂಜಲಿ ಹೊಸಕೆರೆ (ಬಿಎಸಿ)-2, ಅಂಕಿತಾ ಭಾರದ್ವಾಜ್ (ಬಿಎಸಿ)-3. ಕಾಲ: 2:27.99; ಹಿತಶ್ರೀ ಎನ್ (ನೆಟ್ಟಕಲ್ಲಪ್ಪ ಈಜುಕೇಂದ್ರ)-1, ಧನ್ಯಾ ನಟರಾಜ್ ನಾಯಕ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-2, ಹಿಯಾ ಮಂಚಂಡ (ಡಾಲ್ಫಿನ್ ಅಕ್ವಾಟಿಕ್ಸ್)-3. ಕಾಲ: 4:56.42;

ಗುಂಪು-3: ಬಾಲಕರು: 50 ಮೀ ಫ್ರೀ ಸ್ಟೈಲ್: ನಿಖಿಲ್ ತೇಜ್ ರೆಡ್ಡಿ (ಬಿಎಸಿ)-1, ರೋನಿತ್ ಅರುಣ್ ಕುಮಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-2, ವ್ಯಾಸ ವಿಜಯ್ (ಡಿಕೆವಿ ಈಜು ಕೇಂದ್ರ)-3. ಕಾಲ: 30.03; 100 ಮೀ ಬಟರ್‌ಫ್ಲೈ: ಲೋಹಿತಾಶ್ವ ನಾಗೇಶ್ (ಡಿಕೆವಿ ಈಜು ಕೇಂದ್ರ)-1, ಸರ್ವೇಶ್ ರಾಜ್ ಕೆ (ಬಿಎಸಿ)-2, ರಕ್ಷಿತ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜು ಕೇಂದ್ರ)-3. ಕಾಲ: 1:12.70; 100 ಮೀ ಬ್ರೆಸ್ಟ್ ಸ್ಟ್ರೋಕ್: ರಾಮ್ ಪ್ರಕಾಶ್ (ಗ್ಲೋಬಲ್ ಈಜುಕೇಂದ್ರ)-1, ಮಹಮ್ಮದ್ ಅರ್ಮಾನ್ ಸಮೀರ್ (ಬೆಂಗಳೂರು ಈಜು ಅಧ್ಯಯನ ಕೇಂದ್ರ)-2, ಅವ್ಯಕ್ತ ಮೋಹನ್ (ಬಿಎಸಿ)-3. ಕಾಲ: 1:25.12; 400 ಮೀ ಫ್ರೀಸ್ಟೈಲ್: ರೋನಿತ್ ಅರುಣ್ ಕುಮಾರ್ (ಬೆಂಗಳೂರು ಸ್ವಿಮಿಂಗ್ ಅಕಾಡೆಮಿ)-1, ಆಶ್ರಯ್ ಕಿಣಿ (ಪಿಎಂಎಸ್‌ಸಿ, ಅತಿಥಿ)-2, ಸೋಮೇಶ್ವರ್ (ಗೋಲ್ಡನ್ ಸ್ಪೋರ್ಟ್ಸ್ ಕ್ಲಬ್)-3. ಕಾಲ: 4:55.01;

ಬಾಲಕಿಯರು: 50 ಮೀ ಸ್ಟೈಲ್: ದಿಶಾ ಹೊಂಡಿ (ಅಬಾ ಕ್ಲಬ್)-1, ಶ್ರೇಯಾ ಸುರೇಶ್ ಪಾಟೀಲ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-2, ಮಾನ್ಯ ವಾಧ್ವಾ (ಪಿಎಂ ಎಸ್‌ಸಿ)-3. 31.35; 100 ಮೀ ಬ್ರೆಸ್ಟ್ ಸ್ಟ್ರೋಕ್: ಶ್ರೇಯಾ ಸುರೇಶ್ ಪೂಜಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-1. ಹಂಸಿಕಾ ಪಿ. ರೆಡ್ಡಿ (ನೆಟ್ಟಕಲ್ಲಪ್ಪ ಈಜುಕೇಂದ್ರ)-2, ಮಾನ್ಯ ವಾಧ್ವ (ಪಿಎಂ ಈಜುಕೇಂದ್ರ-3. ಕಾಲ: 1:28.85; 100 ಮೀ ಬಟರ್‌ಫ್ಲೈ: ರಿತಿಕಾ ಗೋಕುಲ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-1, ದಿವಾಕರ್ ಸುವರ್ಣ (ಡಾಲ್ಫಿನ್ ಅಕ್ವಾಟಿಕ್ಸ್)-2, ರಿಷ್ಮಿಕಾ ಆರ್ (ಬಿಎಸಿ)-3. ಕಾಲ: 1:14.98; 400 ಮೀ ಫ್ರೀಸ್ಟೈಲ್: ಸಮನ್ವಿ ವಿ (ಡಿಕೆವಿ ಈಜುಕೇಂದ್ರ)-1, ಸುಮೇಧ ವಿ (ಡಿಕೆವಿ ಈಜುಕೇಂದ್ರ)-2, ಸ್ತುತಿ ಸಿಂಗ್ (ಬೆಂಗಳೂರು ಸ್ವಿಮಿಂಗ್ ಅಕಾಡೆಮಿ)-3. ಕಾಲ: 5:07.46; 4x50 ಮೀ ಮೆಡ್ಲೆ: ಡಿಕೆವಿ ಈಜುಕೇಂದ್ರ-1, ಬಿಎಸಿ-2, ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ-3. ಕಾಲ: 2:27.28;

ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್

ಸೆಮಿಫೈನಲ್‌ಗೆ ಜಪಾನ್ ಕ್ಲಬ್

ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನ ಲೀಗ್ ಪಂದ್ಯದಲ್ಲಿ ಗುರುವಾರ ಬ್ರೆಜಿಲ್‌ನ ಸಡಾ ಕ್ರುಝೀರೊ ವೊಲಿ ಕ್ಲಬ್‌ನ ಆಟಗಾರ ವಾಲೇಸ್ ಡಿಸೋಜಾ ಚೆಂಡನ್ನು ಸ್ಮ್ಯಾಷ್ ಮಾಡಿದಾಗ ಎದುರಾಳಿ ಸುಂಟೋರಿ ಸನ್‌ಬರ್ಡ್ಸ್ ಕ್ಲಬ್‌ನ ಕೆ.ಫುಜಿನಾಕಾ ಹಾಗೂ ಸಟೊ ಬ್ಲಾಕ್ ಮಾಡಲು ಮುಂದಾಗಿದ್ದು ಹೀಗೆ.
ಪ್ರಜಾವಾಣಿ ಚಿತ್ರ –ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ನಾಲ್ಕು ಬಾರಿಯ ಚಾಂಪಿಯನ್ ಬ್ರೆಜಿಲ್‌ನ ಸಡಾ ಕ್ರುಝೀರೊ ವೋಲಿ ಕ್ಲಬ್ ಎದುರು ಹೋರಾಟ ತೋರಿ ಸೋತರೂ, ಜಪಾನ್‌ನ ಸುಂಟೋರಿ ಸನ್‌ಬರ್ಡ್ಸ್ ತಂಡ, ಪುರುಷರ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿದ ಮೊದಲ ತಂಡ ಎನಿಸಿತು.

ಗುರುವಾರ ನಡೆದ ಈ ಪಂದ್ಯದಲ್ಲಿ ಬ್ರೆಜಿಲ್‌ನ ಕ್ಲಬ್ 3–2 ರಿಂದ ಜಯಗಳಿಸಿತು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಬ್ರೆಜಿಲ್‌ನ ಕ್ಲಬ್ 25–21, 31–29, 28–30, 22–25, 15–12 ರಿಂದ ಜಪಾನ್‌ನ ಕ್ಲಬ್ ಮೇಲೆ ಜಯಗಳಿಸಿತು.

ಬುಧವಾರ ಮೊದಲ ಪಂದ್ಯದಲ್ಲಿ ಟರ್ಕಿಯ ಹಾಕ್‌ಬ್ಯಾಂಕ್ ಸ್ಪೋರ್ಟ್ಸ್ ಕ್ಲಬ್ ಮೇಲೆ ನೇರ ಸೆಟ್‌ಗಳಿಂದ ಗೆದ್ದು ಪೂರ್ಣ ಮೂರು ಪಾಯಿಂಟ್ ಗಳಿಸಿದ್ದ ಸನ್‌ಬರ್ಡ್ಸ್ ತಂಡ ಇಂದು ಸೋತರೂ ಒಂದು ಪಾಯಿಂಟ್ ಪಡೆಯುವಲ್ಲಿ ಯಶಸ್ವಿಯಾಯಿತು. ಟೂರ್ನಿಯ ನಿಯಮಾವಳಿಯಂತೆ ಪಂದ್ಯ 3–2 ಸೆಟ್‌ಗಳಲ್ಲಿ ಇತ್ಯರ್ಥಗೊಂಡರೆ ಗೆದ್ದ ತಂಡ ಮೂರು, ಸೋತ ತಂಡ ಹೋರಾಟಕ್ಕಾಗಿ ಒಂದು ಪಾಯಿಂಟ್ ಪಡೆಯುತ್ತದೆ. ಸಕಾಲದಲ್ಲಿ ಸಾಂಘಿಕ ಪ್ರದರ್ಶನ ನೀಡಿದ ಬ್ರೆಜಿಲ್‌ನ ತಂಡ ಗುರುವಾರದ ಪಂದ್ಯದಲ್ಲಿ ಗೆಲುವಿಗಾಗಿ ಮೂರು ಅಮೂಲ್ಯ ಪಾಯಿಂಟ್ ಪಡೆದಿದ್ದು, ಸೆಮಿಫೈನಲ್ ರೇಸ್‌ನಲ್ಲಿ ಉಳಿದುಕೊಂಡಿದೆ.

ನಾಲ್ಕರ ಘಟ್ಟ ತಲುಪಬೇಕಾದರೆ, ಬ್ರೆಜಿಲ್‌ನ ಕ್ಲಬ್ ಶುಕ್ರವಾರ ಟರ್ಕಿಯ ಹಾಕ್‌ಬ್ಯಾಂಕ್ ಸ್ಪೋರ್ಟ್ಸ್ ಕ್ಲಬ್ ಮೇಲೆ ಗೆಲ್ಲುವುದು ಅನಿವಾರ್ಯವಾಗಿದೆ.

ಶುಕ್ರವಾರ, ಭಾರತದ ಅಹಮದಾಬಾದ್ ಡಿಫೆಂಡರ್ಸ್ ತಂಡ 'ಎ' ಗುಂಪಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್, ಇಟಲಿಯ ಸರ್ ಸಿಕೊಮಾ ಪೆರುಗಿಯಾ ತಂಡವನ್ನು ಎದುರಿಸಲಿದೆ.

ದಿನದ ಎರಡನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್, ಇಟಲಿಯ ಸಿರ್ ಸಿಕೊಮಾ ಪೆರುಗಿಯಾ ತಂಡ 'ಎ' ಗುಂಪಿನಲ್ಲಿ 25-18, 26-24, 25-22 ರಿಂದ ಬ್ರೆಜಿಲ್‌ನ ಇತಾಂಬೆ ಮಿನ್ಹಾಸ್ ಕ್ಲಬ್ ಮೇಲೆ ಜಯಗಳಿಸಿತು.

ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಕಾರ್ತಿಕೇಯ ಗುಲ್ಷನ್

ಗುವಾಹಟಿ (ಪಿಟಿಐ): ಭಾರತದ ಕಾರ್ತಿಕೇಯ ಗುಲ್ಷನ್ ಕುಮಾರ್ ಇಲ್ಲಿ ನಡೆಯುತ್ತಿರುವ ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಸಿಂಗಲ್ಸ್ ಪಂದ್ಯದಲ್ಲಿ 23 ವರ್ಷದ ಕಾರ್ತಿಕೇಯ 21–18, 21–15ರಿಂದ ಐದನೇ ಶ್ರೇಯಾಂಕದ, ಡೆನ್ಮಾರ್ಕ್ ಆಟಗಾರ ಮ್ಯಾಡ್ಸ್ ಕ್ರಿಸ್ಟೋಫರ್ಸನ್ ವಿರುದ್ಧ ಗೆದ್ದರು. 36 ನಿಮಿಷ ನಡೆದ ಹಣಾಹಣಿಯ ಮೊದಲ ಗೇಮ್‌ನಲ್ಲಿ ಮಾತ್ರ ಡೆನ್ಮಾರ್ಕ್ ಆಟಗಾರ ಹೆಚ್ಚು ಪ್ರತಿರೋಧ ತೋರಿಸಿದರು.

ಎಂಟರ ಘಟ್ಟದಲ್ಲಿ ಅವರು ಮಲೇಷ್ಯಾದ ಚೀಮ್ ಜೂನ್ ವೀ ವಿರುದ್ಧ ಸೆಣಸುವರು. ಚೀಮ್ ಜೂನ್ 21–15, 21–15ರಿಂದ ಶುಭಂಕರ್ ಡೇ ವಿರುದ್ಧ ಗೆದ್ದು ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಸಿಂಗಲ್ಸ್ ವಿಭಾಗದಲ್ಲಿ ಗುಲ್ಷನ್ ಬಿಟ್ಟರೆ ಭಾರತದ ಇನ್ನುಳಿದ ಆಟಗಾರರು ಎಂಟರ ಘಟ್ಟಕ್ಕೆ ಪ್ರವೇಶಿಸಲಿಲ್ಲ. ರಾಷ್ಟ್ರೀಯ ಚಾಂಪಿಯನ್ ಮಿಥುನ್ ಮಂಜುನಾಥ, ಸಮೀರ್ ವರ್ಮಾ ಮತ್ತು ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಕಂಚಿನ ಪದಕ ವಿಜೇತ ಆಯುಷ್ ಶೆಟ್ಟಿ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಅಚ್ಯುತಾದಿತ್ಯ ಮತ್ತು ವೆಂಕಟ ಹರ್ಷವರ್ಧನ ಜೋಡಿಯು 24–22, 23–21ರಿಂದ ನಾಲ್ಕನೇ ಶ್ರೇಯಾಂಕದ ಜೋಡಿ, ತೈಪೆಯ ವೀ ಚುನ್ ವೀ ಮತ್ತು ವು ಗುವಾನ್ ಶುನ್ ವಿರುದ್ಧ ಗೆದ್ದರು.

ಮಹಿಳೆಯರ ಡಬಲ್ಸ್‌ನಲ್ಲ ಎರಡನೇ ಶ್ರೇಯಾಂಕದ ಅಶ್ವಿನಿ ಪೊನ್ನಪ್ಪ ಮತ್ತು ತನೀಷಾ ಕ್ರೆಸ್ಟೊ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಭಾರತದ ಜೋಡಿಯು 21–13, 21–8ರಲ್ಲಿ ಹೂಡಾ ಮತ್ತು ಪಲಕ್ ಅರೋರಾ ವಿರುದ್ಧ ಜಯಿಸಿತು.

'ಟೈ' ಪಂದ್ಯದಲ್ಲಿ ಜೈಪುರ– ಬೆಂಗಾಲ್

ಅಹಮದಾಬಾದ್: ಬೆಂಗಾಲ್ ವಾರಿಯರ್ಸ್ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ತಂಡಗಳ ನಡುವೆ ಪ್ರೊ ಕಬಡ್ಡಿ ಲೀಗ್ ಪಂದ್ಯ ಗುರುವಾರ 28–28ರಲ್ಲಿ ಸಮಬಲಗೊಂಡಿತು. ಇದು ಹತ್ತನೇ ಆವೃತ್ತಿಯಲ್ಲಿ 'ಟೈ' ಆದ ಮೊದಲ ಪಂದ್ಯ ಎನಿಸಿತು.

ಟ್ರಾನ್ಸ್ ಸ್ಟೇಡಿಯಾದಲ್ಲಿ ನಡೆದ ಪಂದ್ಯದಲ್ಲಿ ಜೈಪುರ ತಂಡದ ಪರ ರೈಡರ್ ಭವಾನಿ ರಜಪೂತ್ 10 ರೈಡಿಂಗ್ ಪಾಯಿಂಟ್‌ನೊಡನೆ ಸೂಪರ್ ಟೆನ್ ಸಾಧಿಸಿದರು. ಆರಂಭದಲ್ಲಿ ಜೈಪುರ ತಂಡವೇ ಮೇಲುಗೈ ಪಡೆಯುವಂತೆ ಕಂಡಿತು. ಆದರೆ ಶ್ರೀಕಾಂತ್ ಜಾಧವ್ ಅವರ 'ಡು ಆರ್ ಡೈ' ರೈಡ್‌ನಲ್ಲಿ ಪಾಯಿಂಟ್ ಗಳಿಸಿದ ನಂತರ ವಾರಿಯರ್ಸ್ ತಂಡ ಸಮಬಲದ ಹೋರಾಟ ನೀಡತೊಡಗಿತು.

ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಬೆಂಗಾಲ್ ವಾರಿಯರ್ ನಡುವಿನ ಪಂದ್ಯದ ದೃಶ್ಯ.

ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೆಟ್ಸ್ ತಂಡ 33–30 ಪಾಯಿಂಟ್‌ಗಳಿಂದ ಗುಜರಾತ್ ಜೈಂಟ್ಸ್ ತಂಡದ ಗೆಲುವಿನ ಓಟಕ್ಕೆ ವಿರಾಮ ಹಾಕಿತು. ಗುಜರಾತ್‌ಗೆ ಇದು ಲೀಗ್‌ನ ಮೊದಲ ಸೋಲು. ಆತಿಥೇಯ ತಂಡ ಮೊದಲ ಮೂರು ಪಂದ್ಯಗಳನ್ನು ಗೆದ್ದುಕೊಂಡಿತ್ತು. ಗುಜರಾತ್ ಪರ ರಾಕೇಶ್ 11 ಪಾಯಿಂಟ್ಸ್ ಗಳಿಸಿದರು. ಸಾಂಘಿಕ ಆಟ ಪ್ರದರ್ಶಿಸಿದ ಪಟ್ನಾ ಪರ ಸುಧಾಕರ್ ಆರು ಪಾಯಿಂಟ್ಸ್ ಗಳಿಸಿದರು. ಅಂಕಿತ್ ಮತ್ತು ನೀರಜ್ ಕುಮಾರ್ ತಲಾ ನಾಲ್ಕು ಟ್ಯಾಕಲ್ ಪಾಯಿಂಟ್ಸ್ ಸಂಪಾದಿಸಿದರು.

ಬೆಂಗಳೂರು ಬುಲ್ ಪಂದ್ಯಕ್ಕೆ ಸುದೀಪ್

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಪ್ರೊ ಕಬಡ್ಡಿ ಲೀಗ್‌ನಲ್ಲಿ ಆತಿಥೇಯ ಬೆಂಗಳೂರು ಬುಲ್ಸ್ ಮತ್ತು ದಬಾಂಗ್ ಡೆಲ್ಲಿ ನಡುವೆ ಸೆಣಸಾಟ ನಡೆಯಲಿದೆ. ಕನ್ನಡಿಗರ ನೆಚ್ಚಿನ ತಂಡಕ್ಕೆ ಬೆಂಬಲ ಸೂಚಿಸಲು ಚಿತ್ರನಟ ಕಿಚ್ಚ ಸುದೀಪ್ ಹಾಜರಾಗಲಿದ್ದಾರೆ.

ಸುದೀಪ್ ಅವರು ಪಂದ್ಯ ವೀಕ್ಷಣೆಗೆ ಬರುತ್ತಿರುವ ವಿಚಾರವನ್ನು ಸ್ಟಾರ್‌ಸ್ಪೋರ್ಟ್ಸ್ 'ಎಕ್ಸ್' ಖಾತೆಯಲ್ಲಿ ಬರೆದಿದೆ.

ಬುಲ್ಸ್ ಜೆರ್ಸಿಯಲ್ಲಿರುವ ಸುದೀಪ್ ಫೋಟೊ ಹಂಚಿಕೊಂಡು 'ಅಖಾಡಕ್ಕೆ ಕಿಚ್ಚೇರಿಸಲು ಖುದ್ದು ಕಿಚ್ಚನೇ ಬರಲಿದ್ದಾರೆ' ಎಂದು ಬರೆದುಕೊಂಡಿದೆ.

ಕರ್ನಾಟಕ ತಂಡದಲ್ಲಿ 78 ಅಥ್ಲೀಟ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯಲ್ಲಿ ಇದೇ 10ರಿಂದ 17ರವರೆಗೆ ನಡೆಯಲಿರುವ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್‌ನಲ್ಲಿ 78 ಆಟಗಾರರು ಇರುವ ಕರ್ನಾಟಕ ತಂಡವು ಸ್ಪರ್ಧಿಸಲಿದೆ.

ಒಂದು ವಾರ ನಡೆಯುವ ಈ ಕ್ರೀಡಾಕೂಟದಲ್ಲಿ ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಪವರ್‌ಲಿಫ್ಟಿಂಗ್, ಸಿ.ಪಿ. ಫುಟ್‌ಬಾಲ್, ಶೂಟಿಂಗ್ ಸ್ಪರ್ಧೆಗಳು ಮೂರು ತಾಣಗಳಲ್ಲಿ ನಡೆಯಲಿವೆ.

ಕರ್ನಾಟಕ ತಂಡದಲ್ಲಿ 41 ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳಿದ್ದಾರೆ. ಬ್ಯಾಡ್ಮಿಂಟನ್ (16), ಶೂಟಿಂಗ್ (5), ಟೇಬಲ್ ಟೆನಿಸ್ (12) ಹಾಗೂ ಪವರ್‌ಲಿಫ್ಟಿಂಗ್ (4) ಸ್ಪರ್ಧಿಗಳು ಇದ್ದಾರೆ.

ದೃಷ್ಟಿಮಾಂದ್ಯವುಳ್ಳ ಅಥ್ಲೀಟ್ ರಕ್ಷಿತಾ ರಾಜು ಅವರು ತಂಡದಲ್ಲಿದ್ದಾರೆ. ಅವರು ಈಚೆಗೆ ಮುಗಿದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಪದಕ ಜಯಿಸಿದ್ದರು.

'ಇಂತಹ ಕೂಟಗಳು ದೇಶದ ಮೂಲೆ ಮೂಲೆಗೂ ತಲುಪಬೇಕು. ಅದರಿಂದ ಅಂಗವಿಕಲ ಕ್ರೀಡಾಪಟುಗಳಿಗೆ ಅವಕಾಶಗಳು ಸಿಗುತ್ತವೆ. ಅವರ ಜೀವನಕ್ಕೂ ಹೊಸ ಪ್ರೇರಣೆ ಸಿಗುತ್ತದೆ' ಎಂದು ರಕ್ಷಿತಾ ಅವರು ಹೇಳಿದರು.

ಗುರುವಾರ ಕಂಠೀರವ ಕ್ರೀಡಾಂಗಣದಲ್ಲಿ ಭಾರತ ಕ್ರೀಡಾ ಪ್ರಾಧಿಕಾರ ಮತ್ತು ಕರ್ನಾಟಕ ಪ್ಯಾರಾ ಗೇಮ್ಸ್ ಸಂಸ್ಥೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಂಡವನ್ನು ಬೀಳ್ಕೊಡಲಾಯಿತು.

ಷೇರುಪೇಟೆ ವಹಿವಾಟು

132



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,937
ಇಂದಿನ ಅಂತ್ಯ	20,901
▼	36
ದಿನದ ಗರಿಷ್ಠ	20,850

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹552

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹915 (915)
ಸೂರ್ಯಕಾಂತಿ (ರಿಫೈನ್ಡ್)	₹920 (920)
ಪಾಮೋಲಿನ್	₹825 (827)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹269-466
ದ್ವಿತಳಿ (ಬಿ.ವಿ)	₹288-623

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.36
£ ಪೌಂಡ್	104.87
€ ಯುರೊ	89.82
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8250-8250
ತಿಪಟೂರು	₹7300-8600
ತುರುವೇಕೆರೆ	₹7900-7900

ವರದಕ್ಷಿಣೆ: ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

1ಕೆ.ಜಿ.ಚಿನ್ನ, 15 ಎಕರೆ ಭೂಮಿ, ವಿಲಾಸಿ ಕಾರಿಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ, 26 ವರ್ಷದ ಡಾ.ಶಹ್ನಾ, ಗುರುವಾರ ಸ್ವಯಂ ಆಗಿ ಅಧಿಕ ಪ್ರಮಾಣದಲ್ಲಿ ಅರಿವಳಿಕೆ ಚುಚ್ಚುಮದ್ದು ಪಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಹಪಾಠಿ ವಿದ್ಯಾರ್ಥಿ ಮತ್ತು ಆತನ ಕುಟುಂಬದವರು ಅಧಿಕ ಪ್ರಮಾಣದ ವರದಕ್ಷಿಣೆಗಾಗಿ ಬೇಡಿಕೆಯಿಟ್ಟು, ಬಳಿಕ ಮದುವೆಯ ಪ್ರಸ್ತಾಪವನ್ನು ತಿರಸ್ಕರಿಸಿದ್ದರು. ಇದರಿಂದ ತೀವ್ರ ನೊಂದು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವರದಕ್ಷಿಣೆಗೆ ಬೇಡಿಕೆ ಆರೋಪದಡಿ ಸಹಪಾಠಿ ವಿದ್ಯಾರ್ಥಿ ಡಾ.ರುವೈಸ್ ಇ.ಎರನ್ನು ಪೊಲೀಸರು ಬಂಧಿಸಿದ್ದಾರೆ. ಮೂಳೆರೋಗ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಇವರನ್ನು ಸದ್ಯ ಅಮಾನತು ಮಾಡಲಾಗಿದೆ. ರುವೈಸ್ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿದ್ದರು.

ಆತ್ಮಹತ್ಯೆಗೆ ಮುನ್ನ ಡಾ.ಶಹ್ನಾ ಅವರು ಸಹೋದರನಿಗೆ ಪತ್ರ ಬರೆದಿದ್ದು, ಡಾ.ರುವೈಸ್ ವರದಕ್ಷಿಣೆಗೆ ಬೇಡಿಕೆ ಇಟ್ಟಿದ್ದನ್ನು ಉಲ್ಲೇಖಿಸಿದ್ದಾರೆ. ಅದನ್ನೇ ಪ್ರಾಥಮಿಕ ಸಾಕ್ಷ್ಯವಾಗಿ ಪರಿಗಣಿಸಲಾಗಿದೆ. ಅಲ್ಲದೆ, ಡಾ.ಶಹ್ನಾ– ರುವೈಸ್ ನಡುವಿನ ಮೊಬೈಲ್ ಚಾಟ್ ವಿವರಗಳನ್ನೂ ಪಡೆಯಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರುವೈಸ್ ವಿರುದ್ಧ ವರದಕ್ಷಿಣೆ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸುವ ಸಂಭವವಿದೆ.

ಈ ಇಬ್ಬರೂ ಕೆಲದಿನಗಳಿಂದ ಆತ್ಮೀಯರಾಗಿದ್ದು, ಮದುವೆಯ ಪ್ರಸ್ತಾಪ ಏರ್ಪಟ್ಟಿತ್ತು. ಆದರೆ, ಕುಟುಂಬದವರ ಬೇಡಿಕೆಯಂತೆ ಅಧಿಕ ಮೊತ್ತದ ವರದಕ್ಷಿಣೆ ನೀಡಲು ಶಹ್ನಾ ಕುಟುಂಬದವರು ಒಪ್ಪಲಿಲ್ಲ ಎಂದು ರುವೈಸ್ ಕೊನೆಗಳಿಗೆಯಲ್ಲಿ ಮದುವೆಯಾಗಲು ನಿರಾಕರಿಸಿದ್ದರು.

ಸುಮಾರು 1 ಕೆ.ಜಿ ಬಂಗಾರ, 15 ಎಕರೆ ಭೂಮಿ ಮತ್ತು ವಿಲಾಸಿ ಕಾರನ್ನು ವರದಕ್ಷಿಣೆಯಾಗಿ ಕೊಡುವಂತೆ ಬೇಡಿಕೆ ಇಡಲಾಗಿದೆ ಎನ್ನಲಾಗಿದೆ. ಮದುವೆಗೆ ನಿರಾಕರಣೆ ಬಳಿಕ ಡಾ.ಶಹ್ನಾ ಖಿನ್ನತೆಗೆ ಒಳಗಾಗಿದ್ದಳು ಎಂದು ಆಕೆಯ ಸಹೋದರ ಪ್ರತಿಕ್ರಿಯಿಸಿದ್ದಾರೆ.

ಡಾ. ಸಮಿರ್ ಶಾ ಬಿಬಿಸಿಯ ನೂತನ ಅಧ್ಯಕ್ಷರಾಗಿ ಆಯ್ಕೆ

ಲಂಡನ್ (ಪಿಟಿಐ): ಭಾರತ ಮೂಲದ ಡಾ.ಸಮೀರ್ ಶಾ ಅವರನ್ನು ಬ್ರಿಟನ್ ಸರ್ಕಾರವು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ (ಬಿಬಿಸಿ) ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ.

ಮಾಧ್ಯಮ ಕ್ಷೇತ್ರದಲ್ಲಿ 40 ವರ್ಷಗಳ ಅನುಭವ ಹೊಂದಿರುವ 71 ವರ್ಷದ ಶಾ ಅವರು, ರಿಚರ್ಡ್ ಶಾರ್ಪ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಜೊತೆಗೆ ಸಂವಹನ ನಡೆಸಿರುವುದು ವಿವಾದಕ್ಕೀಡಾದ ಬಳಿಕ ರಿಚರ್ಡ್ ಅವರು ರಾಜೀನಾಮೆ ನೀಡಿದ್ದರು.

ಶಾ ಅವರು 2019ರಲ್ಲಿ ರಾಣಿ ಎರಡನೇ ಎಲಿಜಬೆತ್ ಅವರ ಕಮಾಂಡರ್ ಆಫ್ ದಿ ಮೋಸ್ಟ್ ಎಕ್ಸಲೆಂಟ್ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್(ಸಿಬಿಇ) ಗೌರವಕ್ಕೆ ಪಾತ್ರರಾಗಿದ್ದರು.

'ಹೆಮ್ಮೆಯ ಕ್ಷಣ': 'ಸಮೀರ್ ಶಾ ಅವರ ಸಾಧನೆಯು ನಮಗೆ ಹೆಮ್ಮೆ ತಂದಿದೆ' ಎಂದು ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿರುವ ಅವರ ಸಂಬಂಧಿಕರು ತಿಳಿಸಿದ್ದಾರೆ.

'ಸಮೀರ್ ಅವರು 1952 ರಲ್ಲಿ ಛತ್ರಪತಿ ಸಂಭಾಜಿನಗರದಲ್ಲಿ ಜನಿಸಿದ್ದರು. ಅವರು ವರ್ಷಕೊಮ್ಮೆ ಇಲ್ಲಿಗೆ ಭೇಟಿ ನೀಡುತ್ತಾರೆ' ಎಂದು ಸಮೀರ್ ಅವರ ಸೋದರ ಸಂಬಂಧಿ ಸುಜಾತಾ ಕಾಂಗೊ ಹೇಳಿದ್ದಾರೆ.

ಲಾಭ ಗಳಿಕೆಗೆ ಹೂಡಿಕೆದಾರರು ಗಮನ • ಮಾರುಕಟ್ಟೆಗಳಲ್ಲಿ ತಗ್ಗಿದ ವಹಿವಾಟು

ಸೂಚ್ಯಂಕಗಳ ದಾಖಲೆಯ ಓಟಕ್ಕೆ ತಡೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಗಳಲ್ಲಿ ಸೂಚ್ಯಂಕಗಳ ಏಳು ದಿನಗಳ ಓಟಕ್ಕೆ ಗುರುವಾರ ತಡೆ ಬಿದ್ದಿತು. ಹೂಡಿಕೆದಾರರು ಲಾಭ ಗಳಿಕೆಗೆ ಮುಂದಾಗಿದ್ದು ಮತ್ತು ಏಷ್ಯಾದ ಮಾರುಕಟ್ಟೆಗಳಲ್ಲಿನ ಇಳಿಮುಖ ಚಲನೆಯು ಭಾರತದಲ್ಲಿ ನಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿತು.

ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದರಿಂದ ಸೋಮವಾರದಿಂದ ಬುಧವಾರದವರೆಗೆ ಷೇರುಪೇಟೆಗಳಲ್ಲಿ ಗೂಳಿ ಓಟ ಜೋರಾಗಿತ್ತು. ಮೂರು ದಿನವೂ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿಯೇ ವಹಿವಾಟು ಅಂತ್ಯಗೊಂಡಿತ್ತು. ಆದರೆ, ಗುರುವಾರ ಮಾರಾಟದ ಒತ್ತಡಕ್ಕೆ ಒಳಗಾಗಿ ಸೂಚ್ಯಂಕಗಳು ಇಳಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 132 ಅಂಶ ಇಳಿಕೆ ಕಂಡು 69,521 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇನ) ನಿಫ್ಟಿ 36 ಅಂಶ ಇಳಿಕೆ ಕಂಡು 20,901 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಹಣಕಾಸು ನೀತಿಯ ನಿರ್ಧಾರಗಳನ್ನು ಪ್ರಕಟಿಸಲಿದೆ. ಹೀಗಾಗಿ ಹೂಡಿಕೆದಾರರು ಕಾದು ನೋಡುವ ತಂತ್ರ ಅನುಸರಿಸಿದ್ದು ವಹಿವಾಟು ಇಳಿಕೆಗೆ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ವಲಯವಾರು ಎಫ್‌ಎಂಸಿಜಿ ಶೇ 0.85, ಲೋಹ ಶೇ 0.75 ಮತ್ತು ಟೆಕ್ ಶೇ 0.38ರಷ್ಟು ಇಳಿಕೆ ಕಂಡಿತು. ಯುಟಿಲಿಟಿ ಶೇ 3.16 ಮತ್ತು ವಿದ್ಯುತ್ ಶೇ 2.67ರಷ್ಟು ಗಳಿಕೆ ಕಂಡಿತು.

ಏಷ್ಯಾದ ಮಾರುಕಟ್ಟೆಗಳಲ್ಲಿ ನಿಕೇಯ್ ಶೇ 1.79, ಹಾಂಗ್‌ಕಾಂಗ್ ಮತ್ತು ಶಾಂಘೈ ಕಾಂಪೋಸಿಟ್ ಇಳಿಕೆ ಕಂಡಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 1.01ರಷ್ಟು ಏರಿಕೆ ಕಂಡು ಬ್ಯಾರಲ್‌ಗೆ 75.05 ಡಾಲರ್‌ಗೆ ತಲುಪಿತು.

ತಗ್ಗಿದ ಪೇಟಿಎಂ ಷೇರು ಮೌಲ್ಯ: ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್ ಷೇರು ಗುರುವಾರದ ವಹಿವಾಟಿನಲ್ಲಿ ಶೆ 19ರವರೆಗೆ ಇಳಿಕೆ ಕಂಡಿತು.

₹50 ಸಾವಿರಕ್ಕಿಂತ ಕಡಿಮೆ ಮೊತ್ತದ ಸಾಲ ನೀಡಿಕೆಯನ್ನು ಕಡಿಮೆ ಮಾಡುವುದಾಗಿ ಮತ್ತು ಗರಿಷ್ಠ ಮೊತ್ತದ ಸಾಲ ನೀಡಿಕೆಗೆ ಹೆಚ್ಚಿನ ಗಮನ ಹರಿಸುವುದಾಗಿ ಕಂಪನಿ ಹೇಳಿಕೆ ನೀಡಿದೆ. ಇದು ಕಂಪನಿಯ ಷೇರು ಮೌಲ್ಯ ಇಳಿಕೆ ಕಾಣುವಂತೆ ಮಾಡಿದೆ.

ಬಿಎಸ್‌ಇನಲ್ಲಿ ಷೇರು ಮೌಲ್ಯ ಶೇ 18.69ರಷ್ಟು ಇಳಿಕೆ ಕಂಡು ಪ್ರತಿ ಷೇರಿನ ಬೆಲೆ ₹661.30ಕ್ಕೆ ಇಳಿಕೆ ಕಂಡಿತು.

ಎಲ್‌ಐಸಿ ಮೌಲ್ಯ ₹4.96 ಲಕ್ಷ ಕೋಟಿ

ನವದೆಹಲಿ: ಜೀವ ವಿಮಾ ನಿಗಮದ (ಎಲ್‌ಐಸಿ) ಮಾರುಕಟ್ಟೆ ಬಂಡವಾಳ ಮೌಲ್ಯವು ಗುರುವಾರದ ವಹಿವಾಟಿನ ಒಂದು ಹಂತದಲ್ಲಿ ಮತ್ತೆ ₹5 ಲಕ್ಷ ಕೋಟಿಗೆ ಏರಿಕೆ ಕಂಡಿತ್ತು. ವಹಿವಾಟಿನ ಅಂತ್ಯದ ವೇಳೆಗೆ ₹4.96 ಲಕ್ಷ ಕೋಟಿಗೆ ತಗ್ಗಿತು.

ಕಂಪನಿಯು ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡುತ್ತಿರುವುದೇ ಮಾರುಕಟ್ಟೆ ಮೌಲ್ಯ ಹೆಚ್ಚಾಗಲು ಕಾರಣ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ. ಬಿಎಸ್‌ಇನಲ್ಲಿ ಷೇರು ಮೌಲ್ಯ ಶೇ 5.34ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹785.50ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 5.25ರಷ್ಟು ಏರಿಕೆ ಕಂಡು ₹785.15ಕ್ಕೆ ತಲುಪಿತು. ದಿನದ ವಹಿವಾಟಿನಲ್ಲಿ ಎಲ್‌ಐಸಿ ಷೇರು ಮೌಲ್ಯವು ಎನ್‌ಎಸ್‌ಇನಲ್ಲಿ 52 ವಾರಗಳ ಗರಿಷ್ಠ ಮಟ್ಟವಾದ ₹800ಕ್ಕೆ ತಲುಪಿತ್ತು. ಬಿಎಸ್‌ಇನಿ ₹799.90ರಷ್ಟು ಆಗಿತ್ತು.

ಸಂಕ್ಷಿಪ್ತ ಸುದ್ದಿ

ಜನವರಿಯಿಂದ ಹುಂಡೈ ವಾಹನಗಳ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಯು ಜನವರಿ 1ರಿಂದ ಜಾರಿಗೆ ಬರುವಂತೆ ತನ್ನ ವಾಹನಗಳ ಬೆಲೆಯನ್ನು ಹೆಚ್ಚಳ ಮಾಡುವುದಾಗಿ ಗುರುವಾರ ತಿಳಿಸಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದು ಸೇರಿದಂತೆ ಹಲವು ಕಾರಣಗಳಿಂದಾಗಿ ಈ ನಿರ್ಧಾರಕ್ಕೆ ಬಂದಿರುವುದಾಗಿ ಕಂಪನಿ ಹೇಳಿದೆ. ಮಾರುತಿ ಸುಜುಕಿ, ಟಾಟಾ ಮೋಟರ್ಸ್, ಮಹೀಂದ್ರ, ಹೋಂಡಾ ಮತ್ತು ಔಡಿ ಕಂಪನಿಗಳು ಕೂಡಾ ಜನವರಿಯಿಂದ ಬೆಲೆ ಏರಿಕೆ ಮಾಡುವುದಾಗಿ ಈಗಾಗಲೇ ತಿಳಿಸಿವೆ.

ಬಂಡವಾಳ ಸಂಗ್ರಹ: ಡಿ. 11ಕ್ಕೆ ಸ್ಪೈಸ್‌ಜೆಟ್ ಸಭೆ

ಮುಂಬೈ (ಪಿಟಿಐ): ಸ್ಪೈಸ್‌ಜೆಟ್ ಕಂಪನಿಯು ಬಂಡವಾಳ ಸಂಗ್ರಹಿಸಲು ಇರುವ ಆಯ್ಕೆಗಳನ್ನು ಪರಿಶೀಲಿಸಲು ಡಿಸೆಂಬರ್ 11ರಂದು ನಿರ್ದೇಶಕರ ಮಂಡಳಿ ಸಭೆ ನಡೆಸಲಿದೆ.

ಪ್ರವರ್ತಕ ಅಜಯ್ ಸಿಂಗ್ ಅವರು ₹ 833 ಕೋಟಿ ಬಂಡವಾಳ ಸಂಗ್ರಹಿಸಲು ಜಾಗತಿಕ ಹೂಡಿಕೆದಾರರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎನ್ನುವ ವರದಿಗಳ ಬೆನ್ನಲ್ಲೇ ಕಂಪನಿಯು ಈ ಹೇಳಿಕೆ ನೀಡಿದೆ. ಈಕ್ವಿಟಿ ಷೇರುಗಳು ಅಥವಾ ಪರಿವರ್ತಿಸಬಹುದಾದ ಸಾಲಪತ್ರಗಳನ್ನು ನೀಡುವ ಮೂಲಕ ಬಂಡವಾಳ ಸಂಗ್ರಹಿಸುವ ಆಯ್ಕೆಗಳನ್ನು ನಿರ್ದೇಶಕರ ಮಂಡಳಿಯು ಚರ್ಚೆ ನಡೆಸಲಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಟಾಟಾ ಮೋಟರ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಒಪ್ಪಂದ

ನವದೆಹಲಿ (ಪಿಟಿಐ): ವಾಣಿಜ್ಯ ವಾಹನಗಳನ್ನು ಖರೀದಿಸುವರಿಗೆ ಹಣಕಾಸಿನ ಸೌಲಭ್ಯ ಕಲ್ಪಿಸುವ ಸಲುವಾಗಿ ಎಚ್‌ಡಿಎಫ್‌ಸಿ ಬ್ಯಾಂಕ್‌ನೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ಟಾಟಾ ಮೋಟರ್ಸ್ ಗುರುವಾರ ತಿಳಿಸಿದೆ.

ಟಾಟಾ ಮೋಟರ್ಸ್‌ನ ಆನ್‌ಲೈನ್ ಮಾರಾಟ ವೇದಿಕೆ ಮತ್ತು ಟಾಟಾ ಇ–ಗುರು ಮೊಬೈಲ್ ಆ್ಯಪ್ ಮೂಲಕ ಎಚ್‌ಡಿಎಫ್‌ಸಿ ಬ್ಯಾಂಕ್‌ನ ವಾಹನ ಸಾಲ ಸೌಲಭ್ಯವನ್ನು ಗ್ರಾಹಕರು ಪಡೆದುಕೊಳ್ಳಬಹುದು ಎಂದು ಕಂಪನಿಯು ಹೇಳಿದೆ.

ರಷ್ಯಾ: ಮಾರ್ಚ್ 17ಕ್ಕೆ ಅಧ್ಯಕ್ಷೀಯ ಚುನಾವಣೆ

ಮಾಸ್ಕೋ (ಎಎಫ್‌ಪಿ): ರಷ್ಯಾದಲ್ಲಿ ಅಧ್ಯಕ್ಷೀಯ ಚುನಾವಣೆಯನ್ನು ಮಾರ್ಚ್ 17ಕ್ಕೆ ನಿಗದಿಪಡಿಸಿದ್ದು, ವ್ಲಾಡಿಮಿರ್ ಪುಟಿನ್ ಅವರು ಐದನೇ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆಗಳು ನಿಚ್ಚಳವಾಗಿವೆ.

ರಷ್ಯಾ ಸಂಸತ್‌ನ ಮೇಲ್ಮನೆಯು ಸರ್ವಾನುಮತದಿಂದ ಚುನಾವಣೆಯ ದಿನಾಂಕಕ್ಕೆ ಅನುಮೋದನೆ ನೀಡಿದೆ.

ಪುಟಿನ್ ಅವರು ಐದನೇ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲಿದ್ದಾರೆ. 2020ರ ಸಾಂವಿಧಾನಿಕ ತಿದ್ದುಪಡಿಯ ನಂತರ ಅವರಿಗೆ ಇನ್ನೂ ಎರಡು ಅವಧಿಗೆ ಆಯ್ಕೆಯಾಗಲು ಅವಕಾಶ ಇದೆ. ಅಧಿಕೃತ ಘೋಷಣೆ ಹೊರ ಬೀಳದಿದ್ದರೂ 71 ವರ್ಷದ ಪುಟಿನ್ ಅವರು ಮುಂದಿನ ಆರು ವರ್ಷಗಳ ಅವಧಿಗಾಗಿ ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಮುಂಬೈ ಧಾರಣೆ

ಶೇಂಗಾ

07-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	885 (887)
ಪಾಮ್ ವಾರದ ಡೆಲಿವರಿ	823 (829)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	62,300 (62,000)
ಬೆಳ್ಳಿ ಕೆ.ಜಿ	73,900 (74,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇ.ವಿ. ಮಾರಾಟ ಶೇ 25 ಹೆಚ್ಚಳ

ಮುಂಬೈ (ಪಿಟಿಐ): ವಿದ್ಯುತ್ ಚಾಲಿತ (ಇ.ವಿ.) ವಾಹನಗಳ ರಿಟೇಲ್ ಮಾರಾಟವು ನವೆಂಬರ್‌ನಲ್ಲಿ ಶೇ 25.5ರಷ್ಟು ಹೆಚ್ಚಾಗಿ 1.52 ಲಕ್ಷಕ್ಕೆ ತಲುಪಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಗುರುವಾರ ಹೇಳಿದೆ.

2022ರ ನವೆಂಬರ್‌ನಲ್ಲಿ 1.21 ಲಕ್ಷ ಇ–ವಾಹನಗಳು ಮಾರಾಟ ಆಗಿದ್ದವು ಎಂದು ಒಕ್ಕೂಟವು ಮಾಹಿತಿ ನೀಡಿದೆ.

ಪ್ರಸಕ್ತ ವರ್ಷದ ನವೆಂಬರ್ ತಿಂಗಳಲ್ಲಿ ಇ–ದ್ವಿಚಕ್ರ ವಾಹನ ಮಾರಾಟ ಶೇ 18.82ರಷ್ಟು ಹೆಚ್ಚಾಗಿದ್ದು, 91,243ಕ್ಕೆ ಏರಿಕೆ ಕಂಡಿದೆ. 2022ರ ನವೆಂಬರ್‌ನಲ್ಲಿ 76,791 ಇ–ದ್ವಿಚಕ್ರ ವಾಹನಗಳು ಮಾರಾಟ ಆಗಿದ್ದವು ಎಂದು ಒಕ್ಕೂಟ ತಿಳಿಸಿದೆ.

ಇ–ತ್ರಿಚಕ್ರ ವಾಹನ ಮಾರಾಟವು 40,619 ರಿಂದ 53,766ಕ್ಕೆ ಶೇ 32.37ರಷ್ಟು ಏರಿಕೆ ಕಂಡಿದೆ. ವಿದ್ಯುತ್ ಚಾಲಿತ ಪ್ರಯಾಣಿಕ ವಾಹನ ಮಾರಾಟ 3,983 ರಿಂದ 7,064ಕ್ಕೆ (ಶೇ 77.35ರಷ್ಟು) ಏರಿಕೆ ಕಂಡು ಬಂದಿದೆ.

ಇ–ಬಸ್‌ಗಳ ಮಾರಾಟ 203 ರಿಂದ 533ಕ್ಕೆ ಏರಿಕೆ ಕಂಡಿದೆ. ವರ್ಷದಿಂದ ವರ್ಷಕ್ಕೆ ಶೇ 162ರಷ್ಟು ಬೆಳವಣಿಗೆ ಕಂಡುಬಂದಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42500-45500
ಕಾರ್ಕಳ	
ಹೊಸತು	25000-36500
ಹಳತು	30000-46000
ಕುಮಟ	
ಹಳೆಚಾಲಿ	37099-39109
ಹೊಸಚಾಲಿ	30689-34820
ಚಿಪ್ಪು	23830-36000
ಕೋಕ	17099-35299
ಸಾಗರ	
ಬಿಳಿಗೋಟು	20299-33299
ಚಾಲಿ	34599-38799
ಕೋಕ	14989-34699
ಕೆಂಪುಗೋಟು	31899-34251
ರಾಶಿ	39000-47599
ಸಿಪ್ಪೆಗೋಟು	12869-21100
ಶಿವಮೊಗ್ಗ	
ಬೆಟ್ಟೆ	40359-52872
ಗೊರಬಲು	17299-36699
ಹೊಸತು	36219-47199
ರಾಶಿ	35109-47499
ಸರಕು	47359-76110
ಸಿದ್ದಾಪುರ	
ಬಿಳಿಗೋಟು	30082-32382
ಚಾಲಿ	36899-38899
ಕೋಕ	29299-32899
ಕೆಂಪುಗೋಟು	28689-32000
ರಾಶಿ	43899-46649
ತಟ್ಟಿಬೆಟ್ಟೆ	37609-46309
ಶಿರಸಿ	
ಬೆಟ್ಟೆ	38399-44709
ಬಿಳಿಗೋಟು	29309-35291
ಚಾಲಿ	37199-41099
ರಾಶಿ	45218-47049
ಯಲ್ಲಾಪುರ	
ಅಪಿ	56099-60669
ಬಿಳಿಗೋಟು	30899-34610
ಚಾಲಿ	36899-39280
ಕೋಕ	17109-32299
ಕೆಂಪುಗೋಟು	28199-34009
ರಾಶಿ	43001-53779
ತಟ್ಟಿಬೆಟ್ಟೆ	36701-41870

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	12800	-	175.25
ಎಸಿ	-	7000	-	
ಆರ್‌ಪಿ	-	10000	-	-
ಆರ್‌ಸಿ	-	248 on OT	-	2564

ಲೆಜೆಂಡ್ಸ್ ಲೀಗ್‌ನಲ್ಲಿ ಭಾರತ ತಂಡದ ಮಾಜಿ ಆಟಗಾರರ ಜಟಾಪಟಿ

‘ಫಿಕ್ಸರ್’ ಎಂದ ಗಂಭೀರ್: ಶ್ರೀಶಾಂತ್ ದೂರು

ಸೂರತ್ (ಪಿಟಿಐ): ಕ್ರಿಕೆಟಿಗ ಗೌತಮ್ ಗಂಭೀರ್ ಅವರು ಲೆಜೆಂಡ್ಸ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಆಡುವಾಗ ತಮ್ಮನ್ನು ‘ಫಿಕ್ಸರ್’ ಎಂದು ಪದೇ ಪದೇ ಜರೆದಿರುವುದಾಗಿ ವೇಗದ ಬೌಲರ್ ಎಸ್. ಶ್ರೀಶಾಂತ್ ದೂರಿದ್ದಾರೆ.

ಕೆಲವು ವರ್ಷಗಳ ಹಿಂದೆ ಇಬ್ಬರೂ ಆಟಗಾರರು ಭಾರತ ತಂಡದಲ್ಲಿ ಜೊತೆಗೆ ಆಡಿದವರು. ವಿಶ್ವಕಪ್ ವಿಜೇತ ತಂಡಗಳಲ್ಲಿದ್ದವರು. ಅವರು ಸದ್ಯ ಲೆಜೆಂಡ್ಸ್ ಲೀಗ್‌ನಲ್ಲಿ ಆಡುತ್ತಿದ್ದಾರೆ.

ಬುಧವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಗಂಭೀರ್ ಅವರು ಇಂಡಿಯನ್ ಕ್ಯಾಪಿಟಲ್ಸ್ ಮತ್ತು ಗುಜರಾತ್ ಜೈಂಟ್ಸ್ ಮುಖಾಮುಖಿಯಾಗಿದ್ದವು. ಈ ಸಂದರ್ಭದಲ್ಲಿ ಇಬ್ಬರೂ ಆಟಗಾರರ ನಡುವೆ ಜಟಾಪಟಿ ನಡೆದಿದೆ. ಅಂಪೈರ್‌ಗಳು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದರು.

‘ಪಂದ್ಯದ ನೇರಪ್ರಸಾರದ ಸಂದರ್ಭದಲ್ಲಿ ಮೈದಾನದಲ್ಲಿ ಗಂಭೀರ್ ಅವರು ನನ್ನನ್ನು ಫೀಕ್ಸರ್..ಫಿಕ್ಸರ್ ಎಂದು ಕರೆದಿದ್ದರು‘ ಎಂದು ಶ್ರೀಶಾಂತ್ ತಮ್ಮ ಇನ್ಸ್ಟಾಗ್ರಾಮ್ ಲೈವ್‌ನಲ್ಲಿ ಹೇಳಿದ್ದಾರೆ.

ಎಸ್. ಶ್ರೀಶಾಂತ್

ಗೌತಮ್

‘ ಏನು ಹೇಳುತ್ತಿದ್ದೀರಿ ನೀವು ಎಂದು ಅವರಿಗೆ ಪ್ರತಿಕ್ರಿಯಿಸಿದೆ. ಅವರು (ಗಂಭೀರ್) ಅಂಪೈರ್‌ಗಳ ಜೊತೆಗೂ ಅದೇ ರೀತಿಯ ಧಾಟಿಯಲ್ಲಿ ಮಾತನಾಡಿದರು. ಅಂಪೈರ್‌ಗಳು ಅವರನ್ನು ನಿಯಂತ್ರಿಸಲು ಪ್ರಯತ್ನಿಸಿದರು’ ಎಂದು ಶ್ರೀಶಾಂತ್ ಅವರು ಹೇಳಿದ್ದಾರೆ.

‘ನಾನು ಯಾವುದೇ ಕೆಟ್ಟ ಪದಗಳನ್ನು ಬಳಸಿ ಪ್ರತಿಕ್ರಿಯೆ ನೀಡಲಿಲ್ಲ. ಸತ್ಯದ ಪರವಾಗಿದ್ದೇನೆ. ಈ ವಿಷಯದಲ್ಲಿ ಬೇರೆಯವರು ನನಗೆ ಬೆಂಬಲಿಸಬೇಕು. ಅವರು (ಗಂಭೀರ್) ಹಲವಾರು ಜನರೊಂದಿಗೆ ಇಂತಹ ನಡವಳಿಕೆ ತೋರುತ್ತಿದ್ದಾರೆ. ಈಗ ಅವರ ಬೆಂಬಲಿಗರು ಸಿಕ್ಸರ್ ಸಿಕ್ಸರ್ ಎಂದಿದ್ದಾರೆಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ಅವರು ದುಡ್ಡು ನೀಡಿರುವ ಪಿ.ಆರ್(ಸಾರ್ವಜನಿಕ ಸಂಪರ್ಕ) ಗಳು ಈ ರೀತಿ ಮಾಡುತ್ತಿದ್ದಾರೆ. ಅವರಿಗೆ ಯಾರೂ ಮರುಳಾಗಬೇಡಿ’ ಎಂದು ಶ್ರೀಶಾಂತ್ ಮನವಿ ಮಾಡಿದರು.

ಪಂದ್ಯದ ನಂತರ ಶ್ರೀಶಾಂತ್ ಅವರು ಇನ್ಸ್ಟಾಗ್ರಾಮ್‌ನಲ್ಲಿ ಇನ್ನೊಂದು ವಿಡಿಯೊ ಹಾಕಿದ್ದಾರೆ.

ಅದರಲ್ಲಿ ಅವರು, ‘ಅವರು ಮಿಸ್ಟರ್ ಫೈಟರ್. ತಮ್ಮ ಸಹೋದ್ಯೋಗಿಗಳ ಜೊತೆ ಯಾವಾಗಲೂ ಜಗಳ (ಫೈಟ್) ಮಾಡುತ್ತಲೇ ಇರುತ್ತಾರೆ. ತಮ್ಮ ಸೀನಿಯರ್ ಆಟಗಾರರಿಗೂ ಅವರು ಗೌರವ ಕೊಡುತ್ತಿರಲಿಲ್ಲ. ಇವತ್ತು ಆಗಿದ್ದೂ ಅದೇ ರೀತಿ. ಬಹಳ ಒರಟಾಗಿ ಅವರು ನನ್ನ ಬಗ್ಗೆ ಕಟಕಿಯಾಡಿದರು’ ಎಂದಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ 2013ರ ಟೂರ್ನಿಯಲ್ಲಿ ನಡೆಸಿದ್ದ ಸ್ಪಾಟ್ ಫಿಕ್ಸಿಂಗ್ ಪ್ರಕರಣದಲ್ಲಿ ಶ್ರೀಶಾಂತ್ ಬಂಧಿತರಾಗಿದ್ದರು. ಬಿಸಿಸಿಐ ಅವರ ಮೇಲೆ ನಿಷೇಧ ಹೇರಿತ್ತು.

2019ರಲ್ಲಿ ಶ್ರೀಶಾಂತ್ ಮೇಲಿನ ನಿಷೇಧವನ್ನು ಏಳು ವರ್ಷಗಳಿಗೆ ಇಳಿಸಿದ್ದ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು.

‘ಪ್ರಕರಣದ ತನಿಖೆಗೆ ಸಮಿತಿ’

ಲೆಜೆಂಡ್ಸ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಗೌತಮ್ ಗಂಭೀರ್ ವಿರುದ್ಧ ಎಸ್. ಶ್ರೀಶಾಂತ್ ಅವರು ಮಾಡಿರುವ ಆರೋಪದ ಕುರಿತು ತನಿಖೆ ನಡೆಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ಈ ಪ್ರಕರಣದ ತನಿಖೆಗಾಗಿ ಆಂತರಿಕ ಸಮಿತಿಯನ್ನು ರಚಿಸಲಾಗುತ್ತಿದೆ. ಸಂಪೂರ್ಣ ತನಿಖೆಯ ನಂತರ ಯಾರೇ ತಪ್ಪಿತಸ್ಥರಿದ್ದರೂ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

ಗೌತಮ್ ಗಂಭೀರ್ ಅವರು ಈ ರೀತಿಯ ವಿವಾದದಲ್ಲಿ ಸಿಲುಕಿರುವುದು ಇದೇ ಮೊದಲೇನಲ್ಲ.

ಇಂಗ್ಲೆಂಡ್‌ಗೆ ಜಯ

ನಾರ್ತ್‌ಸೌಂಡ್ (ಆ್ಯಂಟೀಗಾ): ಮೊದಲ ಏಕದಿನ ಪಂದ್ಯದಲ್ಲಿ ತೀವ್ರ ದಂಡನೆಗೆ ಒಳಗಾಗಿದ್ದ ಸ್ಯಾಮ್ ಕರನ್ ಎರಡನೇ ಪಂದ್ಯದಲ್ಲಿ ಪುಟಿದೆದ್ದು 33 ರನ್‌ಗೆ ಮೂರು ವಿಕೆಟ್ ಪಡೆದರು. ನಂತರ ವಿಲ್ ಜಾಕ್ಸ್ (73) ಮತ್ತು ಜೋಸ್ ಬಟ್ಲರ್ (ಅಜೇಯ 58) ಅವರು ಅರ್ಧ ಶತಕಗಳನ್ನು ಹೊಡೆದು ಇಂಗ್ಲೆಂಡ್ ತಂಡ ಬುಧವಾರ ಎರಡನೇ ಏಕದಿನ ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ತಂಡದ ಮೇಲೆ ಆರು ವಿಕೆಟ್‌ಗಳ ಗೆಲುವು ಪಡೆಯಲು ನೆರವಾದರು.

ಸರಣಿ ಈಗ 1–1ರಲ್ಲಿ ಸಮನಾಗಿದೆ. ಭಾನುವಾರ ಮೊದಲ ಪಂದ್ಯದಲ್ಲಿ ಕರನ್ 9.5 ಓವರುಗಳಲ್ಲಿ 98 ರನ್ ನೀಡಿದ್ದು, ಇಂಗ್ಲೆಂಡ್ ಆ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳ ಸೋಲನುಭವಿಸಿತ್ತು. ಮೊದಲ ಪಂದ್ಯದಲ್ಲಿ 651 ರನ್ ಹರಿದುಬಂದರೆ, ಎರಡನೇ ಪಂದ್ಯ ಅಲ್ಪಸ್ಕೋರ್‌ಗಳನ್ನು ಕಂಡಿತು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 39.4 ಓವರುಗಳಲ್ಲಿ 202 (ಶಾಯ್ ಹೋಪ್ 68, ಶರ್ಫೇನ್ ರುದರ್‌ಫೋರ್ಡ್ 63; ಲಿಯಾಮ್ ಲಿವಿಂಗ್‌ಸ್ಟೋನ್ 39ಕ್ಕೆ3); ಇಂಗ್ಲೆಂಡ್: 32.5 ಓವರುಗಳಲ್ಲಿ 4 ವಿಕೆಟ್‌ಗೆ 206 (ವಿಲ್ ಜಾಕ್ಸ್ 73, ಜೋಸ್ ಬಟ್ಲರ್ ಔಟಾಗದೇ 58, ಹ್ಯಾರಿ ಬ್ರೂಕ್ ಔಟಾಗದೇ 43; ಗುಡಕೇಶ್ ಮೋತಿ 34ಕ್ಕೆ2). ಇಂಗ್ಲೆಂಡ್‌ಗೆ 6 ವಿಕೆಟ್ ಜಯ

ಎರಡನೇ ಟೆಸ್ಟ್ ಪಂದ್ಯಕ್ಕೆ ಮಳೆ ಅಡ್ಡಿ

ಮೀರ್‌ಪುರ್ (ಬಾಂಗ್ಲಾದೇಶ), (ಎಎಫ್‌ಪಿ): ಬಾಂಗ್ಲಾದೇಶ ಮತ್ತು ನ್ಯೂಜಿಲೆಂಡ್ ನಡುವೆ 2ನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೆ ದಿನವಾದ ಗುರುವಾರ ಒಂದೂ ಎಸೆತ ಸಾಧ್ಯವಾಗದೇ ಆಟ ಮಳೆಗೆ ಕೊಚ್ಚಿಹೋಯಿತು. ಮೊದಲ ದಿನ 15 ವಿಕೆಟ್‌ಗಳು ಬಿದ್ದಿದ್ದವು.

ಮೊದಲ ದಿನ ಟಾಸ್ ಗೆದ್ದ ಆತಿಥೇಯರು 172 ರನ್‌ಗಳಿಗೆ ಆಲೌಟ್ ಆಗಿದ್ದರು. ದಿನದಾಟ ಮುಗಿದಾಗ ನ್ಯೂಜಿಲೆಂಡ್ 55 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಮೊದಲ ಟೆಸ್ಟ್ ಪಂದ್ಯ ಬಾಂಗ್ಲಾ ಗೆದ್ದುಕೊಂಡಿತ್ತು.

ಡಬ್ಲ್ಯುಪಿಎಲ್ ಸಮಿತಿಗೆ ರೋಜರ್ ಬಿನ್ನಿ ನೇತೃತ್ವ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ರೋಜರ್ ಬಿನ್ನಿ ಅವರು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಉಸ್ತುವಾರಿ ಸಮಿತಿಯ ನೇತೃತ್ವ ವಹಿಸುವರು. ಬಿನ್ನಿ ಮುಖ್ಯಸ್ಥರಾಗಿರುವ ಎಂಟು ಜನರ ಸಮಿತಿಯಲ್ಲಿ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರನ್ನು ನಿಮಂತ್ರಕರನ್ನಾಗಿ ನೇಮಕ ಮಾಡಲಾಗಿದೆ. ಉಳಿದಂತೆ ಅರುಣ್ ಧುಮಾಲ್ (ಐಪಿಎಲ್ ಮುಖ್ಯಸ್ಥ), ರಾಜೀವ್ ಶುಕ್ಲಾ (ಬಿಸಿಸಿಐ ಉಪಾಧ್ಯಕ್ಷ), ಆಶಿಶ್ ಶೆಲಾರ್ (ಖಜಾಂಚಿ), ದೇವಜೀತ್ ಸೈಕಿಯಾ (ಜಂಟಿ ಕಾರ್ಯದರ್ಶಿ), ಮಧುಮತಿ ಲೆಲೆ ಮತ್ತು ಪ್ರಭತೇಜ್ ಭಾಟಿಯಾ ಅವರು ಇದ್ದಾರೆ.

ಪೋಗ್ಬಾಗೆ 4 ವರ್ಷ ನಿಷೇಧಕ್ಕೆ ಮನವಿ

ರೋಮ್ (ಎಪಿ): ಉದ್ದಿಪನ ಮದ್ದು ಪರೀಕ್ಷೆಯಲ್ಲಿ ಟೆಸ್ಟೊಸ್ಟೆರಾನ್ ಅಂಶ ಕಂಡುಬಂದಿರುವ ಕಾರಣ ಯುವೆಂಟಸ್ ತಂಡದ ಮಿಡ್ ಫೀಲ್ಡರ್ ಪಾಲ್ ಪೋಗ್ಬಾ ಅವರಿಗೆ ಗರಿಷ್ಠ ನಾಲ್ಕು ವರ್ಷಗಳ ನಿಷೇಧ ವಿಧಿಸುವಂತೆ ಇಟಲಿಯ ಪ್ರಾಸಿಕ್ಯೂಟರ್‌ಗಳು ಗುರುವಾರ ಮನವಿ ಮಾಡಿದ್ದಾರೆ.

ಇಟಲಿಯ ಡೋಪಿಂಗ್ ಸಂಸ್ಥೆ ಜತೆ ಈ ವಿಚಾರವಾಗಿ ಯಾವುದೇ ಮನವಿ ಮಾಡದಿರಲು ಪೋಗ್ಬಾ ನಿರ್ಧರಿಸಿದ್ದಾರೆ. ಈ ಪ್ರಕರಣವನ್ನು ದೇಶದ ಉದ್ದೀಪನ ಮದ್ದು ವಿರೋಧಿ ನ್ಯಾಯಾಲಯ ವಿಚಾರಣೆ ನಡೆಸಲಿದ್ದು, ನಾಲ್ಕು ವರ್ಷಗಳ ಶಿಕ್ಷೆ ದೃಢಪಟ್ಟರೆ, 30 ವರ್ಷದ ಪೋಗ್ಬಾ ಅವರ ವೃತ್ತಿಜೀವನಕ್ಕೆ ತೆರೆ ಬೀಳುವ ಸಾಧ್ಯತೆ ಇದೆ.

ವಿಶ್ವ ಉದ್ದೀಪನ ಮದ್ದು ವಿರೋಧಿ ಸಂಹಿತೆ ಅಡಿ ನಾಲ್ಕು ವರ್ಷಗಳ ನಿಷೇಧ ಶಿಕ್ಷೆ ಇದೆ. ಆದರೆ, ಕ್ರೀಡಾಪಟುಗಳು ತಮ್ಮ ಮದ್ದುಸೇವನೆ ಉದ್ದೇಶಪೂರ್ವಕವಲ್ಲ ಎಂದು ಸಾಬೀತುಪಡಿಸಿದ ಸಂದರ್ಭದಲ್ಲಿ ಶಿಕ್ಷೆ ಪ್ರಮಾಣ ಕಡಿಮೆ ಮಾಡುವ ಸಾಧ್ಯತೆ ಇದೆ.

ಆಗಸ್ಟ್ 20ರಂದು ಉಡಿನೆಸ್‌ನಲ್ಲಿ ಯುವೆಂಟಸ್ ಪಂದ್ಯದ ಬಳಿಕ ನಡೆಸಿದ ಪರೀಕ್ಷೆಯಿಂದ ಮದ್ದು ಸೇವನೆಯಲ್ಲಿ ಸಿಕ್ಕಿ ಬಿದ್ದಿರುವುದನ್ನು ಸೆಪ್ಟೆಂಬರ್‌ನಲ್ಲಿ ಪ್ರಕಟಿಸಲಾಯಿತು. ಈ ಪ್ರಕರಣದ ಕುರಿತು ಪೋಗ್ಬಾ ಸಾರ್ವಜನಿಕ ಹೇಳಿಕೆ ನೀಡಿಲ್ಲ.